


ಖಾನ್ ಅಬ್ದುಲ್ ಗಫಾರ್ ಖಾನ್

ಕೆ. ಎಸ್. ನಾರಾಯಣಸ್ವಾಮಿ

ಪ್ರಕಾಶಕರು

ಗಾಂಧೀ ಶಾಂತಿ ಪ್ರತಿಷ್ಠಾನ

ಬೆಂಗಳೂರು

KHAN ABDUL GAFFAR KHAN – A biography in Kannada by K. S. Narayanaswamy. Published by Gandhi Peace Foundation, Gandhi Bhavan, Bangalore–1. Year of publication: Dec. 1990.

Pages : 188+XIV

ಪ್ರಕಟಣಾ ವರ್ಷ : ಡಿಸೆಂಬರ್ ೧೯೯೦

ಬೆಲೆ :

ಸಾದಾಪ್ರತಿ ೨೦ ರೂ.

ಲೈಬ್ರರಿ ಪ್ರತಿ : ೨೫ ರೂ.

ಮುದ್ರಕರು

ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ, ಮೇಲುಕೋಟೆ,

ಜಿಲ್ಲಾ : ಮಂಡ್ಯ ೫೭೧ ೪೩೧

ಅರಿಕೆ

ಖಾನ್ ಅಬ್ದುಲ್ ಗಫಾರ್ ಖಾನರ ಭವ್ಯಬಾಳನ್ನು ನೆನೆದಾಗಲೆಲ್ಲ ಆಚಾರ್ಯ ಡಿ. ವಿ. ಜಿ. ಅವರ ಈ ಸಾಲುಗಳು ಮನಸ್ಸಿನಲ್ಲಿ ಘುಮಿಘುಮಿಸುತ್ತವೆ.

ವ್ಯಾಮೋಹವಿಲ್ಲದ ಪ್ರೇಮ ನಿರ್ಭರವಿರಲಿ
ಭೀಮಸಾಹಸವಿರಲಿ ಹಗೆತನವನುಳಿದು
ನೇಮನಿಷ್ಠೆಗಳಿರಲಿ ಡಂಭಕಠಿಣತೆಬಿಟ್ಟು
ಸೌಮ್ಯವೆಲ್ಲೆಡೆಯಿರಲಿ – ಮಂಕುತಿಮ್ಮ

ಗಫಾರ್‌ಖಾನರ ಸ್ಫಟಿಕ ಸದೃಶ ಪ್ರಾಮಾಣಿಕತೆ, ನಿರ್ಭೀತ ಸತ್ಯನಿಷ್ಠೆ, ಅಸಾಧಾರಣ ಸರಳತೆ ಮತ್ತು ಧಾರ್ಮಿಕ ಸಭ್ಯತೆಗಳಿಗೆ ಗಾಂಧೀಜಿ ಮಾರುಹೋದರು. ಅಹಿಂಸಾಧರ್ಮ ಖಾನರಿಗೆ ಕೇವಲ ತಾತ್ಕಾಲಿಕ ನೀತಿ ಎನಿಸಲಿಲ್ಲ. ಅದೊಂದು ಅತ್ಯುತ್ಕೃಷ್ಟ ಬಾಳ ನಿಯಮ ಎಂದಂಗೀಕರಿಸಿದರು. ತೊಂಭತ್ತೆಂಟು ವರ್ಷಗಳ ಅವರ ದೀರ್ಘ ಜೀವನ ಅನ್ಯಾದೃಶ ತಪಸ್ಸಿನಂತೆ ಸಾಗಿದ ದಿವ್ಯ ಪಥ. ಭಾರತೀಯ ಇತಿಹಾಸದಲ್ಲಿ ಚಿರವಾಗಿರುವ ಈ 'ಗಡಿನಾಡು ಗಾಂಧಿ' ಸದಾ ಬೆಳಗುವ ಧ್ರುವತಾರೆ.

ತ್ಯಾಗ ಜೀವನದ ಆನಂದ, ಅಹಿಂಸಾನಿಷ್ಠ ಎದೆಗಾರಿಕೆ, ಮಾನವೀಯತೆಯಲ್ಲಿ ಪೂರ್ಣಶ್ರದ್ಧೆ, ಅನ್ಯಾಯದೊಡನೆ ಸತತ ಹೋರಾಟ ಇವುಗಳಿಗೆ ಈ ಬಾದ್‌ಷಾಖಾನರ ಬಾಳು–ಬದುಕು ಒಂದು ಉನ್ನತ ಆದರ್ಶ. ಕನ್ನಡ ವಿದ್ಯಾರ್ಥಿಗಳಿಗೆ, ಧ್ಯೇಯವಾದಿಗಳಿಗೆ, ಉದಾತ್ತ ಬಾಳಿನ ಆಕಾಂಕ್ಷಿಗಳಿಗೆ, ಈ ಭವ್ಯ ಚೇತನವನ್ನು ಪರಿಚಯಿಸಲು ಪ್ರಯತ್ನ ಪಟ್ಟಿದ್ದೇನೆ. ಗಫಾರ್‌ಖಾನರ ಜನ್ಮ ಶತಮಾನೋತ್ಸವ ವರ್ಷದಲ್ಲಿ ಅವರ ಸ್ಮೃತಿಗಾಗಿ ಸಮರ್ಪಿಸುತ್ತಿದ್ದೇನೆ.

ಈ ಕಾರ್ಯದಲ್ಲಿ ನಿರ್ವ್ಯಾಜ ಪ್ರೇಮದಿಂದ ನೆರವಾದ ಸ್ನೇಹವೃಂದ ಅಪಾರ. ಅವರ ಸಹಕಾರಕ್ಕೆ ನಾನು ಚಿರಋಣಿ. ಪೌನಾರಿನ ವಿನೋಬಾ

ಆಶ್ರಮದಲ್ಲಿರುವ ಕನ್ನಡಿಗ ಬಂಧು ಜಯದೇವ ಅನೇಕ ಮಾಹಿತಿಗಳನ್ನೊದಗಿಸಿಕೊಟ್ಟರು. ಲೋಕಸಭೆಯ ಸದಸ್ಯರಾದ ಮಿತ್ರ ಆರ್. ಹನುಮಂತಪ್ಪ ದೆಹಲಿಯಿಂದ ಹಲವು ಆಗರ-ಗ್ರಂಥಗಳನ್ನೊದಗಿಸಿಕೊಟ್ಟರು. ಹಿಂದಿ ಭಾಷೆಯಿಂದ ಹಲವು ಭಾಷಾಂತರಗಳಲ್ಲಿ ನೆರವಾದವರು ಸತ್ಯವ್ರತ ಮತ್ತು ಡಾ|| ಎಸ್. ಎಂ. ರಾಜಚಂದ್ರಸ್ವಾಮಿ, ಬೊಂಬಾಯಿನಿಂದ ಶ್ರೀ ರಾಮಕೃಷ್ಣ ಬಜಾಜರು ತಮ್ಮ ತಂದೆಯವರೊಡನೆ ಖಾನರು ವಾಸಿಸುತ್ತಿದ್ದ ಕಾಲದ ಹಲವು ಅಪೂರ್ವ ಚಿತ್ರಗಳನ್ನು ಒದಗಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಶ್ರೀ ಡಿ. ಜಿ. ತೆಂಡೂಲ್ಕರರ ಬೃಹದ್‌ಗ್ರಂಥ "ಅಬ್ದುಲ್ ಗಫಾರ್‌ಖಾನ್-ಶ್ರದ್ಧೆ ಒಂದು ಸಮರ" (Abdul Gaffar Khan–Faith is a battle) ಅಮೂಲ್ಯ ಸಾಮಗ್ರಿ ಒದಗಿಸಿತು. ಪ್ಯಾರಿಲಾಲರ 'Thrown to the Wolves' ಮತ್ತು ಮಹದೇವ ದೇಸಾಯಿಯವರ 'Two Servants of God' ಶ್ರೀ ಖಾನರ ಉನ್ನತ ವ್ಯಕ್ತಿತ್ವದ ಚಿತ್ರವನ್ನು ಮೂಡಿಸಿತು. ಹೀಗೆ ಹಲವು ಮೂಲಗಳಿಂದ ಪಡೆದ ನವನೀತವನ್ನು ಸಂಗ್ರಹವಾಗಿ ಕನ್ನಡ ಬಂಧುಗಳಿಗೆ ಅರ್ಪಿಸುವ ಕೈಂಕರ್ಯ ನನ್ನ ಪಾಲಿಗೆ ಬಂದುದು ನನ್ನ ಪುಣ್ಯ.

ಅತ್ಯಂತ ವಿಶ್ವಾಸದಿಂದ ಮುದ್ರಣ ಕಾರ್ಯ ಹೊತ್ತು, ಕರಡುಗಳನ್ನು ತಿದ್ದಿ, ಸಲಹೆಗಳನ್ನು ನೀಡಿ, ಪುಸ್ತಕ ಹೊರತಂದ ಮಿತ್ರ ಮೇಲುಕೋಟೆಯ ಶ್ರೀ ಸುರೇಂದ್ರ ಕೌಲಗಿ, ಜನಪದ ಸೇವಾ ಟ್ರಸ್ಟಿನ ಗೆಳೆಯರು, ಅಲ್ಲಿನ ಮಹಿಳಾ ಮತ್ತು ಅಂಗವಿಕಲ ಮುದ್ರಣಾಲಯದ ಕಾರ್ಯಕರ್ತರು. ಅವರ ವಾತ್ಸಲ್ಯಕ್ಕಾಗಿ ನಾನು ಋಣಿ.

ಮಿತ್ರರಾದ ಸಾಹಿತಿ ಶ್ರೀ ನಿಸ್ಸಾರ್ ಅಹಮದ್‌ರವರು ಪ್ರೇಮದಿಂದ ಈ ಪುಸ್ತಕಕ್ಕೆ ಮುನ್ನುಡಿ ಬರೆದು ಕೊಟ್ಟಿದ್ದಾರೆ. ಈ ಎಲ್ಲ ದೈವಕೃಪೆಗಳಿಗಾಗಿ ನಾನು ಕೃತಜ್ಞ.

ನುಸುಳಿರಬಹುದಾದ ತಪ್ಪುಗಳನ್ನು ಕ್ಷಮಿಸಿ ಕನ್ನಡಿಗ ಬಂಧುಗಳು ಈ ಹೊತ್ತಿಗೆಯನ್ನು ಔದಾರ್ಯದಿಂದ ಸ್ವೀಕರಿಸುವರೆಂದು ನಂಬಿದ್ದೇನೆ.

ಗಾಂಧಿ ಶಾಂತಿ ಪ್ರತಿಷ್ಠಾನ
ಬೆಂಗಳೂರು

ಕೆ. ಎಸ್. ನಾರಾಯಣಸ್ವಾಮಿ
೨-೧೦-೯೦

ಮುನ್ನುಡಿ

ರಾಷ್ಟ್ರಾದ್ಯಂತ ಇವೊತ್ತು ಜರುಗಿರುವ ರಾಕ್ಷಸೀ ಕೃತ್ಯ, ಹರಿದಿರುವ ನೆತ್ತರು, ಮುಗಿಲಿಗೇರಿರುವ ಅಮಾಯಕ ಅಸಹಾಯಕರ ಶೋಕಾಕ್ರಂದನ ಹಾಗೂ ವ್ಯಕ್ತಿ ವಿದ್ವೇಷದ ದಳ್ಳುರಿಯ ದಟ್ಟ ಹೊಗೆ ನಮ್ಮ ಆತ್ಮಸಾಕ್ಷಿ ಯನ್ನು ಕೆಣಕಿ, ಹಿಂದೆಂದೂ ಇಲ್ಲದಂಥ ಸವಾಲನ್ನು ಒಡ್ಡಿದೆ. ಧರ್ಮದ ಪವಿತ್ರ ಪೀತಾಂಬರದಲ್ಲಿ ಕ್ಷುದ್ರ ರಾಜಕೀಯದ ಅಂದಗೇಡಿ ಎಳೆಗಳು ಹಾಸುಹೊಕ್ಕಾಗಿ ನುಸುಳಿವೆ. ಸಾರ್ವತ್ರಿಕ ಸನ್ನಿಯ ಕರ್ಕಶ ಬೊಬ್ಬೆಯ ನಡುವೆ ಸಾಮರಸ್ಯ, ಸಹಬಾಳ್ವೆಯ ಸಾಂತ್ವನಕರ ಮೆಲ್ನುಡಿ ಕೇಳಿಸದೆ, ಒಳಗೊಳಗೇ ಮರುಗಿದೆ.

ಕವಲುದಾರಿಯಲ್ಲಿ ನಿಂತಿರುವ ದೇಶ ಯಾವೆಡೆಗೆ ಹೊರಳುವುದೋ ತಿಳಿಯದಾಗಿದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವೆಂಬ ಅಗ್ಗಳಿಕೆ ಯನ್ನು ಉಳಿಸಿಕೊಳ್ಳುವುದೊ ಅಥವಾ ರಾಜಕೀಯ ಬೆರೆತ ಮತಧರ್ಮದ ಮೌಢ್ಯದ ದೆಸೆಯಿಂದ ಸಂಕುಚಿತ ದೃಷ್ಟಿಕೋನವನ್ನು ಪೋಷಿಸಿಕೊಂಡು ಕೋಮುವಾದಿ ಐಕ್ಯಭಂಜಕ ದುಶ್ಶಕ್ತಿಗಳ ಕೈಗೊಂಬೆಯಾಗಿ ವಿನಾಶದ ಹಾದಿ ಹಿಡಿಯುವುದೊ ಕೆಲಸಮಯದಲ್ಲಿ ಇತ್ಯರ್ಥವಾಗುವಂತಿದೆ.

ಇಂದಿನ ಮತೀಯ ಘರ್ಷಣೆಗಳ ಕೊಲೆ ಸುಲಿಗೆಗಳ ಅಮಾನುಷ ಮಬ್ಬಿನ ಮುಖಾಮುಖಿಯ ಒರೆಗಲ್ಲಿನಲ್ಲಿ ನಾಡಿನ ಧೀಮಂತರ ಸರ್ವ ಭ್ರಾತೃತ್ವದ ಉದಾರ ಭಾವನೆ, ಪೂಜ್ಯ ಬಾಪೂಜಿಯವರ ಅಹಿಂಸಾ ತತ್ತ್ವ ಮತ್ತೊಮ್ಮೆ ಪರೀಕ್ಷಿತವಾಗುತ್ತಿದೆ. ಪರಿಸ್ಥಿತಿ ಹೀಗಿದ್ದರೂ ಕೆಲವು ಸಂಸ್ಥೆ ಗಳು, ವ್ಯಕ್ತಿಗಳು ರಾಷ್ಟ್ರಹಿತದ ಉದಾತ್ತ ಧ್ಯೇಯವನ್ನು ಮುಂದಿಟ್ಟು ಕೊಂಡು ತಮ್ಮ ಸುತ್ತಲಿನ ಆವರಣಕ್ಕೆ ಅಳಿಲು ಸೇವೆಯನ್ನು ಸಲ್ಲಿಸು ತ್ತಿದ್ದಾರೆ, ಜನರಲ್ಲಿ ಜಾಗೃತಿ ವಿವೇಕಗಳನ್ನು ಮೂಡಿಸಲು ಪ್ರಯತ್ನಿಸು ತ್ತಿದ್ದಾರೆ. ಕರ್ನಾಟಕದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದಂಥ ಕೆಲವು

ಸಂಸ್ಥೆಗಳು, ಶ್ರೀ ಎಚ್. ಎಸ್. ದೊರೆಸ್ವಾಮಿ, ಶ್ರೀ ಕೆ. ಎಸ್. ನಾರಾಯಣಸ್ವಾಮಿ ಮುಂತಾದ 'ಅರಾಜಕಾರಣಿ' ಮಹನೀಯರು ಇದಕ್ಕೆ ಉದಾಹರಣೆಯಾಗಿದ್ದಾರೆ. ಸ್ವಹಿತ ಸಾಧನೆ, ಸ್ವಾರಾಧನೆ, ಅಧಿಕಾರ ಗರ್ವದ ಅಮಲಿನಿಂದ ಕುಟಿಲ ರಾಜಕೀಯದಲ್ಲಿ ಅಹರ್ನಿಶಿ ತೊಡಗಿರುವ ಪಟ್ಟಭದ್ರ ಪುಢಾರಿಗಳ ಅವ್ಯವಹಾರಿಯದ, ಸುದ್ದಿ ಮಾಧ್ಯಮಗಳ ಪ್ರಚಾರ ದಿಂದ ದೂರ ನಿಂತ ಈ ಸಾದಾಸೀದ ಜನ ರಾಷ್ಟ್ರಪಿತನ ತತ್ತ್ವಾದರ್ಶ ಗಳನ್ನು ಯಥಾಮತಿ ಆಚರಣೆಗೆ ತರುವಲ್ಲಿ, ಜನತೆಗೆ ತಿಳಿಪಿಸುವಲ್ಲಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ. ಅವರ ನಿಸ್ವಾರ್ಥ ಕಾಯಕ ಪ್ರಶಂಸಾಯೋಗ್ಯ.

"ಭಾರತ ರತ್ನ ಖಾನ್ ಅಬ್ದುಲ್ ಗಫಾರ್ ಖಾನ್" ಕೃತಿ ಈ ನಿಟ್ಟಿನಲ್ಲಿ ಇತ್ತೀಚಿನ ಸಾಧನೆ. ಗಡಿನಾಡು ಗಾಂಧಿಯೆಂದು ಪ್ರಸಿದ್ಧರಾದ ಗಫಾರ್ ಖಾನ್ ಅಥವಾ ಬಾದ್‌ಷಾ ಖಾನ್ ಗಾಂಧೀಜಿಯವರ ಪ್ರಿಯ ಶಿಷ್ಯರಾಗಿದ್ದುದರ ಜೊತೆಗೆ, ಅವರಿಂದ 'ದೇವಮಾನವ' ಎನಿಸಿಕೊಂಡ ವರು. ತಮ್ಮ ಪ್ರಾಂತದ ಯುದ್ಧೋತ್ಸಾಹಿ ಕ್ಷಾತ್ರ ಜನಾಂಗವನ್ನು ಅಹಿಂಸಾ ತತ್ತ್ವಕ್ಕೆ ಒಗ್ಗಿಸಿದ ಪವಾಡ ಪುರುಷರು. ಇಸ್ಲಾಂ ಧರ್ಮದ ಶಾಂತಿ ಸಂದೇಶಗಳನ್ನು ಪ್ರವಾದಿ ಮೊಹಮ್ಮದ್ ಪೈಗಂಬರರ ದಿವ್ಯ ಜೀವನಾದರ್ಶಗಳನ್ನು ಅತ್ಯಂತ ವಿಧೇಯರಾಗಿ ಪಾಲಿಸಿದವರು. ಸ್ವಮ ತೀಯ ದುಶ್ಶಕ್ತಿಗಳ ಕುಟಿಲೋಪಾಯಗಳಿಗೆ ಸೊಪ್ಪು ಹಾಕದೆ ನಿಷ್ಠಾವಂತ ರಾಷ್ಟ್ರ ಸೇವಕರಾಗಿ ದುಡಿದವರು. ತಮ್ಮ ಬದುಕಿನ ತೊಂಬತ್ತಾರನೆಯ ವಯಸ್ಸಿನವರೆಗೂ ಸತ್ಯ ನ್ಯಾಯ ಅಹಿಂಸೆಗಳ ಪ್ರತಿಪಾದನೆ ಸಂರಕ್ಷಣೆಗಳಿಗೆ ಕಂಕಣಬದ್ಧರಾಗಿ ಕಾದಾಡಿದವರು. ಇಂಥ ಅಜೇಯ ಸತ್ಯಾಗ್ರಹಿಯನ್ನು, ವಿನಮ್ರ ವೀರಾಗ್ರಣಿಯನ್ನು ತನ್ನ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ನಾಡಿನ ಜನತೆ ಸ್ಮರಿಸಿ, ಗೌರವಿಸುವಂತೆ ಪ್ರಕಟಗೊಂಡಿದೆ ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರಿಂದ ರಚಿತವಾದ ಖಾನ್ ಅಬ್ದುಲ್ ಗಫಾರ್ ಖಾನರ ಭವ್ಯಜೀವನ ಚರಿತ್ರೆ. ನಮ್ಮ ನಾಡಿನ ಪ್ರಸಕ್ತ ವಿದ್ಯಮಾನಗಳ ದೃಷ್ಟಿಯಿಂದ ತುಂಬ ಪ್ರಸ್ತುತವಾಗಿದೆ ಈ ಪ್ರಕಟನೆ.

ಗಫಾರ್ ಖಾನರ ಬಗ್ಗೆ ಇಂದಿನವರಲ್ಲಿ, ಅದರಲ್ಲೂ ಕಿರಿಯ ಪೀಳಿಗೆ

ಯಲ್ಲಿ ಎಂಥ ಅಜ್ಞಾನ ಕವಿದಿದೆ ಎನ್ನುವುದಕ್ಕೆ 'ಪ್ರಜಾವಾಣಿ'ಯಲ್ಲಿ
ಈಚೆಗೆ ಕಾಣಿಸಿಕೊಂಡ ಒಂದು ಪತ್ರ ಸಾಕ್ಷಿ (೨೧-೧೦-೧೯೯೦). ಅದರಲ್ಲಿ
ಖಾನರಿಗೆ ಭಾರತ ಸರ್ಕಾರ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿದ್ದರ
ಔಚಿತ್ಯವನ್ನು ಒಬ್ಬರು ಪ್ರಶ್ನಿಸಿದ್ದಾರೆ. ಸ್ವಾತಂತ್ರ್ಯ ಸಮರದ ನಿಸ್ವಾರ್ಥ
ತ್ಯಾಗದ ಪರಿಚಯವಿರದ ನಮ್ಮ ಭಾವೀ ಜನಾಂಗದ ಭಾವನೆಗಳಿಗೆ ಇದು
ದ್ಯೋತಕವಾಗಿದೆ. ಇದು ಯುವ ಪೀಳಿಗೆಯ ತಪ್ಪಲ್ಲ. ಅವರನ್ನು
ದಿಕ್ಕು ತಪ್ಪಿಸುತ್ತಿರುವ ಏಕಪಕ್ಷೀಯ ಧೋರಣೆಯ ಕೆಲವು ರಾಜಕೀಯ
ಮತ್ತು ಮತೀಯ ಮುಂದಾಳುಗಳ ಹುನ್ನಾರು. ರಾಷ್ಟ್ರಭಕ್ತಿಯ ಹೆಸರಲ್ಲಿ
ಎಳೆಯ ಮುಗ್ಧ ಮನಸ್ಸುಗಳನ್ನು ಹೇಗೆ ಪೂರ್ವಗ್ರಹ ಪೀಡಿತವಾಗಿ
ತಿರುಚಲಾಗುತ್ತಿದೆ ಎನ್ನುವುದಕ್ಕೆ ಈ ಪತ್ರ ಒಂದು ಜ್ವಲಂತ ನಿದರ್ಶನ
ವಾಗಿದೆ. ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರು ೨೩-೧೦-೯೦ ರಂದು
ತಕ್ಕ ಉತ್ತರವನ್ನು ನೀಡಿದ್ದಾರೆ. ಗಾಂಧೀಜಿ, ನೆಹರು, ಆಜಾದ್,
ಪಟೇಲರ ಸಮಸಮವಾಗಿ ನಿಂತು ವಿದೇಶಿ ಆಳರಸರ ವಿರುದ್ಧ ಹೋರಾಡಿ
ಅನೇಕ ಬಾರಿ ಸೆರೆಯಾಳಾಗಿ ಅತೀವ ದೈಹಿಕ, ಮಾನಸಿಕ ಹಿಂಸೆಗೆ ಗುರಿ
ಯಾದ ಗಫಾರ್ ಖಾನರ ಬದುಕು ಸಾಧನೆಗಳನ್ನು ಇಂದಿನ ಪರಿಸ್ಥಿತಿಯಲ್ಲಿ
ಜ್ಞಾಪಿಸಿಕೊಳ್ಳುವುದು ಅತ್ಯಂತ ಅನಿವಾರ್ಯವಾಗಿದೆ. ಸೌಹಾರ್ದಯುತ
ಸಹಬಾಳ್ವೆ, ಐಕಮತ್ಯ, ರಾಷ್ಟ್ರೀಯ ಭಾವೈಕ್ಯವನ್ನು ಗೌರವಿಸುವ ಪ್ರತಿ
ಯೊಬ್ಬರ ಆದ್ಯ ಕರ್ತವ್ಯವಾಗಿದೆ.

ಕನ್ನಡದಲ್ಲಿ ಗಡಿನಾಡ ಗಾಂಧಿಯವರನ್ನು ಕುರಿತ ಜೀವನ ಚರಿತ್ರೆ
ಗಳು ವಿರಳ. ನನಗೆ ತಿಳಿದ ಮಟ್ಟಿಗೆ, ಇಂಗ್ಲೀಷಿನಿಂದ ಅನುವಾದ
ಗೊಂಡಿರುವ ಒಂದೆರಡು ಪುಸ್ತಕಗಳನ್ನು ಬಿಟ್ಟರೆ. ಕೆ. ಎಸ್. ನಾರಾಯಣ
ಸ್ವಾಮಿಯವರ ಈ ಕೃತಿಯೇ ಸ್ವತಂತ್ರ ರಚನೆ. ಸಮಯೋಚಿತವಾದ
ಈ ಪ್ರಕಟಣೆಯಿಂದ ಬೆಂಗಳೂರಿನ ಗಾಂಧಿ ಶಾಂತಿ ಪ್ರತಿಷ್ಠಾನದ ಪ್ರತಿಷ್ಠೆ
ಹೆಚ್ಚಿದೆ.

ಬಾದಶಹಾ ಖಾನರ ಪೂರ್ವಿಕರು, ಪರಿಸರ, ಬಾಲ್ಯದಿಂದ ಮೊದಲು
ಗೊಂಡು ಅವರು ಕೊನೆಯುಸಿರು ಎಳೆದ ವರೆಗಿನ ಹೋರಾಟ, ರಾಜ
ಕೀಯದ ತಿರುವುಗಳು, ಜೈಲುಶಿಕ್ಷೆ ಹಾಗೂ ಕಷ್ಟ ನಷ್ಟಗಳು, ಸತ್ವ

ಪರೀಕ್ಷೆಯ ಸನ್ನಿವೇಶಗಳು ಇಪ್ಪತ್ತು ಅಧ್ಯಾಯಗಳಲ್ಲಿ ಸಂಕ್ಷೇಪವಾಗಿ ಆದರೆ ಸ್ಫುಟವಾಗಿ ರೇಖಿತವಾಗಿವೆ. ಖಾನರ ಮೇಲೆ ಹೇಗೋ ಹಾಗೆ, ಇಡೀ ರಾಷ್ಟ್ರದ ಮೇಲೆ ಸಾಮ್ರಾಜ್ಯದವರ ವರ್ಚಸ್ಸು ಅಚ್ಚಳಿಯದ ಮುದ್ರೆಯೊತ್ತಿದ್ದನ್ನು ನಾವು ಅನುಭವಿಸುತ್ತೇವೆ. ಪುಸ್ತಕ ಓದಿ ಮುಗಿಸಿದ ಮೇಲೆ ಸ್ವಾತಂತ್ರ್ಯ ಪೂರ್ವ ಸಮಯದ ನಮ್ಮ ಜನರ ಸದೃಢವಾದ ಧ್ಯೇಯನಿಷ್ಠೆ, ಹುಮ್ಮಸ್ಸು, ಸಹಿಷ್ಣುತೆ, ತ್ಯಾಗ ಮನೋಭಾವ, ಸಂಯಮ, ಅಹಿಂಸಾಪ್ರೀತಿ ಇವೊತ್ತು ಎಲ್ಲ ಮಾಯವಾದವು ಎಂದು ಮನಸ್ಸು ಖೇದಕ್ಕೆ ಒಳಗಾಗುತ್ತದೆ.

ಗಫಾರ್‌ಖಾನರು ಗಡಿನಾಡು ಪ್ರಾಂತದಲ್ಲಿ ಕೇವಲ ನಾನ್ನೂರು ಐನೂರು ಸ್ವಯಂಸೇವಕರಿಂದ ಸಂಘಟಿಸಿದ ಖುದಾಯಿ ಖಿದ್ಮತ್‌ಗಾರ್ ಅಥವಾ ಈಶ ಸೇವಕರ ಪಡೆ ಲಕ್ಷೋಪಲಕ್ಷವಾಗಿ ಬೆಳೆದ ಸಂಗತಿಯ ನಿರೂಪಣೆ ಹೃದ್ಯವಾಗಿದೆ. ಅಹಿಂಸೆ ಬಲಹೀನರದ್ದಲ್ಲ, ವೀರಧೀರರ ಅಸದೃಶ ಶಕ್ತಿ: ದೈಹಿಕ ಬಲಪ್ರದರ್ಶನದ ಅಂಚನ್ನು ಮುಟ್ಟಿ ಕದನಪ್ರಿಯ ಗಳಾಗಿದ್ದ ಪಠಾಣರಲ್ಲಿ ಮನದಟ್ಟಾಗಿಸಿ, ರಚನಾತ್ಮಕ ಕಾರ್ಯಗಳಲ್ಲಿ ಅವರನ್ನು ತೊಡಗಿಸಿದ ಅಗ್ಗಳಿಕೆ ಖಾನರದು. ಈ ದಿಸೆಯಲ್ಲಿ ಅವರಿಗೆ ಎದುರಾದ ತೊಂದರೆಗಳು, ಬ್ರಿಟಿಷ್ ಪ್ರಭುಗಳ ಅತ್ಯಾಚಾರಿ ನೀತಿಯ ತಂತ್ರೋಪಾಯಗಳು, ಹಿಂದೂಮುಸ್ಲಿಂ ಅನೈಕ್ಯದ ಪ್ರತ್ಯೇಕವಾದದ ಬೀಜಾಂಕುರ, ತತ್ಪರಿಣಾಮವಾದ ಘೋರ ಹತ್ಯೆಯ ಘರ್ಷಣೆಗಳು, ದೇಶ ವಿಭಜನೆ. ಪಾಕಿಸ್ತಾನದ ಪ್ರಜೆಯಾಗಿ ಅವರು ಕೊನೆಯತನಕ ಅನುಭವಿಸಿದ ಅಪಮಾನ. ಸೆರೆವಾಸಗಳು ನಮಗೆ ಈ ವೀರ ಸತ್ಯಾಗ್ರಹಿಯ ಬಗ್ಗೆ ಗಾಂಧೀಜಿಯವರ ಅನಂತರದ ಗೌರವಾದರವನ್ನು ಸಲ್ಲಿಸಲು ಪ್ರೇರೇಪಿಸುತ್ತದೆ. ಇದನ್ನು ನೆಹರು ಹೀಗೆ ಹೇಳಿದ್ದಾರೆ, 'ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಇಂಥ ಮಹಾವ್ಯಕ್ತಿ ಮತ್ತೊಬ್ಬರಿಲ್ಲ. ಭಾರತದ ನಿಜವಾದ ಧೀರೋದಾತ್ತ ಪರಂಪರೆಗೆ ಇವರೊಂದು ದಿವ್ಯ ಪ್ರತೀಕ'. (ಪುಟ : ೮೦)

ಗಫಾರ್ ಖಾನರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರುವ ಕೆಲವೊಂದು ಸನ್ನಿವೇಶಗಳನ್ನು ಲೇಖಕರು ನಿರೂಪಿಸಿರುವುದು ಪುಸ್ತಕದ ತೂಕವನ್ನು ಹೆಚ್ಚಿಸಿದೆ. ೧೯೨೦ ರಲ್ಲಿ ಸೆರೆಮನೆಯಲ್ಲಿ ಕಠೋರ ಶಿಕ್ಷೆ

ಗಳನ್ನು ಅನುಭವಿಸಬೇಕಾಗಿ ಬಂದರೂ ಪ್ರಾಮಾಣಿಕತೆ ಸತ್ಯಸಂಧತೆಯನ್ನು ಬಲಿಗೊಡದ ಖಾನರ ಪವಿತ್ರಾದರ್ಶ ಮಹನೀಯವಾಗಿ ಕಾಣುತ್ತದೆ. ಡೇರಾ ಇಸ್ಮಾಯಿಲ್ ಖಾನ್ (ಈಗ ಪಾಕಿಸ್ತಾನದಲ್ಲಿದೆ) ಎಂಬ ಊರಿನ ಬಂಧಿಖಾನೆಯಲ್ಲಿ ಅವರು ಕೈದಿಯಾಗಿದ್ದಾಗ ನಡೆದ ಘಟನೆ ಇದು. ಅದನ್ನು ಗಫಾರ್ ಖಾನರೇ ಹೀಗೆ ನೆನೆಪಿಸಿಕೊಂಡಿದ್ದಾರೆ: "ಒಂದು ಮೃದು ಸ್ವಭಾವದ ಜೈಲಾಧಿಕಾರಿ ಬಂದ. ನಾನಾಗ ಕಾಳು ಬೀಸುತ್ತಿದ್ದೆ. ಆ ದಿನ ಇಪ್ಪತ್ತು ಸೇರು ಕಾಳು ಕೊಟ್ಟಿದ್ದರು. ನೋಡಿ ಆ ಮುಸ್ಲಿಂ ಬಾಂಧವನಿಗೆ ದುಃಖವಾಯಿತು. 'ನಿಮ್ಮಂಥ ಸಾಧು ಸತ್ಪುರುಷನಿಗೆ ಇಂಥ ದುಡಿಮೆ ಕೊಡುವುದು ವ್ಯಸನವಾಗುತ್ತದೆ. ದೇವರು ನನ್ನನ್ನು ಕ್ಷಮಿಸುತ್ತಾನೆಯೇ?' ಎಂದ. ಮಾರನೇ ದಿನ ಹಿಟ್ಟನ್ನೇ ಕಳುಹಿಸಿ ಕಾಳು ಎಂದು ಹೇಳಬೇಕೆಂದು ಕೇಳಿಕೊಂಡ. ಅತನ ಕರುಣೆಗೆ ವಂದಿಸಿ 'ನಾನು ಸುಳ್ಳು ಹೇಳಲಾರೆ. ನನಗೆ ಕಾಳನ್ನೇ ಕಳುಹಿಸು' ಎಂದು ಬೇಡಿಕೊಂಡೆ. ಅಲ್ಲಿ ಆಗ ೧೫೦೦ ಕೈದಿಗಳಿದ್ದರು. ಅವರೆಲ್ಲರೂ ಬೀಸುವಾಗ ನಾನು ತಪ್ಪಿಸುವುದು ಪಾಪ ಎನಿಸಿತು. ನಾನಾದರೋ ನನ್ನ ಪವಿತ್ರದೀಕ್ಷೆಗೆ ಪ್ರಾಮಾಣಿಕನಾಗದಿದ್ದರೆ ದೇವರು ಮೆಚ್ಚುವುದಿಲ್ಲ ಎಂದು ಭಾವಿಸಿ ಎಲ್ಲ ಕಷ್ಟಗಳನ್ನು ಸ್ವಾಗತಿಸಿದೆ." (ಪುಟ ೨೮).

ಹಾಗೆಯೇ ಗಫಾರ್ ಖಾನರ ಸರ್ವ ಭೂತದಯೆಗೆ ಮಾನವೀಯತೆಗೆ ಮತ್ತೊಂದು ನಿದರ್ಶನ ನಿರೂಪಿತವಾಗಿದೆ. ಒಮ್ಮೆ ಹರಿಪ್ಪರದ ಹಜಾರಾ ಕೇಂದ್ರ ಸೆರೆಮನೆಯಲ್ಲಿ ಜೈಲು ಮುಖ್ಯಾಧಿಕಾರಿ ಕರ್ನಲ್ ಸ್ಮಿತ್ ಭೇಟಿ ನೀಡಿದಾಗ ಗಫಾರ್‌ಖಾನರು ಕೋಳಿ ಮರಿಗಳಿಗೆ ಪ್ರೀತಿಯಿಂದ ಆಹಾರ ನೀಡುತ್ತ ತಲ್ಲೀನರಾಗಿ ಲೋಕವನ್ನೇ ಮರೆತಿದ್ದರು. ಆತ ಸದ್ದು ಮಾಡದೆ ಖಾನರ ಹಿಂದೆ ನಿಂತು ಈ ದೃಶ್ಯವನ್ನು ಗಮನಿಸುತ್ತಿದ್ದ. ಹಿಂದೆ ರಾಜಕೀಯ ಅಧಿಕಾರಿಗಳನ್ನು ಅತ್ಯಂತ ಕ್ರೂರವಾಗಿ ಶಿಕ್ಷಿಸಿದ್ದ. ಖಾನರನ್ನು ಅಪಮಾನಗೊಳಿಸಿದ್ದ. ಈಗ ಅವನ ಮನಸ್ಸು ಬದಲಾಗಿತ್ತು. ಖಾನರನ್ನು ಕುರಿತು 'ಏನು ಮಾಡುತ್ತಿದ್ದೀರಿ' ಎಂದು ಸ್ನೇಹ ಗೌರವ ದಿಂದ ವಿಚಾರಿಸಿದ. ಖಾನರು ನಸುನಗುತ್ತ 'ಇಲ್ಲಿ ನೋಡಿ, ಈ ಮರಿ ಗಳು ಮನುಷ್ಯನಿಗೆ ಎಂಥ ಪಾಠ ಕಲಿಸುತ್ತವೆ! ಅವುಗಳನ್ನು ಕೊಂದು ತಿನ್ನುವುದೇ ನಮ್ಮ ಉದ್ದೇಶ. ನಮ್ಮನ್ನು ಕಂಡರೆ ಅವಕ್ಕೆ ಭಯವಾಗಲೀ

ಪರೀಕ್ಷೆಯ ಸನ್ನಿವೇಶಗಳು ಇಪ್ಪತ್ತು ಅಧ್ಯಾಯಗಳಲ್ಲಿ ಸಂಕ್ಷೇಪವಾಗಿ ಆದರೆ ಸ್ಫುಟವಾಗಿ ರೇಖಿತವಾಗಿವೆ. ಖಾನರ ಮೇಲೆ ಹೇಗೊ ಹಾಗೆ, ಇಡೀ ರಾಷ್ಟ್ರದ ಮೇಲೆ ಬಾಪೂಜಿಯವರ ವರ್ಚಸ್ಸು ಅಚ್ಚಳಿಯದ ಮುದ್ರೆಯೊತ್ತಿದ್ದನ್ನು ನಾವು ಅನುಭವಿಸುತ್ತೇವೆ. ಪುಸ್ತಕ ಓದಿ ಮುಗಿಸಿದ ಮೇಲೆ ಸ್ವಾತಂತ್ರ್ಯ ಪೂರ್ವ ಸಮಯದ ನಮ್ಮ ಜನರ ಸದೃಢವಾದ ಧ್ಯೇಯನಿಷ್ಠೆ, ಹುಮ್ಮಸ್ಸು, ಸಹಿಷ್ಣುತೆ, ತ್ಯಾಗ ಮನೋಭಾವ, ಸಂಯಮ, ಅಹಿಂಸಾಪ್ರೀತಿ ಇವೊತ್ತು ಎಲ್ಲಿ ಮಾಯವಾದವು ಎಂದು ಮನಸ್ಸು ಖೇದಕ್ಕೆ ಒಳಗಾಗುತ್ತದೆ.

ಗಫಾರ್‌ಖಾನರು ಗಡಿನಾಡು ಪ್ರಾಂತದಲ್ಲಿ ಕೇವಲ ನಾನ್ನೂರು ಐನೂರು ಸ್ವಯಂಸೇವಕರಿಂದ ಸಂಘಟಿಸಿದ ಖುದಾಯಿ ಖಿದ್ಮತ್‌ಗಾರ್ ಅಥವಾ ಈಶ ಸೇವಕರ ಪಡೆ ಲಕ್ಷೋಪಲಕ್ಷವಾಗಿ ಬೆಳೆದ ಸಂಗತಿಯ ನಿರೂಪಣೆ ಹೃದ್ಯವಾಗಿದೆ. ಅಹಿಂಸೆ ಬಲಹೀನತೆಯಲ್ಲ, ವೀರಯೋಧರ ಅಸದೃಶ ಶಕ್ತಿ: ವ್ಯಕ್ತಿ ಬಲಪ್ರಯೋಗದಂಬ ಅಂಶವನ್ನು ಹುಟ್ಟಾ ಕದನಪ್ರೇಮಿಗಳಾಗಿದ್ದ ಪಠಾಣರಲ್ಲಿ ಮನದಟ್ಟಾಗಿಸಿ, ರಚನಾತ್ಮಕ ಕಾರ್ಯಗಳಲ್ಲಿ ಅವರನ್ನು ತೊಡಗಿಸಿದ ಅಗ್ಗಳಿಕೆ ಖಾನರದು. ಈ ದೆಸೆಯಲ್ಲಿ ಅವರಿಗೆ ಎದುರಾದ ಕೋಟಲೆಗಳು, ಬ್ರಿಟಿಷ್ ಪ್ರಭುಗಳ ಇಬ್ಭಾಗವಾದಿ ನೀತಿಯ ತಂತ್ರೋಪಾಯಗಳು. ಹಿಂದೂಮುಸ್ಲಿಂ ಅನೈಕ್ಯದ ಪ್ರತ್ಯೇಕವಾದದ ಬೀಜಾಂಕುರ, ರಕ್ತಪಾತಮಯವಾದ ಘೋರ ಮತೀಯ ಘರ್ಷಣೆಗಳು, ದೇಶ ವಿಭಜನೆ. ಪಾಕಿಸ್ತಾನದ ಪ್ರಜೆಯಾಗಿ ಅವರು ಕೊನೆಯತನಕ ಅನುಭವಿಸಿದ ಅಪಮಾನ, ಸೆರೆವಾಸಗಳು ನಮಗೆ ಈ ವೀರ ಸತ್ಯಾಗ್ರಹಿಯ ಬಗ್ಗೆ ಗಾಂಧೀಜಿಯವರ ಅನಂತರದ ಗೌರವಾದರವನ್ನು ಸಲ್ಲಿಸಲು ಪ್ರೇರೇಪಿಸುತ್ತದೆ. ಇದನ್ನು ನೆಹರು ಹೀಗೆ ಹೇಳಿದ್ದಾರೆ, 'ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಇಂಥ ಮಹಾವ್ಯಕ್ತಿ ಮತ್ತೊಬ್ಬರಿಲ್ಲ. ಭಾರತದ ನಿಜವಾದ ಧೀರೋದಾತ್ತ ಪರಂಪರೆಗೆ ಇವರೊಂದು ದಿವ್ಯ ಪ್ರತೀಕ'. (ಪುಟ : ೮೦)

ಗಫಾರ್ ಖಾನರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರುವ ಕೆಲವೊಂದು ಸನ್ನಿವೇಶಗಳನ್ನು ಲೇಖಕರು ನಿರೂಪಿಸಿರುವುದು ಪುಸ್ತಕದ ತೂಕವನ್ನು ಹೆಚ್ಚಿಸಿದೆ. ೧೯೨೦ ರಲ್ಲಿ ಸೆರೆಮನೆಯಲ್ಲಿ ಕಠೋರ ಶಿಕ್ಷೆ

ಗಳನ್ನು ಅನುಭವಿಸಬೇಕಾಗಿ ಬಂದರೂ ಪ್ರಾಮಾಣಿಕತೆ ಸತ್ಯಸಂಧತೆಯನ್ನು ಬಲಿಗೊಡದ ಖಾನರ ಪವಿತ್ರಾದರ್ಶ ಮಹನೀಯವಾಗಿ ಕಾಣುತ್ತದೆ. ಡೇರಾ ಇಸ್ಮಾಯಿಲ್ ಖಾನ್ (ಈಗ ಪಾಕಿಸ್ತಾನದಲ್ಲಿದೆ) ಎಂಬ ಊರಿನ ಬಂದಿಖಾನೆಯಲ್ಲಿ ಅವರು ಖೈದಿಯಾಗಿದ್ದಾಗ ನಡೆದ ಘಟನೆ ಇದು. ಅದನ್ನು ಗಫಾರ್ ಖಾನರೇ ಹೀಗೆ ನೆನೆಪಿಸಿಕೊಂಡಿದ್ದಾರೆ: "ಒಂದು ಮೃದು ಸ್ವಭಾವದ ಜೈಲಾಧಿಕಾರಿ ಬಂದ. ನಾನಾಗ ಕಾಳು ಬೀಸುತ್ತಿದ್ದೆ. ಆ ದಿನ ಇಪ್ಪತ್ತು ಸೇರು ಕಾಳು ಕೊಟ್ಟಿದ್ದರು. ನೋಡಿ ಆ ಮುಸ್ಲಿಂ ಬಾಂಧವನಿಗೆ ದುಃಖವಾಯಿತು. 'ನಿಮ್ಮಂಥ ಸಾಧು ಸತ್ಪುರುಷನಿಗೆ ಇಂಥ ದುಡಿಮೆ ಕೊಡುವುದು ವ್ಯಸನವಾಗುತ್ತದೆ. ದೇವರು ನನ್ನನ್ನು ಕ್ಷಮಿಸುತ್ತಾನೆಯೇ?' ಎಂದ. ಮಾರನೇ ದಿನ ಎತ್ತನ್ನೇ ಕಳುಹಿಸಿ ಕಾಳು ಬೀಸು ಬೇಡವೆಂದು ಕೇಳಿಕೊಂಡ. ಅವನ ಕರುಣೆಗೆ ವಂದಿಸಿ 'ನಾನು ಸುಳ್ಳು ಹೇಳಲಾರೆ. ನನಗೆ ಕಾಳನ್ನೇ ಕಳುಹಿಸು' ಎಂದು ಬೇಡಿಕೊಂಡೆ. ಅಲ್ಲಿ ಆಗ ೧೫೦೦ ಖೈದಿಗಳಿದ್ದರು. ಅವರೆಲ್ಲರೂ ಬೀಸುವಾಗ ನಾನು ತಪ್ಪಿಸುವುದು ಪಾಪ ಎನಿಸಿತು. ನಾನಾದರೋ ನನ್ನ ಪವಿತ್ರದೀಕ್ಷೆಗೆ ಪ್ರಾಮಾಣಿಕನಾಗದಿದ್ದರೆ ದೇವರು ಮೆಚ್ಚುವುದಿಲ್ಲ ಎಂದು ಭಾವಿಸಿ ಎಲ್ಲ ಕಷ್ಟಗಳನ್ನು ಸ್ವಾಗತಿಸಿದೆ." (ಪುಟ ೨೮).

ಹಾಗೆಯೇ ಗಫಾರ್ ಖಾನರ ಸರ್ವ ಭೂತದಯೆಗೆ ಮಾನವೀಯತೆಗೆ ಮತ್ತೊಂದು ನಿದರ್ಶನ ನಿರೂಪಿತವಾಗಿದೆ. ಒಮ್ಮೆ ಹರಿಪುರದ ಹಜಾರಾ ಕೇಂದ್ರ ಸೆರೆಮನೆಯಲ್ಲಿ ಜೈಲು ಮುಖ್ಯಾಧಿಕಾರಿ ಕರ್ನಲ್ ಸ್ಮಿತ್ ಭೇಟಿ ನೀಡಿದಾಗ ಗಫಾರ್‌ಖಾನರು ಕೋಳಿ ಮರಿಗಳಿಗೆ ಪ್ರೀತಿಯಿಂದ ಆಹಾರ ನೀಡುತ್ತ ತಲ್ಲೀನರಾಗಿ ಲೋಕವನ್ನೇ ಮರೆತಿದ್ದರು. ಆತ ಸದ್ದು ಮಾಡದೆ ಖಾನರ ಹಿಂದೆ ನಿಂತು ಈ ದೃಶ್ಯವನ್ನು ಗಮನಿಸುತ್ತಿದ್ದ. ಹಿಂದೆ ರಾಜಕೀಯ ಅಧಿಕಾರಿಗಳನ್ನು ಅತ್ಯಂತ ಕ್ರೂರವಾಗಿ ಶಿಕ್ಷಿಸಿದ್ದ. ಖಾನರನ್ನು ಅವಮಾನಗೊಳಿಸಿದ್ದ. ಈಗ ಅವನ ಮನಸ್ಸು ಬದಲಾಗಿತ್ತು. ಖಾನರನ್ನು ಕುರಿತು 'ಇದೇನು ಮಾಡುತ್ತಿದ್ದೀರಿ' ಎಂದು ಸ್ನೇಹ ಗೌರವ ದಿಂದ ವಿಚಾರಿಸಿದ. ಖಾನರು ನಸುನಗುತ್ತ 'ಇಲ್ಲಿ ನೋಡಿ, ಈ ಮರಿ ಗಳು ಮನುಷ್ಯನಿಗೆ ಎಂಥ ಪಾಠ ಕಲಿಸುತ್ತವೆ! ಅವುಗಳನ್ನು ಕೊಂದು ತಿನ್ನುವುದೇ ನಮ್ಮ ಉದ್ದೇಶ. ನಮ್ಮನ್ನು ಕಂಡರೆ ಅವಕ್ಕೆ ಯಾವಾಗಲೂ

ಪ್ರಾಣಭಯ. ಆದರೆ ನೋಡಿ, ಸ್ವಲ್ಪ ಪ್ರೀತಿ ತೋರಿಸಿದರೆ ಸಾಕು ಎಷ್ಟು ಅಕ್ಕರೆಯಿಂದ ಹಕ್ಕಿ ಸ್ಪಂದಿಸುತ್ತದೆ! ನಿರ್ಭಯವಾಗಿ ತೊಡೆಯ ಮೇಲೇರಿ ನಲಿಯುತ್ತದೆ! ಈ ಅನುಭವದಿಂದ ಅಹಿಂಸೆ ಅಥವಾ ನಿರ್ವ್ಯಾಜ ಪ್ರೇಮ ಎಂಥ ಅಜೇಯ ಶಕ್ತಿ ಎಂದು ತಿಳಿಯಬಾರದೆ?' (ಪುಟ ೧೧೫-೧೧೬)

ವಿಭಜನೆಯ ಸ್ವಲ್ಪ ಮುಂಚಿನ ದಿನಗಳಲ್ಲಿ ಪೆಷಾವರ್ ಪಟ್ಟಣದಲ್ಲಿ ಹಿಂದೂಗಳ ರಕ್ಷಣೆಯನ್ನು ಹತ್ತು ಸಹಸ್ರ ಖುದಾಯಿ ಖಿದ್ಮತ್‌ಗಾರ್ ಸ್ವಯಂಸೇವಕರು ಹಾಗೂ ಗಫಾರ್‌ಖಾನರ ಅಣ್ಣ ಖಾನ್ ಸಾಹೇಬರು ವಹಿಸಲು ದುಡಿದದ್ದರ ಉಲ್ಲೇಖ ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ಹಲವರ ಕಣ್ಣು ತೆರೆಸುವಂಥದ್ದು.

ದೇಶದ ವಿಭಜನೆಯನ್ನು ಡಾ॥ ಅನ್ಸಾರಿ, ಸರ್ ಸಯ್ಯದ್ ಅಹಮದ್, ಅಬ್ದುಲ್‌ಕಲಾಂ ಆಜಾದ್, ಅಸಫ್‌ಅಲಿ, ಶೇಖ್ ಅಬ್ದುಲ್ಲ ಮತ್ತಿತರ ರಾಷ್ಟ್ರೀಯವಾದಿ ಮುಸ್ಲಿಂ ಗಣ್ಯರು ವಿರೋಧಿಸಿ, ಆ ದಿಕ್ಕಿನಲ್ಲಿ ದಿಟ್ಟವಾಗಿ ಪ್ರಯತ್ನಿಸಿದ್ದು ಐತಿಹಾಸಿಕ ಸತ್ಯವಾಗಿದೆ. ಖಾನ್ ಅಬ್ದುಲ್ ಗಫಾರ್‌ಖಾನರಂತೂ ಮೊದಲಿನಿಂದ ಅಪ್ರತಿಹತವಾದ ನಿಷ್ಠುರ ನಿಲುವನ್ನು ತಾಳಿದರು. ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳಲು ತಯಾರಿರಲಿಲ್ಲ.

ಭಾರತವನ್ನು ಹೋಳು ಮಾಡಿ ಎರಡು ರಾಷ್ಟ್ರಗಳನ್ನಾಗಿ ಪರಿವರ್ತಿಸುವ ಆಂಗ್ಲ ಆಳರಸರ ವಿನಾಶಕಾರಕ ನೀತಿಯನ್ನು ೧೯೪೭ ಜೂನ್ ೨ ರಂದು ವೈಸರಾಯ್ ಮೌಂಟ್ ಬ್ಯಾಟನ್ ಪ್ರಕಟಿಸಿದರು. ಅದನ್ನು ಚರ್ಚಿಸಲು ಜೂನ್ ೩ ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿತು. ಅದನ್ನು ಲೇಖಕರು ಹೀಗೆ ಉಲ್ಲೇಖಿಸಿದ್ದಾರೆ, "ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಗಾಧ ಬಹುಮತದಿಂದ ವಿಭಜನೆಯ ಸಲಹೆಯನ್ನೂ ಗಡಿನಾಡಿನಲ್ಲಿ ಜನಮತ ಗಣನೆಯ ಸಲಹೆಯನ್ನೂ ಒಪ್ಪಿ ನಿರ್ಣಯ ಮಾಡಿತು. ಅದನ್ನು ವಿರೋಧಿಸಿದ ಏಕೈಕ ಸದಸ್ಯ ಖಾನ್‌ಅಬ್ದುಲ್ ಗಫಾರ್‌ಖಾನ್. ಗಾಂಧೀಜಿ ಸಹಮತರಾಗಿದ್ದರೂ ಅವರು ಸದಸ್ಯರಾಗಿರಲಿಲ್ಲ. ಸಂಕಟದ ಭಾರದಿಂದ ತೊಳಲಿ ಖಾನರು ಕಟುವಾಗಿ ನುಡಿದರು 'ನಮ್ಮನ್ನು ನೀವು ನಿರ್ದಯವಾಗಿ ತೋಳಗಳಿಗೆ ಬಲಿ ಕೊಡುತ್ತಿದ್ದೀರಿ' "ಸಮಿತಿಯ ಸಭೆಯಿಂದ ಹೊರಗೆ ಮೆಟ್ಟಿಲುಗಳ ಮೇಲೆ ಕುಸಿದು 'ತೋಬಾ, ತೋಬಾ' ಎಂದು ನಾನೇ ಅಳಲಿದ್ದ"

ಎಂದು ಹೇಳಿಕೊಂಡಿದ್ದಾರೆ ಗಫಾರ್‌ಖಾನ್. ಸರ್ದಾರರೂ ರಾಜಾಜಿಯು ವರೂ ಖಾನರನ್ನು ಸಮಾಧಾನ ಪಡಿಸಿದರು." (ಪುಟ ೧೪೧-೧೪೨)

ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರ ನೇರ ಪ್ರತಿಪಾದನೆ, ಖಚಿತತೆ ಈ ಪುಸ್ತಕದ ಆದರಣೀಯ ಗುಣಗಳಾಗಿವೆ. ಅವರ ಭಾಷೆ ಅರ್ಥವಾಹಕವೇ ಹೊರತು ಅನಗತ್ಯವಾದ ಅಲಂಕಾರಿಕತೆಯಿಂದ ಭಾರ ವಾಗುವುದಿಲ್ಲ. ಎಂಥ ಸಂದರ್ಭದಲ್ಲೂ ಭಾವುಕಗೊಳ್ಳುವುದಿಲ್ಲ. ಪುಸ್ತ ಕದ ಕೊನೆಯಲ್ಲಿ ಪರಿಶಿಷ್ಟ ರೂಪವಾಗಿ ಸೇರಿಸಿರುವ ನೆಹರೂ ಅವರ ಅಭಿ ಪ್ರಾಯ, ಲಾಲ್‌ಬಹದ್ದೂರ್‌ಶಾಸ್ತ್ರಿ ಅವರಿಗೆ ಸಂದೇಶ, ವಿನೋಬಾ ಆಶ್ರ ಮದಲ್ಲಿ ಬಾದ್‌ಷಾಖಾನ್ ಉಪಯುಕ್ತವಾಗಿವೆ. ಗಡಿನಾಡು ಗಾಂಧಿಯ ವಿಶಿಷ್ಟ ವ್ಯಕ್ತಿತ್ವವನ್ನು ಉಜ್ಜ್ವಲವಾಗಿ ಬೆಳಗಿ ತೋರಿಸಲು ನೆರವಾಗು ತ್ತವೆ.

"ವರ್ತಮಾನ ಕಾಲದ ಇತಿಹಾಸವನ್ನು ಮುಂದೆ ಬರೆಯುವಾಗ ಬಹುಶಃ ಈಗ ಅನೇಕ ಉನ್ನತ ಸ್ಥಾನಗಳನ್ನು ಅಲಂಕರಿಸುವವರಲ್ಲಿ ಕೇವಲ ಕೆಲವರ ಹೆಸರು ಮಾತ್ರ ಉಳಿದೀತು. ಅಂಥ ವಿರಳರಲ್ಲಿ ಭವ್ಯ ಮೂರ್ತಿ ಯಾದ ಬಾದ್‌ಷಾಖಾನರ ಪ್ರಖ್ಯಾತ ವ್ಯಕ್ತಿತ್ವ ಕಂಗೊಳಿಸುತ್ತದೆ. ನೇರ ಮತ್ತು ಸರಳವಾದ, ವಿಶ್ವಾಸನೀಯವೂ ಸತ್ಯನಿಷ್ಠವೂ ಆಗಿ ದೀರ್ಘಕಾಲದ ಕಠಿಣ ಕಷ್ಟಗಳ ಅಗ್ನಿದಿವ್ಯದಲ್ಲಿ ಪುಟಗೊಂಡ ಧವಳ ಶೀಲ ಅವರದು" ನೆಹರೂ ಅವರ ಮೇಲಿನ ಮಾತುಗಳು ಅನುತ್ಪ್ರೇಕ್ಷಿತ ಮತ್ತು ಅಕ್ಷರಶಃ ದಿಟ. ಈ ವೇಳೆಯಲ್ಲಿ ಗುರುದೇವ ರವೀಂದ್ರನಾಥ ಠಾಕೂರರ ಬೇರೊಂದು ಸಂದರ್ಭದ ವಾಕ್ಯ ನೆನಪಾಗುತ್ತದೆ: 'We come nearest to the great when we are great in humility'. ವಿನಯಶಾಲೀನರಾಗಿದ್ದ ಗಫಾರ್‌ಖಾನರನ್ನು ಕುರಿತಂತೆ ಈ ಮಾತುಗಳು ಹೆಚ್ಚು ಅರ್ಥಪೂರ್ಣವೆನ್ನಿಸುತ್ತವೆ.

ಪುಸ್ತಕದಲ್ಲಿ ಅಲ್ಲಲ್ಲಿ ನುಸುಳಿರುವ ಪದಸ್ಖಾಲಿತ್ಯ ದೋಷ (ಅಚ್ಚಿನ ತಪ್ಪು?) ಗಳ ಬಗ್ಗೆ ಗಮನ ಹರಿಸಿದ್ದರೆ ಚೆನ್ನಿತ್ತೊ ಏನೋ.


ಇಂಥ ಪ್ರಸ್ತುತವಾದ ಜೀವನ ಚರಿತ್ರೆಯನ್ನು ರಚಿಸಿದ ಲೇಖಕ ರನ್ನೂ, ಸಕಾಲದಲ್ಲಿ ಪ್ರಕಾಶಿಸುತ್ತಿರುವ ಗಾಂಧಿ ಶಾಂತಿ ಪ್ರತಿಷ್ಠಾನವನ್ನೂ

ನಾನು ಮನಸಾರ ಅಭಿನಂದಿಸುತ್ತೇನೆ. ಇದನ್ನು ಓದುವುದರ ಮೂಲಕ
ಕನ್ನಡ ಜನ ಆ ಮಹಾನ್ ಚೇತನಕ್ಕೆ ನಮನ ಸಲ್ಲಿಸಲಿ.

ಪ್ರೊ॥ ಕೆ. ಎಸ್. ನಿಸಾರ್ ಅಹಮದ್

ಬೆಂಗಳೂರು
೨೭-೧೦-೧೯೯೦

ಪರಿವಿಡಿ



ಖಾನ್ ಅಬ್ದುಲ್ ಗಫಾರ್ ಖಾನ್ (೧೯೬೫)

೧. ಭವ್ಯ ಚೇತನ

"ಖಾನ್ ಸಹೋದರರ ಮೈತ್ರಿ ನಿಕಟವಾದ ಹಾಗೆ ಅವರಲ್ಲಿ ನನ್ನ ಆತ್ಮೀಯತೆಯೂ ಗಾಢವಾಯಿತು. ಅವರ ವ್ಯಕ್ತಿತ್ವದ ಆಕರ್ಷಣೆ ಹಾಗಿತ್ತು. ಅವರ ಸ್ಫಟಿಕ ಸದೃಶ ಪ್ರಾಮಾಣಿಕತೆ, ನಿರ್ಭೀತ ಸತ್ಯನಿಷ್ಠೆ ಮತ್ತು ಅಸಾಧಾರಣ ಸರಳತೆ – ಸಭ್ಯತೆಗಳಿಗೆ ನಾನು ಮಾರುಹೋದೆ. ಅಹಿಂಸಾಧರ್ಮ ಅವರಿಗೆ ಕೇವಲ ರಾಜನೀತಿಯಾಗಿರಲಿಲ್ಲ. ಬದುಕಿನ ಸಿದ್ಧಾಂತವಾಗಿಯೇ ಸತ್ಯ ಮತ್ತು ಅಹಿಂಸೆಗಳನ್ನು ಅಂಗೀಕರಿಸಿದ್ದರು. ಕಿರಿಯ ಸೋದರ ಗಫಾರ್‌ಖಾನರಂತೂ ಧಾರ್ಮಿಕ ಶ್ರದ್ಧೆಯಲ್ಲಿ ತಲ್ಲೀನರು. ಸಂಕುಚಿತ ಮತಾರಾಧಕರಲ್ಲ, ವಿಶ್ವಧರ್ಮ ಶರಣರು. ಅವರ ಧರ್ಮ ಶ್ರದ್ಧೆಯೇ ಅವರ ರಾಜಕೀಯಕ್ಕೆ ತಳಹದಿ, ಅವರಂತಹ ಧೀರ ಗಂಭೀರ ವ್ಯಕ್ತಿತ್ವದ ಉದಾತ್ತ ಮಾನವನನ್ನು ಕಾಣುವುದು ದುರ್ಲಭ".

ಮಹಾತ್ಮಗಾಂಧೀ ಮುಕ್ತಕಂಠದಿಂದ ಹೇಳಿದ ಈ ಮಾತುಗಳು ಖಾನ್ ಅಬ್ದುಲ್ ಗಫಾರ್‌ಖಾನ್ ಮತ್ತು ಅವರ ಅಣ್ಣ ಡಾ. ಖಾನ್ ಸಾಹೇಬರನ್ನು ಕುರಿತದ್ದು. ಮಹದೇವ ದೇಸಾಯಿಯವರ 'ಇಬ್ಬರು ಈಶ ಸೇವಕರು' ಎಂಬ ಪುಸ್ತಕಕ್ಕೆ ಇದು ಗಾಂಧೀಜಿ ಬರೆದ ಮುನ್ನುಡಿ. ವಾರ್ಧಾ ಆಶ್ರಮಕ್ಕೆ ೧೯೩೪ ರಲ್ಲಿ ಖಾನ್ ಸಹೋದರರು ಬಂದು ತಂಗಿದ್ದರು. ಈ ಅಪೂರ್ವ ಅತಿಥಿಗಳೊಡನೆ ಗಾಂಧೀಜಿ ಆತ್ಮೀಯ ಬಂಧುವಿನಂತೆ ಬೆರೆತು ಹೋದರು. ಗಫಾರ್‌ಖಾನರಿಗೂ ಮಹಾತ್ಮರ ಸನ್ನಿಧಿಯಲ್ಲಿ ಅಹಿಂಸಾ ತತ್ವನಿಷ್ಠೆ ಅಚಲವಾಗಿ ಬೇರೂರಿತು. ತಮ್ಮ ತೊಂಭತ್ತಾರು ವರ್ಷಗಳ ಸುದೀರ್ಘ ಸೇವಾ ದೀಕ್ಷೆಯ ಬಾಳಿನಲ್ಲಿ ಈ ಅದ್ವಿತೀಯ ಸ್ವಾತಂತ್ರ್ಯಯೋಧ, ಅನುಪಮ ಸತ್ಯಾಗ್ರಹಿ, ಭಾರತೀಯರಿಗೆ ಗಡಿನಾಡಿನ ಗಾಂಧಿ ಎಂದೇ

ಸುಪರಿಚಿತ ಐತಿಹಾಸಿಕ ಮಹಾವ್ಯಕ್ತಿ ಎನಿಸಿದ್ದಾರೆ.

ಜವಾಹರಲಾಲರ ಮಾತುಗಳಲ್ಲಿ ಅಬ್ದುಲ್ ಗಫಾರ್ ಖಾನ್ ತಮ್ಮ ಜನರಿಗೆ ಪ್ರಿಯರಾದ 'ಫಕಿರ್-ಇ-ಅಫ್ಗನ್' ಮಾತ್ರರಲ್ಲ ಅವರನ್ನು 'ಫಕಿರ್-ಇ-ಹಿಂದ್' ಎಂದೇ ಕರೆಯಬೇಕು. ಮಹಾತ್ಮಾ ಗಾಂಧೀಯವರನ್ನು ಬಿಟ್ಟರೆ ಇವರಿಗೆ ಸಮಾನರು ಅಪರೂಪ. ಅವರ ಕಾರ್ಯಕ್ಷೇತ್ರ ವಿಸ್ತಾರವಾದುದು. ಭಾರತದ ಸಾಹಸವೀರರಾದ ಧೈರ್ಯಶಾಲಿಗಳಲ್ಲಿ ಗಫಾರ್ ಖಾನ್ ಅಗ್ರಗಣ್ಯರು.

ಯಾವ ಸಮಯದಲ್ಲೂ ಎಲ್ಲರಿಗಿಂತ ಎತ್ತರವಾಗಿ ನಿಂತು ತಮ್ಮ ಶಾಂತ ಮುಖಮುದ್ರೆಯಿಂದ ಪ್ರಾಂಜಲ ಪ್ರೇಮ ಪಸರಿಸುತ್ತಿದ್ದ ಗಫಾರ್ ಖಾನ್ ಆಕರ್ಷಕ ಭವ್ಯ ಮೂರ್ತಿ, ಶಾಂತಿಯ ಸಾಮರಸ್ಯದ ಸುಂದರ ಪ್ರತೀಕ, ನೋಡಿದೊಡನೆ ನಮಿಸಬೇಕೆನಿಸುವ ತೇಜಸ್ವಿ. ಇಸ್ಲಾಂ ಧರ್ಮದ ತಾತ್ವಿಕ ಪ್ರಣಾಳಿ ಭಗವಂತನಲ್ಲಿ ಅನನ್ಯ ಶರಣತೆಗೆ ಆದ್ಯತೆ ನೀಡುತ್ತದೆ. "ಅಲ್ಲಾನ ಅಬಾಧಿತ ವಿಶ್ವನಿಯಮಕ್ಕೆ ತಲೆಬಾಗಿ ನಿರ್ವೈರ, ನಿಷ್ಪಕ್ಷ, ನಿರ್ಭೀತ ಮನುಷ್ಯಪ್ರಯತ್ನದಲ್ಲಿ ಕರ್ತವ್ಯದೃಷ್ಟಿಯಿಂದ ತೊಡಗುವುದೇ ನನ್ನ ಧರ್ಮ" ಎನ್ನುತ್ತಿದ್ದರು ಗಫಾರ್ ಖಾನ್. ಗಾಂಧೀಜಿಯೊಡನೆ ಸಹಚಿಂತಕರಾಗಿ ಅನಾಸಕ್ತಿಯೋಗದ ಆರಾಧಕರಾದರು. ಅವರ ಆತ್ಮಶಕ್ತಿಯ ತೇಜಸ್ಸು ಸುತ್ತಲೂ ಪಸರಿಸಿನಿಂತು ಸಹಸ್ರಾರು ಹೃದಯಗಳನ್ನು ತನ್ನೆಡೆಗೆ ಆಕರ್ಷಿಸಿತ್ತು. ಸೇವಕರಲ್ಲಿ ಸೇವಕ ಎಂದೇ ವಿನಯದಿಂದ ಹೇಳಿಕೊಳ್ಳುತ್ತಿದ್ದ ಈ ಉತ್ತುಂಗ ಮಾನವ ೧೯೩೭ ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನೂ ನಿರಾಕರಿಸಿ, "ನಾನೊಬ್ಬ ನಮ್ರ ಸ್ವಯಂ ಸೇವಕ. ಆ ಕರ್ತವ್ಯದಲ್ಲಿ ಲೀನನಾಗಿ ನಿರ್ವಂಚನೆಯಿಂದ ದೇಶಸೇವೆಯಲ್ಲಿ ತೊಡಗುವುದೇ ಪ್ರಿಯವಾದ ಕರ್ತವ್ಯ" ಎಂದರು.

ಖಾನ್ ಅಬ್ದುಲ್ ಗಫಾರ್ ಖಾನ್ ಒಬ್ಬ ನಿಸ್ಸೀಮಯೋಧ. ಸಾವಿರಾರು ಕರ್ತವ್ಯಸಿದ್ಧ ಸೈನಿಕರು ಅವರ ಹಿಂದೆ ನಿಂತು ಅವರ ಆಣತಿಗಳಿಗೆ ಶಿರಬಾಗಿ ನಡೆಯುತ್ತಿದ್ದರು. ವಂಚನೆಯಾಗಲೀ ಪೊಳ್ಳುತನವಾಗಲೀ ಅವರ ಬಳಿ ಸುಳಿಯುತ್ತಿರಲಿಲ್ಲ. ಅತ್ಯುತ್ತಮ ಸೇವಾದೀಕ್ಷೆಯನ್ನು ಬಿಟ್ಟು ಬೇರಾವ ನಾಯಕತ್ವವನ್ನೂ ನಾನರಿಯೆ ಎನ್ನುತ್ತಿದ್ದರು. ಗಾಂಧೀಜಿಯು

ರಚನಾತ್ಮಕ ಕಾರ್ಯದಲ್ಲಿ ಅವರಿಗೆ ಅಪಾರ ಶ್ರದ್ಧೆ. ಕೇವಲ ತೋರಿಕೆಗಾಗಿ ಯಾವ ಕೆಲಸವನ್ನೂ ಕೈಗೊಳ್ಳುತ್ತಿರಲಿಲ್ಲ. ಡಾಂಭಿಕತೆಯೆಂದರೆ ಅವರಿಗೆ ಅಸಹ್ಯವಾಗಿತ್ತು. ತಾವೇ ಮುಂದಾಗಿ ಯಾವ ಕೆಲಸಗಳನ್ನು ಕೈಗೊಳ್ಳುತ್ತಿದ್ದರೋ ಅವನ್ನೇ ಅನುಯಾಯಿಗಳಿಗೆ ಬೋಧಿಸುತ್ತಿದ್ದರು. ೧೯೩೪ ರಲ್ಲಿ ಸೇವಾಗ್ರಾಮಕ್ಕೆ ಬಂದಾಗ ತಮ್ಮ ನಾಡಿನ ಅಸಂಖ್ಯಾತ ಗಿರಿಜನರೆನಿಸಿದ್ದ ಪಠಾಣರ ಆರ್ಥಿಕ ದುಃಸ್ಥಿತಿ ಸುಧಾರಿಸಲು ಚರಕಾ ಸಂದೇಶವನ್ನು ಅವರ ಕುಟೀರಗಳಿಗೆ ಕೊಂಡೊಯ್ಯಬೇಕು ಎಂದು ತೀರ್ಮಾನಿಸಿದರು. ಆ ಕೂಡಲೇ ದೀಕ್ಷೆತೊಟ್ಟು ಚರಕದಿಂದ ನೂಲುವುದನ್ನಭ್ಯಾಸ ಮಾಡಿದರು. ಗಂಟೆಗಟ್ಟಲೆ ಕಾಲುಮಡಿಸಿ ಕೂತು ದಿನವೂ ಸೂತ್ರಯಜ್ಞದಲ್ಲಿ ತಲ್ಲೀನರಾದರು. ಗಾಂಧೀಜಿಯ ಅನ್ನಕಾಯಕದ ಸಂದೇಶ ಮನದಟ್ಟಾಯಿತು. ಇಸ್ಲಾಂ ಧರ್ಮದಲ್ಲಿನ 'ಸರ್ವಸ್ವವನ್ನೂ ಹಂಚಿಕೊಂಡು ಬಾಳು' ಎಂಬ ತತ್ವದ ವ್ಯವಹಾರಿಕ ಮುಖ ಅರಿವಾಯಿತು. ಖಾದಿ ಉಡುಪು ಒಂದು ಧಾರ್ಮಿಕ ಸಂಕೇತವೆಂದೇ ಅಂಗೀಕರಿಸಿದರು. ಈ ಪಾವನ ಪ್ರಸಂಗಗಳನ್ನು ಮಹದೇವ ದೇಸಾಯಿ ಹೃದಯಂಗಮವಾಗಿ ಬಣ್ಣಿಸಿದ್ದಾರೆ: "ಗಾಂಧೀಜಿಗಿಂತ ಶ್ರೇಷ್ಠರಾದ ಸಮಾಜವಾದಿಗಳನ್ನು ನಾನರಿಯೆ. ಖಾನ್ ಎಂದರೆ ಜಮೀನ್‌ದಾರ್ ಎಂದು ಸಂಭೋದಿಸಿದವರು ಬ್ರಿಟಿಷರು. ಅದು ಅವರ ಪ್ರಭುತ್ವದ ಬೆಂಬಲಕ್ಕಾಗಿ ಮಾಡಿದ ಸೃಷ್ಟಿ. ಈ ಒಂದೆ ಈ 'ಖಾನ್‌ಗಿರಿ' ಎಂದರೆ ಸಾಗುವಳಿ ಭೂಮಿಯನ್ನೆಲ್ಲ ಸರಿಯಾಗಿ ವಿಂಗಡಿಸಿ ದುಡಿಯುವ ರೈತರಿಗೆ ನ್ಯಾಯವಾಗಿ ವಿತರಣೆ ಮಾಡುವ ಜವಾಬ್ದಾರಿ ಎಂದೇ ಅರ್ಥವಿತ್ತು. ಪ್ರತಿ ಇಪ್ಪತ್ತು ವರ್ಷಕ್ಕೊಮ್ಮೆ ಪುನರ್ವಿಮರ್ಶಿಸಿ ಹಂಚಲಾಗುತ್ತಿತ್ತು. ಇದರಲ್ಲಿ ಜಮೀನ್‌ದಾರನೂ ಸಮಭಾಗಿ. ಅವನ ಸಾಮರ್ಥ್ಯವಿದ್ದಷ್ಟು ಕೃಷಿ ಮಾಡುವ ಹಕ್ಕು ಅವನಿಗಿರುತ್ತಿತ್ತು. ಭೂಮಿಯ ಒಡೆತನ ಎಂಬ ಕಲ್ಪನೆ ಬಂದುದೇ ಬ್ರಿಟಿಷರಿಂದ ಎನ್ನುತ್ತಿದ್ದರು ಬಾದ್‌ಷಾಖಾನ್. ಗಡಿನಾಡಿನ ಪಠಾಣ ಬುಡಕಟ್ಟಿನವರಿಗೆ ಇವರು 'ಬಾದಷಹಾ' ಅಥವಾ ಚಕ್ರವರ್ತಿ. ಅವರ ಮಾತು ಎಂದರೆ ಸರ್ವಮಾನ್ಯ. ಅವರ ಮಾರ್ಗದರ್ಶನ ಅತ್ಯಂತ ಶ್ರೇಷ್ಠ ಎಂದು ಇಡೀ ವಾಯುವ್ಯ ಗಡಿನಾಡಿನ ವೀರಯೋಧರೆನಿಸಿದ್ದ ಪಠಾಣ ಜನಾಂಗದ ಹೃದಯಪೂರ್ವಕ ನಂಬಿಕೆಯಾಗಿತ್ತು".

ಗಾಂಧೀಜಿ ಕಾಂಗ್ರೆಸ್ಸಿನ ಸದಸ್ಯತ್ವದಿಂದ ನಿವೃತ್ತರಾಗಿ ಹೊರಗಿನಿಂದಲೇ ಅದರ ಸೇವೆ ಮಾಡುತ್ತೇನೆ ಎಂದಾಗ ಗಫಾರ್‌ಖಾನರಿಗೆ ಏನೂ ಆಶ್ಚರ್ಯವೆನಿಸಲಿಲ್ಲ. ಅವರ ನಿರ್ಧಾರಗಳು ಯಾವಾಗಲೂ ಅಂತರಾತ್ಮ ಪ್ರೇರಿತವಾದುದು. ಭಗವಂತನ ಆಣತಿಗೆ ಶರಣು ಹೋಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಹಾತ್ಮರಾದ ಸಮಾಜ ಸುಧಾರಕರ ಮಾರ್ಗವೇ ಹಾಗೆ. ಅವರು ಜೀವನದಲ್ಲಿ ತಮ್ಮ ಅನುಕೂಲಗಳಿಗಿಂತ ಮೇಲೇರಿ ನಿಂತು ಸ್ವತಂತ್ರ ನಿರ್ಣಯಗಳಿಗೆ ಬಂದು, ಸಾಮಾನ್ಯರ ಅಳುಕು ಅಧೈರ್ಯಗಳಿಗೆ ಮಣಿಯದೆ ದಿಟ್ಟ ಹೆಜ್ಜೆಗಳನ್ನಿಡಬೇಕಾಗುತ್ತದೆ. ಆ ಕಾರಣದಿಂದ ಅವರ ಸೇವಾದೀಕ್ಷೆ ಕುಂಠಿತವಾಗುವುದರ ಬದಲು ವಿಸ್ತಾರವಾಗುತ್ತದೆ. ಭಗವಂತನಲ್ಲಿ ಅನನ್ಯ ಶರಣತೆಯ ಮಾನದಂಡವೇ ನನಗೆ ಸರ್ವಥಾ ಸಮ್ಮತವಾದ ಮೌಲ್ಯ. ಎಲ್ಲವನ್ನೂ ನಾನು ಹಾಗೆಯೇ ಅಳೆದು ನೋಡುತ್ತೇನೆ ಎಂದರು. ಒಂದು ಉದಾತ್ತ ಜೀವನ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ ಅಪೂರ್ವ ಚೇತನಕ್ಕೆ ಬೇರಾವ ವ್ಯಾಖ್ಯಾನವೂ ಹಿಡಿಸದು. ಹಾಗೆ ಬಾಳಿದ ಭವ್ಯ ಚೇತನ ಖಾನ್ ಅಬ್ದುಲ್ ಗಫಾರ್‌ಖಾನ್.

೨. ಪೂರ್ವೇತಿಹಾಸ

ವಾಯುವ್ಯ ಗಡಿನಾಡು ರಾಜ್ಯ ಈಗ ಪಾಕಿಸ್ತಾನದ ಭಾಗ. ಹಿಮಾಲಯದ ಪಶ್ಚಿಮದ ತುದಿ ಹಿಂದೂಕುಷ್ ಪರ್ವತ. ಇತಿಹಾಸ ಪೂರ್ವದ ಭಾರತಕ್ಕೆ ಇಲ್ಲಿನ ಖೈಬರ್‌ಪಾಸ್ ಕಣಿವೆಯೇ ಏಕೈಕ ಸಂಪರ್ಕ ಭೂಭಾಗ. ಮೂರು ಕಡೆ ಸಾಗರಗಳು, ಉತ್ತರದಲ್ಲಿ ಮಹಾ ಪರ್ವತ ಶ್ರೇಣಿಗಳು ದುರ್ಗಮ ಗಡಿಗಳಾಗಿದ್ದು ಭಾರತಕ್ಕೆ ವಿದೇಶೀಯರೆಲ್ಲರೂ ಅಫ್‌ಘಾನಿಸ್ತಾನದ ಪೂರ್ವಭಾಗವಾದ ಈ ಫಕ್ತೂನ್ ಪ್ರದೇಶದ ಮೂಲಕ ಬಂದರು. ಗ್ರೀಸಿನ ಸಾಮ್ರಾಟ ಅಲೆಕ್ಸಾಂಡರ್ ದಂಡೆತ್ತಿ ಬಂದುದು ಈ ಮಾರ್ಗವಾಗಿಯೇ. ಪ್ರಾಚೀನ ಭಾರತದ ಭವ್ಯ ಇತಿಹಾಸದ ಮೂಲ ಪುರುಷರಾದ ಆರ್ಯರು ಕಟ್ಟಿದ ನಾಡು ಇದು. ಚೀನ, ಭಾರತ ಮತ್ತು ಇರಾನಿನ ಪುರಾತನ ಸಂಸ್ಕೃತಿಗಳ ತ್ರಿವೇಣಿ ಸಂಗಮ ಇಲ್ಲಿದೆ. ಪುರಾಣಗಳ ಕಾಲದ ಗಾಂಧಾರ ಎಂದು ಇತಿಹಾಸ ತಜ್ಞರು ಈ ಪ್ರದೇಶಗಳನ್ನು ಗುರ್ತಿಸುತ್ತಾರೆ. ಇಸ್ಲಾಂ ಧರ್ಮ ಭಾರತಕ್ಕೆ ಬಂದುದೂ ಈ ಮಾರ್ಗದಿಂದ. ಫಖ್ತೂನರು ಅಥವ ಪಠಾಣರು ಮೂಲತಃ ಆರ್ಯನ್ ಬುಡಕಟ್ಟಿನವರು. ಅವರ ಭಾಷೆ ಪಖ್ತು, ಅಥವಾ ಪುಷ್ತು ಇಂಡೋ-ಇರಾನಿಯನ್ ಭಾಷೆ ಸಂಸ್ಕೃತ ಮತ್ತು ಇರಾನಿನ ಜೆಂಡ್ ಭಾಷೆಗಳಿಂದ ಉದ್ಭವವಾದ ಪದಗಳಿಂದ ಸಮೃದ್ಧವಾಗಿದೆ. ಒಂದು ವಿಶಿಷ್ಟ ಸಂಸ್ಕೃತಿ ಈ ಜನತೆಯ ನಾಡಿಗಳಲ್ಲಿ ಹರಿಯುತ್ತದೆ. ಈಗಿನ ಅಫ್‌ಘಾನಿಸ್ತಾನ, ಪಾಕಿಸ್ತಾನ ಮತ್ತು ಭಾರತಗಳಲ್ಲಿ ಹರಡಿರುವ ಸುಮಾರು ಹತ್ತು ದಶಲಕ್ಷ ಜನ ಬಳಸುವ ಈ ಭಾಷೆಯಲ್ಲಿ ವಿಪುಲವಾದ ಸಾಹಿತ್ಯವೂ ನಿರ್ಮಾಣವಾಗಿದೆ.

ಮಹಾ ಸಾಮ್ರಾಟ ಅಲೆಗ್ಸಾಂಡರ್ ಈ ಪ್ರದೇಶದಲ್ಲಿ ಪ್ರಾಚೀನ

ಭಾರತ ಪರಂಪರೆಯ ಆತ್ಮಜ್ಞಾನ ಸಿದ್ಧಿಯ ತಪಸ್ವಿಯೊಬ್ಬರನ್ನು ಸಂದರ್ಶಿಸಿದ ಕಥೆ ಪ್ರಚಲಿತವಿದೆ. ಸರ್ವಸಂಗ ಪರಿತ್ಯಾಗಿಯಾದ ಸಾಧುವಿನ ಮೇಲೆ ಯಾವ ಸಾಮ್ರಾಟನ ಅಧಿಕಾರವೂ ನಡೆಯದೆಂದು ತಿಳಿದು ಅವನ ಭಕ್ತನಾದನೆಂದು ಹೇಳುತ್ತಾರೆ. ಖಾನ್ ಅಬ್ದುಲ್ ಗಫಾರ್‌ಖಾನರೂ ಆ ಪಂಕ್ತಿಗೆ ಸೇರಿದ ವಿರಕ್ತಯೋಧ. ಈ ಪ್ರದೇಶದಲ್ಲಿರುವ ಉಟ್‌ಮಾನ್ ಜಾಯ್ ಎಂಬ ಗ್ರಾಮದಲ್ಲಿ ಹುಟ್ಟಿದವರು.

ವಾಯುವ್ಯ ಗಡಿನಾಡು ರಾಜ್ಯ ಎಂದೇ ಈಗಲೂ ಹೆಸರಿರುವ ಪಾಕಿಸ್ತಾನದ ಈ ಭಾಗ ಅಫ್‌ಘಾನಿಸ್ತಾನದ ಗಡಿ ಪ್ರದೇಶದಲ್ಲಿದೆ. ಐವತ್ತು ಲಕ್ಷ ಜನ ಸಂಖ್ಯೆಯಲ್ಲಿ ಬಹುಭಾಗ ಕಣಿವೆವಾಸಿಗಳಾದ ರೈತರು. ಅವರನ್ನು ಪಠಾಣರು ಎನ್ನುತ್ತಾರೆ. ಪಶ್ಚಿಮಕ್ಕೆ ಅಫ್‌ಘನ್ನರೊಡನೆ ಮತ್ತು ಪೂರ್ವಕ್ಕೆ ಕಾಶ್ಮೀರಿಗಳೊಡನೆ ಈ ಜನರ ನಿಕಟ ಬಾಂಧವ್ಯಗಳಿವೆ. ಗಫಾರ್‌ಖಾನರಿಗೆ ಭಾರತದ ದೆಹಲಿಯಲ್ಲಿ ಎಂತಹ ಹಾರ್ದಿಕ ಸ್ವಾಗತ ಇದ್ದಿತೋ ಅಷ್ಟೇ ಹಾರ್ದಿಕವಾಗಿ ಕಾಬೂಲಿನಲ್ಲಿಯೂ ಅವರನ್ನು ಗೌರವಿಸುತ್ತಿದ್ದರು. ಪಠಾಣ ಜನಾಂಗವನ್ನು ಕುರಿತು ಇತಿಹಾಸಕಾರರು ವಿಪುಲವಾಗಿ ಬರೆದಿದ್ದಾರೆ. ಅಲ್ಲಿಗೆ ಭೇಟಿಯಿತ್ತ ಎಲ್‌ಫಿನ್‌ಸ್ಟನ್ ಎಂಬ ಮೊದಲ ಆಂಗ್ಲೇಯ ಅಧಿಕಾರಿ ಅವರನ್ನು ವರ್ಣಿಸುತ್ತಾ, "ಅತ್ಯಂತ ಪ್ರಾಮಾಣಿಕ ಸರಳ ಜೀವಿಗಳು. ಏಷ್ಯದ ಜನಾಂಗಗಳಲ್ಲಿ ಅವರಷ್ಟು ಕಡಿಮೆ ದುರ್ಗುಣಗಳುಳ್ಳ ಬೇರೊಂದು ನಿದರ್ಶನವನ್ನು ಕಾಣೆ. ಸೇಡು, ದ್ವೇಷ, ಹಠ ಅವರಲ್ಲಿ ಕಂಡರೂ ವಂಚನೆಯಾಗಲೀ, ಮಿತ್ರದ್ರೋಹವಾಗಲೀ, ನಿರ್ದಯವಾಗಲೀ ಎಳ್ಳಷ್ಟೂ ಕಂಡುಬರುವುದಿಲ್ಲ" ಎನ್ನುತ್ತಾನೆ.

೧೮೫೭ ರ ಮೊದಲ ಸ್ವಾತಂತ್ರ್ಯಯುದ್ಧ ಅಥವಾ ಸಿಪಾಯಿದಂಗೆ ಈ ಗಡಿನಾಡು ಪ್ರಾಂತವನ್ನು ತಲುಪಿರಲಿಲ್ಲ. ಬ್ರಿಟಿಷರ ಸರ್ಪಕಾವಲು ಅವರನ್ನು ಸುತ್ತುವರಿದಿತ್ತು. ಭಾರತದ ಹೆಬ್ಬಾಗಿಲು ಎನಿಸಿದ್ದ ಈ ಪ್ರದೇಶದಲ್ಲಿ ಪ್ರಬಲವಾದ ಸೈನ್ಯ ಯಾವಾಗಲೂ ಪಹರೆ ಇರುತ್ತಿತ್ತು. ಪೆಷಾವರ್ ಪಟ್ಟಣ ಸೈನ್ಯಾಧಿಕಾರಿಗಳ ಕೇಂದ್ರ. ಗ್ರಾಮವಾಸಿಗಳು ಬಹುಮಟ್ಟಿಗೆ ಸ್ವತಂತ್ರರೂ ಸ್ವಾವಲಂಬಿಗಳೂ ಆಗಿದ್ದುದರಿಂದ ಸರ್ಕಾರದ ಕೈವಾಡ ಹೆಚ್ಚು ಪ್ರಚಲಿತವಾಗಿರಲಿಲ್ಲ. ಗ್ರಾಮಕ್ಕೆ ಒಂದು 'ಜಿರ್ಗಾ'

ಅಥವ ಹಿರಿಯರ ಸಭೆ ಇರುತ್ತಿತ್ತು. ಎಲ್ಲವನ್ನೂ ಸಾರ್ವಜನಿಕವಾಗಿ ಚರ್ಚಿಸಿ ನಿರ್ಧಾರಗಳನ್ನು ಒಮ್ಮತದಿಂದ ಕೈಗೊಳ್ಳುತ್ತಿದ್ದರು. ಅಪರಾಧ ಗಳನ್ನು ನ್ಯಾಯಸಮ್ಮತವಾಗಿ ತೀರ್ಮಾನಿಸಿ ಪರಸ್ಪರ ಸೌಹಾರ್ದವನ್ನು ರಕ್ಷಿಸಿಕೊಂಡು ಗ್ರಾಮ ಸಮಾಜದಲ್ಲಿ ಒಗ್ಗಟ್ಟನ್ನು ಕುದುರಿಸುತ್ತಿದ್ದರು. ಹಿರಿಯರ ಸೂಚನೆಗಳಿಗೆ ಎಲ್ಲರೂ ತಲೆಬಾಗಿ ನಡೆಯುತ್ತಿದ್ದರು. ಪಠಾಣರ ಪರಂಪರಾನುಗತ ಕೌಟುಂಬಿಕ ಬಾಂಧವ್ಯವೇ ಗ್ರಾಮ ಸಮಾಜಕ್ಕೂ ಅನ್ವಯ ವಾಗುತ್ತಿತ್ತು. ನಂಬಿಕೆ, ವಿಶ್ವಾಸ, ಪಾರಸ್ಪರಿಕತೆ, ಸಹಕಾರ ಮತ್ತು ನಿರ್ಭ ಯತೆ ಇವು ಈ ಜನಾಂಗದಲ್ಲಿ ಎದ್ದು ಕಾಣುತ್ತಿದ್ದವು. ಯಾವುದೇ ಕಾರಣದಿಂದ ಆತ್ಮಗೌರವಕ್ಕೆ ಧಕ್ಕೆ ಬಂದಾಗ ಪಠಾಣರು ಶಸ್ತ್ರ ಸಜ್ಜಿತ ರಾಗಿ ಸಿಡಿದೇಳುತ್ತಿದ್ದರು. ವೀರಾವೇಶದಿಂದ ಹೋರಾಟ ಮಾಡು ತ್ತಿದ್ದರು. ತನ್ನ ಗ್ರಾಮ, ತನ್ನ ಜನ, ತನ್ನ ಸಂಸ್ಕೃತಿಗಳನ್ನು ರಕ್ಷಿಸಿಕೊಳ್ಳಲು ಎಂಥ ಬಲಿದಾನಕ್ಕೂ ಸಿದ್ಧರಾಗುತ್ತಿದ್ದರು. ಈ ಜನರನ್ನು ಬ್ರಿಟಿಷ್ ಪ್ರಭುತ್ವ ಭಾರತದ ಇತರ ಭಾಗಗಳಿಂದ ಪ್ರತ್ಯೇಕವಾಗಿಯೇ ಇಟ್ಟಿರು ತ್ತಿತ್ತು.

ಗುಡ್ಡಗಾಡುಗಳಲ್ಲಿನ ಈ ದೃಢಕಾಯ ಪಠಾಣರ ಪ್ರಧಾನ ಜೀವನಾ ಧಾರ ಕೃಷಿ. ಈ ಕಣಿವೆಗಳಲ್ಲಿನ ಸಮೃದ್ಧ ವ್ಯವಸಾಯ ಕ್ಷೇತ್ರಗಳನ್ನು ನೋಡುವುದು ಕಣ್ಣಿಗೆ ಒಂದು ಹಬ್ಬ. ಕಟ್ಟುನಿಟ್ಟಿನ ಶ್ರಮಜೀವಿಗಳಾದ ಗಂಡಸರು ಹೆಂಗಸರು ಒಂದೊಂದು ಬುಡಕಟ್ಟಿನಲ್ಲಿಯೂ ಒಂದೇ ದೊಡ್ಡ ಸಂಸಾರದಂತೆ ಬಾಳಿ ಬದುಕುತ್ತಿದ್ದರು. ಇಡೀ ಪ್ರದೇಶದಲ್ಲಿ ಸಾವಿರಾರು ಸಣ್ಣ ಸಣ್ಣ ಸ್ವತಂತ್ರ ವಸಾಹತುಗಳಲ್ಲಿ ಅವರೆಲ್ಲ ಸ್ವಾವಲಂಬಿಗಳಾಗಿ ಜೀವನ ರೂಪಿಸಿಕೊಂಡಿದ್ದರು. ಅಫ್ರಿದಿಗಳು, ವಜೀರರು, ಮೊಹ್ಮಂಡರು ಮುಂತಾದ ವಿವಿಧ ಬುಡಕಟ್ಟುಗಳಿದ್ದ ಸುಮಾರು ನಲವತ್ತು ಲಕ್ಷ ಜನರ ಸಾಮಾನ್ಯ ಬದುಕಿನ ರೀತಿ ನೀತಿಗಳು ಒಂದೇ ಫಖ್ತೂನ್ ಧರ್ಮಸಂಹಿತೆ ಯನ್ನಂಗೀಕರಿಸಿ ನಡೆದುಕೊಳ್ಳುತ್ತಿದ್ದರು. ಶತಮಾನಗಳ ಕಾಲ ಅವರಲ್ಲಿ ಪ್ರತ್ಯೇಕ ನ್ಯಾಯಾಲಯಗಳಾಗಲೀ ನ್ಯಾಯವಾದಿಗಳಾಗಲೀ, ಪೋಲೀಸ್ ಸಿಬ್ಬಂದಿಯಾಗಲೀ, ಇರದಿದ್ದರೂ ಯಾವುದೇ ರೀತಿಯ ಸಮಾಜಘಾತಕ ಪ್ರವೃತ್ತಿಗಳೂ ಬೆಳೆದಿರಲಿಲ್ಲ. 'ಫಕ್ತೂನ್‌ವಾಲಿ' ಅಥವ 'ಫಕ್ತೂನರ ನಾಗರ್' ಎಂದು ಕರೆಯುತ್ತಿದ್ದ ಅವರ ನೀತಿಧರ್ಮವನ್ನು ಪ್ರತಿಯೊಬ್ಬ

ಪಠಾಣನೂ ತಿಳಿದಿರುತ್ತಿದ್ದ. ಅದರ ಆಚರಣೆ ಅವನಿಗೆ ಸಹಜವಾಗಿ ಮೈಗೂಡಿರುತ್ತಿತ್ತು ಬಹುಸಂಖ್ಯಾತರು ಅನಕ್ಷರಸ್ತರು. ಆದರೆ ಧರ್ಮ ಭೀರುಗಳು, ಆಸ್ತಿಕರು.

ಆರ್ಯನರು ಬಂದು ನೆಲೆಸಿದ ಈ ನಾಡಿನಲ್ಲಿ ಕ್ರಮೇಣ ಬೌದ್ಧಮತ ಪ್ರಚಲಿತವಾಯಿತು. ಭಾರತ ಇತಿಹಾಸವ ಒಂದು ಸ್ವರ್ಣ ಯುಗದಲ್ಲಿ ಬೆಳಗಿದ ತಕ್ಷಶಿಲೆಯ ಮಹಾವಿದ್ಯಾಪೀಠ ಇದ್ದುದು ಈ ನಾಡಿನಲ್ಲಿ. ಅಲ್ಲಿನ ಅನೇಕ ಬುಡಕಟ್ಟುಗಳು ಶತಮಾನಗಳ ಕಾಲ ಬೌದ್ಧ ಧರ್ಮಾವ ಲಂಬಿಗಳು. ಊರುಗಳ ಹೆಸರುಗಳು ಇಂದಿಗೂ ಅವೇ ಉಳಿದಿವೆ. ಗಫಾರ್‌ಖಾನರ ಹಳ್ಳಿ ಸೇರಿದ್ದುದು ಲಿಷ್ಟನಗರ ಅಥವ 'ಹಷ್ಟಾನಗರ್' ದ ಎಲ್ಲೆಯಲ್ಲಿ. ಇಲ್ಲಿನ ಭಾಷೆಯಲ್ಲಿ ಬೌದ್ಧ ಸಂಸ್ಕೃತಿಯ ಅನೇಕ ಪದಗಳು ಸೇರಿಕೊಂಡಿವೆ. ಹಾಗೆಯೇ ಅನೇಕ ಪದಗಳು ಸಂಸ್ಕೃತದಿಂದ ಜನ್ಯವಾಗಿವೆ. ಆನಂತರ ಈ ಪ್ರದೇಶವನ್ನು ಆಕ್ರಮಿಸಿದ ಕ್ರೈಸ್ತ ಆಕ್ರಮಣಕಾರರ ಪ್ರಭಾವ ಹೆಚ್ಚಾಗಿ ಬೀಳಲಿಲ್ಲ. ಆದರೆ ಸಾಮಾನ್ಯ ಜನ ಅಕ್ಷರಾಭ್ಯಾಸ ಮಾಡುವ ವೇಳೆಗೆ ಇಂಗ್ಲಿಷ್‌ನ ಪ್ರಭಾವ ಮೂಡಿ ಬಂದಿತ್ತು.

೧೯೦೯ ರಲ್ಲಿ ಬ್ರಿಟಿಷ್ ಆಳರಸರು ಈ ಗಡಿನಾಡು ಪ್ರಾಂತವಲ್ಲಿ ಕ್ರೂರವಾದ ಕಾನೂನುಗಳನ್ನು ಜಾರಿಗೆ ತಂದರು. ಯಾವ ರೀತಿಯ ರಾಜಕೀಯ ಚಟುವಟಿಕೆಗಳಿಗೂ ಆಸ್ಪದವಿರಲಿಲ್ಲ. ರಕ್ಷಣಾ ಶಾಸನಗಳ ಹೆಸರಿನಲ್ಲಿ ಪ್ರತಿಯೊಬ್ಬ ಪಠಾಣನನ್ನೂ ಆಡಳಿತ ವರ್ಗದವರು ಸಂಶಯ ದಿಂದಲೇ ನೋಡುತ್ತಿದ್ದರು. ಯಾವ ಘಳಿಗೆಯಲ್ಲಿ ಎಲ್ಲಿ ದಂಗೆಯೇಳು ವರೋ ಎಂದು ಅನುಮಾನಿಸುತ್ತಿದ್ದರು. ಹುಟ್ಟುಯೋಧರೂ ನೈತಿಕ ಸ್ಥೈರ್ಯವುಳ್ಳವರೂ ಜನಾಂಗ ನಿಷ್ಠೆಯುಳ್ಳವರೂ ಆಗಿದ್ದ ಪಠಾಣರು ತಮ್ಮ ತಮ್ಮ ಹಳ್ಳಿಗಳಲ್ಲಿ ಸ್ವತಂತ್ರವಾಗಿ ಬದುಕಿ ಬಾಳುತ್ತಿದ್ದವರು. ನಾಡಿಗಾಗಿ ಯಾವ ತ್ಯಾಗಕ್ಕಾದರೂ ಸಿದ್ಧರಾಗುತ್ತಿದ್ದವರು. ಗಫಾರ್ ಖಾನರು ಅವರ ಕಣ್ಮಣಿ.

೩. ಬಾದ್‌ಷಾಖಾನರ ವಂಶ

ಖಾನ್ ಅಬ್ದುಲ್ ಗಫಾರ್‌ಖಾನರು ಹುಟ್ಟಿದ್ದು ೧೮೯೦ ರಲ್ಲಿ. ಜನ್ಮ ದಿನದ ದಾಖಲೆಯೇ ಇಲ್ಲ ಎಂದು ಅವರನ್ನುತ್ತಿದ್ದರು. "ನಮ್ಮ ಪೂರ್ವಿಕರು ಮಕ್ಕಳ ಜನ್ಮ ದಿನವನ್ನು ಗುರುತುಮಾಡಿಕೊಳ್ಳುತ್ತಲೇ ಇರಲಿಲ್ಲ. ಚಾಂದ್ರಮಾನ ಪಂಚಾಂಗದಂತೆ ಲೆಕ್ಕ ಹಾಕುತ್ತಿದ್ದುದರಿಂದ ಕ್ರಿಶ್ಚಿಯನ್ ಲೆಕ್ಕದ ತಾರೀಖನ್ನು ನಾನು ಹೇಳಲಾರೆ. ಆದರೆ ನನ್ನ ಅಣ್ಣ ಖಾನ್‌ಸಾಹೇಬರು ಮದುವೆಯಾದಾಗ ನನಗೆ ಹನ್ನೊಂದು ವರ್ಷ ಎಂದು ನನ್ನ ತಾಯಿ ಹೇಳುತ್ತಿದ್ದರು. ಅವರ ಮದುವೆಯಾದದ್ದು ೧೯೦೧ ರಲ್ಲಿ. ಆದ್ದರಿಂದ ನಾನು ಹುಟ್ಟಿದ ವರ್ಷ ೧೮೯೦ ಎಂದು ಖಚಿತ ಮಾಡಿಕೊಂಡೆ." ಈ ಸರಳ ಮನಸ್ಸಿನ ಪ್ರಾಮಾಣಿಕತೆ ಖಾನರಲ್ಲಿ ತುಳುಕುತ್ತಿತ್ತು.

ತಂದೆ ಖಾನ್ ಬೆಹರಾಮ್‌ಖಾನರು ದೊಡ್ಡ ಜಮೀನುದಾರರು, ಅವರ ಮನೆತನದವರು ಊರಿನ ಗೌರವಾನ್ವಿತ ಪ್ರಮುಖರೆನಿಸಿಕೊಂಡವರು. ಆದ್ದರಿಂದಲೇ ಅವರನ್ನು ಖಾನ್ ಎಂದು ಸಂಬೋಧಿಸುತ್ತಿದ್ದರು. ಗಡಿನಾಡು ಪ್ರಾಂತದ ಪೆಷಾವರ್ ಜಿಲ್ಲೆಯ ಹಷ್ಟ್‌ನಗರದಲ್ಲಿ ಬೆಹರಾಮ್‌ಖಾನ್‌ರವರು ಊರಿನ ಪ್ರಮುಖರಷ್ಟೇ ಅಲ್ಲ ಧಾರ್ಮಿಕ ನಾಯಕರೂ ಆಗಿದ್ದರು. ಸತ್ಯನಿಷ್ಠೆ, ಪ್ರಾಮಾಣಿಕತೆ, ಬಡವರಲ್ಲಿ ಕರುಣೆ, ದೈವಭಕ್ತಿ ಅವರಲ್ಲಿ ಎದ್ದು ಕಾಣುತ್ತಿತ್ತು. ಯಾರಿಗೂ ಮೋಸ ಬಗೆದವರಲ್ಲ. "ನಾನು ಮೋಸಹೋದರೆ ಅವಮಾನವಿಲ್ಲ ಆದರೆ ಮೋಸಮಾಡುವುದು ಮಹಾಪರಾಧ" ಎನ್ನುತ್ತಿದ್ದರಂತೆ. ಪಠಾಣರು ಧೃಢಕಾಯರು, ದೀರ್ಘಾಯುಷಿಗಳು, ಸದಾ ಕ್ರಿಯಾಶೀಲರು. ಬೆಹರಾಮ್‌ಖಾನ್ ತಮ್ಮ ತೊಂಬತ್ತನೇ ವಯಸ್ಸಿನಲ್ಲೂ ಹಳ್ಳಿಹಳ್ಳಿಗೆ ಕುದುರೆಯ ಮೇಲೆ ಹೋಗುತ್ತಿದ್ದರಂತೆ. ಕರ್ತವ್ಯನಿಷ್ಠರಾಗಿ

ಆನಂದದಿಂದ ಬಾಳಿದ ಈ ದೀರ್ಘಾಯುಷಿಗಳ ನಾಲ್ಕನೇ ಮಗ ಗಫಾರ್ ಖಾನ್.

ಇಷ್ಟಾದರೂ ಬೆಹರಾಮ್‌ಖಾನ್ ದಂಪತಿಗಳಿಬ್ಬರೂ ಅನಕ್ಷರಸ್ಥರು. ಆದರೆ ಲೋಕಜ್ಞಾನ, ಆಧ್ಯಾತ್ಮಿಕತೆ, ಆತ್ಮಗೌರವನಿಷ್ಠರಾಗಿ ಬಾಳಿದ ಉದಾತ್ತ ಜೀವಿಗಳು. ಅವರ ಔದಾರ್ಯದ ಆತಿಥ್ಯ ಆ ನಾಡಿಗೆಲ್ಲಾ ಪ್ರಸಿದ್ಧವಾಗಿತ್ತು. ಆಗಾಗ್ಗೆ ಭೇಟಿ ಕೊಡುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಅವರಲ್ಲೇ ತಂಗುತ್ತಿದ್ದರು. ಅವರ ಆದರಾತಿಥ್ಯಗಳಿಗೆ ಮಾರು ಹೋಗುತ್ತಿದ್ದರು. ಗೌರವದಿಂದ ನಡೆದುಕೊಳ್ಳುತ್ತಿದ್ದರು. ಬೆಹರಾಮುಖಾನರಣ್ಣ ಚರ್ಸದ್ದಾ ಎಂಬ ಊರಿನ ಖಜಾನೆಯ ರಕ್ಷಣಾಧಿಕಾರಿಯಾಗಿ ಸೈನ್ಯದ ಸೇವೆಯಲ್ಲಿದ್ದವರು. ತಂದೆ ಸೈಫುಲ್ಲಾಖಾನ್ ಕೃಷಿಕ ಮುಂದಾಳು. ತಾತ ಜಜೀದುಲ್ಲಾಖಾನರನ್ನು ೧೮ ನೇ ಶತಮಾನದಲ್ಲಿ ಆಳುತ್ತಿದ್ದ ದುರಾನಿಗಳು ಮರಣ ದಂಡನೆಗೆ ಗುರಿಮಾಡಿದ್ದರಂತೆ. ಅವರು ಅಧಿಕಾರ ದರ್ಪಕ್ಕೆ ಮಣಿಯದೆ ಅನ್ಯಾಯಗಳನ್ನು ಪ್ರತಿಭಟಿಸಿ ತಮ್ಮ ಜನರನ್ನು ರಕ್ಷಿಸುತ್ತಿದ್ದುದೇ ಆಳರಸರಿಗೆ ದೇಶದ್ರೋಹವೆಂದೆನಿಸಿತಂತೆ. ಇಂಥ ಉಜ್ವಲ ಪರಂಪರೆಯ ವಂಶ ಗಡಿನಾಡಿನ ಪಠಾಣ ಬುಡಕಟ್ಟಿಗೆಲ್ಲಾ ಗೌರವಾನ್ವಿತ 'ಬಾದಷಹಾ' ಗಳಾದುದು ಏನೂ ಆಶ್ಚರ್ಯವಲ್ಲ. ಆ ಹೆಸರೇ ಗಫಾರ್‌ಖಾನರಿಗೂ ಉಳಿದುಬಂದು ಅವರನ್ನು 'ಬಾದಷಾಖಾನ್' ಎಂದೇ ಕರೆಯುತ್ತಿದ್ದರು.

ಉತ್‌ಮನ್‌ಝೈಯ್ ಗ್ರಾಮದಲ್ಲಿ ಸುಮಾರು ಐದು ಸಾವಿರ ಜನ ವಾಸಿಸುತ್ತಿದ್ದರು. ಈ ಪ್ರದೇಶ ಅತ್ಯಂತ ರಮ್ಯ ನಿಸರ್ಗ ಪರಿಸರದಿಂದ ತುಂಬಿತುಳುಕುವ ಬೆಟ್ಟಗಳಿಂದ ನಿಬಿಡವಾಗಿದೆ. ಬಾಲ್ಯದಿಂದಲೇ ನಿಸರ್ಗ ಪ್ರಿಯರಾಗಿ ಬಾಳಿದ ಗಫಾರ್‌ಖಾನರಿಗೆ ಅಲ್ಲಿನ ಪರ್ವತ ಶ್ರೇಣಿ, ಅಲ್ಲಿನ ಸ್ವಾತ್‌ನದಿಯ ಜುಳುಜುಳು ನಿನಾದ, ಗಗನಚುಂಬಿತ ವೃಕ್ಷರಾಶಿ ಎಲ್ಲವೂ ಪ್ರಿಯವಾದವು. ತಾವೂ ಒಂದು ಎತ್ತರದ ಶಿಖರದಂತೆ ಬೆಳೆದುನಿಂತರು.

ಪಠಾಣ ಜನಾಂಗದವರಿಗೆಲ್ಲಾ ಬಾಲ್ಯದ ವಿದ್ಯಾಭ್ಯಾಸವು ಧಾರ್ಮಿಕ ಸಂಸ್ಥೆಗಳ ಮೂಲಕವೇ ನಡೆಯುತ್ತಿತ್ತು. ಮಸೀದಿಗಳೇ ಶಾಲೆಗಳಾಗಿದ್ದುವು. ಲೋಕಜ್ಞಾನ, ಮಾನವೀಯ ಬಾಂಧವ್ಯಗಳು, ದೈವಭಕ್ತಿ ಮತ್ತು ಶೌರ್ಯ ಸಾಹಸಗಳನ್ನು ಈ ಶಿಕ್ಷಣ ಪದ್ಧತಿಯಿಂದ ಕಲಿಯುತ್ತಿದ್ದರು. ಆಧುನಿಕ

ಶಾಲೆಗಳು ಕಲಿಸುವ ವಿದ್ಯೆ ಅವರ ದೃಷ್ಟಿಯಲ್ಲಿ ಧರ್ಮಬಾಹಿರವಾಗಿತ್ತು. ಕ್ರಮೇಣ ಖಾನರ ವಂಶಸ್ಥರು ತಮ್ಮ ದೃಷ್ಟಿ ಬದಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸಿದರು. ಗಫಾರ್‌ಖಾನರ ಅಣ್ಣ ಡಾ॥ ಖಾನ್‌ಸಾಹೇಬರು ಇಂಗ್ಲೀಷ್ ಕಲಿತ ಮೊದಲ ತಲೆಮಾರಿಗೆ ಸೇರಿದವರು. ಮುಂದೆ ಅವರು ಇಂಗ್ಲೆಂಡಿಗೆ ಹೋಗಿ ವೈದ್ಯ ಪದವಿ ಪಡೆದರು. ಅಲ್ಲಿಯೇ ಒಬ್ಬ ಇಂಗ್ಲೀಷ್ ಮಹಿಳೆಯನ್ನು ಮದುವೆಯಾದರು.

ಗಫಾರ್‌ಖಾನರ ತಾಯಿ ಆಂಧ್ರಪ್ರದೇಶದ ಉನ್ನತ ಕುಲಕ್ಕೆ ಸೇರಿದ ಸುಂದರಸ್ತ್ರೀ. ಗಾಂಧೀಜಿಯ ತಾಯಿಯಂತೆಯೇ ದೈವಭಕ್ತೆಯಾದ ಪ್ರೇಮಲ ಮಾತೆ. ಅವರಂತೆಯೇ ಅನಕ್ಷರಸ್ಥೆ. ದಿನಚರಿಯಲ್ಲಿ ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ನಿರಾಯಾಸವಾಗಿ ನಡೆಸಿಕೊಂಡು ಬರುತ್ತಿದ್ದರು. ಮಕ್ಕಳಲ್ಲಿ ಗಾಢವಾದ ಮಾನವ ಪ್ರೇಮವನ್ನೂ ದೈವಭಕ್ತಿಯನ್ನೂ ತುಂಬುವಂತೆ ತಾವು ನಡೆದು ತೋರಿಸಿದರು. ಗಫಾರ್‌ಖಾನರಿಗೆ ತಾಯಿಯ ತುಂಬು ಪ್ರೀತಿ ವಾತ್ಸಲ್ಯಗಳು ಅತ್ಯಂತ ಅಮೂಲ್ಯ ಅನುಭವವೆನಿಸುತ್ತಿತ್ತು. ತಂದೆಯ ಬಳಿ ಅವರು ಸುಳಿಯುತ್ತಲೇ ಇರಲಿಲ್ಲ,

ನೂರಾರು ವರ್ಷಗಳಿಂದ ಪರಕೀಯರ ಧಾಳಿಗಳನ್ನು ಎದುರಿಸುತ್ತಾ ಬಂದಿದ್ದ ಖಾನರ ವಂಶಸ್ಥರು ಯುದ್ಧಶಾಸ್ತ್ರದಲ್ಲಿ ಪ್ರವೀಣರೆನಿಸಿದ್ದರು. ನಿಸ್ಸೀಮ ಶೌರ್ಯ, ಅದ್ಭುತ ಸಾಹಸಗಳಿಗೆ ಹೆಸರುಗಳಿಸಿದ್ದರು. ಬ್ರಿಟಿಷರು ಬಂದೊಡನೆ ಈ ವಂಶಸ್ಥರನ್ನು ಸೈನ್ಯದ ಸೇವೆಗೆ ಕರೆದುಕೊಳ್ಳಲು ಪ್ರಾರಂಭಿಸಿದರು. ಸೈನ್ಯಾಧಿಕಾರಿಯಾಗಿ ಬಂದೂಕಗಳನ್ನು ಹಿಡಿದು ಸಮವಸ್ತ್ರ ಧರಿಸಿ ಗಡಿಪ್ರಾಂತದ ಪಡೆಗಳನ್ನು ಅಧಿಕಾರ ದರ್ಪದಿಂದ ನಿರ್ದೇಶಿಸುವುದು ಅಲ್ಲಿನ ತರುಣರಿಗೆ ಹೆಮ್ಮೆಯೆನಿಸಿತ್ತು. ಮತ್ತಾವ ಹೊಸ ಶಿಕ್ಷಣವೂ ಆ ಪ್ರದೇಶದಲ್ಲಿ ಸಿಗದಂತೆ ಇಂಗ್ಲೀಷ್ ಆಳರಸರು ಎಚ್ಚರವಹಿಸಿದ್ದರಿಂದ ಬಹುಸಂಖ್ಯೆಯ ಪಠಾಣ ತರುಣರು ಸೈನ್ಯಕ್ಕೆ ಸೇರುತ್ತಿದ್ದರು. ಅದರೆ ಇಂಗ್ಲಿಷರ ದಬ್ಬಾಳಿಕೆ ಹೆಚ್ಚುತ್ತಾ ಬಂದಂತೆ ಈ ಸ್ವಾಭಿಮಾನಿಗಳು ಪ್ರತಿಭಟಿಸಲೂ ಹಿಂಜರಿಯುತ್ತಿರಲಿಲ್ಲ. ಈ ಕಾರಣಕ್ಕಾಗಿ ಈ ಪ್ರಾಂತ್ಯವನ್ನು ಬ್ರಿಟಿಷ್ ಸರಕಾರ ಪ್ರತ್ಯೇಕವಾಗಿ ನೇರ ಆಡಳಿತ ವ್ಯವಸ್ಥೆಗೆ ಒಳಪಡಿಸಿತು. ದೊಡ್ಡ ದೊಡ್ಡ ಇಂಗ್ಲಿಷ್ ಸೇನಾನಾಯಕರ ನಿಯಂತ್ರಣಕ್ಕೆ

ಒಪ್ಪಿಸಲಾಗುತ್ತಿತ್ತು. ಈ ಸೇನಾಧಿಕಾರಿಗಳು ಉದ್ಧಟತನದಿಂದ ಪಠಾಣ ರನ್ನು ಅವಮಾನಗೊಳಿಸಿದಾಗಲೆಲ್ಲಾ ಭಾರತೀಯ ಸ್ವಾಭಿಮಾನ ಅವರಲ್ಲಿ ಕೆರಳಿ ಮೇಲೇಳುತ್ತಿತ್ತು.

ಗಫಾರಖಾನರು ಪ್ರೌಢಶಾಲೆಯಲ್ಲಿ ಓದುತ್ತಾ ಪೆಷಾವರ್ ಪಟ್ಟಣ ದಲ್ಲಿದ್ದಾಗ ಭಾರತದ ಮುಖ್ಯ ಸೇನಾಧಿಪತಿಗೆ ಒಂದು ಅರ್ಜಿ ಸಲ್ಲಿಸಿ ಸೈನ್ಯಕ್ಕೆ ಸೇರ ಬಯಸಿದ್ದರು. ಆಗತಾನೇ ಹತ್ತನೇ ತರಗತಿಗೆ ಬಂದಿದ್ದರು. ಇವರ ಶ್ರೇಷ್ಠ ಮನೆತನ, ಸುಂದರ ಧೃಢ ಶರೀರ. ತೀಕ್ಷ್ಣ ಬುದ್ಧಿಶಕ್ತಿಗಳನ್ನು ಗಮನಿಸಿ ಪೆಷಾವರಿನ ಸೈನ್ಯಾಧಿಕಾರಿ ಸಂತೋಷದಿಂದ ಸಿಪಾಯಿಯಾಗಿ ಸೇರಿಸಿ ಕೊಳ್ಳುತ್ತೇನೆಂದರು. ತಂದೆ ಬೈರಾಮ್‌ಖಾನರಿಗೂ ಇದರಿಂದ ಸಂತೋಷ ವಾಗಿತ್ತು. ಈ ಸಮಯಕ್ಕೆ ಒಮ್ಮೆ ಪೆಷಾವರಿಗೆ ಒಬ್ಬ ಉನ್ನತ ಇಂಗ್ಲಿಷ್ ಸೈನ್ಯಾಧಿಕಾರಿ ಬಂದ. ಗಫಾರ್‌ಖಾನರ ಗೆಳೆಯನೊಬ್ಬ ಸಿಪಾಯಿಯಾಗಿ ಇದ್ದ. ಅವನು ಈ ಅಧಿಕಾರಿಯ ಮುಂದೆ ತಲೆಗೆ ರುಮಾಲನ್ನು ಹಾಕದೆ ಹೋಗಿ ನಿಂತ. ಇಂಗ್ಲಿಷರಂತೆ ಈ ಪಠಾಣ ಯುವಕ ತಲೆಗೂದಲನ್ನು ಬಿಟ್ಟು ಬಾಚಿದ್ದ. ಇಂಗ್ಲೀಷ್ ಅಧಿಕಾರಿಗೆ ಇದನ್ನು ಸಹಿಸಲಾಗಲಿಲ್ಲ. "ಏ ಬದ್ಮಾಶ್ ! ನೀನೇನು ಇಂಗ್ಲೀಷರಂತೆಯೇ ಆಗಬಯಸುತ್ತೀಯೋ, ಹುಷಾರ್" ಎಂದು ಆರ್ಭಟಿಸಿದ. ಗಫಾರ್‌ಖಾನ್ ಪಕ್ಕದಲ್ಲಿ ನಿಂತು ನೋಡು ತ್ತಿದ್ದರು. ಈ ಗೆಳೆಯ ಮುಖ ಕೆಳಗೆಮಾಡಿ ಹಿಂತಿರುಗಿದ್ದನ್ನು ಕಂಡು ಅವರಿಗೆ ರೋಸಿ ಹೋಯಿತು. ಆ ಕ್ಷಣದಲ್ಲಿ ನಿರ್ಧರಿಸಿದರು, "ಈ ಬ್ರಿಟಿಷ್ ಆಡಳಿತ ಸೇವೆಗಾಗಿ ನಾನು ಎಂದೂ ಸೈನ್ಯಕ್ಕೆ ಸೇರಲಾರೆ" ಎಂದು ತಮಗೆ ಬಂದ ಕೆಲಸದ ಕರೆಯನ್ನು ನಿರಾಕರಿಸಿಬಿಟ್ಟರು. ತಂದೆಗೆ ಅಸಮಾಧಾನ ವಾಯಿತು. ಅವರನ್ನೆದುರಿಸಲು ಗಫಾರ್‌ಖಾನರು ಸ್ವಲ್ಪ ಹಿಂಜರಿದು ಅಣ್ಣ ನಿಗೆಪತ್ರ ಬರೆದರು. ಆಗ ಅಣ್ಣ ಖಾನ್‌ಸಾಹೇಬರು ಇಂಗ್ಲೆಂಡಿನಲ್ಲಿ ಓದು ತ್ತಿದ್ದರು. ಅವರಿಗೆ ತಮ್ಮನ ಸ್ವಾಭಿಮಾನ ಕಂಡು ಹೆಮ್ಮೆಯಾಯಿತು. ತಂದೆಗೆ ಬರೆದು ತಿಳಿಸಿ ಗಫಾರ್‌ಖಾನರನ್ನು ಬಲವಂತ ಮಾಡಬಾರದೆಂದೂ ಅವರು ಮುಂದೆ ಓದಲು ಹೇಳಬೇಕೆಂದೂ ಕೇಳಿಕೊಂಡರು. ಅವರಂತೆಯೇ ಗಫಾರ್‌ಖಾನರು ಪ್ರೌಢಶಾಲೆಯ ಕೊನೆಯ ಪರೀಕ್ಷೆಗೆ ಕುಳಿತು ತೇರ್ಗಡೆ ಯಾದರು.

ಅಲ್ಲಿಂದಾಚೆ ಗಫಾರ್‌ಖಾನರು ಅಲಿಘಡಕ್ಕೆ ಹೋಗಿ ಒಂದು ವರ್ಷ ವ್ಯಾಸಂಗ ಮಾಡಿದರು. ಅರಬ್ಬೀ ಭಾಷೆ, ಗಣಿತಶಾಸ್ತ್ರಗಳಲ್ಲಿ ಅವರಿಗೆ ವಿಶೇಷ ಅಭಿರುಚಿ. ಆದರೆ ಇಂಗ್ಲಿಷರನ್ನು ಎಲ್ಲದರಲ್ಲೂ ಅನುಕರಿಸುತ್ತಿದ್ದ ಶಿಕ್ಷಣ ಕ್ರಮವನ್ನೂ, ಪಾಶ್ಚಾತ್ಯರ ದಾಸರಂತೆ ನಡೆದುಕೊಳ್ಳುತ್ತಿದ್ದ ವಿದ್ಯಾವಂತ-ರನ್ನೂ ಕಂಡಾಗ ತುಂಬಾ ಜಿಗುಪ್ಸೆಯುಂಟಾಗುತ್ತಿತ್ತು. ಒಂದು ಸಾರಿ ರಜೆಯಲ್ಲಿ ತಮ್ಮ ಗ್ರಾಮಕ್ಕೆ ಭೇಟಿಯಿತ್ತಾಗ ತನ್ನ ಜನರ ಮಧ್ಯೆಯೇ ನಿಂತು ಸೇವೆಮಾಡಬೇಕೆಂಬ ಪ್ರಬಲವಾದ ಆಕಾಂಕ್ಷೆ ಉಂಟಾಯಿತು. ಈ ಹಿಂದೆ ಪೆಷಾವರಿನ ಇಸ್ಲಾಮಿಯಾ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಶಿಕ್ಷಕರಾಗಿದ್ದ ಒಬ್ಬ ಬ್ರಿಟಿಷ್ ಪಾದ್ರಿ ಶ್ರೀ ಇ.ಎಸ್.ಇ. ವಿಗ್ರಾಮ್ ಗಫಾರ್‌ಖಾನರಿಗೆ ಪ್ರಿಯರಾಗಿದ್ದರು. ಅವರ ಸೇವಾಮನೋವೃತ್ತಿ, ಸ್ಥಳೀಯ ಬಡ ಪಠಾ-ಣರ ಮಕ್ಕಳಿಗೆ ಅವರು ಪ್ರೀತಿಯಿಂದ ನೀಡುತ್ತಿದ್ದ ಸಹಾಯಗಳು, ಅವರ ಸೋದರರಾಗಿದ್ದ ಒಬ್ಬ ವೈದ್ಯರು ಅಲ್ಲಿಯೇ ಇದ್ದ ಕ್ರೈಸ್ತರ ಆಸ್ಪತ್ರೆಯಲ್ಲಿ ಸ್ಥಳೀಯರಿಗೆ ಸೇವೆ ಸಲ್ಲಿಸುತ್ತಿದ್ದ ನಿಃಸ್ವಾರ್ಥಸೇವೆ ಇವೆಲ್ಲವೂ ಗಫಾರ್ ಖಾನರ ಮೃದು ಮನಸ್ಸಿನಮೇಲೆ ವಿಶೇಷ ಪರಿಣಾಮ ಮಾಡಿದ್ದವು. "ವಿದೇಶೀಯರಾದ ಈ ಸಜ್ಜನರು ಇಷ್ಟು ಸೇವಾ ಕೈಂಕರ್ಯ ಕೈಗೊಂಡಿರುವಾಗ ಭಾರತೀಯರಾದ ನಾವೇ ವಿಮುಖರಾಗುತ್ತಿದ್ದೇವಲ್ಲ" ಎನಿಸಿತು. ಇದನ್ನು ಅವರು ತಮ್ಮ ಜೀವನ ಚರಿತ್ರೆಯಲ್ಲಿ ಹೃದಯಂಗಮವಾಗಿ ವರ್ಣಿಸಿದ್ದಾರೆ.

ಇದೇ ಸಮಯಕ್ಕೆ ಅವರ ಅಣ್ಣ ಖಾನ್‌ಸಾಹೇಬರು ಇಂಗ್ಲೆಂಡಿನಿಂದ ಒಂದು ಪತ್ರ ಬರೆದು ಗಫಾರ್‌ಖಾನರನ್ನು ಉನ್ನತ ವ್ಯಾಸಂಗಕ್ಕೆ ಇಂಗ್ಲೆಂಡಿಗೆ ಕಳುಹಿಸಬೇಕೆಂದು ಒತ್ತಾಯಿಸಿದ್ದರು. ತಂದೆಗೂ ಅದು ಒಪ್ಪಿಗೆಯಾಗಿತ್ತು. ಆದರೆ ತಾಯಿ ಸಮ್ಮತಿಸಲಿಲ್ಲ. ಖಾನ್‌ಸಾಹೇಬರು ವೈದ್ಯರಾಗಿ ಅಲ್ಲೇ ನೆಲಸಿ ಬಿಡುವ ಸೂಚನೆಯಿತ್ತು. ಎರಡನೇ ಮಗನೂ ಹೋಗಿ ಸ್ವಧರ್ಮ ಭ್ರಷ್ಟನಾಗಿ ಬಿಡುವನೇನೂ ಎಂಬ ಆತಂಕದಿಂದ ಆ ತಾಯಿ ಮಗನಲ್ಲಿ ಮೊರೆಯಿಟ್ಟರು. ತಾಯಿಯ ಮನಸ್ಸಿಗೆ ನೋವಾಗುವುದನ್ನು ಸಹಿಸಲಾರದೆ ಗಫಾರ್‌ಖಾನರು ವಿದೇಶೀ ಪ್ರಯಾಣವನ್ನು ಅಂಗೀಕರಿಸಲಿಲ್ಲ. ಆ ಬಗ್ಗೆ ಬರೆಯುತ್ತ, "ವಾತ್ಸಲ್ಯಮಯಿ ತಾಯಿಯ ಆಗ್ರಹ ಸಾಧುವಾಗಿಯೇ ಇತ್ತು. ಇಂಗ್ಲೆಂಡಿಗೆ

ಹೋಗುವುದನ್ನು ನಿರಾಕರಿಸಿ ದೀನ ದಲಿತರೂ, ಹಿಂದುಳಿದು ಸಂಕಟ ಕ್ಕೊಳಗಾದವರೂ, ಮೂಢರೂ ಆಗಿದ್ದ ನನ್ನ ಜನತೆಯ ಸೇವೆಯಲ್ಲಿ ನಿರತನಾಗುವುದೇ ಶ್ರೇಷ್ಠಮಾರ್ಗವೆಂದು ನಿರ್ಧರಿಸಿದೆ" ಎಂದಿದ್ದಾರೆ. ಅಲ್ಲಿಂದಾಚೆ ಅವರ ತಪೋನಿರತ ಸೇವಾ ಜೀವನ ಅಖಂಡವಾಗಿ ಮುಂದು ವರೆಯಿತು.

೪. ಸುಧಾರಣೆಯ ದೀಕ್ಷೆ

ಪ್ರವಾದಿ ಮಹಮ್ಮದರ ಆತ್ಮೋನ್ನತಿಯ ಮಾರ್ಗ ಗಫಾರ ಖಾನರಿಗೆ ಬಾಲ್ಯದಿಂದಲೂ ಪ್ರಿಯವಾಗಿತ್ತು. ಅವರ ನುಡಿಗಳನ್ನು ಶ್ರದ್ಧೆಯಿಂದ ಅರಿತು ಪ್ರಾಮಾಣಿಕ ಅನುಷ್ಠಾನ ಮಾಡುವುದು ತಮ್ಮ ಬಾಳಿನ ಗುರಿಯಾಗಬೇಕು ಎಂದುಕೊಂಡರು. ಅಂಥ ಶ್ರದ್ಧೆಯಿಂದ ಇಸ್ಲಾಂ ಧರ್ಮದ ಸಂದೇಶವನ್ನು ಗ್ರಹಿಸಲಾರದೆ ಜನತೆಯನ್ನು ಮರುಳು ಗೊಳಿಸುತ್ತಿದ್ದ ಸಂಪ್ರದಾಯಗಳ ಬಗ್ಗೆ ಗಫಾರ್‌ಖಾನರಿಗೆ ಜಿಗುಪ್ಸೆ ಯುಂಟಾಯಿತು. ಮುಲ್ಲಾಗಳಿಗೆ ತಿಳಿಯ ಹೇಳಲು ಪ್ರಯತ್ನಿಸಿದರು, "ಜ್ಞಾನಿಯಾಗು" ಎಂಬ ಮಹಮ್ಮದರ ವಾಕ್ಯವನ್ನು ಉಲ್ಲೇಖಿಸಿದರು. "ಅನಕ್ಷರಸ್ಥರಾದ ಪಠಾಣರಿಗಾಗಿ ಶಾಲೆಗಳನ್ನು ತೆಗೆಯಿರಿ" ಎಂದು ಕೇಳಿ ಕೊಂಡರು. ಅವರ್‍ಯಾರೂ ಕಿವಿಗೊಡಲೇ ಇಲ್ಲ.

ಕೆಲವು ಮಿತ್ರರೊಡನೆ ಕೂಡಿಕೊಂಡು ತಾವೇ ಶಾಲೆಗಳನ್ನು ಪ್ರಾರಂಭಿಸಿ ಎಲ್ಲರಿಗೂ ಸಾಮಾನ್ಯ ಶಿಕ್ಷಣ ದೊರೆಯಲು ಅವಕಾಶ ಕಲ್ಪಿಸಿಕೊಟ್ಟರು. ತುರಂಗ್‌ಜಾಯ್‌ನ ಹಾಜಿಸಾಹೇಬರೊಬ್ಬರು ನೆರ ವಾದರು. ೧೯೧೧ ರಲ್ಲಿ 'ದಾರ್–ಉಲ್–ಉಲುಮ್' ಎಂಬ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಕ್ರಮೇಣ ಜನತೆಗೆ ಹೊಸ ಶಿಕ್ಷಣ ದೊರೆಯುವಂತಹ ಶಾಲೆಗಳು ಆ ನಾಡಿನಲ್ಲೆಲ್ಲ ಹರಡಿ ನಿಂತವು. ಅನೇಕ ಸಮಾಜ ಸೇವಕರು ಈ ಕಾರ್ಯಕ್ಕೆ ಮುಂದೆ ಬಂದರು. ಸರ್ಕಾರ ಇದಕ್ಕೆ ಸಮ್ಮತಿಸದೇ ಹೋಯಿತು. ಶಾಲೆಗಳು ಸ್ವತಂತ್ರವಾಗಿಯೇ ನಡೆದು ಪಠಾಣ ಜನಾಂಗದಲ್ಲಿ ಹೊಸ ಬೆಳಕು ಮೂಡುವಂತಾಯಿತು.

ದೇಶದ ಇತರೆಡೆಗಳಲ್ಲಿ ಈಗಾಗಲೇ ಜನಪ್ರಿಯವಾಗಿದ್ದ ಹಲವು

ಇಸ್ಲಾಮೀ ಸಂಸ್ಥೆಗಳೊಡನೆ ಗಫಾರ್‌ಖಾನರು ಸಂಪರ್ಕ ಬೆಳೆಸಿದರು. ದೆಹ
ಲಿಯ ಫತೆಪುರ್ ಮಸೀದಿಯಲ್ಲಿ ಮೌಲಾನಾ ಒಬೇದುಲ್ಲಾ ಸಿಂಧಿ ಆಧು
ನಿಕ ವಿದ್ಯಾಭ್ಯಾಸ ಪಡೆದ ಯುವಕರಿಗೆ ಪವಿತ್ರ ಖುರಾನನ್ನು ಕಲಿಸುವ
ತರಗತಿ ನಡೆಸುತ್ತಿದ್ದರು. ಸಿಂಧಿಯವರು ದೇಶಭಕ್ತರೆನಿಸಿ ರಾಷ್ಟ್ರದ
ಸ್ವಾತಂತ್ರ್ಯವನ್ನು ಬಯಸುತ್ತಿದ್ದವರು. ಗಫಾರ್‌ಖಾನರಿಗೆ ಇವರ
ಪರಿಚಯವಾಯಿತು. ಅನೇಕ ಪಠಾಣ ಯುವಕರಿಗೆ ದೆಹಲಿಯಲ್ಲಿ ಶಿಕ್ಷಣ
ಪಡೆಯಲು ಅನುಕೂಲ ಕಲ್ಪಿಸಿಕೊಟ್ಟರು. ವಿದ್ಯಾರ್ಥಿವೇತನಗಳನ್ನು
ಕೊಡಿಸಿದರು.

ಮೌಲಾನಾ ಅಬ್ದುಲ್ ಕಲಾಮ್ ಅಜಾದರು ಆ ವೇಳೆಗೆ ಕಲ್ಕತ್ತ
ದಲ್ಲಿ ತಮ್ಮ "ಅಲ್‌ಹಿಲಾಲ್" ಪತ್ರಿಕೆ ಪ್ರಾರಂಭಿಸಿ ನಡೆಸುತ್ತಿದ್ದರು.
ಅಜಾದರು ಒಬ್ಬ ನಿಸ್ಸೀಮ ದೇಶಭಕ್ತರೂ, ಇಸ್ಲಾಂ ಧರ್ಮ ಗ್ರಂಥಗಳ
ಪ್ರಕಾಂಡ ಪಂಡಿತರೂ ಎನಿಸಿಕೊಂಡಿದ್ದರು. ಗಫಾರ್‌ಖಾನ್‌ರು ಅಲ್
ಹಿಲಾಲ್ ಪತ್ರಿಕೆ ತರಿಸಿಕೊಳ್ಳುತ್ತಿದ್ದರು. ೧೯೧೨ ರ ವೇಳೆಗೆ ಭಾರತದ
ಮುಸ್ಲೀಮರಲ್ಲಿ ಹೊಸಜಾಗೃತಿ ಹುಟ್ಟಿಕೊಂಡಿತ್ತು. ಸರ್ ಸೈಯದ್ ಅಹ
ಮದ್ ಅವರು ಆಲಿಗಢ ವಿಶ್ವವಿದ್ಯಾಲಯ ಸ್ಥಾಪಿಸಲು ಯೋಚಿಸುತ್ತಿ
ದ್ದರು. ಅವರು ಬ್ರಿಟಿಷ್ ಆಡಳಿತದ ಸಮರ್ಥನೆ ಮಾಡುತ್ತಿದ್ದುದರಿಂದ
ಸ್ವಾತಂತ್ರ್ಯ ಚಳುವಳಿಯಿಂದ ಅವರ ಅನುಯಾಯಿಗಳು ಹೊರಗುಳಿದರು.
ಪ್ರಗತಿಪರ ಮುಸ್ಲಿಮರು ದೇಶದ ಕರೆಗೆ ಓಗೊಟ್ಟರು. ಅಜಾದರ ಬರಹ
ಗಳು ಅವರಲ್ಲಿ ರಾಷ್ಟ್ರೀಯತೆಯನ್ನು ಪ್ರಚೋದಿಸುತ್ತಿದ್ದವು. ಅಲ್‌ಹಿಲಾಲ್
ವಾರಪತ್ರಿಕೆ ಎರಡೇ ವರ್ಷದಲ್ಲಿ ಜನಪ್ರಿಯವಾಗಿ ಇಪ್ಪತ್ತಾರು ಸಾವಿರ
ಚಂದಾದಾರರಾದರು. ಯಾವ ಉರ್ದು ಪತ್ರಿಕೆಯೂ ಈ ಮಟ್ಟವನ್ನು
ಮುಟ್ಟಿರಲಿಲ್ಲ. ಬ್ರಿಟಿಷ್ ಆಳರಸರಿಗೆ ಈ ಪತ್ರಿಕೆ ಒಂದು ಸಿಂಹಸ್ವಪ್ನ
ದಂತಾಯಿತು.

ಧಾರ್ಮಿಕ ಗ್ರಂಥಗಳ ಅಧ್ಯಯನ, ಶಿಕ್ಷಣ ಪ್ರಚಾರ ಮತ್ತು ಜನತೆ
ಯಲ್ಲಿ ಹೊಸ ಜೀವನೋತ್ಸಾಹವನ್ನು ಪ್ರಚೋದಿಸುವ ಸೇವಾಪ್ರವೃತ್ತಿಯಲ್ಲಿ
ಗಫಾರ್‌ಖಾನರು ಪೂರ್ಣ ಸಮಯದ ಸ್ವಯಂಸೇವಕರಾದರು. ಕೃಷಿಯೇ
ಅವರ ಜೀವನಾಧಾರವಾಯಿತು. ತಂದೆ ಬೆಹರಾಮ್‌ಖಾನರ ನಿರೀಕ್ಷೆಗಳೇ

ಬೇರೆಯಾಗಿದ್ದವು. ದೊಡ್ಡ ಮಗನಂತೆ ಉನ್ನತ ಶಿಕ್ಷಣಕ್ಕೆ ಹೋಗಿ ದೊಡ್ಡ ಹುದ್ದೆಗಳನ್ನು ಕಿರಿಯ ಮಗನೂ ಪಡೆಯಬೇಕೆಂಬ ಆಸೆಯಿತ್ತು. ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆಯಾಗಿತ್ತು. ಆದರೆ ತಾಯಿಯ ಇಚ್ಛೆಯಂತೆಯೇ ಈ ಕಿರಿಯ ಮಗ ಕೃಷಿಕನಾಗಿ ಮನೆಯಲ್ಲೇ ಉಳಿದು ನಾಡಿನ ಪ್ರಮುಖ ಮುಂದಾಳು ಎನಿಸಿಕೊಳ್ಳುತ್ತಿದ್ದುದರಿಂದ ಆಕೆಗೆ ತುಂಬ ಸಮಾಧಾನವಾಗಿತ್ತು. ಸಾಧು ಸ್ವಭಾವದ ಬಹರಾಮ್‌ಖಾನರು ಅಡ್ಡ ಬರಲಿಚ್ಛಿಸಲಿಲ್ಲ. ಗಫಾರ್‌ಖಾನರಿಗಾಗಿ ಒಂದು ಮುಖ್ಯ ಗ್ರಾಮ ವನ್ನೇ ಬಿಟ್ಟುಕೊಟ್ಟರು. ಅಲ್ಲಿಯೇ ನೆಲಸಿ ಶಾಂತ ರೀತಿಯ ಗೃಹಸ್ಥ ರಾಗಿ ಬದುಕಲು ಹೇಳಿದರು. ೧೯೧೨ ರಲ್ಲಿ ಕುಲೀನ ವಧುವನ್ನು ಹುಡುಕಿ ಮದುವೆ ಮಾಡಿದರು. ಮೂರು ವರ್ಷಗಳು ಕಳೆದವು. ಎಷ್ಟೋ ವೇಳೆ ಗಫಾರ್‌ಖಾನರು ತಮ್ಮ ಭವಿಷ್ಯವನ್ನು ಕುರಿತು ಆಲೋಚಿ ಸುತ್ತ ಗಂಟೆಗಳ ಕಾಲ ಮೌನವಾಗಿ ಕುಳಿತು ಬಿಡುತ್ತಿದ್ದರಂತೆ. ತನ್ನ ದೇಶ, ತನ್ನ ಜನ, ತನ್ನ ಧರ್ಮ ಎಲ್ಲವೂ ಯಾವುದೋ ಪರಿವರ್ತನೆಗಾಗಿ ತುಡಿಯುತ್ತಿವೆ ಎನಿಸುತ್ತಿತ್ತು. ಸಂಸಾರ ಜೀವನದಲ್ಲಿ ರುಚಿಯೇ ಇರ ಲಿಲ್ಲ. ಮೊದಲ ಮಗ ವಲಿಖಾನ್ ೧೯೧೩ ರಲ್ಲೇ ಹುಟ್ಟಿದ. ಅನಂತರ ೧೯೧೫ ರಲ್ಲಿ ಎರಡನೇ ಮಗುವಿನ ಬಾಣಂತಿತನದಲ್ಲೇ ಗಫಾರ್‌ಖಾನರ ಪತ್ನಿ ಕಾಲವಶರಾದರು. ಆಕೆಗೆ ಕೇವಲ ಇಪ್ಪತ್ತೈದು ವರ್ಷಗಳಾಗಿದ್ದವು. ಗಫಾರ್‌ಖಾನರು ಈ ವಿಯೋಗದಿಂದ ದುಃಖಿತರಾದರು. ಎರಡು ಮಕ್ಕಳನ್ನು ತಮ್ಮ ತಾಯಿಯ ಮಡಲಿಗೆ ಹಾಕಿ ತಮ್ಮ ಸಾರ್ವಜನಿಕ ಕಾರ್ಯಗಳಲ್ಲಿ ಮಗ್ನರಾಗಿಬಿಟ್ಟರು. ಪಠಾಣ ಜನಾಂಗದ ಸೋದರ ಸೋದರಿಯರೆಲ್ಲರೂ ಅವರ ಆತ್ಮೀಯವಲಯಕ್ಕೆ ಸೇರಿ ಹೋದರು. ಸ್ವಂತ ಸುಖದುಃಖಗಳನ್ನೆಲ್ಲ ಅವರೊಡನೆ ಹಂಚಿಕೊಂಡು ಬಾಳಲು ಪ್ರಾರಂಭಿಸಿದರು. ಜೀವನದ ದಾರಿಯೇ ಹೊಸ ತಿರುವಿನಲ್ಲಿ ನಿಂತಿತ್ತು.

೧೯೧೪ ರಲ್ಲಿ ಮೊದಲನೆ ಮಹಾಯುದ್ಧ ಪ್ರಾರಂಭವಾದಾಗ ಎಲ್ಲೆಡೆ ಯಲ್ಲಿಯೂ ಭಯ ಆವರಿಸಿತ್ತು. ಬ್ರಿಟಿಷರು ಪಠಾಣರನ್ನು ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದರು. ಅವರ ಆಳ್ವಿಕೆಯ ವಿರೋಧವಾಗಿ ಗಫಾರ್‌ಖಾನರೂ ಅವರ ಮಿತ್ರರೂ ನಡೆಸುತ್ತಿದ್ದ ಚಟುವಟಿಕೆಗಳನ್ನು ಪತ್ತೆಹಚ್ಚಲು ಪ್ರಬಲವಾದ ಕಾವಲಿಟ್ಟರು. ಅವರು ಪ್ರಾರಂಭಿಸಿದ್ದ ಶಾಲೆ

ಗಳನ್ನೆಲ್ಲ ಮುಚ್ಚಿಸಿದರು. ಗೆಳೆಯರಾಗಿದ್ದ ಮೌಲಾನಾ ಮಹಮುದ್ ಹಸನ್‌ರವರನ್ನು ಮೆಕ್ಕಾದಲ್ಲಿ ಬ್ರಿಟಿಷರು ದಸ್ತಗಿರಿ ಮಾಡಿದರು. ಹಲವು ಸ್ವಾರ್ಥಪರ ಮುಲ್ಲಾಗಳು ಈ ದೇಶಪ್ರೇಮಿ ಯುವಕರ ಗುಂಪುಗಳನ್ನು ಬ್ರಿಟಿಷ್ ಅಧಿಕಾರಿಗಳಿಗೆ ಪತ್ತೆ ಮಾಡಿಕೊಟ್ಟು ಚದುರಿಸಿದರು.

ಗಫಾರ್‌ಖಾನರ ಸೇವಾದೀಕ್ಷೆ ಹೆಚ್ಚು ದೃಢವಾಗುತ್ತಲೇ ಸಾಗಿತ್ತು. ದಬ್ಬಾಳಿಕೆಗಳಿಂದ ಧೈರ್ಯ ಕುಸಿಯಲಿಲ್ಲ. ಗಡಿನಾಡು ಪ್ರಾಂತದಲ್ಲಿ ನಿರಂತರ ವಾಗಿ ಸಂಚರಿಸುತ್ತ ಜನತೆಯಲ್ಲಿ ಆತ್ಮ ವಿಶ್ವಾಸ ಮೂಡಿಸುತ್ತ, ಅವರ ತಿಳುವಳಿಕೆಯನ್ನು ಹೆಚ್ಚಿಸುತ್ತ ಒಗ್ಗಟ್ಟಿನಿಂದ ಸ್ವಾತಂತ್ರ್ಯಕ್ಕಾಗಿ ಶ್ರಮಿ ಸಲು ಸಂಘಟನೆ ಮಾಡಲು ಪ್ರಾರಂಭಿಸಿದರು. ಹಾಷ್ಟನಗರದ ಖಾನ್ ಕುಲದವರೆಲ್ಲ ಅವರನ್ನು 'ಬಾದಷಹ' ಎಂದೇ ಕರೆದರು. ಆ ಹೆಸರು ಚಿರವಾಯಿತು.

೫. ಸೇವಾಕ್ಷೇತ್ರ ವಿಸ್ತಾರವಾಯಿತು

೧೯೧೩ ರ ಸುಮಾರಿನಲ್ಲಿ ಆಗ್ರಾಪಟ್ಟಣದಲ್ಲಿ ಮುಸ್ಲಿಂಲೀಗ್ ಸಮಾವೇಶಗೊಂಡಿತ್ತು. ಸರ್ ಇಬ್ರಾಹಿಂ ರಹಮತುಲ್ಲಾ ಅಧ್ಯಕ್ಷರು. ಆ ಸಭೆಯಲ್ಲಿ ಮೌಲಾನಾ ಅಜಾದರ ಭಾಷಣವಿತ್ತು. ಕೆಲವು ಸ್ನೇಹಿತರೊಡನೆ ಗಫಾರ್‌ಖಾನರು ಅಲ್ಲಿಗೆ ಹೋಗಿದ್ದರು. ಭಾರತದ ಸಮಗ್ರ ದರ್ಶನವಾದಂತಾಯಿತು. ನಂತರ ದೆಹಲಿಯಲ್ಲಿ ಅನೇಕ ಮುಖಂಡರನ್ನು ಭೇಟಿಯಾದರು. ಕೆಲವು ತಿಂಗಳುಗಳ ನಂತರ ದೇವಬಾಂದ್ ಎಂಬ ಸ್ಥಳದಲ್ಲಿ ಪ್ರಗತಿಪರರಾದ ಮೌಲ್ವಿಗಳೆಲ್ಲ ಸಭೆ ಸೇರಿದ್ದರು. ಗುಡ್ಡಗಾಡು ಜನಾಂಗಗಳನ್ನು ಭಾರತ ಸ್ವಾತಂತ್ರ ಸಮರಕ್ಕಾಗಿ ಸಂಘಟಿಸಲು ಕೇಂದ್ರಗಳನ್ನೂ ತೆರೆಯಲು ನಿರ್ಧರಿಸಿದರು. ಈ ಸಭೆಯಲ್ಲಿ ಗಫಾರ್‌ಖಾನರೇ ಪ್ರಮುಖ ಪಾತ್ರವಹಿಸಿದ್ದರು.

೧೯೧೯: ಭಾರತದ ಇತಿಹಾಸದಲ್ಲಿ ಪ್ರಮುಖ ಘಟನೆಗಳು ನಡೆದು ಹೋದವು. ಗಾಂಧೀಜಿ ದೇಶದ ನಾಯಕ ಪಂಕ್ತಿಯಲ್ಲಿ ಅಪೂರ್ವಶಕ್ತಿಯಾಗಿ ಉದಯಿಸಿದರು. ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಒಂದು ಬೃಹದ್ ರೂಪದ ಹೋರಾಟ ಸಂಸ್ಥೆಯಾಗಿ ಪರಿವರ್ತಿತವಾಗುತ್ತಿತ್ತು. ಭಾರತೀಯ ಮುಸ್ಲಿಮರು ಅಪಾರ ಸಂಖ್ಯೆಯಲ್ಲಿ ಸೇರಿದರು. ಯುದ್ಧದಲ್ಲಿ ಜಯ ಗಳಿಸಿದ ಅಮಲಿನಲ್ಲಿ ಬ್ರಿಟಿಷ್ ಸರ್ಕಾರ ಅತ್ಯಂತ ಕ್ರೂರ ದಬ್ಬಾಳಿಕೆಯಿಂದ ಭಾರತದ ಸ್ವಾತಂತ್ರಾಕಾಂಕ್ಷೆಯನ್ನು ದಮನ ಮಾಡಲು ಶಾಸನಗಳನ್ನು ರೂಪಿಸಿತು. ರೌಲತ್ ಶಾಸನ ಎಂದು ಪ್ರಸಿದ್ಧವಾಗಿರುವ ಕ್ರೂರ ದಬ್ಬಾಳಿಕೆಯ ಕಾನೂನುಗಳನ್ನು ಜಾರಿಮಾಡಲಾಯಿತು. ಅದನ್ನು ಪ್ರತಿಭಟಿಸಲು ಗಾಂಧೀಜಿ ರಾಷ್ಟ್ರೀಯ 'ಹರತಾಳ' ಘೋಷಿಸಿದರು.

ಬ್ರಿಟಿಷರ ಬಗ್ಗೆ ಇದ್ದ ಎಲ್ಲ ಸಹಾನುಭೂತಿಯೂ ಇದರಿಂದ ಕರಗಿ ಹೋಯಿತು. ಮಹಮ್ಮದಾಲಿ ಜಿನ್ನಾ, ವಿಠಲಭಾಯಿ ಪಟೇಲ್, ಶ್ರೀನಿವಾಸಶಾಸ್ತ್ರಿಗಳಂತಹ ಸೌಮ್ಯ ಪ್ರವೃತ್ತಿಯ ರಾಷ್ಟ್ರೀಯ ಮುಖಂಡರು ಪ್ರತಿಭಟಿಸಿದರು. ೧೯೧೯ರ ಏಪ್ರಿಲ್ ೬ ರಂದು ದೇಶದ ಎಲ್ಲೆಡೆ ಈ ಕಾಯಿದೆಗಳ ವಿರುದ್ಧ ಪ್ರಚಂಡ ಪ್ರತಿಭಟನಾ ಸಭೆಗಳಾದವು. ಗಾಂಧೀಜಿಯ ಆಣತಿಯಂತೆ ಅಹಿಂಸಾತ್ಮಕ ಪ್ರದರ್ಶನಗಳಿಂದ ಸರ್ಕಾರವನ್ನು ಖಂಡಿಸುವ ಸತ್ಯಾಗ್ರಹ ಮಾರ್ಗ ದೇಶದ ಅಂತರ್ಯದಲ್ಲಿ ಅದ್ಭುತ ಶಕ್ತಿಯಾಗಿ ಭುಗಿಲೆದ್ದು ನಿಂತಿತು. ಹಿಂದೂ ಮುಸ್ಲಿಮರು ಏಕಕಂಠದಿಂದ ಬೆಂಬಲವಿತ್ತರು. ದೆಹಲಿಯ ಜುಮ್ಮಾಮಸೀದಿಯ ಧಾರ್ಮಿಕ ಮುಖಂಡರು ಆರ್ಯ ಸಮಾಜದ ಸ್ವಾಮಿ ಶ್ರದ್ಧಾನಂದರನ್ನು ಆಹ್ವಾನಿಸಿ ಅವರ ಪ್ರಚಂಡ ನುಡಿಗಳಿಂದ ಪ್ರಭಾವಿತರಾದರು. ಅತ್ಯುತ್ಸಾಹದಿಂದ ಎಲ್ಲೆ ಮೀರಿ ವಿಧ್ವಂಸಕ ಕೃತ್ಯಗಳನ್ನು ಕೈಗೊಳ್ಳಕೂಡದೆಂದು ರಾಷ್ಟ್ರನಾಯಕರೆಲ್ಲ ಒಕ್ಕೊರಲಿನಿಂದ ಸಾರಿದರು. ಆದರೆ ಕೆಲವು ಸ್ಥಳಗಳಲ್ಲಿ ಇಂಗ್ಲಿಷರ ಮೇಲೆ ಯುವಕರು ಆವೇಶ ಪೂರಿತರಾಗಿ ಧಾಳಿ ಮಾಡಿದರು. ಅವಮಾನಗೊಳಿಸಿದರು. ಇದರಿಂದ ವಿಪರೀತ ಕೋಪಗೊಂಡ ಸರ್ಕಾರ ನಿರ್ದಯವಾಗಿ ಗುಂಡಿಟ್ಟು ನಿರುಪದ್ರವಿ ಜನಸಮೂಹಗಳನ್ನು ಸದೆ ಬಡಿದರು. ಅಮೃತಸರದ ಜಲಿಯನ್‌ವಾಲಾಬಾಗಿನಲ್ಲಂತು ಅತ್ಯಂತ ಘೋರ ಕಗ್ಗೊಲೆಗಳನ್ನು ಸೈನ್ಯಾಧಿಕಾರಿ ಡೈಯರ್ ನಡೆಸಿಬಿಟ್ಟ. ನೂರಾರು ಶವಗಳು ಉರುಳಿ ಬಿಟ್ಟವು. ದೇಶಕ್ಕೆ ದೇಶವೇ ಹೌಹಾರಿತು. ಪಂಜಾಬು ಮತ್ತು ಗಡಿನಾಡು ಪ್ರಾಂತಗಳ ಶೂರ ರಾಷ್ಟ್ರೀಯ ಸ್ವಯಂಸೇವಕರನ್ನು ಸಂಪೂರ್ಣವಾಗಿ ಧ್ವಂಸ ಮಾಡಬೇಕೆಂದು ಸರ್ಕಾರ ಪಣತೊಟ್ಟಂತಿತ್ತು. ಸೈನ್ಯಶಾಸನ (ಮಾರ್ಷಲ್ ಲಾ) ಜಾರಿಮಾಡಿದರು.

ಅಬ್ದುಲ್ ಗಫಾರ್‌ಖಾನರು ನಿರ್ಭಯವಾಗಿ ಈ ದಬ್ಬಾಳಿಕೆಯನ್ನು ಎದುರಿಸಿ ನಿಂತರು. ಉಟ್‌ಮನ್‌ಜಾಯ್‌ನಲ್ಲಿ ಏಪ್ರಿಲ್ ೬ ರಂದು ಪ್ರಚಂಡ ಸಭೆ. ಸಹಸ್ರಾರು ಪಠಾಣರು ಸೇರಿದ್ದರು. ಖಾನರ ತಂದೆ ತೊಂಭತ್ತು ವರ್ಷದ ವೃದ್ಧ ಬೆಹರಾಮ್‌ಖಾನ್ ಆ ಸಭೆಯಲ್ಲಿ ಹಾಜರಿದ್ದರು. ಇಂಗ್ಲಿಷರ ಬಗ್ಗೆ ಅವರಿಗೆ ಭ್ರಮನಿರಸನವೂ ಆಗಿತ್ತು. ಮಗನ ಉತ್ಸಾಹಕ್ಕೆ ಪ್ರೋತ್ಸಾಹಕೊಟ್ಟರು.

ಇದೇ ವೇಳೆಗೆ ಆಫ್ಘನಿಸ್ಥಾನದ ದೊರೆ ಅಮಾನುಲ್ಲಾ ಬ್ರಿಟಿಷರ ವಿರುದ್ಧ ತಿರುಗಿಬಿದ್ದರು. ಗಫಾರ್‌ಖಾನರು ಕೆಲವು ಸಂಗಡಿಗರೊಡನೆ ಆಫ್ಘಾನಿಸ್ಥಾನಕ್ಕೆ ಹೋಗಲು ಪ್ರಯತ್ನಿಸಿದರು. ಅಷ್ಟರಲ್ಲಿ ಹಲವು ಇಂಗ್ಲಿಷ್ ಅಧಿಕಾರಿಗಳು ಅವರನ್ನು ಸೆರೆ ಹಿಡಿದರು. ಯಾವ ಕಾರಣಗಳನ್ನೂ ಕೊಡದೆ ಬಾದ್‌ಷಾಖಾನರನ್ನು ಸೆರೆಮನೆಯಲ್ಲಿ ನೂಕಿಬಿಟ್ಟರು. ನೂರಾರು ಪಠಾಣ ಸ್ವಯಂಸೇವಕರು ಅವರೊಡನೆ ಜೈಲಿಗೆ ಹೋದರು. ತಂದೆ ಬೆಹರಾಮ್‌ಖಾನರನ್ನೂ ಹೀಗೆಯೇ ಹಿಯ್ಯಾಳಿಸಿ ಸೆರೆಮನೆಗೆ ತಂದರು. ಆ ಧೀರ ವಯೋವೃದ್ಧ ತಲೆಬಾಗಲಿಲ್ಲ, ಧೈರ್ಯಗೆಡಲಿಲ್ಲ. "ನನ್ನ ಮಗನೊಡನೆ ನಾನೂ ಸೆರೆಮನೆಗೆ ಬಂದುದು ಸಂತೋಷ. ಇಲ್ಲದಿದ್ದರೆ ನನಗೆ ಅವನ ದರ್ಶನವೇ ಆಗುತ್ತಿರಲಿಲ್ಲ" ಎಂದರು. ಅನೇಕ ಸುಳ್ಳು ವದಂತಿಗಳನ್ನು ಇಂಗ್ಲಿಷ್ ಅಧಿಕಾರಿಗಳೇ ಹಬ್ಬಿಸಿ ಜನರನ್ನು ಹೆದರಿಸಿ ಸದೆಬಡಿಯಲು ಪ್ರಾರಂಭಿಸಿದ್ದರು. ಗಫಾರ್‌ಖಾನರನ್ನು ಗಲ್ಲಿಗೇರಿಸಿ ಬಿಡುತ್ತಾರೆ ಎಂದು ಉಟಮನಜಾಯ್ ಊರಿನಲ್ಲಿ ಸುದ್ದಿ ಹರಡಿ ಬಿಟ್ಟಿತು. ಅದರಿಂದ ಮತ್ತಷ್ಟು ಆವೇಶ ಉಂಟಾಗಿ ಸಾವಿರಾರು ಯುವಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಬ್ರಿಟಿಷ್ ಸರ್ಕಾರಕ್ಕೆ ದಿಗ್ಭ್ರಮೆಯಾಯಿತು.

ಯಾವ ಮೊಕದ್ದಮೆಯನ್ನೂ ಹೂಡಲಾರದೆ ಗಫಾರ್‌ಖಾನರನ್ನು ಆರು ತಿಂಗಳು ಸೆರೆಯಲ್ಲಿಟ್ಟು ಬಿಡುಗಡೆಮಾಡಲಾಯಿತು. ತಂದೆ ಬಹರಾಮ್‌ಖಾನರು ಮೂರು ತಿಂಗಳು ಈ ಶಿಕ್ಷೆ ಅನುಭವಿಸಿ ಹೊರ ಬಂದಿದ್ದರು. ಈ ಘಟನೆಗಳಿಂದ ಬಾದ್‌ಷಾಖಾನರ ವರ್ಚಸ್ಸು ಅಗಾಧವಾಗಿ ಬೆಳೆಯಿತು. ಅವರ ನಾಯಕತ್ವ ದೃಢವಾಯಿತು. ಅವರ ಆಣತಿಗಾಗಿ ಸಹಸ್ರಾರು ಪಖ್ತೂನ್ ವೀರರು ಕಾದು ನಿಂತರು. ವಾಯುವ್ಯ ಗಡಿನಾಡಿನಲ್ಲಿ ರಾಷ್ಟ್ರೀಯ ಚಳುವಳಿಯೂ ತೀವ್ರವಾಯಿತು. ತಂದೆ ತಾಯಿಗಳ ಆಗ್ರಹಕ್ಕೆ ಮಣಿದು ಗಫಾರ್‌ಖಾನರು ಎರಡನೆಯ ಮದುವೆಗೆ ಒಪ್ಪಿದರು. ತಬ್ಬಲಿಯಾಗುತ್ತಿದ್ದ ತಮ್ಮ ಎರಡು ಮಕ್ಕಳಿಗೆ ಆಶ್ರಯ ಸಿಗಲು ಅವಕಾಶವಾಯಿತು. ಪೂರ್ಣ ಸಮಯದ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದ ಗಫಾರ್‌ಖಾನರು ಮನೆಯನ್ನು ನೋಡುತ್ತಲೇ ಇರಲಿಲ್ಲ. ಬ್ರಿಟಿಷರ ಹದ್ದು ಕಣ್ಣುಗಳಿಂದ ನಿರುಪದ್ರವಿ ಬಂಧುಗಳು

ಬಾಧಿತರಾಗಬಾರದೆಂದು ಎಚ್ಚರಿಕೆವಹಿಸುತ್ತಿದ್ದರು. ಗಡಿನಾಡಿನ ಹಳ್ಳಿ ಹಳ್ಳಿಗಳಲ್ಲಿ ಅವರನ್ನು ಅತ್ಯಂತ ಆತ್ಮೀಯ ಬಂಧುವಿನಂತೆ ನಡೆಸಿಕೊಳ್ಳುತ್ತಿದ್ದ ಸೋದರ ಕಾರ್ಯಕರ್ತರು ಅಪಾರವಾಗಿದ್ದರು. ಸತತವಾಗಿ ಸಂಚರಿಸುತ್ತಲೇ ಇದ್ದ ರಾಷ್ಟ್ರೀಯ ಸ್ವಯಂಸೇವಕ ದಳವನ್ನು ಸಂಘಟಿಸುತ್ತಿದ್ದರು.

೧೯೨೦ರಲ್ಲಿ ತುರ್ಕಿಯ ಖಲೀಫರನ್ನು ಬ್ರಿಟಿಷರು ಅವಮಾನಗೊಳಿಸಿ ಪದಚ್ಯುತರನ್ನಾಗಿ ಮಾಡಿದರು. ಮುಸ್ಲಿಂ ಬಾಂಧವರಿಗೆ ಇದರಿಂದ ತೀವ್ರ ವೇದನೆಯಾಯಿತು. ದೆಹಲಿಯಲ್ಲಿ ನಡೆದ ಖಿಲಾಫತ್ ಸಮ್ಮೇಳನಕ್ಕೆ ಮಹಾತ್ಮಗಾಂಧೀ ಆಹ್ವಾನಿತರಾಗಿ ಬಂದಿದ್ದರು. ಅಲ್ಲಿ ಮೌಲಾನಾ ಅಜಾದ್, ಹಕೀಮ್ ಅಜಮಲ್‌ಖಾನ್, ಆಲಿ ಸಹೋದರರು ಮುಂತಾದ ರಾಷ್ಟ್ರೀಯ ನಾಯಕರ ಪರಿಚಯವಾಯಿತು. ತುರ್ಕಿಯ ಖಲೀಫ್‌ರಿಗೆ ನ್ಯಾಯ ದೊರಕಿಸಲು ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಅಸಹಕಾರವನ್ನು ಒಟ್ಟಿಗೆ ನಡೆಸಲು ಗಾಂಧೀಜಿಯ ಸಲಹೆಯನ್ನು ಹಿಂದು ಮುಸ್ಲಿಂಮರಿಬ್ಬರೂ ಅಂಗೀಕರಿಸಿದರು. ರಾಷ್ಟ್ರೀಯ ಆಂದೋಲನಕ್ಕೂ ಇದರಿಂದ ಬಲಬಂತು. ಅನೇಕ ಮುಸ್ಲಿಂಮರು ಬ್ರಿಟಿಷ್ ಭಾರತವನ್ನೇ ತ್ಯಜಿಸಿ ಅಫ್ಘಾನಿಸ್ತಾನಕ್ಕೆ ವಲಸೆ ಹೋದರು. ಈ ಹಿಜರಾತ್ ಚಳುವಳಿಗೆ ಪೆಷಾವರ್ ಕೇಂದ್ರವಾಯಿತು. ಸುಮಾರು ಹದಿನೆಂಟು ಸಾವಿರ ಪಠಾಣರು ಆಸ್ತಿಪಾಸ್ತಿಗಳನ್ನು ಮಾರಿ ಅಫ್ಘಾನಿಸ್ತಾನದಲ್ಲಿ ನೆಲೆಸಿದರು. ಅಬ್ದುಲ್ ಗಫಾರ್‌ಖಾನರ ನೇತೃತ್ವದಲ್ಲಿ ಒಂದು ದೊಡ್ಡ ಗುಂಪು ವಲಸೆ ಹೋಯಿತು. ಕಾಬೂಲಿನಲ್ಲಿದ್ದ ದೊರೆ ಅಮಾನುಲ್ಲಾ ಅವರೊಡನೆ ಸೇರಿ ಬ್ರಿಟಿಷರ ವಿರುದ್ಧ ಹೋರಾಡಬೇಕು ಎಂದುಕೊಂಡರು. ಆದರೆ ಅಮಾನುಲ್ಲಾ ತನ್ನ ಅಸಾಮರ್ಥ್ಯ ಹೇಳಿಕೊಂಡರು. ಮುಂದೆ ಅವರನ್ನು ಬ್ರಿಟಿಷರೇ ಪದಚ್ಯುತಿಗೊಳಿಸಿದರು. ಗಫಾರ್‌ಖಾನರಿಗೆ ತಮ್ಮ ಸ್ವದೇಶ ಬಿಟ್ಟು ಬಂದುದು ಸರಿಯಲ್ಲವೆನಿಸಿತು. ಕೂಡಲೇ ಹಿಂತಿರುಗಿ ಉತ್ಮಾನ್‌ಜಾಯ್‌ಗೆ ಬಂದು ತಮ್ಮ ಹಳೆಯ ಗೆಳೆಯರೊಡನೆ ಹಿಂದಿನ ಶಾಲೆಗಳನ್ನು ಪ್ರಾರಂಭಿಸಿದರು. ಈ ವೇಳೆಗೆ ಬ್ರಿಟಿಷ್ ಸರ್ಕಾರ ಅವರನ್ನು ಶತ್ರುವೆಂದು ಭಾವಿಸಿ ಎಲ್ಲಿಯೂ ನೆಲೆಗೊಳ್ಳಲು ಅಸ್ಪದ ಕೊಡಲಿಲ್ಲ. ಬದಲಾಗಿ

ಸಣ್ಣಪುಟ್ಟ ಕಾರಣಗಳನ್ನು ಒಡ್ಡಿ ಆಗಾಗ್ಗೆ ಸೆರೆಮನೆಗೆ ಹಾಕುತ್ತಲೇ ಇದ್ದರು. ಅವರಿಗೆ ಸಹಾಯ ಮಾಡುವವರನ್ನೂ ಶಿಕ್ಷಿಸಿದರು.

೬. ಸ್ವಾತಂತ್ರ್ಯ ಸಮರದ ಕರೆ

೧೯೨೦ ರಲ್ಲಿ ನಾಗಪುರದಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಭಾರತದ ಸ್ವಾತಂತ್ರ್ಯ ಸಮರದಲ್ಲಿ ಒಂದು ಮೈಲಿಗಲ್ಲು. ಗಾಂಧೀಜಿಯ ಸತ್ಯಾಗ್ರಹ ಸಂದೇಶದ ಪಾಂಚಜನ್ಯ ಅಲ್ಲಿ ಸ್ಪಷ್ಟವಾಗಿ ಮೊಳಗಿತು. "ಸ್ವರಾಜ್ಯ ಸಾಧಿಸುವುದೇ ನಮ್ಮ ಗುರಿ. ಅದಕ್ಕಾಗಿ ಎಲ್ಲ ಶಾಂತಿಯುತ ರಾಜ್ಯಾಂಗಬದ್ಧ ಮಾರ್ಗಗಳಲ್ಲಿ ಹೋರಾಡಲು ದೃಢ ಸಂಕಲ್ಪ ಮಾಡಿದ್ದೇವೆ. ಸಾಧ್ಯವಾಗದೇ ಹೋದಲ್ಲಿ ಅವನ್ನು ತ್ಯಜಿಸಿ, ದೇಶ ಸ್ವತಂತ್ರವಾಗಲು ನಾವು ಪಣತೊಟ್ಟಿದ್ದೇವೆ. ಈ ಸಮರದಲ್ಲಿ ಮಹಾತ್ಮ ಗಾಂಧೀಯವರ ನಿರ್ದೇಶವನ್ನು ಸರ್ವಾನುಮತದಿಂದ ಒಪ್ಪಿದ್ದೇವೆ. ಮೊದಲ ಹೆಜ್ಜೆಯಾಗಿ ಸರ್ಕಾರದೊಡನೆ ಎಲ್ಲ ರೀತಿಯಲ್ಲಿ ನೀಡುತ್ತಿರುವ ಸಹಕಾರವನ್ನು ನಿಲ್ಲಿಸುತ್ತೇವೆ. ಮುಂದೆ ಕಾಂಗ್ರೆಸ್ ಸಂಸ್ಥೆ ನಿರ್ದೇಶಿಸಿದಾಗ ತೆರಿಗೆಗಳನ್ನು ಕೊಡಲು ನಿರಾಕರಿಸುತ್ತೇವೆ. ಅಹಿಂಸಾತ್ಮಕವೂ ಸತ್ಯನಿಷ್ಠವೂ ಸ್ವಾಭಿಮಾನ ಭೂಯಿಷ್ಠವೂ ಆದ ಈ ಮಹಾ ಸಮರದಲ್ಲಿ ಸರ್ವತ್ಯಾಗಕ್ಕೂ ಸಿದ್ಧರಾಗಿದ್ದೇವೆ. ನಿಶ್ಯಸ್ತ್ರರಾಗಿದ್ದು ಯಾರನ್ನೂ ದ್ವೇಷಿಸದೆ, ಹಿಂಸೆಗೆ ಕೈಹಾಕದೆ ಈ ವಿದೇಶೀ ಆಡಳಿತದ ವಿರುದ್ಧ ನಿರ್ಭಯವಾಗಿ ಹೋರಾಡಲು ಶಿಕ್ಷಣ ಪಡೆಯುತ್ತೇವೆ" ಎಂಬ ನಿರ್ಣಯವನ್ನು ಅಲ್ಲಿ ಸೇರಿದ್ದ ಹದಿನೈದು ಸಾವಿರಕ್ಕೂ ಹೆಚ್ಚು ದೇಶಭಕ್ತರು ಒಕ್ಕೊರಲಿನಿಂದ ಬೆಂಬಲಿಸಿದರು. ಈ ಮಹಾಘಟ್ಟದಲ್ಲಿ ಖಾನ್‌ಅಬ್ದುಲ್‌ಗಫಾರ್ ಖಾನರು ಗಾಂಧೀಜಿಯನ್ನು ತಮ್ಮ ಏಕೈಕ ಮಹಾಮಾರ್ಗದರ್ಶಕನೆಂದು ಅಂಗೀಕರಿಸಿದರು.

ಈ ಅಧಿವೇಶನದಲ್ಲಿ ದೇಶಬಂಧು ಚಿತ್ತರಂಜನದಾಸ್, ಲಾಲಾ ಲಜ

ಪತ್‌ರಾಯ್, ಮೋತಿಲಾಲ ನೆಹರು, ಪಂಡಿತ ಮಾಳವೀಯ, ಮೌಲಾನಾ ಅಜಾದ್ ಮುಂತಾದವರೊಡನೆ ಮಹಮುದಾಲಿ ಜಿನ್ನಾ ಅವರೂ ಸೇರಿದ್ದರು, ಆದರೆ ಜಿನ್ನಾ ಅವರಿಗೆ ಅಹಿಂಸಾತ್ಮಕ ಸಮರದಲ್ಲಿ ನಂಬಿಕೆ ಹುಟ್ಟಲಿಲ್ಲ. ಗಾಂಧೀಜಿಯವರು ಹಾಕಿದ ನಿಯಮಗಳು ಒಪ್ಪಿಗೆಯಾಗಲಿಲ್ಲ. ಬ್ರಿಟಿಷರ ಬಾಂಧವ್ಯವನ್ನಿಟ್ಟುಕೊಂಡೇ ನಾವು ಸ್ವತಂತ್ರ ದೇಶವನ್ನು ರೂಪಿಸಬೇಕೆಂದು ಅವರ ಮತ. ಮತ್ತು ಎಲ್ಲವೂ ಅಹಿಂಸಾತ್ಮಕವಾಗಿಯೇ ನಡೆಯಬೇಕೆಂಬುದು ಅವರಿಗೆ ಹಿಡಿಸಲಿಲ್ಲ. ವಿದೇಶೀ ನಾಗರೀಕತೆಗೆ ಮಾರುಹೋಗಿದ್ದ ಜಿನ್ನಾ ಸಾಹೇಬರು ಅಲ್ಲಿಂದಾಚೆಗೆ ರಾಷ್ಟ್ರೀಯ ಕಾಂಗ್ರೆಸ್ಸಿನೊಡನೆ ಸಂಬಂಧವನ್ನು ಕಡಿದುಕೊಂಡರು. ಮುಸ್ಲಿಮ್‌ಲೀಗ್ ಸಂಸ್ಥೆಯನ್ನು ಬೇರ್ಪಡಿಸಿದರು. ಖಿಲಾಫತ್ ಚಳುವಳಿ ಸಾಧಿಸಿದ್ದ ಮತೀಯ ಐಕ್ಯತೆ ದೂರ ಆಗುತ್ತಬಂತು. ಇದೇ ಅಧಿವೇಶನದಲ್ಲಿ ಸ್ಫೂರ್ತಿಗೊಂಡ ಮೌಲಾನಾ ಅಜಾದರೂ ಖಾನ್‌ಅಬ್ದುಲ್ ಗಫಾರ್‌ಖಾನರೂ ಗಾಂಧೀಜಿಯ ಅಹಿಂಸಾ ತತ್ವ ಇಸ್ಲಾಮ್ ಧರ್ಮಕ್ಕೆ ಅತ್ಯಂತ ನಿಕಟವಾದ ಬಾಳಿನ ತತ್ವವೆಂದು ಅಂಗೀಕರಿಸಿದರು. ಇವರಿಬ್ಬರೂ ಅತ್ಯಂತ ನಿಷ್ಠಾವಂತ ಧಾರ್ಮಿಕ ಮನೋವೃತ್ತಿಯವರಾಗಿದ್ದರು. ಬ್ರಿಟಿಷರ ಸಾಮ್ರಾಜ್ಯವಾದಿ ಧೋರಣೆಗಳಿಂದ ಭಾರತೀಯ ಮುಸ್ಲಿಮರ ಸಾಂಸ್ಕೃತಿಕ ಬುನಾದಿ ನಾಶವಾಗುತ್ತಿದೆ ಎಂದು ನಂಬಿದವರು. ಸರ್ವಧರ್ಮ ಸಮಭಾವವನ್ನು ಬೋಧಿಸಿದ ಗಾಂಧೀ ಮಾರ್ಗಕ್ಕೆ ಇವರು ಸಹಜವಾಗಿಯೇ ಶರಣುಬಂದರು.

ಖಿಲಾಫತ್ ಚಳುವಳಿಯ ಪೆಷಾವರ್ ಸಮಿತಿಗೆ ಗಫಾರ್‌ಖಾನರು ಅಧ್ಯಕ್ಷರಾಗಿದ್ದರು. ಪ್ರಮುಖವಾಗಿ ಗಡಿನಾಡಿನ ಗಿರಿಜನರಲ್ಲಿ ಶಿಕ್ಷಣ ವ್ಯವಸ್ಥೆ ವ್ಯಾಪಕವಾಗಿ ಹರಡಲು ಖಾನರು ಪಣತೊಟ್ಟರು. ಸಾರ್ವಜನಿಕ ಚಂದಾ ಹಣವನ್ನು ಶಾಲೆಗಳ ಸ್ಥಾಪನೆಗಾಗಿ ವಿನಿಯೋಗಿಸಿದರು. ರಚನಾತ್ಮಕ ಸೇವಾಕಾರ್ಯಗಳಲ್ಲಿ ನಿರತರಾಗಿ ಜನತೆಯನ್ನು ಸಂಘಟಿಸತೊಡಗಿದರು. ಯಾವ ಉದ್ರೇಕದ ರಾಜಕೀಯ ಚಟುವಟಿಕೆಗಳನ್ನೂ ಕೈಗೊಳ್ಳಲಿಲ್ಲ. ಬ್ರಿಟಿಷ್ ಸರ್ಕಾರಕ್ಕೆ ಈ ಗಡಿನಾಡು ಸತ್ಯಾಗ್ರಹಿಯ ಅಹಿಂಸಾತ್ಮಕ ಹೋರಾಟದ ಪ್ರಕ್ರಿಯೆ ಅರ್ಥವಾಗಲಿಲ್ಲ. ಅಲ್ಲಿನ ಚೀಫ್ ಕಮಿಷನರ್ ಸರ್ ಜಾನ್ ಮ್ಯಾಫೆ ವೃದ್ಧ ಬೆಹರಾಮ್‌ಖಾನರನ್ನು ಕರೆಸಿ ಮಗನಿಗೆ ಬುದ್ಧಿಹೇಳಿ ಖಾಸಗಿ ಶಾಲೆಗಳನ್ನು ಮುಚ್ಚಿಸಿ ಎಂದು ದರ್ಪದಿಂದ ಹೇಳಿ

ದರು. ಬಹರಾಮ್‌ಖಾನರಿಗೆ ಬ್ರಿಟಿಷರ ಬಗ್ಗೆ ವ್ಯಾಮೋಹವಿತ್ತು. ಮಗನನ್ನು ಕರೆದು ಬುದ್ಧಿವಾದ ಹೇಳಿದರು. ತಂದೆ ಮಕ್ಕಳ ಮಧ್ಯೆಯೂ ಒಡಕನ್ನು ತಂದು ತಮ್ಮ ದರ್ಬಾರನ್ನು ನಡೆಸುವ ಬ್ರಿಟಿಷರ ಕುತ್ಸಿತ ಬುದ್ಧಿ ಕಂಡು ಗಫಾರ್‌ಖಾನರಿಗೆ ಖೇದವಾಯಿತು. ವಿನಮ್ರರಾಗಿಯೇ, "ನಮಾಜ್ ಮಾಡುವ ಬಗ್ಗೆ ಮಿಕ್ಕವರೆಲ್ಲ ನಿರಾಸಕ್ತರಾದರೆ ನೀವು ಈ ಧಾರ್ಮಿಕ ಕರ್ತವ್ಯವನ್ನು ಬಿಟ್ಟುಬಿಡುತ್ತೀರಾ" ಎಂದು ತಂದೆಯನ್ನು ಕೇಳಿದರು. "ಖಂಡಿತ ಇಲ್ಲ. ಅದು ನನಗೆ ಜೀವನದ ಉಸಿರು. ಅದು ನನ್ನ ಧರ್ಮ" ಎಂದು ಮುದುಕ ಬಹರಾಮ್‌ಖಾನ್ ನುಡಿದರು. ಯುವಕ ಗಫಾರ್‌ಖಾನ್, "ನನ್ನ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದು ನನಗೆ ಅಂಥದೇ ಒಂದು ಧಾರ್ಮಿಕ ಕರ್ತವ್ಯ. ಅವರ ಏಳಿಗೆಯೇ ನನ್ನ ಜೀವನದ ಉಸಿರು" ಎಂದಾಗ ತಂದೆಗೆ ಮಗನ ವ್ರತನಿಷ್ಠೆ ಅರ್ಥವಾಯಿತು. ಅದೇ ಸರಿ ಎಂದರು. ಬಹರಾಮ್‌ಖಾನರು ಚೀಫ್ ಕಮಿಷನರನ್ನು ಭೇಟಿಯಾಗಿ ಗಫಾರ್‌ಖಾನರು ನಡೆಸಿರುವ ಕಾರ್ಯಗಳೆಲ್ಲ ಧರ್ಮಶ್ರದ್ಧೆಯಿಂದ ಪ್ರೇರಿತ ವಾದುವೆಂದೂ ಅವರ ವ್ರತನಿಷ್ಠೆ ಇಸ್ಲಾಮಿನ ಮೂಲತತ್ತ್ವಕ್ಕೆ ಅನುಗುಣ ವಾಗಿದೆಯೆಂದೂ ತಿಳಿಸಿದರು. ನಿರ್ಭಯವಾಗಿ ಮಗನ ಉತ್ಸಾಹವನ್ನು ಪ್ರೋತ್ಸಾಹಿಸಿದರು.

ಸರ್ ಜಾನ್ ರ್‍ಯಾಫೆ ಇಷ್ಟಕ್ಕೇ ಸುಮ್ಮನಾಗಲಿಲ್ಲ. ಗಫಾರ್‌ಖಾನರನ್ನು ಕರೆಸಿ ಈ ಸಮಾಜ ಸೇವಾ ಕಾರ್ಯದಿಂದ ಜನರನ್ನು ಸಂಘಟಿಸುತ್ತ ಸರ್ಕಾರ ವನ್ನು ಪ್ರತಿಭಟಿಸಿ ನಿಲ್ಲುವುದಿಲ್ಲವೆಂಬ ಭರವಸೆ ಏನು ಎಂದು ಪ್ರಶ್ನಿಸಿದರು. "ನಾನು ಸತ್ಯನಿಷ್ಠ. ಯಾವುದನ್ನೂ ಮರೆಮಾಚಿ ಮಾಡುವವನಲ್ಲ. ನನ್ನನ್ನು ನಂಬಿ" ಎಂದರು ಖಾನ್. "ಅದೆಲ್ಲ ನಡೆಯುವುದಿಲ್ಲ. [illegible] ಕ್ಷಮೆ ಕೇಳಿ. ಇನ್ನು ಮುಂದೆ ಈ ಕಾರ್ಯ ಕೈಗೊಳ್ಳುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡಿ" ರ್‍ಯಾಫೆ ಗುಡುಗಿದರು. ಶಾಂತವಾಗಿಯೇ ನಿಂತ ಖಾನರು. "ನನ್ನ ನಾಡಿನ ಜನರೆಲ್ಲರನ್ನು ಪ್ರೀತಿಸಿ ಅವರಿಗೆ ಸೇವೆ ಸಲ್ಲಿಸುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡುವುದೇ? ಕ್ರೈಸ್ತ ಧರ್ಮದ ನ್ಯಾಯ ಮಂಡಳಿಗೂ ಅವರ [illegible] [illegible] ಇದೆಷ್ಟು ಸಮಂಜಸ?" ಮರುತ್ತರವಿತ್ತರು. ಬ್ರಿಟಿಷ್ ಅಧಿಕಾರಿಗೆ ರೇಗಿ ಹೋಯಿತು. "ಇದು ಸೇವೆಯಲ್ಲ. ಸರ್ಕಾರದ ವಿರುದ್ಧ ದಂಗೆ" ಎಂದು ಅರ್ಥೈಸಿದ.

ಇದಾದ ಕೆಲವೇ ದಿನಗಳ ನಂತರ ೧೯೨೧ ರ ಡಿಸೆಂಬರ್ ೧೭ ರಂದು ಗಫಾರರನ್ನು ಗಡಿನಾಡಿನ ವಿಶೇಷ ಅಪರಾಧಗಳ ಕಾನೂನಿನ ನಲವತ್ತನೆಯ ವಿಧಿಯನ್ವಯ ಬಂಧಿಸಿ ಮೂರು ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ಬಿಟ್ಟರು.

೧೯೨೦ ರಲ್ಲಿ ಗಫಾರ್‌ಖಾನರಿಗೆ ಎರಡನೇ ಮದುವೆ ಆಗಿತ್ತು. ಆ ಮದುವೆಯ ಸಮಯದಲ್ಲಿ ಒಮ್ಮೆ ಪೆಷಾವರ್‌ಗೆ ಹೋಗಿದ್ದಾಗ ಇದ್ದಕ್ಕಿದ್ದಂತೆ ಪೋಲೀಸರು ಹಿಡಿದು ಠಾಣೆಗೆ ಕರೆದೊಯ್ದರು. ಷಾರ್ಟ್ ಎಂಬ ಅಧಿಕಾರಿ ಮುಂದೆ ನಿಲ್ಲಿಸಿದರು. ಏನೂ ಕಾರಣ ಕೊಡದೆ ಒಂದು ವಾರ ಬಂಧಿಸಿಟ್ಟು ಬಿಡುಗಡೆ ಮಾಡಿದರು. ಆನಂತರ ತಂದೆತಾಯಿಗಳು ಗೊತ್ತು ಮಾಡಿದ್ದರಿಂದ ಮದುವೆಯಾದರು. ಒಂದು ವರ್ಷದೊಳಗೆ ಮತ್ತೆ ಸೆರೆ ಮನೆ ಸೇರಬೇಕಾಯಿತು. ಅಲ್ಲಿಂದ ಸತ್ಯಾಗ್ರಹಿಯ ಕಠಿಣ ತಪಸ್ಸು ಪ್ರಾರಂಭವಾಯಿತು. ಆ ಮೂರು ವರ್ಷಗಳು ಅವರನುಭವಿಸಿದ ಸೆರೆ ಮನೆಯ ಕಠೋರ ಶಿಕ್ಷೆಗಳನ್ನು ತಮ್ಮ ಆತ್ಮಕಥೆಯಲ್ಲಿ ವಿವರಿಸಿದ್ದಾರೆ. ಅದೊಂದು ಹೃದಯ ಬಿರಿಯುವ ಕಥೆ. ಭಾರತ ಸ್ವಾತಂತ್ರ ಸಮರದ ಈ ನಿಸ್ಸೀಮ ಅಹಿಂಸಾಯೋಧ ಆ ಭಯಂಕರ ಕ್ರೌರ್ಯವನ್ನು ಅತ್ಯಂತ ಸಂಯಮದಿಂದ ತಾಳಿ ಒಬ್ಬ ಆದರ್ಶ ಖೈದಿಯಂತೆ ನಡೆದುಕೊಂಡರು. ಗಾಂಧೀಜಿ ಬಣ್ಣಿಸಿದ ಅತ್ಯಂತ ಶ್ರೇಷ್ಠ ಸತ್ಯಾಗ್ರಹಿಯ ವಿವರಣೆ ಮೂರ್ತಿವೆತ್ತು ಈ ಗಡಿನಾಡಿನ ಗಾಂಧಿಯಲ್ಲಿ ಪ್ರಜ್ವಲಿಸಿತು.

ಅವರದೇ ಮಾತುಗಳಲ್ಲಿ ಹೀಗೆ ಆ ದಿನಗಳನ್ನು ನೆನೆದಿದ್ದಾರೆ :

“ಕೈಕೋಳಗಳನ್ನು ತೊಡಿಸಿ ಕಾಲಿಗೆ ಬಳೆಹಾಕಿ ಜೈಲಿನ ಸಮವಸ್ತ್ರ ಹಾಕಿ ನನ್ನನ್ನು ಕರೆದೊಯ್ದರು. ಆ ಬಟ್ಟೆಗಳು ನನ್ನ ಆಕಾರಕ್ಕೆ ತೀರ ಸಾಲದಾಗಿದ್ದವು. ಆ ಪರಾಯಿ ನನ್ನ ಮೊಣಕಾಲಿಗೂ ಬರಲಿಲ್ಲ. ನಮಾಜಿಗೆ ಬಗ್ಗಿ ನಿಂತಾಗ ಹರಿದೇ ಹೋಯಿತು. ಬೇರೆ ಕೊಡಲು ನಿರಾಕರಿಸಿದರು. ಕಠಿಣ ಶಿಕ್ಷೆಯಾದ್ದರಿಂದ ದಿನವೂ ನಾಲ್ಕು ಗಂಟೆ ಬೀಸುವ ದುಡಿಮೆಗೆ ಹಾಕಿದರು. ಕತ್ತಲೆ ಕೋಣೆಯ ಏಕಾಂತ ವಾಸವಾಗಿತ್ತು. ಸೂರ್ಯನ ದರ್ಶನವೇ ಆಗುತ್ತಿರಲಿಲ್ಲ. ರಾತ್ರಿಯಲ್ಲಿ ಒಂದೊಂದು ಜಾವಕ್ಕೂ ಒಬ್ಬೊಬ್ಬ ಕಾವಲುಗಾರ ಕೂಗಿ ಎಬ್ಬಿಸಿ ನಾನಿದ್ದೇನೊ ಇಲ್ಲವೋ ಎಂದು ಖಚಿತ ಮಾಡಿಕೊಳ್ಳುತ್ತಿದ್ದ. ಕೊರೆಯುವ ಛಳಿ. ನನ್ನ

ಉಪದ್ರಕ್ಕೆ ಆ ಕಂಬಳಿ ಏನೂ ಸಾಲದು. ಗಡಗಡ ನಡುಗುತ್ತಲೇ ಇದ್ದೆ....

"ಅಲ್ಲಿಂದ ಪೆಷಾವರಿನ ಜೈಲಿಗೆ ಕರೆದೊಯ್ದರು. ಅಲ್ಲಿಯೂ ಏಕಾಂತದ ಕತ್ತಲಕೋಣೆ. ಅಷ್ಟೇ ಅಲ್ಲ, ದಿನಗಟ್ಟಲೆ ಶುಚಿಮಾಡದೆ ಇದ್ದ ಕಕ್ಕಸು. ಅದರ ದುರ್ವಾಸನೆ ಅಡರುತ್ತಿತ್ತು. ನಾನೇ ಶುಚಿಗೊಳಿಸಲು ಅಲ್ಲಿ ಸಲಕರಣೆಗಳೇ ಇರಲಿಲ್ಲ. ದಿನವೂ ಆಯಾ ಹೊತ್ತಿಗೆ ಬಾಗಿಲ ಕಂಡಿಯಿಂದ ಊಟವನ್ನು ತಳ್ಳುತ್ತಿದ್ದರು. ಇಂಥ ಶಿಕ್ಷೆಯನ್ನು ಸಾಧಾರಣ ವಾಗಿ ಒಂದು ವಾರ ಕೊಡುತ್ತಿದ್ದರು. ಆದರೆ ನನ್ನನ್ನು ಹೀಗೆ ಎರಡು ತಿಂಗಳು ಇಟ್ಟರು. ನಂತರ ಡೇರಾಇಸ್ಮಾಯಿಲ್‌ಖಾನ್ ಸೆರೆಮನೆಗೆ ವರ್ಗಾಯಿಸಿದರು".

"ಒಬ್ಬ ಮೃದು ಸ್ವಭಾವದ ಜೈಲಾಧಿಕಾರಿ ಬಂದ. ನಾನಾಗ ಕಾಳು ಬೀಸುತ್ತಿದ್ದೆ. ಆ ದಿನ ಇಪ್ಪತ್ತು ಸೇರು ಕಾಳು ಕೊಟ್ಟಿದ್ದರು. ನೋಡಿ ಆ ಮುಸ್ಲಿಂ ಬಾಂಧವನಿಗೆ ದುಃಖವಾಯಿತು. "ನಿಮ್ಮಂಥ ಸಾಧು ಸತ್ಪುರುಷ ನಿಗೆ ಇಂಥ ದುಡಿಮೆ ಕೊಡುವುದು ವ್ಯಸನವಾಗುತ್ತದೆ. ದೇವರು ನನ್ನನ್ನು ಕ್ಷಮಿಸುತ್ತಾನೆಯೇ" ಎಂದ. ಮಾರನೇ ದಿನ ಹಿಟ್ಟನ್ನೇ ಕಳುಹಿಸಿ ಕಾಳು ಎಂದು ಹೇಳಬೇಕೆಂದು ಕೇಳಿಕೊಂಡ ಆತನ ಕರುಣೆಗೆ ವಂದಿಸಿ ನಾನು ಸುಳ್ಳು ಹೇಳಲಾರೆ. ನನಗೆ ಕಾಳನ್ನೇ ಕಳುಹಿಸು ಎಂದು ಬೇಡಿ ಕೊಂಡೆ. ಅಲ್ಲಿ ಆಗ ೧೬೦೦ ಖೈದಿಗಳಿದ್ದರು. ಅವರೆಲ್ಲರೂ ಬೀಸುವಾಗ ನಾನು ತಪ್ಪಿಸುವುದು ಪಾಪ ಎನಿಸಿತು. ನಾನಾ ದರೋ ನನ್ನ ಪವಿತ್ರ ದೀಕ್ಷೆಗೆ ಪ್ರಾಮಾಣಿಕನಾಗಿದ್ದರೆ ದೇವರು ಮೆಚ್ಚು ವನಲ್ಲ ಎಂದು ಭಾವಿಸಿ ಎಲ್ಲ ಕಷ್ಟಗಳನ್ನೂ ಸ್ವಾಗತಿಸಿದೆ.

"ಡೇರಾಇಸ್ಮಾಯಿಲ್‌ಖಾನ್ ಜೈಲಿನಲ್ಲಿ ಕೊಡುತ್ತಿದ್ದ ಆಹಾರವಂತೂ ಅತ್ಯಂತ ಕಳಪೆಯಾಗಿತ್ತು. ನಾಯಿಗಳು ಕೂಡ ಮುಟ್ಟುತ್ತಿರಲಿಲ್ಲ. ಅಲ್ಲಿನ ಮೇಲಾಧಿಕಾರಿ ಒಬ್ಬ ಇಂಗ್ಲಿಷನವ. ಆತನನ್ನು ಕೇಳಿದೆ. "ನಿಮ್ಮ ದೇಶದಲ್ಲಿ ರಾಜಕೀಯ ಖೈದಿಗಳನ್ನು ಹೀಗೆಯೇ ಕಾಣುವರೇ. ಯಾವ ಅಪರಾಧಕ್ಕಾಗಿ ಶಿಕ್ಷೆಯೆಂದೂ ನನಗೆ ತಿಳಿಸದೆ ಹೀಗೆ ನಡೆಸುವುದು ಸರಿಯೇ" ಎಂದು ಕೇಳಿದೆ. ಆತನಿಗೆ ನಾಚಿಕೆಯಾಯಿತು. ಬೇರೆ ಸೆರೆಮನೆಗೆ ಬದಲಾಯಿಸಲು ಶಿಫಾರ್ಸು ಮಾಡಿದ. ಮತ್ತೆ ನನ್ನ ಕಾಲಿಗೆ ಸರಪಳಿ

ಗಳನ್ನು ಹಾಕಿ ಕೈಗೆ ಕೋಳಗಳನ್ನು ತೊಡಿಸಿ ಕತ್ತಿಗೆ ಒಂದು ಕಬ್ಬಿಣದ ಚಕ್ರವನ್ನು ಹಾಕಿ ಒಂದು ಮೋಟಾರು ಗಾಡಿಗೆ ಹತ್ತಿಸಿ ಡೇರಾ ಘನಿ ಖಾನ್ ಜೈಲಿಗೆ ವರ್ಗಾಯಿಸಿದರು. ಈ ವೇಳೆಗೆ ನನ್ನ ಆರೋಗ್ಯ ಕೆಟ್ಟಿತ್ತು. ಹಲ್ಲುಗಳು ಪಯೊರಿಯಾ ರೋಗದಿಂದ ನೋಯುತ್ತಿದ್ದವು. ದೇಹದ ತೂಕ ೫೫ ಪೌಂಡುಗಳಷ್ಟು ಕಮ್ಮಿಯಾಗಿತ್ತು. ಡಾಕ್ಟರ್ ಪ್ರೇಮನಾಥ್ ನನ್ನ ಹಲ್ಲುಗಳಿಗೆ ಚಿಕಿತ್ಸೆ ಮಾಡಿದರು. ಅವರಿಗೆ ಸಲ್ಲಬೇಕಾದ ಹಣ ಕೊಡಲು ಹೋದೆ. "ನಿಮ್ಮಂಥ ದೇಶ ಸೇವಕರ ತ್ಯಾಗದೆದುರು ನಾನೇನು ಮಾಡಿದ್ದೇನೆ. ನನಗೆ ಇಷ್ಟಾದರೂ ಸೇವೆ ಮಾಡುವ ಅವಕಾಶ ಕೊಡಿ'' ಎಂದವರು ಕೇಳಿದಾಗ ಯಾವ ಯಾವ ಹೃದಯಗಳು ಹೇಗೆ ಹೇಗೆ ದೇಶದ ಸ್ಥಿತಿಗಾಗಿ ಮರುಗುತ್ತವೆ ಎಂದುಕೊಂಡೆ.

''ಇದೇ ಜೈಲಿನಲ್ಲಿದ್ದ ಲಾಲಾ ಲಜಪತರಾಯರ ಸ್ನೇಹವಾಯಿತು. ಅವರ ಅಪಾರ ಅನುಭವ ಜ್ಞಾನಕ್ಕೆ ಮಾರುಹೋದೆ. ಇತರ ಕಾಂಗ್ರೆಸ್ ಮತ್ತು ಖಿಲಾಫತ್ ಚಳುವಳಿಗಳಲ್ಲಿ ಪಾಲ್ಗೊಂಡ ಅನೇಕ ಖೈದಿಗಳಿದ್ದರು. ಮಲ್ಲಿಕ್‌ಲಾಲ್‌ಖಾನ್ ಎಂಬ ಮೌಲ್ವಿ ನನಗೆ ಕೊರಾನಿನ ಪಾಠ ಹೇಳಿದರು. ಆದರೆ ನನ್ನದೇ ಆದ ವಿವರಣೆಗಳನ್ನು ಮಾತ್ರ ಅವರು ಒಪ್ಪಲಿಲ್ಲ. ಸ್ವತಂತ್ರ ಆಲೋಚನೆಯನ್ನೇ ಪಾಪವೆಂದು ತಿಳಿದಿದ್ದ ಕಟ್ಟಾ ಸಂಪ್ರದಾಯವಾದಿಗಳೇ ಹೆಚ್ಚಾಗಿದ್ದರು. ಜೈಲಿನಲ್ಲಿದ್ದ ಸಿಖ್ ಸಹೋದರರನ್ನು ಕಂಡರೆ ನನಗೆ ಅಪಾರ ಗೌರವ ಬೆಳೆಯಿತು. ಅವರ ಧಾರ್ಮಿಕ ಶ್ರದ್ಧೆ ಆಳವಾಗಿತ್ತು. ಅವರ ಧರ್ಮ ಗ್ರಂಥಗಳು ಅವರ ಮಾತೃಭಾಷೆಯಲ್ಲೇ ಇದ್ದುದರಿಂದ ಎಲ್ಲರಿಗೂ ಆ ಬೋಧನೆ ಅರ್ಥವಾಗುತ್ತಿತ್ತು. ಹಿಂದುಗಳಿಗೆ ಸಂಸ್ಕೃತದ ಗ್ರಂಥಗಳೂ ಮುಸ್ಲಿಮರಿಗೆ ಅರಬ್ಬೀ ಭಾಷಾ ಗ್ರಂಥಗಳೂ ಮೂಲವಾಗಿದ್ದುದರಿಂದ ನಮ್ಮ ಹೃದಯಗಳಿಗೆ ಅವು ಮುಟ್ಟುತ್ತಲೇ ಇರಲಿಲ್ಲವೆನಿಸಿತು. ಆದರೆ ಪ್ರಾರ್ಥನೆಯ ಸಮಯದಲ್ಲಿ ಯಾವುದೋ ಸಹಜ ಅಂತರಿಕ ನೆಮ್ಮದಿ ಎಲ್ಲರ ಹೃದಯಗಳನ್ನು ತುಂಬಿ ನಿಲ್ಲುತ್ತಿತ್ತು. ಯಾವ ಧಾರ್ಮಿಕ ಪಂಥವೂ ದೈವಭಾವದ ವಿರೋಧವಲ್ಲ. ಆದ್ದರಿಂದ ಎಲ್ಲದರ ಆಧ್ಯಾತ್ಮಿಕ ತಳಹದಿಯೂ ಒಂದೇ ಆಗಿರಬೇಕೆಂಬ ನಂಬಿಕೆ ನನ್ನದು."

ಹೀಗೆ ಮೂರು ವರ್ಷಗಳು ಕಳೆಯುವುದಕ್ಕೆ ಸ್ವಲ್ಪ ಮುಂಚೆಯೇ ಖಾನರ ಬಿಡುಗಡೆಯಾಯಿತು. ಅವರನ್ನು ಅವರ ಊರಿಗೆ ಕರೆದೊಯ್ದು ಬಿಡುಗಡೆ ಮಾಡಿದಾಗ ಜನರಿಗೆ ಅವರ ಸುಳಿವಿರಲಿಲ್ಲ. ಉಟ್‌ಮಾನ್ ಜಾಯ್‌ಗೆ ಬಂದಿಳಿದಾಗ ಮೊದಲು ಶಾಲಾ ಬಾಲಕರು ಗುರ್ತಿಸಿ ಮುತ್ತಿಕೊಂಡರು. ಊರಿಗೆ ಊರೇ ಸಂತೋಷದಿಂದ ನಲಿಯಿತು. ಬಿಡುಗಡೆಯ ದಿನಕ್ಕೆಂದು ಏರ್ಪಡಿಸಿದ್ದ ದೊಡ್ಡ ಮೆರವಣಿಗೆ ಮಾತ್ರ ಆಗಲಿಲ್ಲ.

೧೯೨೪ ರಲ್ಲಿ ಸೆರೆಮನೆ ಬಿಟ್ಟಾಗ ಗಫಾರ್‌ಖಾನರ ಆರೋಗ್ಯ ತುಂಬ ಕೆಟ್ಟಿತ್ತು. ಹಲವಾರು ತಿಂಗಳ ವಿಶ್ರಾಂತಿಬೇಕಾಯಿತು. ಮಧ್ಯೆ ೧೯೨೩ ರಲ್ಲೇ ಅವರ ವಾತ್ಸಲ್ಯಮಯಿ ತಾಯಿ ನಿಧನರಾಗಿದ್ದರು. ಈ ಸುದ್ದಿಯನ್ನು ಅವರು ಪತ್ರಿಕೆಗಳಿಂದ ತಿಳಿಯಬೇಕಾಯಿತು. ಮೂರು ತಿಂಗಳಿಗೆ ಒಂದು ಕಾಗದ ಬರೆಯುವುದಕ್ಕೆ ಮಾತ್ರ ಸೆರೆಮನೆಯಲ್ಲಿ ಅವಕಾಶ ಕೊಡಲಾಗಿತ್ತು. ಈ ವಿಯೋಗದಿಂದ ಖಾನರಿಗೆ ತುಂಬಲಾರದ ನಷ್ಟವೆನಿಸಿತು. ವೃದ್ಧ ತಂದೆಯವರು ಮಗನ ದೇಶಸೇವೆಯ ಬಗ್ಗೆ ಹೆಮ್ಮೆಪಟ್ಟರು. ಪಠಾಣ ಜನಾಂಗಕ್ಕೆಲ್ಲ ಈ ತರುಣ ಸ್ಫೂರ್ತಿದಾಯಕ ಮುಂದಾಳುವೆನಿಸಿದರು.

೭. ಫಕಿರ್–ಇ–ಅಫ್‌ಗನ್

"ಕುರಿಮರಿಗಳ ಮಧ್ಯೆ ಬೆಳೆದ ಹುಲಿಮರಿಯೂ ಹೇಡಿಯಾಗಿ ಬಿಡುತ್ತದೆ. ಪಠಾಣರು ತಮ್ಮ ಸಹಜ ಸ್ವಭಾವವಾದ ಆತ್ಮಗೌರವವನ್ನೂ ದಿಟ್ಟತನದ ಶೌರ್ಯವನ್ನೂ, ದೇಶಪ್ರೇಮವನ್ನೂ ಮರೆತು ಇಂಗ್ಲೆಂಡಿನವರ ಗುಲಾಮರಾಗುವುದು ಸರ್ವಥಾ ಯೋಗ್ಯವಲ್ಲ. ಒಂದು ಶತಮಾನದಷ್ಟು ಕಾಲ ನಮ್ಮನ್ನು ದಾಸರನ್ನಾಗಿ ಕಂಡು ಬ್ರಿಟಿಷರು ಅಧೋಗತಿಗೆ ನೂಕಿದ್ದಾರೆ. ಫಕ್ತೂನ್ ಸಂಸ್ಕೃತಿಗೆ ಯೋಗ್ಯರಾಗಿ ಬಾಳಲು ಮೈಕೊಡವಿ ಎದ್ದು ನಿಲ್ಲಿ. ನಿರ್ಭಯವಾಗಿ ಸಾಮ್ರಾಜ್ಯಶಾಹಿಗಳ ದೃಷ್ಟಿಗೆ ದೃಷ್ಟಿಕೊಟ್ಟು ಹೋರಾಡುವ ಕೆಚ್ಚನ್ನು ಬೆಳೆಸಿಕೊಳ್ಳಿ" ಗಫಾರ್‌ಖಾನರ ಬಿಡುಗಡೆಗೆ ಕಾದಿದ್ದ ಅವರ ಅಜಾದ್ ಶಾಲೆಯ ವಾರ್ಷಿಕೋತ್ಸವದಲ್ಲಿ ಸಾವಿರಾರು ಯುವಕರಿಗೆ ಕೊಟ್ಟ ಕರೆ ಇದು. ಅಜಾದ್ ಶಾಲೆ ಪಠಾಣರ ಮಕ್ಕಳಿಗೆ ಹೊಸ ಜೀವನಶಿಕ್ಷಣ ಕೇಂದ್ರವಾಗಿತ್ತು. ರಾಷ್ಟ್ರೀಯತೆಯ ಚಿಲುಮೆ ಅಲ್ಲಿ ಚಿಮ್ಮುತ್ತಿತ್ತು. ಗಫಾರ್‌ಖಾನರ ಇಬ್ಬರು ಮಕ್ಕಳು ಘನಿಖಾನ್ ಮತ್ತು ಅವನ ತಮ್ಮ ವಲಿಖಾನ್ ಈ ಶಾಲೆಯಲ್ಲಿ ಓದುತ್ತಿದ್ದರು.

ಈ ವಾರ್ಷಿಕೋತ್ಸವ ಜನತೆಯಲ್ಲಿ ಹೊಸ ಉತ್ಸಾಹವನ್ನು ಉಕ್ಕಿಸಿತು. ತಮ್ಮ ನೆಚ್ಚಿನ ನಾಯಕನಿಗೆ ಗೌರವದಿಂದ ನಮಿಸಿ ಜನತೆಯು ಪರವಾಗಿ 'ಫಕಿರ್-ಇ-ಅಫ್‌ಗನ್'– (ಪಠಾಣ ಜನಾಂಗದ ಹೆಮ್ಮೆಯ ಪುತ್ರ) ಎಂಬ ಬಿರುದುಕೊಟ್ಟರು. ಶತವರ್ಷಗಳನ್ನು ಸಮೀಪಿಸುತ್ತಿದ್ದ ವೃದ್ಧ ಬೆಹರಾಮ್‌ಖಾನರಿಗೆ ಹೃದಯ ತುಂಬಿ ಬಂದು ಆನಂದ ಬಾಷ್ಪಗಳುದುರಿದವು. ಗಡಿನಾಡು ಪ್ರಾಂತದ ಅನಭಿಷಿಕ್ತದೊರೆ – ಬಾದಷಾಖಾನ್ ಎನಿಸಿದರು ಗಫಾರ್‌ಖಾನ್.

೧೯೨೬ ರಲ್ಲಿ ಬೆಹರಾಮ್‌ಖಾನರು ಸ್ವರ್ಗಸ್ಥರಾದರು. ಕೊನೆಯುಸಿರಿನವರೆಗೂ ಚಟುವಟಿಕೆಯಾಗಿ ಕೆಲಸ ಮಾಡುತ್ತಲೇ ಇದ್ದರು. ಅವರ ದೈವಭಕ್ತಿ, ಕರ್ಮಶ್ರದ್ಧೆ ಮತ್ತು ಔದಾರ್ಯಗಳು ಪಠಾಣ ಜನಾಂಗಕ್ಕೆ ಮರೆಯಲಾಗದ ನೆನಪಾಗಿಯೇ ಉಳಿದಿವೆ. ಇಸ್ಲಾಮ್ ಧರ್ಮದ ಆಚಾರದಂತೆ ತಂದೆಯ ನೆನೆಪಿನಲ್ಲಿ ದಾನಧರ್ಮಗಳನ್ನು ಮಾಡುವಾಗ ಗಫಾರ್‌ಖಾನ್ ಸಂಪ್ರದಾಯದಂತೆ ಬಟ್ಟೆಬರೆಗಳನ್ನು ಹಂಚದೆ ಆಜಾದ್ ಶಾಲೆಗಾಗಿ ಅವರಲ್ಲಿದ್ದ ಎರಡು ಸಾವಿರ ರೂಪಾಯಿಗಳನ್ನು ದಾನಮಾಡಿಬಿಟ್ಟರು. ಅವರ ಅಣ್ಣ ಡಾ॥ ಖಾನ್‌ಸಾಹೇಬರು ೧೯೨೦ ರಲ್ಲಿ ಇಂಗ್ಲೆಂಡಿನಿಂದ ಸ್ವದೇಶಕ್ಕೆ ಹಿಂದಿರುಗಿದ್ದರು. ಇಂಗ್ಲಿಷ್ ಪತ್ನಿ ಮತ್ತು ಇಬ್ಬರು ಮಕ್ಕಳು ಅವರೊಡನೆ ಬಂದರು. ಹದಿಮೂರು ವರ್ಷ ವಿದೇಶದ ವಾಸ ಅವರ ನಡೆನುಡಿಗಳನ್ನೆಲ್ಲಾ ಬದಲಿಸಿಬಿಟ್ಟಿತ್ತು. ಬ್ರಿಟಿಷ್ ಸೈನ್ಯದಲ್ಲಿ ದೊಡ್ಡ ವೈದ್ಯಾಧಿಕಾರಿಯ ಪದವಿಯೂ ಇತ್ತು. ವಜೀರಿಸ್ತಾನದಲ್ಲಿ ಸೈನ್ಯಾಚರಣೆ ಆದ ಕಾಲಕ್ಕೆ ಡಾ॥ ಖಾನ್‌ಸಾಹೇಬರನ್ನು ಅಲ್ಲಿಗೆ ವರ್ಗಾಯಿಸಿದರು. ತಮ್ಮವರೇ ಆದ ಪಠಾಣ ಜನರಮೇಲೆ ಯುದ್ಧ ಹೂಡಿದ್ದ ಸೈನ್ಯದಲ್ಲಿ ಸೇವೆ ಮಾಡಲು ಅವರು ನಿರಾಕರಿಸಿ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಪೆಷಾವರಿನಲ್ಲಿ ನೆಲಸಿ ಖಾಸಗಿ ವೈದ್ಯಶಾಲೆ ಪ್ರಾರಂಭಿಸಿದರು. ಜನಪ್ರಿಯತೆ ಸಂಪಾದಿಸಿ ಹೊಸ ರಾಷ್ಟ್ರೀಯ ಚಳುವಳಿಗಳಲ್ಲಿ ಮುಖ್ಯ ಪಾತ್ರ ವಹಿಸಿದರು. ೧೯೨೬ ರಲ್ಲಿ ಗಫಾರಖಾನರ ಅಕ್ಕ ಮೆಕ್ಕಾಯಾತ್ರೆಗೆ ಹೊರಟರು. ಅವರೊಡನೆ ಗಫಾರ್‌ಖಾನರೂ ಅವರ ಎರಡನೆಯ ಪತ್ನಿಯೂ ಈ 'ಹಾಜ್' ಪವಿತ್ರ ಯಾತ್ರೆಗೆ ತೆರಳಿದರು. ಕರಾಚಿಯಿಂದ ಹಡಗಿನಲ್ಲಿ ಹೊರಟು ಜಿದ್ದಾ ಎಂಬ ಊರು ತಲುಪಿ ಮೆಕ್ಕಾಕ್ಕೆ ಪ್ರಯಾಣ ಬೆಳಸಿದರು ಅರೇಬಿಯದ ದೊರೆ ಇಬನ್‌ಸಾದ್ ವಿಶ್ವದ ಮುಸ್ಲಿಮ್ ಪ್ರಮುಖರನ್ನು ಆಹ್ವಾನಿಸಿ ಸತ್ಕರಿಸಿದರು ಖಾನ್‌ಅಬ್ದುಲ್‌ಗಫಾರ್‌ಖಾನರೂ ಭಾಗವಹಿಸಿದ್ದರು. ನಾನಾ ಕಡೆಯಿಂದ ಬಂದಿದ್ದ ಮುಸ್ಲಿಂ ಬಾಂಧವರ ನಿಕಟ ಪರಿಚಯವಾಯಿತು.

ಅಲ್ಲಿಂದ ಮುಂದೆ ಟೈಯಿಫ್ ಎಂಬ ಸ್ಥಳಕ್ಕೆ ಹೋದಾಗ ಖಾನರಿಗೆ ಪ್ರವಾದಿ ಮಹಮದರನ್ನು ಅಲ್ಲಿಯ ಜನ ಆಗ ಹಿಂಸಿಸಿ, ಕಲ್ಲುಹೊಡೆದು, ಹೊರದೋಡಿಸಿದ ದುರಂತ ಕಥೆ ನೆನಪಿಗೆ ಬಂತು. ಮಹಮ್ಮದರು ಶಾಂತ

ರಾಗಿಯೇ ಇದ್ದು 'ಈ ಜನಕ್ಕೆ ಸನ್ಮತಿಕೊಡು ದೇವರೇ' ಎಂದು ಪ್ರಾರ್ಥಿಸಿದರೆಂದು ಪ್ರತೀತಿ. ಆ ಘಟನೆಯನ್ನು ಸ್ಮರಿಸುತ್ತಾ ಗಫಾರ್‌ಖಾನರಿಗೆ ಹೃದಯತುಂಬಿ ಬಂದಿತು. ಇಸ್ಲಾಮಿನ ಪ್ರವಾದಿ ಎಂದೂ ಹಿಂಸಾಚಾರಕ್ಕೆ ಮಣಿಯದೆ ಶಾಂತಿದೂತರಾಗಿ ಜನತೆಯನ್ನು ಪರಿವರ್ತಿಸಿದರು ಎಂಬ ಮಾತು ದೃಢವಾಯಿತು. ಅಲ್ಲಿಂದ ಮುಂದೆ ಮದೀನಕ್ಕೆ ಪ್ರಯಾಣ ಮಾಡಿದರು. ಜೆರುಸಲಮ್‌ಗೆ ಭೇಟಿನೀಡಿದಾಗ ಅತ್ಯಂತ ದಾರುಣ ಘಟನೆ ಅವರಿಗೆ ಕಾದಿತ್ತು. ಮಹಡಿಯೊಂದರಿಂದ ಇಳಿಯುತ್ತಿದ್ದಾಗ ಅವರ ಪತ್ನಿ ಕಾಲುಜಾರಿ ಬಿದ್ದು ಅಲ್ಲಿಯೇ ಸ್ವರ್ಗಸ್ಥರಾದರು. ಪವಿತ್ರ ಪ್ರೇಮ ಬಾಂಧವ್ಯವೊಂದು ಕಡಿದುಹೋಯಿತು. ಅಲ್ಲಾನ ಇಚ್ಛೆ ಎಂದು ದುಃಖವನ್ನು ಸಹಿಸಿಕೊಂಡ ಗಫಾರ್‌ಖಾನರು ಒಂಟಿಯಾಗಿ ಮನೆಗೆ ಹಿಂತಿರುಗಿದರು. ಒಬ್ಬ ಮಗ ಮತ್ತು ಮಗಳನ್ನು ಬಿಟ್ಟು ಈ ಪತ್ನಿ ಅಗಲಿದ್ದರು. ಯೌವನದಲ್ಲಿದ್ದರೂ ಗಫಾರ್‌ಖಾನರು ಮತ್ತೆ ಮದುವೆಯಾಗಲು ನಿರಾಕರಿಸಿದರು. ಇಡೀ ಮಾನವ ಸಮಾಜಕ್ಕೆ ತಮ್ಮ ಪ್ರೀತಿಯನ್ನು ಧಾರೆಯೆರೆದರು.

ಪಶ್ಚಿಮ ಏಷ್ಯದ ಅನೇಕ ಮುಸ್ಲಿಂ ರಾಷ್ಟ್ರಗಳು ಪರೋಕ್ಷವಾಗಿ ಬ್ರಿಟಿಷ್ ಸಾಮ್ರಾಜ್ಯದ ದಾಸ್ಯಕ್ಕೆ ಸಿಕ್ಕಿದ್ದವು. ಅಲ್ಲಿನ ಪ್ರಕೃತಿದತ್ತ ಭೂಗರ್ಭಭರಿತ ಪೆಟ್ರೋಲ್ ಎಣ್ಣೆಗಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸ್ಪರ್ಧೆ ನಡೆಸಿದ್ದವು. ಇಂಗ್ಲೆಂಡ್ ಎಲ್ಲ ಕಡೆಯೂ ತನ್ನ ವ್ಯಾಪಾರೀ ಜಾಲಗಳನ್ನು ನಿರ್ಮಿಸಿ ದೇಶಗಳನ್ನು ವಶಪಡಿಸಿಕೊಂಡು ತನ್ನ ಚಕ್ರಾಧಿಪತ್ಯದ ಪ್ರಭಾವವನ್ನು ಬೆಳಸಿಕೊಂಡಿತ್ತು.

ಟರ್ಕಿಯಲ್ಲಿ ಖಲೀಫರನ್ನು ಅಲ್ಲಿನ ಜನರೇ ಪದಚ್ಯುತಿಗೊಳಿಸಿ ಕೆಮಾಲ್ ಅಟಾಟರ್ಕ್ ಅಥವಾ ಕೆಮಾಲ್‌ಪಾಷಾ ಅವರನ್ನು ಅಧಿಕಾರಕ್ಕೆ ಏರಿಸಿದರು. ಇದರಿಂದ ಖಿಲಾಫತ್ ಚಳುವಳಿ ನಿಂತುಹೋಯಿತು. ಭಾರತದ ಮುಸ್ಲಿಮರಿಗೆ ಸ್ವಲ್ಪ ಮುಖಭಂಗವಾಯಿತು. ಈಜಿಪ್ಟ್, ಇರಾನ್ ಮತ್ತು ಅರೇಬಿಯಾಗಳಲ್ಲಿ ಸಾಂಪ್ರದಾಯಿಕ ಇಸ್ಲಾಂ ದೊರೆಗಳ ಕಾಲ ಮುಗಿದು ರಾಷ್ಟ್ರೀಯ ಮನೋಭಾವ ಬೆಳೆಯುತ್ತಿತ್ತು. ಭಾರತದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಯಿಂದ ಮಧ್ಯಪ್ರಾಚ್ಯದ ಸಾಮಂತ ರಾಷ್ಟ್ರಗಳಿಗೂ

ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ವಿಮೋಚನೆ ಸಾಧ್ಯವಾದೀತೆಂದು ಅಲ್ಲಿನ ರಾಷ್ಟ್ರೀಯರು ನಿರೀಕ್ಷಿಸುತ್ತಿದ್ದರು. ಗಫಾರ್‌ಖಾನರು ತಮ್ಮ ಪ್ರವಾಸದಲ್ಲಿ ಅನೇಕ ಸಹೃದಯ ಮುಸಲ್ಮಾನ ಮುಂದಾಳುಗಳನ್ನು ಭೇಟಿಯಾಗಿ ವಿಚಾರ ವಿನಿಮಯಮಾಡಿಕೊಂಡರು.

ಭಾರತದಲ್ಲಿ ಖಿಲಾಫತ್ ಚಳುವಳಿಯ ಕಾಲಕ್ಕೆ ಕಂಡ ಹಿಂದೂ ಮುಸ್ಲಿಮ್ ಮಧುರ ಬಾಂಧವ್ಯವೂ ಇಂಗ್ಲಿಷರ ರಾಜಕೀಯ ಕುಟಿಲತೆಗಳಿಗೆ ಬಲಿಯಾಗಿ ಆಂತರಿಕ ಸಂಘರ್ಷಗಳು ಹೆಚ್ಚಿದವು. ೧೯೨೪ ರಿಂದ ೧೯೨೯ ರವರೆಗೆ ದೇಶದ ಅನೇಕ ಭಾಗಗಳಲ್ಲಿ ಹಿಂದೂ ಮುಸಲ್ಮಾನ ವೈಷಮ್ಯ ಬೆಳೆದು ಹಿಂಸಾತ್ಮಕ ದಂಗೆಗಳಾದವು. ಒಬ್ಬರಿಂದ ಇನ್ನೊಬ್ಬರ ಧರ್ಮಕ್ಕೆ ಚ್ಯುತಿ ಬರುತ್ತಿದೆ ಎಂಬ ಹುಯಿಲನ್ನು ಎಬ್ಬಿಸಿದ ಮತಾಂಧ ಪಟ್ಟಭದ್ರ ಹಿತಗಳಿಗೆ ಪ್ರೋತ್ಸಾಹ ದೊರೆಯಿತು. ಅಲ್ಪಸಂಖ್ಯಾತರಾದ ಮುಸ್ಲಿಮರನ್ನು ಇತರ ಭಾರತೀಯರಿಂದ ಪ್ರತ್ಯೇಕಿಸಿ ಬ್ರಿಟಿಷರಿಗೆ ರಾಜಭಕ್ತಿ ತೋರಿಸುವಂತೆ ಸರ್ಕಾರವೇ ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿತ್ತು. ಮನಸ್ಸುಗಳು ಒಡೆದವು. ಮಿತ್ರರು ಹಗೆಗಳಾದರು. ಧರ್ಮದ ಹೆಸರಿನಲ್ಲಿ ಆವೇಶಪೂರ್ಣ ಪರಿಸ್ಥಿತಿಗಳನ್ನು ನಿರ್ಮಿಸಿ, ಸಾಮಾನ್ಯ ಜನರನ್ನು ಉದ್ರೇಕಿಸಿ, ಪರಸ್ಪರ ಹೊಡೆದಾಡುವಂತೆ ಪ್ರೇರೇಪಿಸುವವರ ರಾಜಕೀಯ ಪ್ರಭಾವ ಹೆಚ್ಚಾಯಿತು.

ಈ ಅಸಹಜ ತುಮುಲದಿಂದ ಗಫಾರ್‌ಖಾನರು ದೂರವಾಗಿಯೇ ಉಳಿದರು. "ಧರ್ಮವನ್ನು ಅದರ ಅನುಯಾಯಿಗಳ ಸಂಖ್ಯೆಯಿಂದ ನಾನು ಅಳೆಯುವುದಿಲ್ಲ. ಬಾಳಿಗೆ ಅನ್ವಯಿಸಲಾಗದ ಧರ್ಮತತ್ವಗಳನ್ನು ನಾನು ಒಪ್ಪಲಾರೆ. ಇಸ್ಲಾಮ್ ಧರ್ಮದ ಮೂಲ ಬೋಧೆಯನ್ನು ನಾನು 'ಅಮಾಲ್' ಅಂದರೆ ಸಚ್ಚಾರಿತ್ರ್ಯ, 'ಯಕೀನ್' ಅಂದರೆ ಗಾಢ ನಂಬಿಕೆ ಮತ್ತು 'ಮೊಹಬತ್' ಅಂದರೆ ಶುದ್ಧ ಪ್ರೇಮ ಎಂದು ತಿಳಿದಿದ್ದೇನೆ. ಇವುಗಳನ್ನು ಅನುಸರಿಸದಿದ್ದವನು ಹೇಗೆ ಮುಸಲ್ಮಾನನೆನಿಸುವನು? ಪವಿತ್ರ ಕೊರಾನ್ ಇದನ್ನು ಸ್ಪಷ್ಟವಾಗಿ ಬೋಧಿಸಿದೆ. ಒಬ್ಬನೇ ದೇವರು ಮತ್ತು ಗಾಢನಿಷ್ಠೆ ಮತ್ತು ಸತ್ಕರ್ಮಗಳಲ್ಲಿ ತೊಡಗುವುದು ಇದೇ ಮೋಕ್ಷಕ್ಕೆ ದಾರಿ ಎಂದು ಅದರಲ್ಲಿ ಹೇಳಿದೆ." ಹೀಗೆಂದು ಗಫಾರ್‌ಖಾನರು ತಮ್ಮ

ಅನುಯಾಯಿಗಳಿಗೆ ತಿಳಿಯ ಹೇಳಿ ಮತೀಯ ಗಲಭೆಗಳು ಅಸಂಗತ ಎಂದರು.

ಆದರೆ ರಾಜಕೀಯ ವಲಯದ ಕುಟಿಲನೀತಿಗಳೂ, ಧರ್ಮಾಂಧ ನಾಯಕರ ಭಾವಾವೇಶಗಳೂ, ಮುಗ್ಧ ಜನತೆಯ ಮೂಢನಂಬಿಕೆಗಳೂ ದೇಶದಲ್ಲಿ ಹಿಂದೂ ಮುಸ್ಲಿಮ್ ವೈಷಮ್ಯವನ್ನು ಅಗಾಧವಾಗಿ ಬೆಳೆಸಿದವು. ೧೯೨೪ ರಲ್ಲಿ ಗಡಿನಾಡು ಪ್ರಾಂತದ ಕೋಹಾಟ್‌ನಲ್ಲಿ ಹಿಂದೂ ಲೇಖಕನೊಬ್ಬ ತನ್ನ ಪುಸ್ತಕದಲ್ಲಿ ಮುಹಮ್ಮದರಿಗೆ ಅವಮಾನವಾಗುವಂತೆ ಬರೆದಿದ್ದಾನೆಂದು ದೊಡ್ಡ ಮತೀಯ ದಂಗೆ ಆಯಿತು. ಆ ಹಿಂದೂ ಲೇಖಕನ ಕೊಲೆಯಾಯಿತು. ಗಾಂಧೀಜಿ ಆ ಸಮಯಕ್ಕೆ ದೆಹಲಿಯಲ್ಲಿ ಮಹಮ್ಮದಾಲಿ ಅವರ ಮನೆಯಲ್ಲಿ ೨೧ ದಿನಗಳ ಉಪವಾಸ ಕೈಗೊಂಡರು. ಸೋದರರ ಕೊಲೆಗಳನ್ನು ನಿಲ್ಲಿಸಿ ಎಂದು ಮೊರೆಯಿಟ್ಟರು. ಇಸ್ಲಾಮ್ ಧರ್ಮ ಕತ್ತಿಯ ಬಲದಿಂದ ನಿಲ್ಲುವುದಿಲ್ಲ; ಶಾಂತಿಯನ್ನು ಪ್ರೀತಿಯನ್ನು ನೆಲೆಗೊಳಿಸಿದರೆ ಮಾತ್ರವೇ ಧರ್ಮ ಉಳಿದೀತು ಎಂದು ಎರಡೂ ಕಡೆಯ ಕೋಪೋದ್ರೇಕಗಳನ್ನು ಶಮನಗೊಳಿಸಲು ಪ್ರಯತ್ನಿಸಿದರು. ೧೯೨೬ ರಲ್ಲಿ ಸ್ವಾಮಿ ಶ್ರದ್ಧಾನಂದರನ್ನು ಮುಸ್ಲಿಮನೊಬ್ಬ ಕೊಲೆಮಾಡಿಬಿಟ್ಟ. ದೇಶದಲ್ಲೆಲ್ಲ ದ್ವೇಷದ ಕಿಚ್ಚು ಮಿತಿಮೀರಿ ಹರಡಿತು. ಗಾಂಧೀಜಿ ವಿಪರೀತ ವ್ಯಾಕುಲಕ್ಕೊಳಗಾದರು. 'ದೇವರೇ ಈ ಜನರಿಗೆ ಸನ್ಮತಿನೀಡು' ಎಂದು ದಿನದಿನದ ಪ್ರಾರ್ಥನೆಯಲ್ಲಿ ನಿರತರಾದರು. ಸಾಮೂಹಿಕ ಸರ್ವಧರ್ಮೀಯ ಪ್ರಾರ್ಥನಾ ಸಭೆಗಳನ್ನು ನಡೆಸಿದರು. ಮುಸಲ್ಮಾನ ಸ್ನೇಹಿತರ ಮನೆಗಳಲ್ಲೇ ತಂಗುತ್ತಿದ್ದರು. ಡಾ॥ ಅನ್ಸಾರಿ, ಮೌಲಾನಾ ಆಜಾದ್, ಖಾನ್ ಅಬ್ದುಲ್ ಗಫಾರ್‌ಖಾನ್, ಡಾ॥ ಸೈಯದ್ ಮುಹಮ್ಮದ್, ಹಕೀಮ್ ಅಜಮಲ್‌ಖಾನರೇ ಮುಂತಾದ ಪ್ರಮುಖ ರಾಷ್ಟ್ರೀಯ ನಾಯಕರು ಗಾಂಧೀಜಿಯ ಹೆಗಲಿಗೆ ಹೆಗಲುಕೊಟ್ಟು ಐಕ್ಯತೆಗಾಗಿ ಜೀವವನ್ನೇ ಪಣವಾಗಿಟ್ಟು ಶ್ರಮಿಸಿದರು. ಅಹಿಂಸಾ ಯೋಧರಾಗಿದ್ದ ಗಫಾರ್‌ಖಾನರಿಗೆ ಗಾಂಧೀಜಿಯ ಪವಿತ್ರ ದೀಕ್ಷೆಯಲ್ಲಿ ಅಪರಿಮಿತ ಶ್ರದ್ಧೆ. ಇಂದಲ್ಲ ನಾಳೆ ಈ ತಪಸ್ಸಿಗೆ ಶುಭಫಲಗಳನ್ನು ನೀಡೀತು ಎಂಬ ನಂಬಿಕೆ ಅವರಲ್ಲಿ ಬೆಳೆಯುತ್ತಲೇ ಸಾಗಿತು.

ಮಾತೃಭಾಷೆಯಲ್ಲಿ ಒಂದು ಪತ್ರಿಕೆ ಪ್ರಕಟಿಸಲು ಗಫಾರ್‌ಖಾನರು

ನಿರ್ಧರಿಸಿದರು. ಫಶ್ತೂ ಭಾಷೆಯಲ್ಲಿ ತಮ್ಮ ಜನಕ್ಕೆ ಪ್ರೀತಿಯಿಲ್ಲದಿರುವುದನ್ನು ಕಂಡು ಅವರಲ್ಲಿ ಸ್ವಾಭಿಮಾನ ತುಂಬಲು ಪತ್ರಿಕೆಯನ್ನು ಬಳಸಿದರು. ಅಲ್ಲಿಯ ವರೆಗೆ ಉರ್ದು ಮತ್ತು ಪಂಜಾಬಿ ಭಾಷೆಗಳಲ್ಲಿ ಮಾತ್ರವೇ ಪತ್ರಿಕೆಗಳಿದ್ದವು. 'ಪಕ್ತೂನ್' ಎಂಬ ಹೆಸರಿನಲ್ಲಿ ಜನಪ್ರಿಯ ಮಾಸಪತ್ರಿಕೆ ಪಠಾಣರ ಸಾಮಾಜಿಕ ಪ್ರಗತಿ ಸಾಧನೆಯಲ್ಲಿ ಒಂದು ಮೈಲಿಗಲ್ಲಾಯಿತು. ಅದರ ಮುಖಪುಟದಲ್ಲಿ ಒಂದು ಧ್ಯೇಯ ವಾಕ್ಯ ಹೀಗಿತ್ತು:-

'ದಾಸ್ಯದಲ್ಲಿ ಮಾನಗೆಟ್ಟು ನೂರುಕಾಲ ಬದುಕುವುದಕ್ಕಿಂತ ಸಾವಿನ ವೇದನೆಯಲ್ಲಿದ್ದರೂ ಒಂದು ಗಂಟೆಯ ಸ್ವಾತಂತ್ರ್ಯ ಲೇಸು."

ತಮ್ಮ ಮಾತೃಭಾಷೆಯ ಅಭಿಮಾನ ಆತ್ಮಗೌರವದ ಸಂಕೇತ ಎಂದು ಗಫಾರ್‌ಖಾನರು ಏಕಪ್ರಕಾರವಾಗಿ ಘೋಷಿಸಿದರು.

ಶಿಕ್ಷಣದ ಅವಕಾಶಗಳಿಂದ ವಂಚಿತರಾಗಿದ್ದ ಬಹುಸಂಖ್ಯಾತ ಪಠಾಣ ಜನಾಂಗದವರಿಗೆ ಪಕ್ತೂನ್ ಪತ್ರಿಕೆ ಒಂದು ರೀತಿಯ ಸಾರ್ವಜನಿಕ ಶಿಕ್ಷಣದ ಸಾಧನವಾಯಿತು. ಇಸ್ಲಾಮ್ ಧರ್ಮದಲ್ಲಿದ್ದ ಅನೇಕ ಅಸಂಗತ ಆಚಾರಗಳನ್ನು ಅಲ್ಲಗಳೆದು ಹೇಗೆ ಆಧುನಿಕ ವೈಜ್ಞಾನಿಕ ಮಾನದಂಡದಿಂದ ತಮ್ಮ ವ್ಯವಹಾರಗಳನ್ನು ತಿದ್ದಿಕೊಳ್ಳಬೇಕು ಎಂದು ಪತ್ರಿಕೆಯ ಮೂಲಕ ಮನ ಮುಟ್ಟುವಂತೆ ತಿಳಿಯ ಹೇಳಿದರು. ಪತ್ರಿಕೆ ತನ್ನ ಗಡಿಯನ್ನು ದಾಟಿ ಅಫ್ಘಾನಿಸ್ತಾನದಲ್ಲೂ ಪ್ರಸಾರವಾಯಿತು. ಅಫ್ಘನರಿಗೂ ಮಾತೃಭಾಷೆಯಾದ ಪಶ್ತುಭಾಷೆಯನ್ನು ಅಲ್ಲಿನ ದೊರೆ ಅಮಾನುಲ್ಲ ರಾಜ್ಯಭಾಷೆಯನ್ನಾಗಿ ಮಾಡಿದರು. ಸ್ವಾಭಿಮಾನದ ಕಿಚ್ಚನ್ನು ಸಾಮಾನ್ಯ ಜನದಲ್ಲೂ ಸ್ಥಾಯಿಗೊಳಿಸಲು ಇದರಿಂದ ತುಂಬ ಸಹಾಯವಾಯಿತು. ಈ ಸುಧಾರಣೆಗಳನ್ನೇ ಕಾರಣಮಾಡಿ ಬ್ರಿಟಿಷರು ಸಾಂಪ್ರದಾಯಿಕ ಮುಲ್ಲಾಗಳನ್ನು ಎತ್ತಿಕಟ್ಟಿದರು. ಕೊನೆಗೆ ಅಮಾನುಲ್ಲ ಪದಚ್ಯುತರಾಗಬೇಕಾಯಿತು. ಆದರೆ ಸ್ವಾತಂತ್ರ್ಯದ ಆಕಾಂಕ್ಷೆ ಅದಮ್ಯವಾಯಿತು. ಕಾಬೂಲಿನಿಂದ ಪೇಷಾವರದ ವರೆಗೆ ಹರಡಿನಿಂತಿದ್ದ ಒಂದು ಜನಾಂಗ ತನ್ನ ಆತ್ಮಗೌರವವನ್ನು ಬೆಳೆಸಿಕೊಂಡು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪರಿಸರ ನಿರ್ಮಾಣವಾಯಿತು.

ಗಫಾರ್‌ಖಾನರಿಗೆ ಕಾಬೂಲಿನ ಜನತೆ ಆತ್ಮೀಯರಾದರು. ಅಫ್

ಘಾನಿಸ್ತಾನಕ್ಕೂ ಭಾರತಕ್ಕೂ ಬಾಂಧವ್ಯ ಬೆಳೆಯಲು ಅವರು ಒಂದು ಪವಿತ್ರ ಕೊಂಡಿಯಾಗುತ್ತಾದರು. ಒಬ್ಬ ಮಹಾಸಂತನನ್ನು ಎರಡೂ ರಾಷ್ಟ್ರಗಳು ಆದರದಿಂದ ಗೌರವಿಸುವಂತಾಯಿತು.

೮. ಖುದಾಯಿ ಖಿದ್‌ಮತ್‌ಗಾರರು (ಈಶಸೇವಕರು)

ಕಲ್ಕತ್ತೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ೧೯೨೯ ರಲ್ಲಿ ಖಿಲಾಫತ್ ಸಮ್ಮೇಳನವೂ ನಡೆದಿತ್ತು. ಗಫಾರ್‌ಖಾನರು ಎರಡೂ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಮಹಮ್ಮದಾಲಿ ಅವರಿಗೂ ಕೆಲವು ಪಂಜಾಬೀ ಯುವಕ ಮುಂದಾಳುಗಳಿಗೂ ಖಿಲಾಫತ್ ವೇದಿಕೆಯ ಮೇಲೆ ನಡೆದ ವಾಗ್ಯುದ್ಧ ಮತ್ತು ಅಸಭ್ಯ ಮೂದಲಿಕೆಗಳಿಂದ ಖಾನರಿಗೆ ತುಂಬ ನೋವಾಯಿತು. ನಾಯಕರಾದವರು ತಾಳ್ಮೆಗೆಟ್ಟು ಬಯ್ದಾಡುವುದು ಯಾವುದೇ ಚಳುವಳಿಗೆ ಅತ್ಯಂತ ಹಾನಿಕರ ಎನಿಸಿತು. ಮಹಮ್ಮದಾಲಿ ಅವರಿಗೆ ನೇರವಾಗಿ ತಮ್ಮ ಅಭಿಪ್ರಾಯ ಸೂಚಿಸಿದರು. ಆದರೆ ಅವರಿಗೆ ಈ ಹೊಸ ನಾಯಕನ ಉಪದೇಶ ಅಪಥ್ಯವಾಯಿತು. ಸಿಟ್ಟಾಗಿ ಬಿಟ್ಟರು. ಅಲ್ಲಿಂದ ಮುಂದೆ ಗಫಾರ್‌ಖಾನ್ ಖಿಲಾಫತ್ ನಾಯಕರಿಂದ ದೂರವಾದರು. ಆ ವೇಳೆಗಾಗಲೇ ಮುಸ್ಲಿಮ್ ನಾಯಕರಿಗೂ ಕಾಂಗ್ರೆಸ್ಸಿಗೂ ಒಡಕುಂಟಾಗಿತ್ತು.

ಕಾಂಗ್ರೆಸ್ಸಿನ ವಿಷಯ ನಿಯಾಮಕ ಸಭೆಯಲ್ಲಿ ಗಾಂಧೀಜಿ ಮಾತನಾಡುತ್ತಿದ್ದಾಗ ಗಫಾರ್‌ಖಾನರು ಹಾಜರಿದ್ದರು. ಅವರ ಮೆಲುದನಿಯ, ಶಾಂತ, ತರ್ಕಬದ್ಧ ಭಾಷಣ ಕೇಳಿ ಪ್ರಭಾವಿತರಾದರು. ಆ ಸಭೆಯಲ್ಲಿ ಬಿಸಿ ಯುವಕರು ಗಾಂಧೀಜಿಯನ್ನು ಪ್ರಬಲವಾಗಿ ಟೀಕಿಸುತ್ತಿದ್ದರೂ ನಗುನಗುತ್ತ ಅವರ ಸವಾಲುಗಳಿಗೆ ತಾಳ್ಮೆಯಿಂದ ಉತ್ತರಿಸುತ್ತಿದ್ದ ಗಾಂಧೀಜಿ ಬಗ್ಗೆ ಖಾನರಿಗೆ ಗೌರವ ಹೆಚ್ಚಾಯಿತು. ಅಲಿ ಸಹೋದರರ ಬಳಿ ಈ ವಿಷಯ ಪ್ರಸ್ತಾಪಿಸಿದರು. ಆದರೆ ಅವರು ಪಠಾಣರನ್ನು ಹೀಯಾಳಿಸಿ ಅವರನ್ನು ಕೀಳಾದವರೆಂದು ಜರಿದಾಗ ಬಿಡಿಗೊಂಡು ತಮ್ಮದೇ ಮಾರ್ಗ ಹಿಡಿದರು.

ಗಡಿನಾಡಿಗೆ ಹಿಂತಿರುಗಿ ತಮ್ಮ ಜನಾಂಗವನ್ನು ರಾಷ್ಟ್ರೀಯ ಚಳು ವಳಿಗೆ ಹುರಿದುಂಬಿಸಿ ಯುವಕರನ್ನು ಸೇರಿಸಿ ಗಫಾರ್‌ಖಾನರು ಸಂಘಟಿಸಿದ "ಕೆಂಪು ಅಂಗಿಯ ಸ್ವಯಂಸೇವಕ ದಳ" ಅಥವಾ 'ಖುದಾಯಿ ಖಿದ್‌ಮತ್ ಗಾರ್' ದಳ ಭಾರತ ಸ್ವಾತಂತ್ರ್ಯ ಇತಿಹಾಸದಲ್ಲಿ ಅಮೋಘ ಪಾತ್ರವಹಿ ಸಿತು. ಈ ಅಹಿಂಸಾ ಯೋಧರ ಅದ್ವಿತೀಯ ಸಾಹಸಗಳಲ್ಲಿ ಗಾಂಧೀಜಿ ವೀರರ ಅಹಿಂಸೆಯ ಪ್ರತಿರೂಪ ಕಂಡು ಮಾರುಹೋದರು. ಖುದಾಯಿ ಖಿದ್‌ಮತ್‌ಗಾರ್ ಅಂದರೆ ಭಗವಂತನ ಸೇವಕರು ಎಂಬ ಹೆಸರಿನಲ್ಲಿ ಪ್ರಾರಂಭವಾಗಿ ಬೆಳೆದ ಈ ಅಪ್ರತಿಹತ ಸತ್ಯಾಗ್ರಹಿಗಳ ಸಂಘಟನೆ ಬಗ್ಗೆ ಗಫಾರ್‌ಖಾನರೇ ತಮ್ಮ ಆತ್ಮಕಥೆಯಲ್ಲಿ ಹೀಗೆ ಬರೆದಿದ್ದಾರೆ:–

"ನಾನು ಉತ್‌ಮನ್‌ಜಾಯ್‌ಗೆ ಹಿಂತಿರುಗಿದಾಗ ಅಫ್‌ಘಾನಿಸ್ತಾನದಲ್ಲಿ ನಾದಿರ್‌ಖಾನ್ ಎಂಬ ಜನನಾಯಕನಿಗೆ ಜಯವಾಯಿತೆಂಬ ಸುದ್ದಿಬಂತು. ತುಂಬ ಹರ್ಷಿತನಾದೆ. ಒಂದು ದೊಡ್ಡ ವಿಜಯೋತ್ಸವ ಮೆರವಣಿಗೆ ನಡೆಸಿದೆವು. ಆ ಸಭೆಯಲ್ಲಿ ಪಠಾಣರಿಗೆ ಹೀಗೆ ಹೇಳಿದೆ:– "ದೇಶದ ಪ್ರಗ ತಿಗೆ ಎರಡು ಮಾರ್ಗಗಳುಂಟು. ಒಂದು, ಧಾರ್ಮಿಕ ಶ್ರದ್ಧೆಯಿಂದ ಸೇವೆ ಮಾಡುವುದು; ಮತ್ತೊಂದು, ದೇಶಭಕ್ತಿಯಿಂದ ದುಡಿಯುವುದು. ನೀವು ಯುರೋಪ್ ಮತ್ತು ಅಮೆರಿಕೆಗಳ ಬಗ್ಗೆ ಕೇಳಿದ್ದೀರಿ. ಅಲ್ಲಿನ ಜನಕ್ಕೆ ಧಾರ್ಮಿಕ ಶ್ರದ್ಧೆ ಕಡಮೆ. ಆದರೆ ಉತ್ಕಟ ದೇಶಪ್ರೇಮ ಮತ್ತು ಸಾಮಾಜಿಕ ಪ್ರಜ್ಞೆಗಳಿಂದ ಸೇವೆ ಮಾಡುತ್ತಾರೆ. ಅದರಿಂದ ಅಗಾಧ ಪ್ರಗತಿ ಸಾಧಿಸಿದ್ದಾರೆ. ಉನ್ನತ ಜೀವನ ನಡೆಸುತ್ತಿದ್ದಾರೆ. ನಮಗಾದರೋ ಧರ್ಮಶ್ರದ್ಧೆಯೂ ಇಲ್ಲ, ದೇಶಭಕ್ತಿಯೂ ಇಲ್ಲ. ರಾಷ್ಟ್ರಪ್ರೇಮವಾಗಲೀ, ಸಾಮಾಜಿಕ ಹೊಣೆಗಾರಿಕೆಯಾಗಲೀ ನಮ್ಮಲ್ಲಿ ಬೇರೂರಿಲ್ಲ. ದೇಶದ ಮಿಕ್ಕೆಡೆ ಒಂದು ಪ್ರಚಂಡ ಕ್ರಾಂತಿಯಾಗುತ್ತಿದೆ. ಭಾರತದ ಇತರೆಡೆ ನಾನದನ್ನು ಕಂಡೆ. ತುಂಬ ಪ್ರಭಾವಿತನಾದೆ. ಅಲ್ಲೆಲ್ಲ ದೇಶಸೇವೆಗಾಗಿ ಗಂಡಸರು ಹೆಂಗಸರು ಉತ್ಸಾಹದಿಂದ ಮುಂದೆ ಬರುತ್ತಿದ್ದಾರೆ. ಇಲ್ಲಿ ನೋಡಿ, ನಿಮ್ಮಲ್ಲಿ ಹೆಂಗಸರಂತೂ ಬಿಡಿ, ಗಂಡಸರು ಕೂಡ ಯಾವ ಸೇವೆಯಲ್ಲೂ ತೊಡಗುವುದೇ ಇಲ್ಲ. 'ರಾಷ್ಟ್ರ' ಮತ್ತು 'ರಾಷ್ಟ್ರೀಯತೆ' ಎಂಬ ಪದ ಗಳನ್ನೇ ನೀವರಿಯಿರಿ...ಕ್ರಾಂತಿ ಅನ್ನುವುದೊಂದು ಪ್ರವಾಹ. ಪರವೂ

ಆಗಬಹುದು, ಶಾಪವೂ ಆಗಬಹುದು. ಯಾವ ರಾಷ್ಟ್ರ ಜಾಗೃತವಾಗಿರುವುದೋ, ಜನಕ್ಕೆ ದೇಶಪ್ರೇಮವಿರುತ್ತದೋ, ಎಲ್ಲಿ ಭ್ರಾತೃಭಾವದಿಂದ ಎಲ್ಲರೂ ಒಟ್ಟುಗೂಡಿ ಪ್ರೇಮ ಮತ್ತು ಸಾಮರಸ್ಯದಿಂದ ದುಡಿಯುವರೋ ಆ ದೇಶಕ್ಕೆ ಮಾತ್ರವೇ ಕ್ರಾಂತಿಯಿಂದ ಲಾಭವಾದೀತು... ಈ ಪ್ರವಾಹ ಪ್ರಚಂಡವಾಗಿ ಹರಿಯುತ್ತದೆ. ಇಡೀ ದೇಶ ಅವರ ಸೆಳೆವಿನಲ್ಲಿ ಸಾಗುತ್ತದೆ. ಪ್ರವಾಹ ಇಳಿದ ನಂತರ ಅವರ ಹಿಂದೆ ಫಲವತ್ತಾದ ಭೂಮಿ ನಿರ್ಮಾಣವಾಗಿ ದೇಶದಲ್ಲಿ ಹೊಸ ಜೀವನ ಚಿಮ್ಮುತ್ತದೆ. ರಾಷ್ಟ್ರ ರಚನೆ ಸುಗಮವಾಗುತ್ತದೆ. ಆದರೆ ಪ್ರವಾಹ ಬಂದಾಗ ನಾವು ನಿದ್ರಿಸುತ್ತಿದ್ದರೆ, ಪರಸ್ಪರ ಸಹಕಾರವಿಲ್ಲದಿದ್ದರೆ, ದೇಶದ ಬಗ್ಗೆ ಅಸಡ್ಡೆ ಬೆಳೆದಿದ್ದರೆ, ನಮಗೆ ಯಾವ ನೆಮ್ಮದಿಯೂ ದೊರೆಯುವುದಿಲ್ಲ. ಪ್ರಪಂಚದ ಇತರ ಮಹಾರಾಷ್ಟ್ರಗಳನ್ನು ಗಮನಿಸಿ. ಅವರ ಅಭಿವೃದ್ಧಿ ಆಕಾಶದಿಂದ ಬೀಳಲಿಲ್ಲ. ದೇಶಪ್ರೇಮ, ದೇಶಕ್ಕಾಗಿ ತಮ್ಮ ಸುಖಗಳನ್ನು ತ್ಯಾಗ ಮಾಡುವ ಮನೋವೃತ್ತಿ ಮತ್ತು ಸೇವಾನಿರತ ಜನರು ಅವರಲ್ಲಿ ಹೇರಳವಾಗಿ ಇದ್ದುದರಿಂದಲೆ ಅವರು ಉನ್ನತಿಗೇರಿದ್ದಾರೆ. "ಸರ್ವರ ಒಳಿತಿನಲ್ಲೇ ನಮ್ಮ ಒಳಿತೂ ಅಡಗಿದೆ. ಸ್ವಾರ್ಥದಿಂದ ಏನೂ ಸಾಧಿಸಲು ಸಾಧ್ಯವಿಲ್ಲ. ಸೃಷ್ಟಿಯಲ್ಲಿ ಉತ್ಕೃಷ್ಟ ಜೀವಿಯೆನಿಸಲು ಕೇವಲ ಪ್ರಾಣಿಗಳಂತೆ ಬದುಕಿದರೆ ಸಾಲದು. ನಿಮ್ಮ ನೆರೆಹೊರೆಯವರಿಗಾಗಿ, ನಿಮ್ಮ ದೇಶಕ್ಕಾಗಿ, ನಿಮ್ಮ ಸ್ವತಂತ್ರ ಬಾಳಿಗಾಗಿ, ಎಲ್ಲ ಬಲಿದಾನಕ್ಕೂ ಸಿದ್ಧರಾಗಿ ಯಾವಾಗ ಎಚ್ಚೆತ್ತುಕೊಳ್ಳುವಿರೋ ಅಂದು ನಿಮ್ಮ ಉನ್ನತಿಯ ಮಾರ್ಗ ಗೋಚರಿಸುತ್ತದೆ. ಏಳಿ, ಜಾಗೃತರಾಗಿ, ಸರ್ವತ್ಯಾಗಕ್ಕೂ ಸಿದ್ಧರಾಗುವ ಸ್ವಾತಂತ್ರ್ಯಯೋಧರಾಗಿ!"

"ಈ ಮಾತುಗಳು ನನ್ನ ಸೋದರರಲ್ಲಿ ಅತ್ಯಂತ ಮಾರ್ಮಿಕ ಪ್ರಭಾವ ಬೀರಿದವು. ಮರುದಿನವೇ ಹಲವು ಯುವಕರು ಸೇವೆಮಾಡಲು ಮುಂದೆ ಬಂದರು. ಈಗಾಗಲೇ ಸಾಮಾಜಿಕ ಸುಧಾರಣೆಗಾಗಿ ರಚಿಸಿಕೊಂಡಿದ್ದ ಇಸ್ಲಾಹ್-ಉಲ್-ಅಫ್ಘಾನಿ ಎಂಬ ಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುತ್ತಿತ್ತು. ಇದರ ಜೊತೆಗೆ ಸಮಾಜ ಪರಿವರ್ತನೆಯ ಮಹಾದೀಕ್ಷೆಯನ್ನು ಕೈಗೊಂಡು ಜನಜಾಗೃತಿಯನ್ನು ಬೆಳಗಿಸಬೇಕೆಂಬ ಆಕಾಂಕ್ಷೆ ಬೇರೂರಿತು. ಸಾಮಾಜಿಕ ಪ್ರಜ್ಞೆ ಮೂಡಿಬರಬೇಕೆಂದೆನಿಸಿತು. ಆ ಘಳಿಗೆಯಲ್ಲಿ



'ಖುದಾಯಿ ಖಿದ್‌ಮತ್‌ಗಾರ' ರ ನಾಯಕ

ಬಾದ್‌ಷಾಖಾನ್

ಇದೊಂದು ಪವಿತ್ರ ಸಂಕಲ್ಪವೆಂದರಿತು ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯನ್ನು ಪ್ರಾರಂಭಿಸಿದೆವು...

"ದೇಶಸೇವೆಯೇ ಈಶಸೇವೆ ಎಂಬ ಭಾವನೆ ಅಂಕುರವಾಗಿ ತಮ್ಮ ಸಹಜ ಧಾರ್ಮಿಕ ಶ್ರದ್ಧೆಯನ್ನು ಲೋಕಕಲ್ಯಾಣ ಕಾರ್ಯಕ್ಕಾಗಿ ಸಮರ್ಪಿಸುವುದೇ ಪರಮ ಗುರಿ ಎಂಬ ಮನೋಧರ್ಮವನ್ನಾಗಿ ಪರಿವರ್ತಿಸಲು ನಾವು ಪಣತೊಟ್ಟೆವು. ಸೇಡು, ಕಲಹ, ಸಾಂಸಾರಿಕ ದ್ವೇಷಾಸೂಯೆಗಳು ನಮ್ಮ ಜನರಲ್ಲಿ ಮನೆಮಾಡಿದ್ದವು. ಕೋರ್ಟು ಕಛೇರಿಗಳಿಗೆ ನ್ಯಾಯಕ್ಕಾಗಿ ಅಲೆಯುತ್ತಿದ್ದರು. ಹಣವನ್ನೆಲ್ಲ ಪೋಲು ಮಾಡುತ್ತ ದರಿದ್ರರಾಗಿಯೇ ಉಳಿದು ಬದುಕನ್ನು ಹೇಗೋ ಹೊರೆಯುತ್ತಿದ್ದರು. ದೈವಭಕ್ತಿ ಕೇವಲ ಮೂಢನಂಬಿಕೆಯಾಗಿಬಿಟ್ಟಿತ್ತು. ಆದ್ದರಿಂದ ಪರಸ್ಪರ ದ್ವೇಷಾಸೂಯೆಗಳನ್ನು ಮರೆತು ವಿಧ್ವಂಸಕ ಮನೋವೃತ್ತಿಯನ್ನು ದೂರಮಾಡಿ, ಸುಸಂಸ್ಕೃತ ಪ್ರಗತಿಶೀಲ ಜನಾಂಗವಾಗಿ ಬಾಳಲು ಖುದಾಯಿ ಖಿದ್‌ಮತ್ ಗಾರ್ ಚಳುವಳಿ ಬುನಾದಿಯಾಯಿತು."

'ಖುದಾಯಿ ಖಿದ್‌ಮತ್‌ಗಾರ್' ಅಥವಾ 'ಈಶ ಸೇವಕನಾಗಲು' ಕೆಳಗೆಕಂಡ ದೃಢ ಸಂಕಲ್ಪಗಳನ್ನು ದೇವರ ಹೆಸರಿನಲ್ಲಿ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು:

೧. ನಾನೊಬ್ಬ ಈಶ ಸೇವಕ. ಭಗವಂತ ತನಗಾಗಿ ಸೇವೆ ಬಯಸುವುದಿಲ್ಲವಾಗಿ ಅವನ ಸೃಷ್ಟಿಯ ಸೇವೆ ಮಾಡುವುದೇ ಅವನ ಸೇವೆ ಎಂದು ತಿಳಿದು ದೇವರ ಹೆಸರಿನಲ್ಲಿ ಮಾನವ ಸೇವೆ ಮಾಡುತ್ತೇನೆ.

೨. ಯಾವ ಹಿಂಸಾಚಾರಕ್ಕೂ ಕೈಹಾಕುವುದಿಲ್ಲ. ಸೇಡುತೀರಿಸಿಕೊಳ್ಳುವುದಿಲ್ಲ. ನನ್ನನ್ನು ಹಿಂದೆ ತಳ್ಳುವವರನ್ನೂ, ಕ್ರೂರವಾಗಿ ಹಿಂಸಿಸುವವರನ್ನೂ ಕ್ಷಮಿಸುತ್ತೇನೆ.

೩. ಜಗಳಗಳಲ್ಲಾಗಲಿ, ಕದನಗಳಲ್ಲಾಗಲಿ ನಾನೆಂದೂ ಭಾಗವಹಿಸುವುದಿಲ್ಲ ಮತ್ತು ಪರಸ್ಪರ ದ್ವೇಷಕ್ಕೆ ಕಾರಣನಾಗುವುದಿಲ್ಲ.

೪. ಪ್ರತಿಯೊಬ್ಬ ಪಠಾಣನೂ ನನ್ನ ಮಿತ್ರ ಮತ್ತು ಸೋದರನೆಂದು ಕಾಣುತ್ತೇನೆ.

೫. ಸಮಾಜಘಾತಕ ರೂಢಿಗಳನ್ನೂ, ಪದ್ಧತಿಗಳನ್ನೂ ವರ್ಜಿಸುತ್ತೇನೆ.

೬. ಸರಳಜೀವನ ನಡೆಸುತ್ತೇನೆ. ಪಾಪಕಾರ್ಯಗಳಲ್ಲಿ ತೊಡಗದೆ ಸಚ್ಚಾರಿತ್ರ್ಯ ವಂತನಾಗುತ್ತೇನೆ.

೭. ಸುಸಂಸ್ಕೃತ ವರ್ತನೆಯನ್ನೂ, ಒಳ್ಳೆಯ ನಡತೆಯನ್ನೂ ರೂಢಿಸಿ ಕೊಳ್ಳುತ್ತೇನೆ. ಸೋಮಾರಿಯಾಗಿರುವುದಿಲ್ಲ.

೮. ಸಮಾಜಸೇವೆಗಾಗಿ ಪ್ರತಿ ದಿನವೂ ಎರಡು ಗಂಟೆಯ ಕಾಲವನ್ನಾ ದರೂ ವಿನಿಯೋಗಿಸಲು ವಚನಬದ್ಧನಾಗುತ್ತೇನೆ.

ಕೇವಲ ಐನೂರು ಸ್ವಯಂ ಸೇವಕರಿಂದ ಪ್ರಾರಂಭವಾದ ಈ ಪಡೆ ೧೯೩೦ ರ ವೇಳೆಗೆ ಇಡೀ ಗಡಿನಾಡು ಪ್ರಾಂತವನ್ನು ಆವರಿಸಿನಿಂತು ಒಂದು ಲಕ್ಷ ಅಹಿಂಸಾ ಯೋಧರ ಪ್ರಚಂಡ ಚಳುವಳಿಯಾಗಿ ರೂಪಗೊಂಡಿತು ಅಲ್ಲಿಂದಾಚೆ ಭಾರತದ ಸ್ವಾತಂತ್ರ್ಯ ಸಂಗ್ರಾಮಗಳಲ್ಲೆಲ್ಲ ಗಾಂಧೀ ಪ್ರಣೀತ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಇತಿಹಾಸ ಪ್ರಸಿದ್ಧವಾಯಿತು.

ಈ ಕೆಂಪು ಅಂಗಿಯ ಸೇನೆ ಸೈನ್ಯದ ಶಿಸ್ತಿನಿಂದ ದಳ ದಳವಾ ಪಥಚಲನ ಮಾಡುತ್ತಿತ್ತು. ಯಾವ ಆಯುಧವನ್ನೂ ಹಿಡಿಯುತ್ತಿರಲಿಲ್ಲ ಅಹಿಂಸಾಧರ್ಮದ ದೀಕ್ಷೆ ಅವರ ಹೃದಯಗಳನ್ನು ಪವಿತ್ರಗೊಳಿಸಿತ್ತು ಹಳ್ಳಿಯಿಂದ ಹಳ್ಳಿಗೆ ನೂರಾರು ಶಿಸ್ತಿನ ದಳಗಳು ಪಾದಯಾತ್ರೆಯಿಂ ಹೋಗುವಾಗ ಹಳ್ಳಿಯ ಜನತೆಯನ್ನೆಲ್ಲ ಆಕರ್ಷಿಸುತ್ತಿತ್ತು. ಅವ ಸಾಮೂಹಿಕ ಲಯಬದ್ಧ ಹಾಡು ಹೃದಯಗಳನ್ನು ಗೆಲ್ಲುತ್ತಿತ್ತು. ಅವರ ರಚಿಸಿಕೊಂಡಿದ್ದ ಹಾಡು ಹೀಗಿತ್ತು.

ದೇವರ ಸಲ್ಮೆಯೋಧರು ನಾವು
ನಾವು ಸಿರಿಗಳಿಗೆ ವಿಮುಖರಾಗಿಹೆವು
ನಡೆಯುವೆವು ಮುಂದೆ. ನಾಯಕನ ಹಿಂದೆ
ಸಿದ್ಧರಾಗಿಹೆವು ಆತ್ಮಾರ್ಪಣೆಗೆ ಎಂದೂ

ಸೇವೆ ಪ್ರೇಮಗಳೆಮ್ಮ ಮಂತ್ರ
ನಮ್ಮ ಜನ ನಮ್ಮ ಗುರಿ ಶುದ್ಧ
ಸ್ವಾತಂತ್ರ್ಯವೆಮ್ಮಯ ಧ್ಯೇಯ
ಅದಕಾಗಿ ಬಲಿದಾನಕೂ ಸತತ ಸಿದ್ಧ.

೯. ಸತ್ಯಾಗ್ರಹದ ಮುಂಚೂಣಿಯಲ್ಲಿ

ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಪೂರ್ಣಸ್ವರಾಜ್ಯಕ್ಕೆ ಕಂಕಣಬದ್ಧವಾಗಿ ಹೋರಾಟಕ್ಕೆ ಸಿದ್ಧವಾಯಿತು. ತರುಣ ಜವಹರಲಾಲರು ಅಧ್ಯಕ್ಷರಾಗಿದ್ದರು. ಸ್ವರಾಜ್ಯ ಸಾಧನೆಗಾಗಿ ಸತ್ಯಾಗ್ರಹಿಗಳ ದಳಗಳು ದೇಶದ ಎಲ್ಲೆಡೆಯಲ್ಲೂ ಈ ಕೂಡಲೇ ಸಿದ್ಧವಾಗಲಿ ಎಂದು ಗಾಂಧೀಜಿ ಕರೆಯಿತ್ತರು. ಸಂಧಾನಗಳ ಪ್ರಯತ್ನಗಳನ್ನೆಲ್ಲ ಬ್ರಿಟಿಷರೇ ಮುರಿದು ಹಾಕಿದ್ದರು. ದುಂಡುಮೇಜಿನ ಪರಿಷತ್ತು ವಿಫಲವಾಗಿತ್ತು. ಸವಿನಯ ಶಾಸನಭಂಗ ಮತ್ತು ಕರನಿರಾಕರಣೆಯ ನಿರ್ಧಾರವನ್ನು ಕೈಗೊಳ್ಳಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಪೂರ್ಣ ಅಧಿಕಾರ ನೀಡಲಾಗಿತ್ತು. ೧೯೩೦ ರ ಜನವರಿ ೨೬ ದೇಶಕ್ಕೆ ದೇಶವೇ ರಾಷ್ಟ್ರಧ್ವಜಗಳನ್ನು ಹಾರಿಸಿ ಜನತೆಯ ಸ್ವಾತಂತ್ರ್ಯಸಂಕಲ್ಪದಿನವನ್ನಾಗಿ ಆಚರಿಸಿತು. 'ಕ್ರಾಂತಿ ಚಿರಾಯುವಾಗಲಿ' (ಇನ್‌ಕಿಲಾಬ್ ಜಿಂದಾಬಾದ್) ಎಂಬ ಘೋಷಣೆ ಮುಗಿಲಿಗೇರಿ ನಿಂತಿತು. ಅಧಿವೇಶನಕ್ಕೆ ಬಂದಿದ್ದ ನೂರಾರು ಸ್ವಯಂ ಸೇವಕ ದಳಪತಿಗಳು ಹರ್ಷದಿಂದ ಅಹಿಂಸಾ ಸಮರಯೋಧರಾಗಲು ಪ್ರತಿಜ್ಞೆ ಮಾಡಿದರು. ಗಡಿನಾಡಿನಿಂದ ಬಂದಿದ್ದ ದೊಡ್ಡ ಪಡೆ ಎಲ್ಲರಿಗಿಂತ ಹೆಚ್ಚು ಗಮನ ಸೆಳೆದಿತ್ತು. ಜವಹರಲಾಲರೂ ಕಮಲಾ ನೆಹರೂ ಅವರೂ ಈ ತಂಡದೊಡನೆ ಸೇರಿ ಉಪನ್ಯಾಸ ಮಾಡಿದರು. ಅವರೊಡನೆ ಭೋಜನ ಸ್ವೀಕರಿಸಿದರು. ಗಫಾರ್‌ಖಾನರು ಅಖಿಲ ಭಾರತದ ನಾಯಕ ಮಂಡಳಿಯಲ್ಲಿ ವಿರಾಜಮಾನರಾದರು. ಮೌಲಾನಾ ಅಬುಲ್ ಕಲಾಮ್ ಅಜಾದ್ ಮತ್ತು ಡಾ ಅನ್ಸಾರಿ ಆ ವೇಳೆಗೆ ಕಾಂಗ್ರೆಸ್ ಚಳುವಳಿಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು.

"ಪೂರ್ಣಸ್ವರಾಜ್ಯ ನಮ್ಮ ಧ್ಯೇಯ. ಯಾವ ಸರ್ಕಾರವೇ ಆಗಲಿ ಜನತೆಯ ಸಹಜ ಹಕ್ಕನ್ನು ಚ್ಯುತಿಗೊಳಿಸುವುದಾದರೆ ಅದನ್ನು ಬದಲಿಸುವ ಹೊಣೆ ಜನತೆಗೇ ಸೇರಿದೆ. ಬ್ರಿಟಿಷ್ ಸರ್ಕಾರ ತನ್ನ ಸಾಮ್ರಾಜ್ಯ ಧೋರಣೆಗಳಿಂದ ಭಾರತ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ. ಆದ್ದರಿಂದ ಈ ವಿದೇಶೀ ಸರ್ಕಾರಕ್ಕೆ ಯಾವ ಸಹಕಾರವನ್ನೂ ನೀಡಲಾರೆವು. ಕರ ನಿರಾಕರಣೆ ಮತ್ತು ಸವಿನಯ ಶಾಸನ ಭಂಗಗಳಿಂದ ನಾವು ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ ಪೂರ್ಣಸ್ವರಾಜ್ಯ ಪಡೆಯುವವರೆಗೂ ವಿರಮಿಸುವುದಿಲ್ಲ. ಗಾಂಧೀಜಿಯ ನೇತೃತ್ವದಲ್ಲಿ ಪೂರ್ಣ ಅಹಿಂಸಾತ್ಮಕ ಹೋರಾಟಕ್ಕಾಗಿ ನಾವು ಸರ್ವ ತ್ಯಾಗ ಬಲಿದಾನಗಳಿಗೂ ಸಿದ್ಧರಾಗಿದ್ದೇವೆ."

ಮೊದಲನೇ ಸ್ವಾತಂತ್ರ್ಯದಿನದ ಈ ಮುಕ್ತಕಂಠದ ಘೋಷಣೆ ದೇಶದ ಎಲ್ಲೆಡೆಯಂತೆ ಗಡಿನಾಡು ಪ್ರಾಂತದ ಗ್ರಾಮಗ್ರಾಮಗಳಲ್ಲಿ ಘೋರ್ಗರೆಯಿತು. ಖುದಾಯಿ ಖಿದಮತ್‌ಗಾರರ ಸಂಖ್ಯೆ ಅಪಾರವಾಗಿ ಬೆಳೆದು ಬ್ರಿಟಿಷ್ ಅಧಿಕಾರಿಗಳ ನೈತಿಕ ಬಲವೇ ಕುಸಿದುಹೋಯಿತು. ಗಫಾರ್‌ಖಾನರ ಚಲನವಲನಗಳನ್ನು ಪೋಲೀಸರ ರಹಸ್ಯ ಪಡೆಗಳು ಎಡಬಿಡದೆ ಮುತ್ತಿಕೊಂಡವು. ಸಾಮಾಜಿಕ ಸುಧಾರಣೆ ಕಾರ್ಯದಲ್ಲಿ ತೊಡಗಿದ್ದರೂ ಸ್ವಯಂಸೇವಕರನ್ನು ಸೆರೆಹಿಡಿದು ಹೆದರಿಸುತ್ತಿದ್ದರು. ಆದರೆ ಈ ಅಸಾಧಾರಣ ನಿಶ್ಶಸ್ತ್ರ ದೇಶಸೇವಕರು ಯಾವುದಕ್ಕೂ ಅಂಜದೆ ಅತ್ಯಂತ ವಿನಯದಿಂದಲೇ ತಮ್ಮ ದಿಟ್ಟತನದ ಸಂಕಲ್ಪ ಪ್ರದರ್ಶಿಸಿದರು. ಬಾದ್‌ಷಾಖಾನರ ಅಣತಿಗೆ ಮೀರಿ ಎಲ್ಲೂ ಏನೂ ನಡೆಯದಂತಾಯಿತು. ಸೈನ್ಯಾಧಿಕಾರಿಗಳು ಅನೇಕವೇಳೆ ನಿಸ್ಸಹಾಯಕರಾಗಿ ಹಿಂತಿರುಗುತ್ತಿದ್ದರು. ಸ್ವರಾಜ್ಯ ಸಾಧನೆಯ ಸಂದೇಶ ಲಕ್ಷಾಂತರ ಜನಮನಗಳಲ್ಲಿ ನೆಲೆಯೂರಿತು.

೧೯೩೦ ರ ಮಾರ್ಚ್ ೧೨ ರಂದು ಗಾಂಧೀಜಿ ತಮ್ಮ ಇತಿಹಾಸ ಪ್ರಸಿದ್ಧ ದಂಡಿಯಾತ್ರೆ ಪ್ರಾರಂಭಿಸಿಬಿಟ್ಟರು. ಉಪ್ಪಿನ ಸತ್ಯಾಗ್ರಹ ಎಂದು ಹೆಸರಾದ ಈ ಸತ್ಯಾಗ್ರಹದಲ್ಲಿ ಖುದಾಯಿ ಖಿದ್‌ಮತ್‌ಗಾರರು ಮಹತ್ವದ ಪಾತ್ರವಹಿಸಿದರು. ಲಾಹೋರ್ ಕಾಂಗ್ರೆಸ್ಸಿನ ಸಮಯದಲ್ಲಿ ಖುದಾಯಿ ಖಿದ್‌ಮತ್‌ಗಾರರ ಸಭೆ ನಡೆದು ಭಾರತದ ಸ್ವಾತಂತ್ರ್ಯಕ್ಕಾಗಿಯೇ ದುಡಿಯಲು ಒಮ್ಮತದ ತೀರ್ಮಾನವಾಯಿತು. ಸಮಗ್ರ ಭಾರತದ ಪ್ರಜೆಗಳಿಗ

ಎಲ್ಲ ಪ್ರಾಂತಗಳೊಂದಿಗೂ, ಎಲ್ಲ ಧರ್ಮೀಯರೊಂದಿಗೂ ಹೃತ್ಪೂರ್ವಕ ವಾಗಿ ಒಂದುಗೂಡಿ ಭಾರತೀಯರಾಗಿಯೇ ಈ ಮಹಾಸಂಗ್ರಾಮದಲ್ಲಿ ಪಾಲ್ಗೊಳ್ಳುತ್ತೇವೆ ಎಂದು ಸಂಕಲ್ಪ ಮಾಡಿದರು. ಮುಸ್ಲಿಮರು ರಾಷ್ಟ್ರೀಯತೆಯ ಮಹಾಪ್ರವಾಹದಿಂದ ಪ್ರತ್ಯೇಕವಾಗಿ ನಿಲ್ಲುವುದು ಸರ್ವಥಾ ಯೋಗ್ಯವಲ್ಲ ಎಂದು ಗಫಾರ್‌ಖಾನರು ತಮ್ಮ ಅನುಯಾಯಿಗಳಿಗೆ ಮನ ದಟ್ಟು ಮಾಡಿದರು.

ಪ್ರತಿಯೊಂದು ಗ್ರಾಮಕ್ಕೂ ಒಂದು ಹಿರಿಯರ ಸಭೆ ಅಥವಾ 'ಜಿರ್ಗಾ' ರಚನೆಯಾಯಿತು. ಅದರೊಡನೆ ಸ್ವಯಂ ಸೇವಕರ ಪಡೆಗೆ ಖುದಾಯಿ ಖಿದ್‌ಮತ್‌ಗಾರರನ್ನು ನೋಂದಾಯಿಸಿಕೊಳ್ಳುತ್ತಿದ್ದರು. ಎಲ್ಲ ಗ್ರಾಮಗಳಲ್ಲೂ, ಬುಡಕಟ್ಟು ವಸತಿಗಳಲ್ಲೂ ಈ ಏರ್ಪಾಡಾಯಿತು. ಬ್ರಿಟಿಷರ ಭಯ ಕರಗತೊಡಗಿತು. ಈ ಹಿಂದುಳಿದ ಅಗಾಧ ಜನಾಂಗದ ಆಸೆ ಆಕಾಂಕ್ಷೆಗಳೂ ಆತ್ಮವಿಶ್ವಾಸವೂ ಕ್ರಮೇಣ ಬೆಳೆದುನಿಂತಿತು.

ಮೂರು ತಿಂಗಳೊಳಗೇ ಸರ್ಕಾರದ ಕಟ್ಟಾಜ್ಞೆ ಜಾರಿಯಾಯಿತು. ಗಫಾರ್‌ಖಾನರಿಗೆ 'ನಿಮ್ಮ ಸಂಸ್ಥೆಗಳನ್ನು ಕೂಡಲೇ ವಿಸರ್ಜಿಸಿ' ಎಂದು ಪ್ರಧಾನಾಧಿಕಾರಿ ತಿಳಿಸಿದ. "ನಾನು ಮಾಡುತ್ತಿರುವುದು ಕೇವಲ ಸಮಾಜ ಸುಧಾರಣೆಯ ಕೆಲಸ. ಈ ಸೇವಾಕಾರ್ಯವನ್ನು ಸರ್ಕಾರವೇ ಮಾಡಬೇಕು. ಅದು ಅಸಡ್ಡೆ ಮಾಡಿರುವುದರಿಂದ ನಾವು ನಡೆಸಿದ್ದೇವೆ. ನೀವೇ ನಡೆ ಸಲು ಪ್ರಾರಂಭಿಸಿ" ಎಂದುತ್ತರಿಸಿದರು ಗಫಾರ್‌ಖಾನ್. ಸರ್ಕಾರದ ಕೋಪದ ಕಣ್ಣುಗಳಿಗೆ ಎಲ್ಲವೂ ಅವರ ವಿರುದ್ಧದ ಪ್ರತಿಭಟನೆಯಾಗಿಯೇ ಕಂಡಿತು. ಜನತೆಯಲ್ಲಿ ವಿಶ್ವಾಸವಮೂಡಿಸಲು ಅದು ವಿಫಲವಾಗಿತ್ತು.

೧೯೩೦ ರ ಏಪ್ರಿಲ್‌ನಲ್ಲಿ ರಾಷ್ಟ್ರೀಯ ಸತ್ಯಾಗ್ರಹದ ಮೊದಲ ಬಹಿರಂಗ ಸಭೆ ಉತ್‌ಮಾನ್‌ಜಾಯ್‌ನಲ್ಲಿ ನಡೆಯಿತು. ಆ ಸಭೆಯಲ್ಲಿ ಅಸಹಕಾರ ಚಳುವಳಿ ಘೋಷಿತವಾಯಿತು. ಅಲ್ಲಿಂದ ಪೆಷಾವರ್‌ಗೆ ಹೊರಟಾಗ ನಾಕಿ ಠಾಣಾ ಎಂಬಲ್ಲಿ ಗಫಾರ್‌ಖಾನರನ್ನು ದಸ್ತಗಿರಿ ಮಾಡಿ ದರು. ಆ ಇಡೀ ಊರೇ ಈ ಬಂಧನವನ್ನು ಪ್ರತಿಭಟಿಸಿ ಎಲ್ಲರೂ ಖುದಾಯಿ ಖಿದ್‌ಮತ್‌ಗಾರ್ ಪಡೆ ಸೇರಿದರು. ಇಡೀ ಪ್ರಾಂತದಲ್ಲಿ ಮಿಂಚಿನ ಸಂಚಾರವಾದಂತಾಯಿತು.

ಕಿಸ್ಸಾಖಾನಾಬಜಾರ್ ಎಂಬಲ್ಲಿ ಪ್ರಚಂಡ ಚಳುವಳಿ. ಅದನ್ನು ಅಡಗಿಸಲು ಶಸ್ತ್ರಸಜ್ಜಿತ ಕಾರುಗಳಲ್ಲಿ ಬ್ರಿಟಿಷ್ ಸೈನ್ಯ ಧಾವಿಸಿತು. ಹಿಂದೂಗಳು, ಮುಸಲ್ಮಾನರು, ಸಿಕ್ಕರು ಭುಜಕ್ಕೆ ಭುಜಕೊಟ್ಟು ನಿಂತರು. ಈ ನಿಶ್ಶಸ್ತ್ರ ಮಾನವಕೋಟಿಯ ಮೇಲೆ ನೇರವಾಗಿ ಸೈನ್ಯದ ವಾಹನಗಳು ನುಗ್ಗಿಬಿಟ್ಟವು. ಆ ದಾಳಿಗೆ ಸಿಕ್ಕಿ ನೂರಾರು ಜನ ನೆಲಕ್ಕುರುಳಿದು ಘಾಯಗೊಂಡರು. ಹಠಾತ್ತನೆ ಯಾರೋ ಕಾರುಗಳಿಗೆ ಬೆಂಕಿಯಿಟ್ಟು ಭಸ್ಮ ಮಾಡಿದರು. ಕೋಪಗೊಂಡ ಸೈನಿಕರು ಗುಂಡುಹಾರಿಸಿದರು. ನೂರಾರು ಜನ ಮಡಿಯಬೇಕಾಯಿತು. ಜನತೆಯ ನಿರ್ಧಾರ ಅಜೇಯವಾಗಿ ಎದ್ದು ನಿಂತು ಸಾವಿರಾರು ಜನ ಸೇರಿಬಿಟ್ಟರು. ದಂಡಿ ಯಾತ್ರೆ ಪ್ರಾರಂಭವಾಗಿ ಹನ್ನೊಂದು ದಿನಗಳಷ್ಟೇ ಆಗಿತ್ತು. ೨೩ ನೇ ಏಪ್ರಿಲ್ ಹಠಾತ್ತನೆ ಆ ಸೈನ್ಯ ಪಡೆಯ ಘರವಾಲಿ ಸೈನಿಕರು ತಮ್ಮ ದೇಶಬಾಂಧವರಾದ ನಿಶ್ಶಸ್ತ್ರ ಪಠಾಣರ ಮೇಲೆ ಗುಂಡು ಹಾರಿಸಲು ನಿರಾಕರಿಸಿಬಿಟ್ಟರು. ಬ್ರಿಟಿಷ್ ಸಾರ್ವಭೌಮರು ಹೌಹಾರಿದರು. ಆ ಘರ್‌ವಾಲಿ ಪಡೆಯನ್ನು ಸೇನಾ ನ್ಯಾಯಾಲಯದ ವಿಚಾರಣೆಗೆ ಗುರಿಮಾಡಿ ಮುಖಂಡರನ್ನು ಗಲ್ಲಿಗೇರಿಸಿದರು. ಇತರರಿಗೆ ಜೀವಾವಧಿ ಶಿಕ್ಷೆಯಾಯಿತು. ಈ ಪ್ರಕರಣ ಇಡೀ ದೇಶದಲ್ಲಿ ಅಗಾಧ ಪರಿಣಾಮ ಮಾಡಿಬಿಟ್ಟಿತು. ಅಲ್ಲಿ ಮಡಿದವರು ಬಲಿದಾನ ಸಮರೋತ್ಸಾಹವನ್ನು ಉಕ್ಕಿಸಿತು. ಚಾರ್‌ಸದ್ದಾದಲ್ಲಿ ಇನ್ನೂ ದೊಡ್ಡ ಸಮೂಹ ಸೇರಿಬಿಟ್ಟಿತು. ಅದೇ ಸಮಯಕ್ಕೆ ಡಾ. ಖಾನ್ ಸಾಹೇಬರು ಅಲ್ಲಿ ಬಂದು ಸಭೆಯಲ್ಲಿ ಮಾತನಾಡಿದರು. ಅತ್ಯಂತ ಶಾಂತ ರೀತಿಯ ಪ್ರದರ್ಶನದ ಮುಂದಾಳಾದರು. ನೂರಾರು ನಾಯಕರ ದಸ್ತಗಿರಿಯಾಗಿ ಶಾಬ್ಬರದ ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದರು. ಎಲ್ಲರಿಗೂ ಜೈಲು ಶಿಕ್ಷೆಗಳಾದವು. ಗಫಾರ್‌ಖಾನರನ್ನು ಪಂಜಾಬಿನಲ್ಲಿ ಗುಜರಾತ್ ಎಂಬ ಸ್ಥಳದ ಸೆರೆಮನೆಗೆ ಕಳುಹಿಸಿದರು. ಮೂರು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ದೇಶದ ಇತರೆಡೆಗಳಿಂದ ಅಲ್ಲಿಗೆ ಬಂದಿದ್ದ ನಾಯಕ ಶ್ರೇಷ್ಠರೊಡನೆ ಬಾದ್‌ಷಾಖಾನ್ ಬಂದಿಯಾದರು.

ಡಾ॥ ಅನ್ಸಾರಿ, ಡಾ॥ ಗೋಪಿಚಂದ್‌ಭಾರ್ಗವ, ಲಾಲಾಹನ್ಸ್‌ರಾಜ್ ಶ್ಯಾಮಲಾಲ್‌ಜಿ, ಇವರೆಲ್ಲ ಸೆರೆಯಲ್ಲಿದ್ದರು. ಜೈಲಿನಲ್ಲಿ ಹಿಂದೂಗಳಿಗೆ ಕೊರಾನ್ ಪರಿಚಯವನ್ನು ಗಫಾರ್‌ಖಾನರು ಮಾಡಿಕೊಟ್ಟರು. ಮುಸ್ಲಿಮ

ರಿಗೆ ಗೀತಾ ಪಾಠಗಳನ್ನು ಪಂಡಿತ್ ಜುಗತ್‌ರಾಮ್ ನಡೆಸಿದರು. ಡಾ॥ ಸೈಫುದ್ದೀನ್ ಕಿಚ್ಲೂ, ಜಫರ್‌ಅಲಿಖಾನರೇ ಮೊದಲಾದವರು ರಾಜಕೀಯ ವಿಚಾರಗೋಷ್ಠಿಗಳನ್ನು ನಡೆಸುತ್ತಿದ್ದರು. ಯಾರೂ ಮತ್ತೊಬ್ಬರ ಧಾರ್ಮಿಕ ವಿಧಿಗಳಿಗೆ ಯಾವ ಅಡ್ಡಿಯನ್ನೂ ಮಾಡುತ್ತಿರಲಿಲ್ಲ. ಎಲ್ಲರೂ ಪ್ರಾರ್ಥನೆಯಲ್ಲಿ ಒಟ್ಟಾಗುತ್ತಿದ್ದರು. ಒಟ್ಟಾಗಿ ಸಾಮೂಹಿಕ ಜೀವನದ ಜವಾಬ್ದಾರಿಗಳನ್ನು ಸಂತೋಷದಿಂದವಹಿಸಿಕೊಂಡು ನಿರ್ವಹಿಸುತ್ತಿದ್ದರು.

ಗಡಿನಾಡಿನ ಚಳುವಳಿಯನ್ನು ಹತ್ತಿಕ್ಕಲು ಸರ್ಕಾರ ವಿಶೇಷ ಪಡೆಗಳನ್ನು ಗೊತ್ತುಮಾಡಿತ್ತು. ದೇಶದ ಇತರೆಡೆಗಳಿಗೆ ಪಠಾಣರು ಹೋಗದಂತೆ ದಿಗ್ಬಂಧನ ಹಾಕಿದರು. ಹೊರಗಿನವರಿಗೆ ಪ್ರವೇಶ ತಡೆದರು. ಉತ್ತಮನ್‌ಜಾಯ್‌ನಲ್ಲಿ ಖುದಾಯಿ ಖಿದ್‌ಮತ್‌ಗಾರರ ಕೇಂದ್ರಗಳ ಮೇಲೆ ಧಾಳಿ ನಡೆಸಿ ನಾಶಮಾಡಿದರು. ಗಫಾರ್‌ಖಾನರ ಮಗ ವಲಿಖಾನ್‌ಗೆ ಆಗ ೧೪ ವರ್ಷ. ತನ್ನ ಶಾಲೆ ಮುಗಿಸಿ ಸ್ವಯಂಸೇವಕ ದಳದ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ. ಸೈನಿಕನೊಬ್ಬ ತನ್ನ ಬಂದೂಕದ ಮುಂದಿನ ಚೂರಿಯಿಂದ ಇರಿಯಲು ಹೋದಾಗ ಪಠಾಣನೊಬ್ಬ ಮಧ್ಯೆ ಬಂದು ತಾನು ಘಾಯಗೊಂಡು ವಲಿಖಾನ್‌ನನ್ನು ರಕ್ಷಿಸಿಕೊಂಡ. ಹಳ್ಳಿಹಳ್ಳಿಯಲ್ಲಿ ಕೆಂಪು ಅಂಗಿಯವರನ್ನು ಕಂಡೊಡನೆ ಹೊಡೆಯುತ್ತಿದ್ದುದರಿಂದ ಅಡವಿಗಳಲ್ಲಿ ಅಡಗಿಕೊಳ್ಳಬೇಕಾಯಿತು. ನಿರಪರಾಧಿಗಳನ್ನು ಹೊಡೆದು ಬಡಿದರು. ಜನ ಯಾವ ದಬ್ಬಾಳಿಕೆಗೂ ಜಗ್ಗಲಿಲ್ಲ. ಯಾವ ಭಯೋತ್ಪಾದನೆಗೂ ಮಣಿಯಲಿಲ್ಲ. ಸೈನಿಕರಿಗೆ ಹೆದರಿ ಕ್ಷಮಾಪಣೆ ಬೇಡಿ ಬಂದವರನ್ನು ಮನೆಯಲ್ಲಿನ ಮಹಿಳೆಯರು ಛೀಮಾರಿ ಹಾಕಿ ಹಿಂದಕ್ಕಟ್ಟುತ್ತಿದ್ದರೆಂಬ ಅನೇಕ ಘಟನೆಗಳನ್ನು ಗಫಾರ್‌ಖಾನರು ತಮ್ಮ ಆತ್ಮಕಥೆಯಲ್ಲಿ ಹೆಮ್ಮೆಯಿಂದ ನೆನೆದಿದ್ದಾರೆ. ದಿಗ್ಬಂಧನಗಳಿಂದ ಹೇಗೋ ತಪ್ಪಿಸಿಕೊಂಡ ಕೆಂಪು ಅಂಗಿಯವರು ಪಂಜಾಬು ದೆಹಲಿಗಳಿಗೆ ಹೋಗಿ ಈ ವೀರರ ಕಥೆಗಳನ್ನು ಹೇಳಿದಾಗ ಸಾವಿರಾರು ಸತ್ಯಾಗ್ರಹಿಗಳಿಗೆ ಅದು ಸ್ಫೂರ್ತಿ ನೀಡಿತು.

ಈವರೆವಿಗೆ ಖುದಾಯಿ ಖಿದ್‌ಮತ್‌ಗಾರರು ಯಾವ ರಾಜಕೀಯ ಪಕ್ಷಕ್ಕೂ ಸೇರಿರಲಿಲ್ಲ. ಸ್ವಾತಂತ್ರ್ಯ ಹೋರಾಟ ದಂಡಿ ಯಾತ್ರೆಯಿಂದ

ಪ್ರಟಗೊಂಡು ದೇಶವಲ್ಲೆಲ್ಲ ಕಾಂಗ್ರೆಸ್ ಸಂಸ್ಥೆ ಪ್ರಬಲವಾಗಿ ಬೇರೂರಿದಾಗ ಗಫಾರ್‌ಖಾನರ ಪ್ರತಿನಿಧಿಗಳು ರಾಷ್ಟ್ರ ನಾಯಕರೊಡನೆ ಸಂಪರ್ಕ ಬೆಳೆಸಿದರು. ಭಾರತದಲ್ಲಿ ಆಗ ಮುಸ್ಲಿಮ್ ಲೀಗ್ ಈ ಸಂಗ್ರಾಮದಿಂದ ದೂರಗಿದ್ದು ಬ್ರಿಟಿಷ್ ಸರ್ಕಾರದ ಧೋರಣೆಗಳನ್ನು ಸಮರ್ಥಿಸುತ್ತಿತ್ತು. ಅವರ ಸಾವಿರಾರು ಮುಸಲ್ಮಾನರು ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯರಾಗಿ ಹೋರಾಟದಲ್ಲಿ ಸೇರಿಕೊಂಡಿದ್ದರು. ಜವಹರಲಾಲರು, ಸುಭಾಷ್‌ಚಂದ್ರ ಬೋಸರು, ಮೌಲಾನ ಅಜಾದರು, ಡಾ॥ ಕಿಚ್ಲೂ ಮುಂತಾದ ಮಹಾಚೇತನಗಳ ಪ್ರಭಾವ ಅವರ ಮೇಲೆ ಅಗಾಧವಾಗಿ ಬಿದ್ದಿತ್ತು. ಮಹಾತ್ಮಾ ಗಾಂಧಿಯವರ ಬಗ್ಗೆ ಇದ್ದ ಅಪಾರ ಗೌರವಾದರಗಳು ಎಲ್ಲ ಧರ್ಮೀಯರನ್ನೂ ಈ ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ಒಟ್ಟುಗೂಡಿಸಿತು. ಖುದಾಯಿ ಖಿದ್ಮತ್‌ಗಾರರ ಸಾಹಸಪೂರ್ಣ ಚಳುವಳಿಗಳ ವರದಿಗಳನ್ನೂ ಅವರ ರಾಷ್ಟ್ರ ನಿಷ್ಠೆಯನ್ನೂ ಗಮನಿಸಿ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರುವಂತೆ ನಾಯಕರು ಆಹ್ವಾನಿಸಿದರು. ಗಫಾರ್‌ಖಾನರಂತೂ ಆ ವೇಳೆಗೆ ಪೂರ್ಣ ರಾಷ್ಟ್ರೀಯತೆಯ ಪ್ರತೀಕವಾಗಿದ್ದರು. ಗಡಿನಾಡಿನ 'ಜಿರ್ಗಾ' ಗಳೆಲ್ಲವೂ ಕಾಂಗ್ರೆಸ್ ಸಮಿತಿಗಳಾಗಿ ಪರಿವರ್ತಿತವಾದವು. ಬ್ರಿಟಿಷ್ ಸರ್ಕಾರಕ್ಕೆ ಜಂಗಾಬಲವೇ ಉಡುಗಿಹೋಯಿತು. ಪರದೇಶದ ಧಾಳಿಗಳಿಗೆ ಆಯಕಟ್ಟಿನ ಪ್ರದೇಶವಾಗಿದ್ದ ಗಡಿನಾಡಿನಲ್ಲಿ ತಮ್ಮ ಬಲ ಕುಂದಿದರೆ ಅಪಾಯವೆನಿಸಿ ಪ್ರಬಲವಾದ ಸೈನ್ಯವನ್ನು ಅಲ್ಲಿಗೆ ಕಳುಹಿಸಿದರು. ಸಾವಿರಾರು ದೇಶಭಕ್ತರು ಅವರ ಕ್ರೂರ ಧಾಳಿಗಳಿಗೆ ಬಲಿಯಾದರು.

ಸರ್ಕಾರ ಈ ಪ್ರಾಂತದ ನಾಯಕರಿಗೆ ಆಮಿಷಗಳನ್ನೊಡ್ಡಿತು. ಹಿಂದೂ, ಮುಸ್ಲಿಮ, ಸಿಖ್ಖರನ್ನು ಪ್ರತ್ಯೇಕಿಸಲು ಪ್ರಯತ್ನಿಸಿತು. ಹೊಸ ಸುಧಾರಣೆಗಳ ಭರವಸೆಗಳನ್ನು ಆಗಾಗ ನೀಡುತ್ತಿತ್ತು. ಆದರೆ ಗಫಾರ್‌ಖಾನರಲ್ಲಿ ಅವರೆಲ್ಲರಿಗಿದ್ದ ನಿಶ್ಚಲ ಸ್ವಾಮಿಭಕ್ತಿ ಮತ್ತು ದೇಶ ಸ್ವಾತಂತ್ರ್ಯದಲ್ಲಿನ ನಿಷ್ಠೆ ಈ ವ್ಯಾಮೋಹಗಳನ್ನೆಲ್ಲ ಮೆಟ್ಟಿ ನಿಂತಿತು. ಮುಸ್ಲಿಮ್ ಲೀಗಾಗಲಿ ಬೇರಾವ ಗುಂಪಾಗಲಿ ಅಲ್ಲಿ ತನ್ನ ತಳವೂರಲು ಸಾಧ್ಯವಾಗಲೇಯಿಲ್ಲ.

ಸೈನ್ಯದ ಧಾಳಿಗಳು ತೀವ್ರವಾದವು. ಮುಖಂಡರ ಆಸ್ತಿಪಾಸ್ತಿ

ಗಳನ್ನು ಮುಟ್ಟುಗೋಲುಹಾಕಿ ಕಸಿದುಕೊಂಡರು. ಮನೆಗಳಿಗೆ ಬೆಂಕಿ ಹಚ್ಚಿದರು. ಬನ್ನು ಎಂಬ ಊರಿನಲ್ಲಿ ಅತ್ಯಂತ ದೊಡ್ಡ ಮೆರವಣಿಗೆ ನಡೆದಾಗ ಊರಿನ ಎಲ್ಲ ರಸ್ತೆಗಳನ್ನೂ ಮುಚ್ಚಿ ಯಾವ ಪದಾರ್ಥವೂ ಊರಿನೊಳಗೆ ಬರದಂತೆ ತಡೆದರು. ಆದರೆ ಸುತ್ತಮುತ್ತಲಿನ ಗುಡ್ಡಗಾಡು ಜನ ಕಾಲುದಾರಿಗಳಲ್ಲಿ ಕಡಿದಾದ ಬೆಟ್ಟಗಳನ್ನೇರಿ ತಲೆಯ ಮೇಲೆ ಧಾನ್ಯ ಮೂಟೆಗಳನ್ನು ಹೊತ್ತು ಸತ್ಯಾಗ್ರಹಿಗಳಿಗೆ ಒದಗಿಸುತ್ತಿದ್ದರು. ಸೈನ್ಯದ ವಾಹನಗಳಿಗೆ ಅವರ ಸುಳಿವೇ ತಿಳಿಯುತ್ತಿರಲಿಲ್ಲ. ಮಲ್ಲಿಕ್ ಅಕ್ಬರ್ ಖಾನ್ ಎಂಬ ಬನ್ನುವಿನ ಯುವಕ ಮುಂದಾಳು ಅತ್ಯಂತ ಧೈರ್ಯ ಸಾಹಸಗಳಿಂದ ಈ ದಬ್ಬಾಳಿಕೆಗಳನ್ನು ಎದುರಿಸಿದ ಕಥೆ ರೋಮಾಂಚಕಾರಿಯಾಯಿತು.

೧೯೩೧ ರಲ್ಲಿ ಗಾಂಧಿ - ಇರ್ವಿನ್ ಒಪ್ಪಂದವಾಗಿ ಗಾಂಧೀಜಿ ಸತ್ಯಾಗ್ರಹವನ್ನು ನಿಲ್ಲಿಸಿದರು. ದುಂಡು ಮೇಜಿನ ಪರಿಷತ್ತಿಗೆ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಹೋದರು. ವಾಸ್ತವವಾಗಿ ಭಾರತದ ಜನಕೋಟಿಯ ಪ್ರತಿನಿಧಿಯಾಗಿದ್ದವರು ಅವರೊಬ್ಬರೇ. ಬ್ರಿಟಿಷರ ಕುಟಿಲ ರಾಜನೀತಿ ದೇಶದ ಇತರ ನಾಯಕರನ್ನು ಪ್ರತ್ಯೇಕಿಸಿ ಅವರವರ ಸಂಕುಚಿತ ಬೇಡಿಕೆಗಳನ್ನು ಹಿಗ್ಗಿಸಿ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರಶ್ನೆಯನ್ನೇ ಮುಂದೂಡಿಬಿಟ್ಟಿತು. ಗಾಂಧೀಜಿ ಬರಿಗೈಯಲ್ಲಿ ಭಾರತಕ್ಕೆ ಹಿಂತಿರುಗಿದರು.

ಒಪ್ಪಂದವಾಗಿ ಶಾಂತಿ ಘೋಷಣೆ ಆದಮೇಲೂ ಗಡಿನಾಡಿನ ಮೇಲಿನ ವಕ್ರದೃಷ್ಟಿ ಅಲ್ಲಿನ ಉನ್ನತಾಧಿಕಾರಿಗಳಿಗೆ ಕಡಿಮೆಯಾಗಲೇ ಇಲ್ಲ. ಹದಿನೈದು ವರ್ಷಗಳ ಹೋರಾಟ ನಡೆಸಿದ್ದರೂ ಗಫಾರ್ ಖಾನರು ಬ್ರಿಟಿಷ್ ಜನರನ್ನು ಎಂದೂ ದ್ವೇಷಿಸಲಿಲ್ಲ. ತಮ್ಮ ಅನುಯಾಯಿಗಳಿಗೆ ಸತತವಾಗಿ ಅಹಿಂಸೆಯ ಪಾಠ ಕಲಿಸಿದರು. ಸತ್ಯಾಗ್ರಹದ ರೀತಿ ನೀತಿಗಳನ್ನು ಮನನ ಮಾಡಿಸಿದರು. ಪ್ರೇಮದಿಂದಲೇ ಹೃದಯಗಳನ್ನು ಗೆಲ್ಲುವ ಕಲೆ ಶಸ್ತ್ರ ವಿದ್ಯೆಗಿಂತ ಸಾವಿರ ಪಾಲು ಮೇಲು ಎಂದು ಆ ದಿಟ್ಟ ವೀರರಿಗೆ ಬೋಧಿಸಿ ಪರಿವರ್ತಿಸುತ್ತಲೇ ಇದ್ದರು. ರಾಬರ್ಟ್ ಬರ್ನಿಸ್ ಎಂಬ ಇಂಗ್ಲಿಷ್ ಬರಹಗಾರ ಆ ಕಾಲಕ್ಕೆ ಈ ಗಡಿನಾಡು ಗಾಂಧಿಯನ್ನು ಸಂದರ್ಶಿಸಿ ಹೀಗೆ ಬರೆದಿದ್ದಾನೆ:–

"ಕ್ರಿಸ್ತನ ಪ್ರಾಚೀನ ಚಿತ್ರವನ್ನು ನೆನಪಿಗೆ ತರುತ್ತಿದ್ದ ಈ ಸಂತವೀರ ನನಗೆ ವಿನಯನೇ ರೂಪತಾಳಿದಂತೆ ಕಂಡ. ಕರುಣೆ ಮತ್ತು ಮೃದು ನಡೆವಳಿಕೆಗಳಿಂದ ಪ್ರೀತಿಪಾತ್ರನಾಗಿದ್ದ ಈತನನ್ನು ವಿಧ್ವಂಸಕ ಕ್ರಾಂತಿಕಾರ ಎನ್ನುವುದೇ ಅಸಂಗತ".

ಹರಿದು ಹಂಚಿಹೋಗಿದ್ದ ಗುಡ್ಡಗಾಡು ಜನಾಂಗಗಳಲ್ಲಿ ಅಪೂರ್ವ ಜಾಗೃತಿಯುಂಟಾಗುತ್ತಿತ್ತು. ಗಫಾರ್‌ಖಾನರ ಅವಿಶ್ರಾಂತ ಸಂಘಟನೆಯಿಂದ ಫಕ್ತೂನ್ ಪ್ರದೇಶವೆಲ್ಲ ಒಂದುಗೂಡುತ್ತಿತ್ತು. ಗಡಿನಾಡು ಪ್ರಾಂತ ಒಂದು ವಿಶಾಲ ಸಮೃದ್ಧ ಸಂಘಟಿತ ರಾಜ್ಯವಾಗಬೇಕೆಂಬ ಹಂಬಲ ಆ ಗಿರಿಜನ ವಸತಿಗಳ ಮುಖಂಡರಲ್ಲಿ ಅಂಕುರವಾಗಿತ್ತು. ಆ ಕಾರಣಕ್ಕಾಗಿ ಗಡಿನಾಡು ರಕ್ಷಣೆಯ ಹೆಸರಿನಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಎಂಟು ವಿವಿಧ ಆಡಳಿತ ಘಟಕಗಳನ್ನಾಗಿ ಒಡೆದರು. ಒಂದೊಂದಕ್ಕೂ ರಾಜಕೀಯ ಏಜೆಂಟು ಗಳನ್ನು ನೇಮಿಸಿದರು. ಗಫಾರ್‌ಖಾನರು ವಾಸಿಸುತ್ತಿದ್ದ ಭಾಗ ಮಾತ್ರ ಒಂದು ಚಿಕ್ಕ ಪ್ರಾಂತವಾಗಿತ್ತು. ರಾಜ್ಯಪಾಲರ ಪ್ರಾಂತ ಎಂದು ಕರೆದು ದೆಹಲಿಯಿಂದ ಅಧಿಕಾರ ನಡೆಯುತ್ತಿದ್ದ ರಾಜ್ಯ ಇದೊಂದೇ. ಮಿಕ್ಕವುಗಳಿಗೆ ಯಾವ ರಾಜ್ಯಾಂಗಬದ್ಧ ಸ್ಥಾನಮಾನಗಳೂ ಇರಲೇ ಇಲ್ಲ. ಬಡತನದ ಬೇಗೆಯಿಂದ ಬೇಯುತ್ತ ಹಿಂದುಳಿಯುತ್ತಲೇ ಬಂದ ಈ ಜನಾಂಗವನ್ನು ಸುಧಾರಿಸಿ ಗೌರವಯುತ ಸ್ವಯಮಾಡಳಿತ ಘಟಕವನ್ನಾಗಿ ಪರಿವರ್ತಿಸ ಬೇಕೆಂದು ಗಫಾರ್‌ಖಾನರು ದುಡಿಯುತ್ತಿದ್ದರು. ಅವರ ಹೃದಯದ ಆಳವಾದ ಆಕಾಂಕ್ಷೆಗಳನ್ನು ಆತ್ಮಕಥೆಯಲ್ಲಿ ತೋಡಿಕೊಳ್ಳುತ್ತಾ ಹೀಗೆ ಬರೆದಿದ್ದಾರೆ :-

" ಈ ಗಡಿನಾಡು ಗಿರಿಜನರ ತುಂಬು ಪ್ರೇಮ, ಅವರಿಗೆ ನನ್ನಲ್ಲಿದ್ದ ಸ್ವಾಮಿಭಕ್ತಿ, ನನಗಾಗಿ ಅವರು ಮಾಡಿದ ತ್ಯಾಗ ನನ್ನ ಜೀವನದ ಅಮೂಲ್ಯ ನಿಧಿ. ಈ ಮುಗ್ಧ ವೀರರನ್ನು ವಿದೇಶೀಯರು ಸ್ವಾರ್ಥಕ್ಕಾಗಿ ಬಳಸಿಕೊಂಡು ಅವರನ್ನು ಅಜ್ಞಾನದ, ದಾರಿದ್ರ್ಯದ ಅವನತಿಗೆ ತಳ್ಳು ತ್ತಲೇ ಇದ್ದಾರೆ. ಅವರ ಬಗ್ಗೆ ಕುತ್ಸಿತವೂ ಅಸತ್ಯವೂ ಆದ ವಿವರಣೆ ಗಳನ್ನು ಪ್ರಚಾರ ಮಾಡಿದ್ದಾರೆ. ಅನಾಗರೀಕ, ಬರ್ಬರ ಜನಾಂಗ ಎಂದು ಸಾರಿದ್ದಾರೆ. ಹೀನವಾಗಿ ನಡೆಸಿಕೊಂಡಿದ್ದಾರೆ. ಇಂಥ ಅವಮಾನಕರ ಸ್ಥಿತಿ

ಯನ್ನು ಯಾವ ಸ್ಪಂದನಶೀಲ ಮಾನವ ಸಹಿಸಿಕೊಳ್ಳಲಾದೀತು! ಫಕ್ತೂನ್ ಜನಾಂಗದ ಸ್ವಾತಂತ್ರ್ಯಪ್ರಿಯತೆಯನ್ನು, ಧೈರ್ಯ ಸಾಹಸಗಳನ್ನು ಹತ್ತಿಕ್ಕಿ ಅವರನ್ನು ದಂಗೆಕೋರರೆಂದು ಸದೆಬಡಿದಿದ್ದಾರೆ. ಹಲವು ಶತಮಾನಗಳ ಅಂಧಕಾರ ಕವಿಯುವಂತಾಗಿದೆ. ಮೊಗಲರಿಂದ ಹಿಡಿದು ಬ್ರಿಟಿಷ್ ಮತ್ತು ಈಗ ಪಾಕಿಸ್ತಾನದ ಸಾಮ್ರಾಜ್ಯಶಾಹೀ ತುಳಿತಕ್ಕೆ ಸಿಕ್ಕಿ ಅತ್ಯಂತ ಪ್ರಾಚೀನತಮ ಸುಸಂಸ್ಕೃತ ಸಮಾಜವೊಂದು ನಲುಗಿ ನಾಶವಾಗುತ್ತಿರುವುದನ್ನು ನೋಡಿ ನನ್ನ ಹೃದಯ ಬಿರಿಯುತ್ತಿದೆ. ಈ ಸೌಮ್ಯಸ್ವಭಾವದ ವಿನಯಶೀಲ ಪ್ರಾಮಾಣಿಕ ಜನಸಮುದಾಯಕ್ಕೆ ಒಂದು ಸುಂದರ ಪ್ರಗತಿಶೀಲ ಸ್ವರಾಜ್ಯವನ್ನು ನಿರ್ಮಿಸುವುದೇ ನನ್ನ ಜೀವನದ ಪರಮಗುರಿ.”

೧೯೩೧ ರಲ್ಲಿ ದೇಶದ ಇತರ ಎಲ್ಲ ನಾಯಕರು ಬಿಡುಗಡೆಯಾದರೂ ಗಫಾರ್‌ಖಾನರನ್ನು ಸೆರೆಮನೆಯಿಂದ ಬಿಡಲೇ ಇಲ್ಲ. ಗಾಂಧೀಜಿ ಕುಪಿತರಾಗಿ ವೈಸ್‌ರಾಯರಿಗೆ ಬರೆದರು. “ಪಠಾಣರು ಎಂತಹ ಅಹಿಂಸಾವಾದಿಗಳು?” ಎಂದು ವೈಸರಾಯರು ಪ್ರಶ್ನಿಸಿದಾಗ ಗಾಂಧೀಜಿ, “ನಿಮಗೆ ಬಂದಿರುವ ವರದಿಗಳು ಅಸತ್ಯ. ನೀವೇ ಅವರಲ್ಲಿಗೆ ಹೋದರೆ ತಿಳಿದೀತು” ಎಂದರು. ವೈಸ್‌ರಾಯರು ಈ ಮಾತಿಗೆ ಬೆಲೆಕೊಟ್ಟು ಗಫಾರ್‌ಖಾನರನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಿದರು. ಮುಂದೆ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಸಮಿತಿ ಅಧಿವೇಶನಕ್ಕೆ ದೊಡ್ಡ ಸಂಖ್ಯೆಯ ಖುದಾಯಿ ಖಿದ್‌ಮತ್‌ಗಾರರ ಪಡೆ ಕೆಂಪು ಸಮವಸ್ತ್ರಗಳನ್ನು ಧರಿಸಿ ಗಫಾರ್‌ಖಾನರ ನೇತೃತ್ವದಲ್ಲಿ ಎಲ್ಲರ ಆಕರ್ಷಣೆಗೂ ಪಾತ್ರರಾಗಿ ಸ್ವಯಂಸೇವೆ ದಳವಾದರು. ಗಾಂಧೀಜಿ ಮತ್ತು ಜವಹರಲಾಲರ ನಿಕಟ ಸಂಪರ್ಕಕ್ಕೂ ಬಂದು ತಮ್ಮ ಅಹಿಂಸಾ ವ್ರತದೀಕ್ಷೆಯನ್ನು ಸುಭದ್ರಪಡಿಸಿಕೊಂಡರು.

೧೮. ಅಹಿಂಸೆಯ ಮೀಮಾಂಸೆ

ಗಡಿನಾಡು ಪ್ರಾಂತದಲ್ಲಿ ಸ್ವಾತಂತ್ರ್ಯಕ್ಕಾಗಿ ಹಲವು ದಶಕಗಳ ಹೋರಾಟ ನಡೆದಿತ್ತು. ಖುದಾಯಿ ಖಿದ್‌ಮತ್‌ಗಾರ್ ಚಳುವಳಿ ಪ್ರಾರಂಭವಾಗುವುದಕ್ಕೆ ಮುಂಚೆಯೇ ಐವತ್ತು ವರ್ಷಗಳಿಗೂ ಮೀರಿ ರಕ್ತಕ್ರಾಂತಿಯ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಕ್ರೌರ್ಯ, ಸೇಡು, ಹಿಂಸಾಚಾರ ಇವುಗಳಲ್ಲಿ ತೊಡಗಲು ಪಠಾಣರು ಹಿಂಜರಿಯುತ್ತಿರಲಿಲ್ಲ. ಮೊದಲು ಕತ್ತಿ ಭರ್ಜಿಗಳಂತಹ ಶಸ್ತ್ರಗಳನ್ನುಪಯೋಗಿಸಿದರು. ನಂತರ ಬಂದೂಕಗಳು ಅವರ ಎಡಬಿಡದ ಉಪಕರಣವಾಯಿತು. ಸಣ್ಣ ಸಣ್ಣ ವಸತಿಗಳಲ್ಲಿ ಅರಣ್ಯ ಮತ್ತು ಗುಡ್ಡಗಳ ಆಶ್ರಯದಲ್ಲೇ ಬೆಳೆಯುತ್ತಿದ್ದ ಯುವ ಪಠಾಣರು ಸ್ವಭಾವತಃ ಸ್ವಾತಂತ್ರ್ಯ ಪ್ರಿಯರು. ಬ್ರಿಟಿಷರ ಆಡಳಿತವನ್ನು ಅಂಗೀಕರಿಸಲು ನಿರಾಕರಿಸಿ ದಂಗೆಯೇಳುತ್ತಿದ್ದರು. ಸಿಕ್ಕ ಸಿಕ್ಕ ಕಡೆ ಅಧಿಕಾರಿಗಳನ್ನು ಖೂನಿಮಾಡಿದರು. ಸೈನ್ಯಗಳು ಬೀಡುಬಿಟ್ಟಾಗ ಅವುಗಳ ಮೇಲೆ ಧಾಳಿ ಮಾಡಿ ಧ್ವಂಸಮಾಡಲು ಆವೇಶದಿಂದ ನುಗ್ಗುತ್ತಿದ್ದರು. ಆದರೆ ಹೆಚ್ಚು ಸುಸಜ್ಜಿತವಾದ, ಹೆಚ್ಚು ಶಸ್ತ್ರಬಲವುಳ್ಳ ಬ್ರಿಟಿಷ್ ಸೈನಿಕರ ಎದುರಿನಲ್ಲಿ ಪಠಾಣರ ವಿಧ್ವಂಸಕ ದಂಗೆಗಳು ವಿಫಲವಾಗುತ್ತಿದ್ದವು. ಒಂದೊಂದು ಸಾರಿಯೂ ವಿದೇಶೀಯ ಸೈನ್ಯಾಧಿಕಾರಿಗಳು ಅತಿಕ್ರೂರವಾಗಿ ಹಳ್ಳಿಹಳ್ಳಿಗಳನ್ನೇ ನಾಶಮಾಡಿಬಿಡುತ್ತಿದ್ದರು. ಹಿಂಸಾಚಾರದಲ್ಲಿ ತೊಡಗಿದವರು ತಪ್ಪಿಸಿಕೊಂಡು ಓಡುತ್ತಿದ್ದರು. ಆದರೆ ನಿರಪರಾಧಿಗಳಾದ ಗ್ರಾಮಸ್ಥರೂ ಮಹಿಳೆಯರೂ ಮಕ್ಕಳೂ ಸೈನಿಕರ ಧಾಳಿಗಳಿಗೆ ಬಲಿಯಾಗುತ್ತಿದ್ದರು. ಎಲ್ಲೆಲ್ಲೂ ದ್ವೇಷದ ಕಿಚ್ಚು ಹರಡುತ್ತಿತ್ತು. ಬಂಡಾಯಗಾರರು ಹೇಡಿಗಳಾಗುತ್ತಿದ್ದರು. ಕಪಟ, ವಂಚನೆ, ದರೋಡೆ, ಖೂನಿ, ದೇಶಭ್ರಷ್ಟತೆ, ಎಲ್ಲವೂ ಸೇರಿಕೊಂಡ ವಿಷವ್ಯೂಹದಲ್ಲಿ ಮಾನವ ಒಂದು ಕ್ರೂರ ಮೃಗವಾ

ಬಿಡುತ್ತಿದ್ದ. ಇಂಥ ಪರಿಸರದಲ್ಲಿ ಯಾವ ಪ್ರಗತಿಯೂ ಸಾಧ್ಯವಾಗುತ್ತಿರ
ಲಿಲ್ಲ. ಸ್ವಾತಂತ್ರ್ಯವಂತೂ ಮರೀಚಿಕೆಯಂತೆ ಓಡುತ್ತಿತ್ತು. ನಿರಾಸೆಯಿಂದ
ಕಂಗಾಲಾಗಿ ಉತ್ಸಾಹಿ ಯುವಕರು ಪಶ್ಚಾತ್ತಾಪದಿಂದ ಕಂಗೆಟ್ಟು ಹೋಗಿ
ದ್ದರು. ಖಾನ್ ಅಬ್ದುಲ್‌ಗಫಾರ್‌ಖಾನರಿಗೆ ಇವೆಲ್ಲದರ ಘೋರ ಚಿತ್ರ
ಆಗಾಗ್ಗೆ ಕಣ್ಣಿಗೆ ಕಟ್ಟುತ್ತಿತ್ತು. ಆಳವಾಗಿ ಚಿಂತಿಸುತ್ತಿದ್ದರು. ಕರುಣಾ
ಮಯನೂ ಪ್ರೇಮಸ್ವರೂಪಿಯೂ ಜಗದ್ರಕ್ಷಕನೂ ಆದ ಅಲ್ಲಾನಲ್ಲಿ ಖಾನ
ರಿಗೆ ಅಸಾಧಾರಣ ಭಕ್ತಿ. ಪ್ರವಾದಿ ಮಹಮ್ಮದರ ಉಪದೇಶಗಳಲ್ಲಿ ಈ
ಗುಣಗಳನ್ನು ಮೈಗೂಡಿಸಿಕೊಳ್ಳುವುದೇ ಮುಖ್ಯಗುರಿ ಎಂದೆನಿಸಿತು.
ಇಸ್ಲಾಮ್ ಧರ್ಮ ಎಂದಿಗೂ ಈ ಕ್ರೂರ ಮಾನವತೆಯನ್ನು ಎತ್ತಿಹಿಡಿ
ಯಲಾರದು ಎಂದು ಮನದಟ್ಟಾಯಿತು. ನಿಜವಾದ ಆಧ್ಯಾತ್ಮಿಕತೆಗೂ
ಹಿಂಸೆಗೂ ಯಾವ ನಂಟೂ ಇರಲು ಸಾಧ್ಯವೇ ಇಲ್ಲ ಎಂದುಕೊಂಡರು.
ಸುಸಂಸ್ಕೃತಿಯ ಬುನಾದಿಯೇ ಅಹಿಂಸೆ, ಪ್ರೇಮ, ಸತ್ಯನಿಷ್ಠೆ, ಪರೋಪ
ಕಾರ ಎಂದು ಖುರಾನ್ ಬೋಧಿಸುತ್ತಿರುವಾಗ ಹಿಂಸಾಮೂಲದಿಂದ ಯಾವ
ಮಾನವ ಮೌಲ್ಯಗಳನ್ನು ಉದ್ಧರಿಸಲಾದೀತು ಎಂದು ತಾವೇ ಪ್ರಶ್ನಿಸಿ
ಕೊಂಡರು. ಸಾಧು ಸತ್ಪುರುಷರ ದಾರಿಯೇ ಸರಿ ಎನಿಸಿತು. ಮಾನವ
ಸಮಾಜದ ಎಲ್ಲ ವ್ಯವಹಾರಗಳಲ್ಲೂ ಸತ್ಯನಿಷ್ಠವಾಗಿ, ಪ್ರಾಮಾಣಿಕವಾಗಿ,
ಪ್ರೇಮಭರಿತರಾಗಿ ನಡೆದುಕೊಳ್ಳುವುದೇ ಧರ್ಮದ ತಿರುಳು ಎಂಬ ಮಾತು
ಗಾಂಧೀಜಿಯ ಜೀವನಕ್ರಮದಿಂದ, ಅವರ ಸತ್ಯಾಗ್ರಹ ಮಾರ್ಗಗಳಿಂದ
ಬಾದ್‌ಷಾಖಾನರಿಗೆ ದೃಢವಾಯಿತು. ಅಂತೆಯೇ ೧೯೨೦ರಲ್ಲಿ ಶಸ್ತ್ರಬಲ
ವನ್ನೆಲ್ಲ ಸಂಪೂರ್ಣವಾಗಿ ತ್ಯಜಿಸಿ ಅಹಿಂಸಾಧರ್ಮದ ಪ್ರತಿಪಾದಕರಾದರು.
ಇತರರಲ್ಲಿ ಶ್ರದ್ಧೆ ಮೂಡಿಸಿದರು. ಸಹಸ್ರಾರು ಯುವ ಪಠಾಣರನ್ನಾ
ಕರ್ಷಿಸಿ ತಮ್ಮ ಸ್ವಂತ ನಡೆನುಡಿಗಳ ಮೂಲಕ ಒಂದು ಅಮೋಘ ಜೀವನ
ದರ್ಶನವನ್ನು ರೂಪಿಸಿಕೊಟ್ಟರು. ಅದರ ಪ್ರತಿಬಿಂಬವೇ ಖುದಾಯಿಖಿದ್
ಮತ್‌ಗಾರ್ ಚಳುವಳಿ. ಈಶ್ವರ ಸೇವಕರ ಶಾಂತಿಯುತ ಕ್ರಾಂತಿಪಥ.

ಈ ಚಳುವಳಿ ಕೇವಲ ರಾಜಕೀಯ ಉದ್ದೇಶಗಳಿಗಾಗಿ ಪ್ರಾರಂಭ
ವಾಗಲಿಲ್ಲ. ಪ್ರಧಾನವಾಗಿ ಪಠಾಣ ಜನಾಂಗದ ಆಧ್ಯಾತ್ಮಿಕ ಉನ್ನತಿ
ಸಾಧಿಸಲು ನೆರವಾಗಬೇಕೆಂದೇ ಖಾನರ ಉದ್ದೇಶವಾಗಿತ್ತು. ಪ್ರೇಮ
ಮತ್ತು ಭ್ರಾತೃತ್ವ, ಕರ್ತವ್ಯ ಪ್ರಜ್ಞೆ ಮತ್ತು ಐಕ್ಯಭಾವನೆ, ಸ್ವಾಭಿಮಾನ

ಮತ್ತು ದೇಶಪ್ರೇಮ ಇವೆಲ್ಲ ಗುಣಗಳಿಗೆ ಪ್ರೇರಕ ಶಕ್ತಿಯೇ ಆಧ್ಯಾತ್ಮಿಕತೆ. ಇಸ್ಲಾಮ್ ಧರ್ಮದ ಬೋಧೆಯೂ ಇದನ್ನೇ ತಿಳಿಯಹೇಳುತ್ತದೆ. ನಿಜವಾದ ಮುಸ್ಲಿಮನಾದವನು ಅಹಿಂಸಾವಾದಿಯೂ ದೇಶಪ್ರೇಮಿಯೂ ಆಗಿರಬೇಕೆಂದು ಚಳುವಳಿಯ ಧ್ಯೇಯವಾಯಿತು.

ಪಠಾಣಯೋಧ ಅಹಿಂಸಾವಾದಿಯಾದರೆ ಸಾಧಾರಣ ಪಠಾಣ ಸೈನಿಕನಿಗಿಂತ ಹೆಚ್ಚು ಅಪಾಯಕಾರಿ ಎಂದು ಬ್ರಿಟಿಷ್‌ರು ತಿಳಿದರು. ಗಫಾರ್‌ಖಾನರ ಚಲನವಲನಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳದ ಅನೇಕ ಇಂಗ್ಲಿಷ್ ಸೈನ್ಯಾಧಿಕಾರಿಗಳು ಈ ಸತ್ಯಾಗ್ರಹಿಯನ್ನು ನಿರ್ನಾಮ ಮಾಡಿಬಿಡಬಹುದೆಂದು ಭಾವಿಸಿದ್ದರು. ಆದರೆ ನೈತಿಕಶಕ್ತಿ ಒಂದು ಜನಾಂಗವನ್ನು ಹೇಗೆ ಅಜೇಯವೂ ಅಪ್ರತಿಹತವೂ ಆದ ಸಮಾಜವನ್ನಾಗಿ ಪರಿವರ್ತಿಸಬಲ್ಲದು ಎಂದು ದಿನದಿನದ ಅನುಭವಗಳಿಂದ ಆಳರಸರಿಗೆ ಸ್ಪಷ್ಟವಾಗುತ್ತಿತ್ತು. ಎಷ್ಟೋ ವೇಳೆ ಉದ್ದೇಶಪೂರ್ವಕವಾಗಿ ಖುದಾಯಿ ಖಿದ್‌ಮತ್‌ಗಾರರನ್ನು ಪ್ರಚೋದಿಸಿ ಉದ್ರೇಕಗೊಳಿಸಿ ಹಿಂಸಾಚಾರಕ್ಕೆ ಪ್ರೇರಣೆ ಕೊಟ್ಟಾಗಲೂ ಈ ವೀರಯೋಧರು ಶಾಂತರಾಗಿಯೇ ಎಲ್ಲ ದಬ್ಬಾಳಿಕೆಯನ್ನೂ ಎದುರಿಸುತ್ತಿದ್ದರು. ಕ್ರೂರ ಹಿಂಸೆಯ ಎದುರು ಎಂದೂ ಪ್ರತಿಹಿಂಸೆಗೆ ಕೈಹಾಕಲಿಲ್ಲ. ಗಫಾರ್‌ಖಾನರ ಪ್ರಭಾವದಿಂದ ಇಂಥ ಅಗಾಧ ಬದಲಾವಣೆ ಒಂದು ಪವಾಡದಂತೆ ಆಗಿತ್ತು.

ಸೆರೆಮನೆ ಸೇರಿದ ಮೇಲೆ ಒಬ್ಬ ಆದರ್ಶ ಸತ್ಯಾಗ್ರಹಿ ಹೇಗೆ ಅತ್ಯಂತ ಪ್ರಾಮಾಣಿಕವಾಗಿ ಅಲ್ಲಿನ ನೀತಿ ನಿಯಮಗಳಂತೆ ನಡೆದುಕೊಳ್ಳಬೇಕು ಎಂಬುದನ್ನು ಖಾನ್‌ಅಬ್ದುಲ್‌ಗಫಾರ್‌ಖಾನರು ತಾವೇ ನಡೆದು ತೋರಿಸಿದರು. ೧೯೩೧ ರಲ್ಲಿ ಗಾಂಧೀ ಇರ್ವಿನ್ ಒಪ್ಪಂದವಾದ ಮೇಲೂ ಗಡಿನಾಡಿನಲ್ಲಿ ದಬ್ಬಾಳಿಕೆ ನಿಲ್ಲಲೇ ಇಲ್ಲ. ಕ್ಷುಲ್ಲಕ ಕಾರಣಗಳನ್ನೊಡ್ಡಿ ಖಾನ್ ಸಹೋದರರನ್ನು ಬಂಧಿಸಿ ಶಿಕ್ಷಿಸುತ್ತಿದ್ದರು.

ಸಾಧಾರಣ ಖುದಾಯಿ ಖಿದ್‌ಮತ್‌ಗಾರರಿಗಂತೂ ಚಿತ್ರಹಿಂಸೆ ಕೊಡುತ್ತಿದ್ದರು. ಒಮ್ಮೆ ಇದ್ದಕ್ಕಿದ್ದಂತೆ ಭೂಕಂದಾಯಗಳನ್ನು ಅಗಾಧವಾಗಿ ಏರಿಸಿಬಿಟ್ಟರು. ಅನೇಕರಿಗೆ ವಿಪರೀತ ಹೊರೆಯಾಗಿ ಬಾಕಿದಾರರಾದರು. ಅವರ ಆಸ್ತಿಪಾಸ್ತಿಗಳು ಜಪ್ತಾಗುತ್ತಿದ್ದವು. ಒಂದಕ್ಕೆ ನಾಲ್ಕರಷ್ಟು ಬೆಲೆ

ಬಾಳುವ ವಸ್ತುಗಳನ್ನೆಲ್ಲ ವಶಪಡಿಸಿಕೊಂಡು ಕಂದಾಯದ ಬಾಕಿಗೆ ಜಮಾ ಹಾಕಿಕೊಳ್ಳುತ್ತಿದ್ದರು. ಇದನ್ನೆಲ್ಲ ಈ ಕೆಂಪುಅಂಗಿಯ ಸ್ವಯಂಸೇವಕರು ಶಾಂತವಾಗಿ ಅಹಿಂಸಾಮಾರ್ಗಗಳಿಂದಲೇ ಪ್ರತಿಭಟಿಸಿ ಹೋರಾಡುತ್ತಿದ್ದರು.

ಒಮ್ಮೆ ಡಾ. ಖಾನ್ ಸಾಹೇಬರ ಮಗ ಒಬೇದುಲ್ಲಾಖಾನರನ್ನು ಕೇವಲ ಮುನ್ನೂರು ರೂಪಾಯಿ ಬಾಕಿ ಉಳಿಸಿಕೊಂಡರೆಂದು ಸೆರೆಮನೆಗೆ ಹಾಕಿದರು. ಚರಸಡ್ಡಾ ಜೈಲಿನಲ್ಲಿ ಮೂರುತಿಂಗಳ ಶಿಕ್ಷೆ ಅನುಭವಿಸಿದರು. ಜೈಲಿನಲ್ಲಿನ ಅಸಹನೀಯ ಕೊಳಕು ಕೆಟ್ಟ ಆಹಾರಗಳನ್ನು ಸಹಿಸಲಾರದ ಈ ಯುವಕ ಮೂವತ್ತೆಂಟು ದಿನಗಳ ಉಪವಾಸ ಸತ್ಯಾಗ್ರಹ ಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ಸುಧಾರಿಸಿದರು. ಬಿಡುಗಡೆಯಾಗಿ ಹಳ್ಳಿಗೆ ಹೋಗಿ ನೆಲೆಸಿದ ಮೇಲೂ ಮತ್ತೆ ಬೇರೊಂದು ರಾಜಕೀಯ ಕಾರಣ ಹೊರೆಸಿ ಬಂಧಿಸಿದರು.

ಗಫಾರ್‌ಖಾನರು ಗಡಿನಾಡಿನ ಪ್ರಮುಖ ಕಾಂಗ್ರೆಸ್ ನಾಯಕರಾಗಿ ನೇಮಿಸಲ್ಪಟ್ಟರು. ಮುಂದೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿಣಿಯ ಸದಸ್ಯರೂ ಆದರು. ಪೆಷಾವರಿನಲ್ಲಿ ವಿದೇಶೀ ವಸ್ತು ಬಹಿಷ್ಕಾರ ಚಳುವಳಿ ತೀವ್ರವಾಗಿ ನಡೆಯಿತು. ಮೂರು ಸಾವಿರ ಸ್ವಯಂಸೇವಕರು ಅಂಗಡಿಗಳನ್ನು 'ಪಿಕೆಟ್' ಮಾಡಲು ಸಿದ್ಧರಾದರು. ಅತ್ಯಂತ ಶಿಸ್ತಿನಿಂದ ನಿರ್ಭಯವಾಗಿ ಪೋಲೀಸರ ಪ್ರತಿಭಟನೆಯನ್ನು ಶಾಂತವಾಗಿ ಎದುರಿಸಿದರು. ದಿನವೂ ಒಂದೊಂದು ತಂಡದಲ್ಲಿ ಮುನ್ನೂರು ಸತ್ಯಾಗ್ರಹಿಗಳು ಸೆರೆಯಾಗುತ್ತಿದ್ದರು. ಹಳ್ಳಿಯಿಂದ ಹಳ್ಳಿಗೆ ಈ ಕೆಂಪುಅಂಗಿ ದಳಗಳು ಬಾವುಟಗಳನ್ನೆತ್ತಿ ಹಿಡಿದು ತಮಟೆಗಳನ್ನು ಬಾರಿಸುತ್ತಾ ಸ್ವಾತಂತ್ರ್ಯದ ಹಾಡುಗಳನ್ನು ಹಾಡುತ್ತಾ ನಡೆದು ಹೋಗುತ್ತಿದ್ದರು. ಗಫಾರ್‌ಖಾನರು ಅಲ್ಲಲ್ಲಿ ಪ್ರಚಂಡ ಜನಸಮೂಹಗಳನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅವರ ಧೀರ ಗಂಭೀರವಾಣಿ ನೇರವಾಗಿ ಹೃದಯಗಳನ್ನು ಗೆಲ್ಲುತ್ತಿತ್ತು. "ಶಾಂತವಾಗಿ ಗಮನವಿಟ್ಟು ಕೇಳಿ. ಉದ್ರೇಕ ಮತ್ತು ಭಾವಾವೇಶಗಳಿಂದ ನಾವು ಏನೂ ಸಾಧಿಸಲಾರೆವು. ಸರ್ಕಾರ ನಮ್ಮನ್ನು ಯಾವ ಘಳಿಗೆಯಲ್ಲಿ ಬೇಕಾದರೂ ಬಂಧಿಸಬಹುದು. ವಿಶ್ವದೆಲ್ಲೆಡೆಯಲ್ಲಿರುವಂತೆ ನಮಗೂ ವಾಕ್ ಸ್ವಾತಂತ್ರ್ಯ ಮತ್ತು ಬರವಣಿಗೆಯ ಸ್ವಾತಂತ್ರ್ಯಬೇಕು. ಭಾರತದ ಇತರ ಕಡೆಗಳಲ್ಲಿರುವ ಹಕ್ಕುಗಳು ನಮಗೂ ಇರಬೇಕು. ಗಡಿನಾಡಿನ ವಿಶೇಷ

ಕರಾಳ ಶಾಸನಗಳು ರದ್ದಾಗಬೇಕು. ನಮ್ಮ ಸಾಮೂಹಿಕ ನೈತಿಕ ಪ್ರತಿಘಟನೆ ಪ್ರಬಲವಾದರೆ ಮಾತ್ರ ನಮಗಿವೆಲ್ಲ ಲಭ್ಯವಾದಾವು."

ಈ ಸಂದೇಶ ಲಕ್ಷಾಂತರ ಪಠಾಣರನ್ನು ಪರಿವರ್ತಿಸಿ ದೇಶಕಾರ್ಯಕ್ಕೆ ಅಣಿಮಾಡುತ್ತಿತ್ತು. ಆ ಸಮಯಕ್ಕೆ ಗಫಾರ್‌ಖಾನರು ದೆಹಲಿಯಲ್ಲಿ ನಡೆದ ಕಾರ್ಯಕಾರೀ ಸಮಿತಿ ಸಭೆಗೆ ಆಹ್ವಾನಿತರಾಗಿ ಹೋದರು. ಅಧ್ಯಕ್ಷ ಜವಹರಲಾಲರ ಭೇಟಿಯಾಯಿತು. ಮೊದಲ ಪರಿಚಯವಾದ ಮೇಲೆ ಜವಹರಲಾಲರು ಗಡಿನಾಡಿನ ಕಾಂಗ್ರೆಸ್ ಸಮಿತಿಗೆ ವೆಚ್ಚಕ್ಕಾಗಿ ಕೊಡುತ್ತಿದ್ದ ಐನೂರು ರೂಪಾಯಿಗಳನ್ನು ತಿಂಗಳಿಗೆ ಒಂದು ಸಾವಿರ ರೂಪಾಯಿಗೆ ಹೆಚ್ಚಿಸುತ್ತೇನೆ ಎಂದರು. ಗಫಾರ್‌ಖಾನರು ಕೂಡಲೇ ಉತ್ತರಿಸಿದರು, "ನಮಗೆ ನಿಮ್ಮ ಹಣಬೇಕಿಲ್ಲ. ಈ ಭಾರತ ನಮಗೂ ಸೇರಿದೆ. ನಮ್ಮಿಬ್ಬರಿಗೂ ಅದೇ ತಾಯಿನಾಡು. ನಿಮ್ಮ ಕಾರ್ಯಕ್ಕಾಗಿ ನೀವು ಭಾರ ಹೊರುವಂತೆಯೇ ನಾವು ನಮ್ಮ ಭಾಗದಲ್ಲಿ ನಾವೇ ಭರಿಸುತ್ತೇವೆ. ನೀವು ನಮಗೆ ಉದಾರವಾಗಿ ದಾನ ಮಾಡಲಿಚ್ಛಿಸಿದರೆ ಒಂದು ಹೆಣ್ಣು ಮಕ್ಕಳ ಪ್ರೌಢಶಾಲೆ ಕಟ್ಟಿಸಿಕೊಡಿ ಅಥವ ನಮ್ಮ ಮಹಿಳೆಯರಿಗೊಂದು ಆಸ್ಪತ್ರೆ ಸ್ಥಾಪಿಸಲು ಸಹಾಯ ಮಾಡಿ" ಎಂದುತ್ತರಿಸಿದಾಗ ನೆಹರು ಅವರಿಗೆ ಕೋಪಬಂತು. ಡಾ. ಅನ್ಸಾರಿ ಅವರಲ್ಲಿ "ಗಫಾರ್‌ಖಾನ್ ತುಂಬ ಜಂಭದ ಮನುಷ್ಯನಾಗಿ ಕಾಣಿಸುತ್ತಾರೆ" ಎಂದರು. "ಖುದಾಯಿ ಖಿದ್‌ಮತ್‌ಗಾರನಾದವನು ಎಂದೂ ಅಹಂಕಾರದಿಂದ ವರ್ತಿಸುವುದಿಲ್ಲ. ವಿನಯವೂ ನಮಗೊಂದು ವ್ರತನಿಷ್ಠೆ" ಎಂದು ಗಫಾರ್‌ಖಾನ್ ತಾಳ್ಮೆಯಿಂದ ವಿವರಿಸಿದರು. ಆ ಘಳಿಗೆಯಲ್ಲಿ ನೆಹರೂ ಮತ್ತು ಖಾನರ ಹೃದಯಗಳು ಗಾಢವಾಗಿ ಬೆಸೆದುಕೊಂಡವು. ಆ ಬಗ್ಗೆ ತಮ್ಮ ಆತ್ಮಕಥೆಯಲ್ಲಿ ಖಾನರು ಹೀಗೆ ಬಣ್ಣಿಸಿದ್ದಾರೆ:-

"ಆ ವರೆವಿಗೆ ನಾವಿಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿರಲಿಲ್ಲ. ನಮ್ಮ ನಮ್ಮ ಮನೋಧೋರಣೆಗಳು ಗೊತ್ತಿರಲಿಲ್ಲ. ಸ್ನೇಹ ಬೆಳೆದ ಮೇಲೆ ನಮ್ಮಿಬ್ಬರ ನಡುವೆ ನೆಲೆಸಿದ ಗಾಢವಾದ ಪ್ರೀತಿ ವಾತ್ಸಲ್ಯಗಳು ಒಡಹುಟ್ಟಿದ ಸಹೋದರರ ಮಧ್ಯ ಇರುವುದಕ್ಕಿಂತಲೂ ಮಿಗಿಲಾಯಿತು. ಹಣದ ಮಾತು ಮುಂದಾದಾಗ ನಾನು ಬೇಡವೆಂದಿದ್ದೆ.

ನಾನೆಂದೂ ಯಾರನ್ನೂ ಹಣಕ್ಕಾಗಿ ಯಾಚಿಸಿಯೇ ಇಲ್ಲ. ಸಭೆಗೆ ಬಂದು ಹೋಗುವ ವೆಚ್ಚವನ್ನು ಇತರರು ವಹಿಸಿದಾಗಲೂ ನಾನು ತೆಗೆದುಕೊಳ್ಳು ತ್ತಿರಲಿಲ್ಲ. ಕಾಂಗ್ರೆಸ್ಸಿನ ಹಣ ಪೋಲಾಗದಿರಲು ಎಚ್ಚರವಹಿಸಿದ್ದೆ. ಈ ಬಗ್ಗೆ ನೆಹರೂ ಬೇಕಾದಷ್ಟು ವಾದ ಮಾಡಿದರು".

ತಮ್ಮ ಪ್ರಾಂತಕ್ಕೆ ಹಿಂತಿರುಗಿದಾಗ ಮತ್ತೆ ಹೋರಾಟಕ್ಕೆ ಸಿದ್ಧರಾದರು. ಸರ್ಕಾರ ೧೪೪ನೇ ವಿಧಿ ಜಾರಿಮಾಡಿ ಸಭೆ ಮೆರವಣಿಗೆಗಳನ್ನು ನಿಷೇಧಿಸಿತ್ತು. ಖಾನರು ಪ್ರತಿಭಟಿಸಿ ಸಭೆ ನಡೆಸುತ್ತಿದ್ದರು. ತಮ್ಮ ಅನುಯಾಯಿಗಳಿಗೆ ಅಹಿಂಸಾ ಸಮರದ ರೀತಿನೀತಿಗಳನ್ನು ಸತತವಾಗಿ ಬೋಧೆಮಾಡುತ್ತಿದ್ದರು.

"ಅನ್ಯಾಯದ ಕಾನೂನುಗಳನ್ನು ನಾವು ತಿರಸ್ಕರಿಸಬೇಕು. ಅಹಿಂಸಾ ಸಮರ ಹೂಡಿ ಆತ್ಮಸಮರ್ಪಣ ಬುದ್ಧಿಯಿಂದ ಹೋರಾಡಬೇಕು. ೧೪೦೦ ವರ್ಷಗಳ ಹಿಂದೆ ಪ್ರವಾದಿ ಮಹಮ್ಮದರ ಕಾಲಕ್ಕೆ ನಮ್ಮ ಪೂರ್ವಜರು ಇಂಥ ನೈತಿಕ ಸಮರ ಹೂಡಿದ್ದರು. ಅದನ್ನು ಪುನರುತ್ಥಾನ ಗೊಳಿಸಬೇಕು. ಅದೇ ಸತ್ಪುರುಷರ ಸಂತತಿಗೆ ಸೇರಿದವರು ನಾವು ಎಂದು ತೋರಿಸಿಕೊಡಬೇಕು. ಆರು ಸಾವಿರ ಮೈಲಿಗಳಿಗೂ ಆಚೆಯಿಂದ ಬಂದು ಬ್ರಿಟಿಷರು ನಮ್ಮ ದೇಶವನ್ನು ದಾಸ್ಯಕ್ಕೆ ಗುರಿ ಮಾಡಿರುವುದು ಅಧರ್ಮದ ಪರಮಾವಧಿ. ಅವರ ಪ್ರತಿನಿಧಿಗಳಾದ ಉನ್ನತಾಧಿಕಾರಿಗಳು ನಮ್ಮ ಬಾಂಧವರನ್ನು ಸೂರೆಮಾಡಿ ಅಟ್ಟಹಾಸದ ರಾಜನೀತಿಯಲ್ಲಿ ಬದುಕುತ್ತಿದ್ದಾರೆ. ಈ ಗುಲಾಮಗಿರಿಯನ್ನು ಈ ಕೂಡಲೇ ನಿರಾಕರಿಸಿ ಸ್ವತಂತ್ರರಾಗಿ. ದಬ್ಬಾಳಿಕೆಗೆ ಮಣಿಯದೆ ಸರ್ವ ಬಲಿದಾನಗಳಿಗೂ ಸಿದ್ಧರಾಗಿ ಎದ್ದೇಳಿ! ಈ 'ಜುಲುಮ್ ಹುಕುಮತ್' ನ್ನು (ಬಲಾತ್ಕಾರದ ಅಧಿಕಾರ) ನಾಶಮಾಡಿ. ಇದು ನಿಮ್ಮ ಧಾರ್ಮಿಕ ಕರ್ತವ್ಯ. ದೇವರಿಗೂ, ಪ್ರವಾದಿಗಳಿಗೂ ಆ ಕೊನೆಯ ತೀರ್ಪಿನ ದಿನದಂದು ನೀವೇನು ಉತ್ತರ ಕೊಡುವಿರಿ? ಎಚ್ಚೆತ್ತುಕೊಳ್ಳಿ!"

೧೯೩೦ ಮತ್ತು ೧೯೩೪ ರಲ್ಲಿ ಗಡಿನಾಡು ಪ್ರಾಂತದಲ್ಲಾದ ಕ್ರೂರ ದಬ್ಬಾಳಿಕೆಗಳು ಅಸಹನೀಯವಾಗಿದ್ದುವು. ಸ್ವಾತಂತ್ರ್ಯ ಹೋರಾಟಗಾರರ ಜಮೀನುಗಳಲ್ಲಿ ಬೆಳೆದು ನಿಂತ ಪೈರುಗಳನ್ನು ಸುಟ್ಟರು. ಇದ್ದ

ದಾಸ್ತಾನು ಮಳಿಗೆಗಳನ್ನು ನಾಶಮಾಡಲು ಮನೆಗಳಿಗೇ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು. ಕಂಡ ಕಡೆ ನಿರಪರಾಧಿಗಳಿಗೆ ಗುಂಡಿಕ್ಕುತ್ತಿದ್ದರು. ಒಬ್ಬ ಅಮೆರಿಕದ ಪತ್ರಿಕೋದ್ಯಮಿ ಈ ಭಯಂಕರ ಶಿಕ್ಷೆಗಳನ್ನು ವಿವರಿಸುತ್ತಾ, "ಬ್ರಿಟಿಷ್ ಸೈನಿಕರಿಗೆ ಈ ಕೆಂಪುಅಂಗಿ ಸ್ವಯಂ ಸೇವಕರನ್ನು ಬೇಟೆಯಾಡುವುದು ಒಂದು ಖುಷಿಯ ಕ್ರೀಡೆಯಾಗಿತ್ತು" ಎಂದಿದ್ದಾನೆ. ಚಿತ್ರಹಿಂಸೆ ಒಡಿಸುವುದು, ಒದ್ದು ನೂಕುವುದು, ಬಂದೂಕದ ಹಿಂಬದಿಯಿಂದ ಕ್ರೂರವಾಗಿ ಬಡಿಯುವುದು ಸಾಮಾನ್ಯವಾಗಿತ್ತು. ಈ ಎಲ್ಲ ಹಿಂಸೆಗಳ ಮಧ್ಯೆಯೂ ಈ ಮುಗ್ಧ ಕೃಷಿಕ ಜನಾಂಗ ಹೇಗೆ ತಾಳ್ಮೆಯಿಂದ ಹೋರಾಟ ಸಾಗಿಸಿದರು ಎಂದು ಕಂಡಾಗ ಆಶ್ಚರ್ಯವೆನಿಸುತ್ತಿತ್ತು. ಪಠಾಣರಾದವರು ಧೀರ ಸ್ವಾಭಿಮಾನಿಗಳೂ ಆಗಿದ್ದರು. ಹಾಜಿ ಷಾ ನವಾಜ್‌ಖಾನ್ ಎಂಬುವರು ಸೆರೆಯಲ್ಲಿದ್ದಾಗ ಅವರ ಕುಟುಂಬದವರು ದಾರುಣ ದುರಂತಗಳಿಗೆ ಗುರಿಯಾದರೆಂದು ಕೇಳಿ ಒಮ್ಮೆ ಕ್ಷಮಾಪಣೆ ಸಲ್ಲಿಸಿ ಬಿಡುಗಡೆಯಾದರಂತೆ. ಆದರೆ ಆ ಕೂಡಲೇ ಅವರ ಆತ್ಮಗೌರವ ಪ್ರಜ್ಞೆ ಕೆರಳಿ ಥಟಾತ್ತನೆ ತಮ್ಮದು ಘೋರ ಅಪರಾಧವಾಯಿತೆಂದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಮತ್ತೊಬ್ಬ ಗುಡ್ಡಗಾಡು ಬುಡಕಟ್ಟಿನ ನಾಯಕ ಸೈಯದ್ ಅಬ್ದುಲ್ ವಾದುದ್‌ಬಾದ್‌ಷಾ. ಮೂರು ವರ್ಷ ಕಠಿಣ ಶಿಕ್ಷೆಗೆ ಗುರಿಯಾಗಿದ್ದ. ಆ ಮಧ್ಯೆ ಅವನ ವೃದ್ಧ ತಂದೆ ಸಾಯುವ ಅಂಚಿನಲ್ಲಿದ್ದಾಗ ತನ್ನ ಮಗನನ್ನು ನೋಡಲು ಹಂಬಲಿಸಿ ತಾನೇ ಜಾಮೀನು ಶುಲ್ಕ ಕಟ್ಟಿ ಬಿಡುಗಡೆಗೆ ಅರ್ಜಿ ಹಾಕಿದ. ಈ ಮಗನನ್ನು ಬಿಡುಗಡೆ ಮಾಡಿ ತಂದೆಯ ಬಳಿ ಕರೆತಂದಾಗ ಅವಮಾನದಿಂದ ತೀವ್ರ ತಪ್ತನಾಗಿ ಆ ವಾದುದ್ ಬಾದ್‌ಷಾ ತನ್ನ ಎದೆಗೇ ಗುಂಡು ಹಾರಿಸಿಕೊಂಡುಬಿಟ್ಟನಂತೆ. ಈ ಕಥೆಗಳನ್ನು ಬ್ರಿಟಿಷರೇ ತಮ್ಮ ದಿನಚರಿಗಳಲ್ಲಿ ಆಶ್ಚರ್ಯದಿಂದ ಬಣ್ಣಿಸಿದ್ದಾರೆ. ಅವರೇ ಹೇಳಿರುವಂತೆ ಈ ಮೂರು ವರ್ಷಗಳಲ್ಲಿ ಯಾವ ಖುದಾಯಿ ಖಿದ್‌ಮತ್‌ಗಾರನೂ ಪ್ರತಿ ಹಿಂಸೆಗೆ ಕೈ ಹಾಕಲೇ ಇಲ್ಲ. ಅವರ ಅಹಿಂಸಾ ಧರ್ಮಕ್ಕೆ ಚ್ಯುತಿ ಬರುವ ಘಟ್ಟಕ್ಕೆ ಬಂದು ತಾವು ಅಸಹಾಯಕರೆಂದು ಅನಿಸಿದಾಗ ಅನೇಕರು ಆತ್ಮಹತ್ಯೆ ಮಾಡಿಕೊಂಡುಬಿಡುತ್ತಿದ್ದರಂತೆ.

ಗಫಾರ್‌ಖಾನರು ಶಿಕ್ಷೆಗೊಳಗಾಗಿ ಸೆರೆಮನೆಯಲ್ಲಿದ್ದಾಗ ಅವರ

ಕುಟುಂಬದವರಿಗೆ ಸರ್ಕಾರ ಯಾವ ನೆರವನ್ನೂ ನೀಡುತ್ತಿರಲಿಲ್ಲ. ಇತರ ಗಣ್ಯರ ವಿಷಯದಲ್ಲಿ ಬೇರೆ ಧೋರಣೆ ಇರುತ್ತಿತ್ತು. ಡಾ|| ಖಾನ್‌ಸಾಹೇಬರ ಕುಟುಂಬಕ್ಕೆ (ಅವರ ಪತ್ನಿ ಇಂಗ್ಲಿಷ್ ಮಹಿಳೆ) ಮತ್ತು ಹಾಜಿ ಸಾಹೇಬರ ಕುಟುಂಬಕ್ಕೆ ವಿಶೇಷ ಭತ್ಯೆಗಳನ್ನು ನೀಡಲಾಗುತ್ತಿತ್ತು. ಖಾನರ ಮಗ ಅಬ್ದುಲ್ ಘನಿಖಾನ್ ಅಮೆರಿಕಾದಲ್ಲಿ ಓದುತ್ತಿದ್ದ. ಮನೆಯ ವರಮಾನ ಇಳಿದು ಹೋದುದರಿಂದ ಅತ ತನ್ನ ಶಿಕ್ಷಣ ಮುಗಿಸಲಾರದೆ ಹಿಂತಿರುಗಬೇಕಾಯಿತು. ಗ್ರಾಮದಲ್ಲಿನ ಆಸ್ತಿ ಪಾಸ್ತಿಗಳನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಎಲ್ಲವೂ ಹಾಳಾಗಿತ್ತು. ಹಲವು ಸ್ವಾರ್ಥಿಗಳು ಸರ್ಕಾರದ ಬೆಂಬಲದಿಂದ ಅವರ ರೈತರನ್ನು ಎತ್ತಿ ಕಟ್ಟಿ ತಾವು ಲಾಭ ಪಡೆಯುತ್ತಿದ್ದುದೂ ಉಂಟು ಎಂದು ಗಫಾರ್‌ಖಾನರೇ ಹೇಳಿಕೊಂಡಿದ್ದಾರೆ.

ಮೂರು ವರ್ಷಗಳ ನಂತರ ಬಿಡುಗಡೆಯಾದಾಗ ಅವರ ಮೇಲೆ ನಿರ್ಬಂಧಾಜ್ಞೆ ಹೊರಡಿಸಿ ಗಡಿನಾಡು ಪ್ರಾಂತದೊಳಗೆ ಬರಕೂಡದೆಂದು ತಡೆಹಿಡಿದರು. ಪಂಜಾಬು ಮತ್ತು ತಮ್ಮ ಪ್ರಾಂತಗಳೆರಡನ್ನು ಬಿಟ್ಟು ಭಾರತದಲ್ಲಿ ಎಲ್ಲಿ ಬೇಕಾದರೂ ಹೋಗಿರಿ ಎಂದು ಅಪ್ಪಣೆ ಮಾಡಲಾಯಿತು. ಆ ಕೂಡಲೇ ಈ ನಿರ್ಬಂಧಾಜ್ಞೆಯನ್ನು ಉಲ್ಲಂಘಿಸಿ ಮತ್ತೆ ಬಂಧನಕ್ಕೊಳಗಾಗಬಾರದೆಂದೂ ದೇಶದ ಇತರೆಡೆಗಳಲ್ಲಿ ಸಂಚರಿಸಿ ಸ್ವಾತಂತ್ರ್ಯಯೋಧರನ್ನು ಸಂಘಟಿಸಬೇಕೆಂದೂ ರಾಷ್ಟ್ರೀಯ ಮುಖಂಡರೆಲ್ಲ ಒತ್ತಾಯಿಸಿದರು. ಅದರಂತೆ ಗಫಾರ್‌ಖಾನರು ಮೊದಲು ಬಿಹಾರಕ್ಕೆ ಹೊರಟರು. ರಾಜೇಂದ್ರ ಪ್ರಸಾದರೊಡನೆ ಕೆಲಸ ಮಾಡಿದರು. ಅನಂತರ ಜಮ್ನಾಲಾಲ್ ಬಜಾಜರ ಪ್ರೀತಿಪೂರ್ವಕ ಆಹ್ವಾನದ ಮೇರೆ ವರ್ಧಾಕ್ಕೆ ಹೋಗಿ ಅವರ ಅತಿಥಿಯಾಗಿ ಹಲವು ತಿಂಗಳಿದ್ದರು. ಗಾಂಧೀಜಿಯೂ ೧೯೩೪ ರಲ್ಲಿ ಅಲ್ಲೇ ಇದ್ದರು. ಆ ನಿಕಟ ಸಾನ್ನಿಧ್ಯ ಹೇಗೆ ತಮ್ಮ ಅಮೂಲ್ಯ ಶಿಕ್ಷಣವಾಯಿತೆಂದು ಖಾನರು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಅದೇ ಸಮಯಕ್ಕೆ ಬೊಂಬಾಯಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಲು ತೀರ್ಮಾನವಾಯಿತು. ಅಲ್ಲಿನ ಸ್ವಾಗತ ಸಮಿತಿಯಲ್ಲಿ ಗಫಾರ್‌ಖಾನರನ್ನು ಅಧ್ಯಕ್ಷತೆ ವಹಿಸಲು ಕೋರಬೇಕೆಂದು ಸರ್ವಾ

ಸುಮತದ ತೀರ್ಮಾನವಾಯಿತು. ರಾಜೇಂದ್ರ ಪ್ರಸಾದರು ಗಫಾರ್‌ಖಾನ ರಿಗೆ ತಂತಿ ಕಳುಹಿಸಿ ಅವರ ಸಮ್ಮತಿ ಬೇಡಿದರು. ಆದರೆ ಖಾನರು ಅದನ್ನು ವಿನಯದಿಂದ ನಿರಾಕರಿಸಿ, "ನಾನೊಬ್ಬ ಯೋಧ ಮಾತ್ರ. ಒಬ್ಬ ವಿನಮ್ರ ಖುದಾಯಿ ಖಿದ್‌ಮತ್‌ಗಾರ. ಕಡೆಯಲ್ಲಿ ನಿಂತು ಸೇವೆ ಮಾಡಬೇಕೆಂಬುದೇ ನನ್ನ ಇಚ್ಛೆ" ಎಂದು ತಂತಿ ಕೊಟ್ಟರು.

ವರ್ಧಾದಲ್ಲಿ ಗಾಂಧೀಜಿಯ ಆಶ್ರಮ ಜೀವನದ ಪರಿಚಯವಾಯಿತು. ಅತ್ಯಂತ ಶ್ರದ್ಧೆಯಿಂದ ತಮ್ಮ ಜೀವನ ಸಿದ್ಧಾಂತಗಳನ್ನು ಅಹಿಂಸೆಯ ಒರೆಗಲ್ಲಿಗೆ ಹಚ್ಚಿ ಗಟ್ಟಿ ಕಾಳುಗಳನ್ನು ಸಂಗ್ರಹಿಸಿಕೊಂಡು ಜೆಲ್ಲನ್ನು ತೂರಿದರು. ಅದೇ ಸಮಯಕ್ಕೆ ಗಾಂಧೀಜಿಯ ಪರಮ ಶಿಷ್ಯೆ ಮೀರಾ ಬಹೆನ್ (ಮ್ಯಾಡಲೀನ್ ಸ್ಲೇಡ್) ಇಂಗ್ಲೆಂಡಿನಿಂದ ಹಿಂತಿರುಗಿ ಬರುತ್ತಾ ರೆಂದು ತಿಳಿಯಿತು. ಇಂಗ್ಲೆಂಡಿನಲ್ಲೇ ಓದುತ್ತಿದ್ದ ತಮ್ಮ ಮಗಳನ್ನು (ಮೆಹರ್‌ತಾಜಳನ್ನು) ವರ್ಧಾಕ್ಕೆ ಕರೆತರಬೇಕೆಂದು ಮೀರಾಬಹೆನ್ ಅವ ರಿಗೆ ಗಾಂಧೀಜಿಯಿಂದಲೇ ಕಾಗದ ಬರೆಸಿದರು. ಆಕೆ ವರ್ಧಾದ ಮಹಿಳಾ ಶ್ರಮದ ಸದಸ್ಯೆಯಾಗಿ ಸೇವಾ ಕಾರ್ಯದಲ್ಲಿ ತೊಡಗುವಂತೆ ಮಾಡಿದರು.

ಮೀರಾಬಹೆನ್‌ಗೆ ಬರೆದ ಕಾಗದದಲ್ಲಿ ಗಾಂಧೀಜಿ ಖಾನ್ ಸಹೋ ದರರ ಬಗ್ಗೆ ಬರೆಯುತ್ತಾ, "ಈ ಸಹೋದರರ ಸಖ್ಯ ನನಗೆ ಭಗವಂತನ ಅನುಗ್ರಹ ಎಂದು ತಿಳಿದಿದ್ದೇನೆ" ಎಂದಿದ್ದರು. ಡಾ॥ ಖಾನ್‌ಸಾಹೇಬರ ಇಂಗ್ಲಿಷ್ ಪತ್ನಿಯ ಬಗ್ಗೆ ಒಮ್ಮೆ ಗಫಾರ್‌ಖಾನರನ್ನು ಗಾಂಧೀಜಿ ಪ್ರಶ್ನಿಸಿದರು, "ನೀವು ಕ್ರಿಶ್ಚಿಯನ್ ಮಹಿಳೆಯನ್ನು ಕುಟುಂಬವರ್ಗಕ್ಕೆ ಬರಮಾಡಿಕೊಂಡಾಗ ನಿಮಗೇನನ್ನಿಸಿತು?" ಎಂದರು. ಗಫಾರ್‌ಖಾನ್ ಉತ್ತರಿಸುತ್ತ, "ಆಕೆಯನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳಿ ಸಲು ನಾವು ಯಾರೂ ಯೋಚಿಸಲಿಲ್ಲ. ಆಕೆ ತನ್ನ ಧರ್ಮವನ್ನೇ ಪರಿ ಪಾಲಿಸಿಕೊಂಡಿರಲು ಪೂರ್ಣ ಸ್ವತಂತ್ರಳಾಗಿದ್ದಳು. ಯಾವ ಸಮಸ್ಯೆಯೂ ಉಂಟಾಗಲಿಲ್ಲ. ಪತಿ ಪತ್ನಿಯರು ಬೇರೆ ಬೇರೆ ಧರ್ಮದವರಾಗಿದ್ದರೆ ಅವರವರ ಧರ್ಮದಲ್ಲಿ ನಿಜವಾದ ಶ್ರದ್ಧೆಯಿಟ್ಟು ನಡೆದುಕೊಂಡರೆ ಏನು ಪ್ರಮಾದ? ಮದುವೆಯಾದ ಮಾತ್ರಕ್ಕೆ ತಮ್ಮ ಧರ್ಮ ಶ್ರದ್ಧೆಯನ್ನು ಬದಲಿಸುವ ಅಗತ್ಯವೇನೂ ನನಗೆ ಕಾಣದು. ಯಾವ ಧರ್ಮವೂ

ಮತ್ತೊಂದರ ವಿರೋಧ ಎಂದು ನಾನು ನಂಬುವುದಿಲ್ಲ" ಎಂದರು. ಗಾಂಧೀಜಿಗೆ ಈ ಉದಾರಚರಿತನ ಅಭಿಪ್ರಾಯಗಳು ತುಂಬ ಮೆಚ್ಚಿಗೆಯಾದವು. ಮುಂದುವರೆದು ಗಫಾರ್‌ಖಾನ್, "ಗುಜರಾತ್ ಜೈಲಿನಲ್ಲಿದ್ದಾಗ ನಾನು ಶ್ರದ್ಧೆಯಿಂದ ಗೀತಾ ಅಧ್ಯಯನ ಮಾಡಿದೆ. ಅನಂತರವೂ ಮೂರು ಬಾರಿ ಗೀತೆಯನ್ನು ಪೂರ್ಣವಾಗಿ ಓದಿದೆ. ಪ್ರತಿಯೊಂದು ಧರ್ಮಗ್ರಂಥದಲ್ಲೂ ಆದರದರ ಶ್ರದ್ಧಾಳುಗಳಿಗೆ ಆಳವಾದ ಸ್ಫೂರ್ತಿ ದೊರೆಯುತ್ತದೆ. ಸ್ವಧರ್ಮಶ್ರದ್ಧೆ ಅತ್ಯಂತ ಸಹಜ ಪ್ರವೃತ್ತಿ. ಪವಿತ್ರ ಕೊರಾನಿನಲ್ಲಿ ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳನ್ನು ಎಚ್ಚರಿಸಲು ದೇವರು ತನ್ನ ದೂತರನ್ನು ಕಳುಹಿಸುತ್ತಲೇ ಇರುತ್ತಾನೆ ಎಂದು ಹೇಳಿದೆ. ಅವರೇ ವಿವಿಧ ಪ್ರವಾದಿಗಳೆಂದು ಅಮರರಾಗಿದ್ದಾರೆ. ಅವರನ್ನು 'ಅಹಲೆ ಕಿತಾಬ್' ಎನ್ನುತ್ತೇವೆ. ಹಿಂದೂಗಳೂ, ಕ್ರೈಸ್ತರೂ, ಯಹೂದಿಗಳೂ, ಸಿಖ್ಖರೂ, ಪಾರ್ಸಿಗಳೂ ಎಲ್ಲರೂ ಈ ಪರಂಪರೆಗೆ ಸೇರಿದವರೇ ಆಗಿದ್ದಾರೆ" ಎಂದಾಗ ಗಾಂಧೀಜಿ ಸಂಪೂರ್ಣವಾಗಿ ಸಮ್ಮತಿಸಿದರು.

ಆ ವೇಳೆಗೆ ಗಾಂಧೀಜಿ ಗ್ರಾಮ ಭಾರತದ ಪುನರುಜ್ಜೀವನ ಯೋಜನೆಗಳಲ್ಲಿ ತಲ್ಲೀನರಾಗಿದ್ದರು. ಖಾದಿ, ಹಿಂದೂ – ಮುಸ್ಲಿಮ್ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧಗಳನ್ನು ಎಲ್ಲ ಕಾಂಗ್ರೆಸ್ಸಿಗರಿಗೂ ಕಡ್ಡಾಯ ನಿಯಮ ಮಾಡಿದರು. ಅಹಿಂಸಾ ಸಮರಕ್ಕೆ ಇದು ಅತ್ಯಗತ್ಯ ಸಿದ್ಧತೆ ಎಂದರು. ಗಫಾರ್‌ಖಾನರು ಈ ಸಂದೇಶವನ್ನು ಅಂಗೀಕರಿಸಿ ತಮ್ಮ ಪ್ರಾಂತದಲ್ಲಿ ಕೂಡಲೇ ಅನುಷ್ಠಾನ ಮಾಡಲು ನಿಶ್ಚಯಿಸಿದರು.

೧೧. ಗಾಂಧಿಜೀಯ ಗೆಳೆತನ

ಬಂಗಾಳದ ಮುಸ್ಲಿಮರು ಗಫಾರ್‌ಖಾನರನ್ನು ಆತ್ಮೀಯವಾಗಿ ಆಹ್ವಾನಿಸಿದ್ದರು. ಈ ಹಿಂದೆ ಬಂಗಾಲಕ್ಕೆ ಹೋಗಿದ್ದಾಗ ಅಲ್ಲಿನ ಗ್ರಾಮಗಳ ಕಡುಬಡತನ, ಮುಸ್ಲಿಮರ ಹಿಂದುಳಿಕೆ, ಮೌಢ್ಯದ ವಿದ್ವೇಷಗಳು, ವಿದೇಶೀ ಸರ್ಕಾರದ ಅಸಹನೀಯ ಆಳ್ವಿಕೆ ಗಫಾರ್‌ಖಾನರನ್ನು ವಿಹ್ವಲಗೊಳಿಸಿದ್ದವು. ಮೌಲಾನಾ ಅಜಾದರು ಒತ್ತಾಯಿಸಿದರು. ೧೯೩೪ ರಲ್ಲಿ ಕಲ್ಕತ್ತದಲ್ಲಿ ಡಾ. ಬಿ. ಸಿ. ರಾಯರು ಖಾನ್ ಸಹೋದರರಿಗೆ ಸ್ವಾಗತಸಭೆ ಏರ್ಪಡಿಸಿದ್ದರು. 'ಭಾರತದ ರಾಜಕೀಯ ವಿಮೋಚನೆಗೆ ಹಿಂದೂ ಮುಸ್ಲಿಮ್ ಐಕ್ಯತೆ ಅತ್ಯಗತ್ಯ. ನಮ್ಮ ನಮ್ಮಲ್ಲಿನ ಸಾಮಾಜಿಕ ಮತ್ತು ಆರ್ಥಿಕ ವಿರೋಧಾಭಾಸಗಳನ್ನು ನಾವೇ ನಿವಾರಿಸಿಕೊಂಡಲ್ಲದೆ ನಮ್ಮ ದೀನಸ್ಥಿತಿ ಸುಧಾರಿಸುವುದಿಲ್ಲ. ಬ್ರಿಟಿಷರು ಕುಟಿಲತೆ ಮತ್ತು ವಂಚನೆಗಳಿಂದ ಹಿಂದೂಸ್ಥಾನವನ್ನು ಗೆದ್ದು ಆಳುತ್ತಿದ್ದಾರೆ. ನಮ್ಮ ದೇಶ ನಮ್ಮ ಕೈವಶವಾದಾಗ ಸೋದರರ ನಡುವಿನ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳುವುದು ಸುಲಭ" ಎಂದು ಆ ಸಭೆಯಲ್ಲಿ ಗಫಾರ್‌ಖಾನರು ಮುಸ್ಲಿಮ್ ಬಾಂಧವರಲ್ಲಿ ಮನವಿಮಾಡಿದರು. ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯ ವಿವರಗಳನ್ನು ಡಾ. ಖಾನ್ ಸಾಹೇಬರು ಬಣ್ಣಿಸಿದರು. ಗಫಾರ್‌ಖಾನರು ವಿನಯದಿಂದ ಹೇಳುತ್ತಾ, "ನನ್ನನ್ನು ಗಡಿನಾಡಿನ ಗಾಂಧಿ ಎಂದು ದಯಮಾಡಿ ಕರೆಯಬೇಡಿ. ದೇಶದ ನಾಯಕತ್ವ ಮಹಾತ್ಮ ಗಾಂಧಿ ಅವರಿಗೇ ಸಲ್ಲಬೇಕಾದ ಗೌರವ. ಇಬ್ಬರು ಗಾಂಧಿಗಳನ್ನು ಸೃಷ್ಟಿಸಬೇಡಿ. ನಾನು ಮಾಡಿರುವ ಸೇವೆ ಅತ್ಯಲ್ಪ. ಅಹಿಂಸಾ ಪಥದಲ್ಲಿ ನಡೆದುದೇ ನಮ್ಮ ಹೆಗ್ಗಳಿಕೆ. ಅದು ಮಹಾತ್ಮರ ಸ್ಫೂರ್ತಿ. ಪಠಾಣರಂತಹ ಯುದ್ಧಪ್ರಿಯ ಜನಾಂಗ ಇಂಥ ದಿವ್ಯ

ಮಾರ್ಗಕ್ಕೆ ಒಲಿದು ಬಂದುದು ಅವರ ಉದ್ಧಾರಕ್ಕೆ ಕಾರಣವಾಗಿದೆ. ಇಡೀ ಸಮಾಜ ಪ್ರಗತಿ ಪಥಕ್ಕೆ ಕಾಲಿಟ್ಟಿದೆ. ಇದಕ್ಕೆ ಖುದಾಯಿ ಖಿದ್‌ಮತ್‌ಗಾರರ ತ್ಯಾಗ ಬಲಿದಾನಗಳೇ ಕಾರಣ. ನಾನು ನಿಮಿತ್ತ ಮಾತ್ರದವನು. ನನ್ನ ಆಧ್ಯಾತ್ಮಿಕ ಪ್ರಗತಿ ಈ ಸತ್ಯಾಗ್ರಹ ಸಮರದಲ್ಲಿ ಪುಟಗೊಂಡಿದೆ" ಎಂದರು.

ವರ್ಧಾಕ್ಕೆ ಹಿಂತಿರುಗುವ ಮುನ್ನ ಗಫಾರ್‌ಖಾನರು ಶಾಂತಿನಿಕೇತನಕ್ಕೆ ಭೇಟಿಯಿತ್ತರು. ಅವರ ಮಗ ಘನಿಖಾನನನ್ನು ಗುರುದೇವ್ ಟಾಗೂರರ ಆಶ್ರಮದಲ್ಲಿ ಶಿಕ್ಷಣ ಪಡೆಯಲು ಸೇರಿಸಿದ್ದರು. ಕವಿ ರವೀಂದ್ರರು ತುಂಬು ವಾತ್ಸಲ್ಯದಿಂದ ಖಾನರನ್ನು ಸ್ವಾಗತಿಸಿದರು. ಮಹಾಚೇತನಗಳೆನಿಸಿದ ರಾಷ್ಟ್ರೀಯ ನಾಯಕರಿಬ್ಬರ ಸಮಾಗಮ ಆನಂದೋತ್ಸವಗಳಿಂದ ತುಳುಕಿತು. ವಂದನೆ ಸಲ್ಲಿಸುತ್ತ ಗಫಾರ್‌ಖಾನರು. "ಈ ಮಹಾಕವಿಯ ಪವಿತ್ರ ಆದರ್ಶಗಳನ್ನು ನಾನು ಗೌರವಿಸುತ್ತೇನೆ. ಭಾರತದ ವಿಮೋಚನೆಗೆ, ಅವರ ಅಭ್ಯುದಯಕ್ಕೆ ಗುರುದೇವರ ಸಾಧನೆ ಅಮೂಲ್ಯ. ಮಾನವ ಧರ್ಮದ ಮೌಲಿಕ ತಳಹದಿಯ ಮೇಲೆ ಅವರು ರೂಪಿಸಿರುವ ಶಿಕ್ಷಣವನ್ನು ಎಲ್ಲ ಧರ್ಮಗಳವರೂ ಅಂಗೀಕರಿಸಲು ಯೋಗ್ಯವಾಗಿದೆ. ಭಾರತದ ಭವಿಷ್ಯಕ್ಕೆ ಕಂಟಕವಾಗಿ ಪರಿಣಮಿಸಿರುವ ಜಾತೀಯ ವೈಷಮ್ಯದ ಕಾರಣ ನಮ್ಮ ನಮ್ಮ ಧರ್ಮಗಳ ಬಗ್ಗೆ ಪರಸ್ಪರ ತಪ್ಪು ತಿಳಿವಳಿಕೆಗಳು ಎಂದು ರವೀಂದ್ರರು ಬೋಧಿಸಿದ್ದಾರೆ" ಎಂದರು.

ಮಾರನೆಯ ದಿನವೇ ಖಾನರು ಹಿಂತಿರುಗಿ ಹೊರಡಬೇಕಾಯಿತು. ರವೀಂದ್ರರ ಕುಟೀರ 'ಉತ್ತರಾಯಣ' ದ ಅಂಗಳದಲ್ಲಿ ಬೀಳ್ಕೊಡುವಾಗ ಉರ್ದುವಿನಲ್ಲಿದ್ದ ಒಂದು ಬಿನ್ನವತ್ತಳೆಯನ್ನು ರವೀಂದ್ರರೇ ಓದಿದರು. ಆ ಹೃದಯ ಸ್ಪರ್ಶಿ ಸಮಾರಂಭದಲ್ಲಿ ಕವಿ ಶ್ರೇಷ್ಠರು ಆಡಿದ ಮಾತುಗಳು ಆತ್ಮೀಯ ಅಮೃತಧಾರೆಯಂತಿದ್ದವು :

"ಪ್ರಿಯ ಮಿತ್ರರೆ.

ನಿಮ್ಮ ಭೇಟಿ ಸ್ವಲ್ಪವೇ ಸಮಯದ್ದಾದರೂ ಅದರಿಂದ ನಮಗೆ ಹೊಸ ಸ್ಫೂರ್ತಿ ದೊರೆತಿದೆ. ನಮ್ಮ ಭಾವನೆಗಳಿಗೆ ಹೊಸ ರೆಕ್ಕೆಗಳು ಮೂಡಿವೆ. ಇದನ್ನು ಅತಿಶಯೋಕ್ತಿ ಎಂದು ದಯಮಾಡಿ ತಿಳಿಯಬೇಡಿ

ಪ್ರೇಮದ ಪಾಠ ಮಾತಿನಿಂದ ಬೋಧೆಯಾಗುವುದಿಲ್ಲ. ಪ್ರೇಮಿಯ ಆತ್ಮ ಸಂಸ್ಕಾರವೇ ನಿಜವಾದ ಪ್ರೇಮದ ಒರೆಗಲ್ಲು. ಅವರ ಸಂಸರ್ಗ ಮಾತ್ರದಿಂದ ನಮ್ಮೊಳಗಿನ ಹೃದಯ ಸ್ಪಂದನಗಳೂ ಬೃಹತ್ತಾಗುತ್ತವೆ. ಕೆಲವೇ ಘಂಟೆಗಳು ನಮ್ಮೊಡನಿದ್ದರೂ ಕಾಲದ ಮಾನದಂಡದಿಂದ ನಿಮ್ಮ ಸಹವಾಸದ ಬೆಲೆಯನ್ನು ಅಳೆಯಲಾರೆವು. ವಿಶ್ವಪ್ರೇಮದಿಂದ ಪ್ರೇರಿತರಾಗಿ ಸರ್ವರ ಒಳಿತನ್ನು ಬಯಸುವ ಪವಿತ್ರಾತ್ಮರು ಕಾಲ ದೇಶಗಳನ್ನು ಮೀರಿ ನಿಲ್ಲುವರೆಂದು ನಮ್ಮ ಅನುಭವ. ನಿಮ್ಮ ಭೇಟಿ ನಮ್ಮಲ್ಲಿ ಸದಾ ಹಸಿರಾಗಿ ಉಳಿದಿರುತ್ತದೆ.

"ಸತ್ಯನಿಷ್ಠೆ ನಿಮ್ಮ ಜೀವನದ ತಳಹದಿ. ಅದರ ಪ್ರಭೆ ನಿಮ್ಮ ಸುತ್ತಲೂ ಪಸರಿಸುತ್ತದೆ. ನಮ್ಮ ದೌರ್ಬಲ್ಯಗಳಿಂದ ಈ ನಾಡಿನಲ್ಲಿ ಸೋಲುತ್ತ ನಿರಾಶೆಗೊಳಗಾಗುತ್ತಿದ್ದಾಗ ನೀವು ಒಂದು ದಿವ್ಯ ಸಂದೇಶದ ವಾಹಕರಂತೆ ಬಂದಿದ್ದೀರಿ. ಜಾತಿ ವಿದ್ವೇಷಗಳ ವಿಷವ್ಯೂಹಗಳಿಗೆ ಬಲಿಯಾಗಿ ವಿನಾಶದ ಕಡೆಗೆ ಧಾವಿಸುತ್ತಿದ್ದೇವೆ ಅದನ್ನು ತಡೆಗಟ್ಟಿ ರಕ್ಷಿಸಲು ನೀವು ನೆರವಾಗುತ್ತಿದ್ದೀರಿ.

"ಶುದ್ಧ ಚಾರಿತ್ರ್ಯದ ಪ್ರತೀಕವಾಗಿ ನೀವು ಇಲ್ಲಿನ ಜನರ ಅಂತರ್ಯವನ್ನು ಅರಳಿಸಿದ್ದೀರಿ. ನಮ್ಮ ನಮನವನ್ನು ಸ್ವೀಕರಿಸಿ. ಈ ನಾಡಿನ ಕಲ್ಯಾಣಕ್ಕೂ ಸತ್ಯನಿಷ್ಠೆಗೂ ಇಂಬು ದೊರೆಯುವಂತೆ ದೀರ್ಘಾಯುಗಳಾಗಿರೆಂದು ಭಕ್ತಿಯಿಂದ ಪ್ರಾರ್ಥಿಸುತ್ತೇವೆ."

ಬಂಗಾಳದಿಂದ ಹೊರಟು ಬೊಂಬಾಯಿನ ಕಾಂಗ್ರೆಸ್ ಅಧಿವೇಶನಕ್ಕೆ ಖಾನ್ ಸಹೋದರರು ಧಾವಿಸಿ ಬಂದರು. ಸಾವಿರಾರು ದೇಶಭಕ್ತ ಸ್ವಯಂ ಸೇವಕರು ಆದರದಿಂದ ಸ್ವಾಗತಿಸಿದರು. ಮಾರನೆಯ ದಿನ ಗಾಂಧೀಜಿಯವರು ಬೊಂಬಾಯಿಗೆ ಆಗಮಿಸಿದರು. ಒಂದೇ ಬಿಡಾರದಲ್ಲಿ ಇವರೆಲ್ಲರಿಗೆ ಜಾಗ ಮಾಡಲಾಗಿತ್ತು. ವಿನಯದಿಂದ ಒಂದೆ ಒಂದೆಯೇ ಇರುತ್ತಿದ್ದರೂ ಈ ಎತ್ತರದ ಆಜಾನುಬಾಹು ಖಾನ್ ಅಬ್ದುಲ್ ಗಫಾರ್‌ಖಾನ್ ಎಲ್ಲರ ಗಮನವನ್ನೂ ಸಹಜವಾಗಿ ಸೆಳೆಯುತ್ತಿದ್ದರು. ಗಾಂಧೀಜಿಯ ಒತ್ತಾಯಕ್ಕೆ ಮಣಿದು ಗಫಾರ್‌ಖಾನರು ಆ ಅಧಿವೇಶನದ ಸಮಯಕ್ಕೆ ಏರ್ಪಡಿಸಿದ್ದ ಅಖಿಲ ಭಾರತ ಸ್ವದೇಶೀ ವಸ್ತು ಪ್ರದರ್ಶನ

ವನ್ನು ಆರಂಭಗೊಳಿಸಲು ಒಪ್ಪಿದರು. ಶ್ರೀಮತಿ ಸರೋಜಿನಿ ನಾಯ್ಡು ಗೆಳೆಯರಾದ ಖಾನರನ್ನು ಪರಿಚಯಿಸುತ್ತಾ, "ಈತ ಗಡಿನಾಡಿನ ಮಹಾ ಯೋಧ. ಎಲ್ಲರಿಗಿಂತ ಎತ್ತರದ ವ್ಯಕ್ತಿತ್ವ ಅವರದು. ಸರಳ, ವಿನಯ ಶೀಲ ಶ್ರೀಸಾಮಾನ್ಯರಾದ ಖಾನರು ತಾವು ಪರದೆಯ ಹಿಂದೆ ಇರ ಬೇಕೆಂದೇ ಇಚ್ಛಿಸುತ್ತಾರೆ. ಹೇಡಿತನದಿಂದಲ್ಲ, ಪ್ರಚಾರಕ್ಕೆ ವಿಮುಖರಾದು ದರಿಂದ" ಎಂದರು.

ಈ ಸಮಾರಂಭದಲ್ಲಿ ಮಹಾತ್ಮರ ರಚನಾತ್ಮಕ ಕಾರ್ಯಕ್ರಮದ ತಾತ್ವಿಕ ಅರ್ಥ ವಿವರಣೆ ಮಾಡಿದರು ಗಫಾರ್‌ಖಾನ್. ರಾಷ್ಟ್ರದ ಬಡತನವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಅದರಲ್ಲೂ ಬಂಗಾಳ, ಬಿಹಾರ ಮತ್ತು ತಮ್ಮ ಗಡಿನಾಡು ಪ್ರಾಂತದಲ್ಲಿ ತಾವೇ ನೋಡಿದ ದಾರುಣ ದೃಶ್ಯಗಳನ್ನು ಸರಳ ನೇರ ಭಾಷೆಯಲ್ಲಿ ಬಣ್ಣಿಸಿದರು. "ಚರಕ ನಮ್ಮನ್ನು ರಕ್ಷಿಸುವ ಪ್ರಮುಖ ಸಾಧನ" ಎಂದರು. ತಾವು ಚರಕದ ಬಗ್ಗೆ ಈ ಹಿಂದೆ ವಿಚಾರ ಮಾಡಿರಲಿಲ್ಲವೆಂದೂ ಬಡತನದ ಬವಣೆಯನ್ನು ಕಣ್ಣಾರೆ ಕಂಡ ನಂತರ ಈ ಕೂಡಲೇ ಜನಕೋಟಿಯಾದ ಗ್ರಾಮಸ್ಥ ಕೃಷಿಕರ ಭಾಗ್ಯೋದಯವಾಗಲು ಚರಕ ಒಂದು ಅಮೋಘ ಉತ್ಪಾದನಾ ಉಪಕರಣವಾಗುವುದೆಂದು ನಂಬಿ ರುವುದಾಗಿಯೂ ಹೇಳಿದರು. ತಾವೇ ಚರಕದಿಂದ ನೂಲುವುದನ್ನು ಅಭ್ಯಾಸ ಮಾಡಿ ಪ್ರತಿ ದಿನ ನೂಲುವ ವ್ರತತೊಟ್ಟರು. ಗಾಂಧೀಜಿಯೇ ಈ ಸೂತ್ರಯಜ್ಞವನ್ನು ಅನುಷ್ಠಾನ ಮಾಡಿದ್ದರಿಂದ ಅದರಲ್ಲಿ ಅವರ ಅನುಯಾಯಿಗಳಿಗೆ ಶ್ರದ್ಧೆ ಬಂತು. "ನೂಲುವುದು ಅನಾವಶ್ಯಕ ಕಾಲ ಹರಣ ಎಂದು ಕೆಲವರು ಅನ್ನುತ್ತಾರೆ. ಅವರ ಸಮಯ ಗಾಂಧೀಜಿ ದಕ್ಕಿಂತಲೂ ಅಮೂಲ್ಯವಾದುದೆಂದು ನನಗೆನಿಸುವುದಿಲ್ಲ" ಎಂದು ಹಾಸ್ಯ ಮಾಡಿದರು. "ನಾವು ನುಡಿಯುವುದನ್ನು ನಡೆದು ತೋರಿಸದಿದ್ದರೆ ಅದ ಕ್ಕೇನು ಬೆಲೆ" ಎಂದು ಪ್ರತಿಪಾದಿಸಿದರು. "ನಿಮ್ಮ ಸುತ್ತಲಿನ ಜನ ಉತ್ಥಾನನೆ ಮಾಡುವ ಹಾದಿಯನ್ನು ಧರಿಸಿ. ದೇಶಕ್ಕಾಗಿ ನೀವು ಅಷ್ಟನ್ನಾದರೂ ಮಾಡಲಾರಿರಾ" ಎಂದು ಮನವಿ ಮಾಡಿಕೊಂಡರು.

೧೯೩೪ ರ ಮುಂಬಯಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ, "ದೇಶದ ಸಾಮಾಜಿಕ-ಆರ್ಥಿಕ ಪುನಾರಚನೆಯ ಕಾರ್ಯಕ್ಕಾಗಿ ಹೆಚ್ಚು

ಸಮಯ ಕೊಡಲು ನಾನು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವವನ್ನು ಬಿಟ್ಟು ಹೊರಗಡೆಯೇ ಕಾರ್ಯನಿರತನಾಗುತ್ತೇನೆ'' ಎಂದು ಘೋಷಿಸಿದರು. "ನನ್ನ ಸಲಹೆ ಸಹಕಾರಗಳು ಯಾವಾಗಲೂ ಕಾಂಗ್ರೆಸ್ಸಿಗೆ ಮೀಸಲಾಗಿರುತ್ತದೆ'' ಎಂದರು. ಕಾಂಗ್ರೆಸ್ಸಿನ ನಿರ್ಣಯದಂತೆಯೇ ಅಖಿಲ ಭಾರತ ಗ್ರಾಮೋದ್ಯೋಗ ಸಂಘವನ್ನು ಸ್ಥಾಪಿಸಿ ಡಾ॥ ಜೆ. ಸಿ. ಕುಮಾರಪ್ಪನವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಖಾನ್ ಅಬ್ದುಲ್ ಗಫಾರ್ ಖಾನರನ್ನು ಅದರ ವ್ಯವಸ್ಥಾಪಕ ಮಂಡಲಿಯ ಸದಸ್ಯರಾಗಿರಲು ಒಪ್ಪಿಸಿದರು. ಈ ಕೇಂದ್ರ ವರ್ಧಾದಲ್ಲಿ ಜಮ್ನಲಾಲ್ ಬಜಾಜರ ಪೋಷಣೆಯಲ್ಲಿ ಪ್ರಾರಂಭವಾಯಿತು. ಖಾನ್ ಅಬ್ದುಲ್ ಗಫಾರ್‌ಖಾನ್ ಗಾಂಧೀಜಿಯ ಒತ್ತಾಯದ ಮೇಲೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿಣಿಯ ಸದಸ್ಯತ್ವವನ್ನು ಅಂಗೀಕರಿಸಿದರು. ಅಲ್ಲಿಂದಾಚೆ ೧೯೪೭ ರ ವರೆವಿಗೂ ಸದಸ್ಯರಾಗಿ ಉಳಿದರು.

ಗ್ರಾಮ ಸ್ವರಾಜ್ಯಕ್ಕಾಗಿ ಗ್ರಾಮಗಳಲ್ಲಿಯೇ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ನಿಶ್ಶಬ್ದ ಅಹಿಂಸಕ ಕ್ರಾಂತಿಯ ಕಾರ್ಯ ಮಾಡುವುದೇ ಗಫಾರ್ ಖಾನರಿಗೆ ಪ್ರಿಯವೆನಿಸಿತ್ತು. ವರ್ಧಾದಲ್ಲಿದ್ದು ಗಾಂಧೀಜಿ, ಕುಮಾರಪ್ಪ ಇವರುಗಳಿಂದ ಪೂರ್ಣ ಮಾಹಿತಿಗಳನ್ನು ಸಂಗ್ರಹಿಸಲು ನಿಶ್ಚಯಿಸಿದರು. ಬೊಂಬಾಯಿ ಬಿಡುವ ಮುನ್ನ ಭಾರತ ಕ್ರೈಸ್ತ ಮಹಾಸಂಘದಲ್ಲಿ ಭಾಷಣ ಮಾಡಿ ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯನ್ನು ದೀರ್ಘವಾಗಿ ವಿವರಿಸಿದರು. ಈ ಭಾಷಣ ಬ್ರಿಟಿಷರನ್ನು ಕೆರಳಿಸಿ ಅವರ ಬಂಧನಕ್ಕೆ ಕಾರಣವಾಯಿತು.

ವರ್ಧಾದಲ್ಲಿ ಗಾಂಧೀಜಿಯೊಡನೆ ಖಾನ್ ಸಹೋದರರು ಕೆಲವು ದಿನ ಕಳೆದರು. "ಅವರೊಡನಿದ್ದಷ್ಟೂ ಅವರಲ್ಲಿ ನನಗೆ ಪ್ರೀತಿ ಹೆಚ್ಚುತ್ತಿದೆ. ಅಂಥ ವಿನಯಶೀಲರೂ, ಸರಳರೂ, ನೇರ ಸ್ವಭಾವದವರೂ ವಿರಳ. ಯಾವ ವಿಷಯಕ್ಕೂ ಅವರು ಬಳಸಿ ಮಾತನಾಡುವುದೇ ಇಲ್ಲ'' ಎಂದು ಗಾಂಧೀಜಿ ಬರೆದರು. ಬಜಾಜರ ಅತಿಥಿ ಗೃಹಕ್ಕೆ ಬರುವವರ ಸಂಖ್ಯೆ ದೊಡ್ಡದಾಗಿಯೇ ಇತ್ತು. ಅವರ ಸೇವೆಯಲ್ಲಿ ಖಾನರು ತಲ್ಲೀನರಾಗಿ ಬಿಡುತ್ತಿದ್ದರು. ದಿನವೂ ಮುಂಜಾನೆ ಗಾಂಧೀಜಿಯೊಡನೆ ನಡೆದು ಬರು

ತ್ತಿದ್ದರು. ಹೆಚ್ಚು ಮಾತನ್ನೇ ಆಡುತ್ತಿರಲಿಲ್ಲ. ರೋಗಿಗಳ ಶುಶ್ರೂಷೆ ಎಂದರೆ ಖಾನರಿಗೆ ತುಂಬ ಒಲವು. ಸಂಜೆಗೆ ಗಾಂಧೀಜಿಯೊಡನೆ ಪ್ರಾರ್ಥನಾ ಸಭೆಯಲ್ಲಿ ತಾವೇ ಖೊರಾನ್ ಪಠಿಸುತ್ತಿದ್ದರು. ತುಳಸೀ ರಾಮಾಯಣದ ಪಾರಾಯಣವನ್ನು ಕುಳಿತು ಆಲಿಸುತ್ತಿದ್ದರು. ಅದರ ಕಾವ್ಯಮಯ ನುಡಿಗಳಿಗೆ ಮಾರುಹೋಗಿ, "ಈ ಮಾತುಗಳನ್ನು ಉರ್ದು ಲಿಪಿಯಲ್ಲಿ ಬರೆದು ಅದರ ಭಾಷಾಂತರವನ್ನು ನನಗೆ ಕೊಡಿ" ಎಂದು ಪ್ಯಾರೆಲಾಲರನ್ನು ಪ್ರಾರ್ಥಿಸಿದರು. ವರ್ಧಾದ ಸುತ್ತಲಿನ ಹಳ್ಳಿಗಳಿಗೆ ಭೇಟಿಯಿತ್ತು ಜನತೆಯೊಡನೆ ಒಂದಾಗುತ್ತಿದ್ದರು. ಅವರು ಇದ್ದ ಸ್ಥಳಕ್ಕೆ ಒಂದು ಅನಿರ್ವಚನೀಯ ಪಾವಿತ್ರ್ಯತೆ ತುಂಬಿಕೊಳ್ಳುತ್ತಿತ್ತು ಎಂದು ಆಶ್ರಮವಾಸಿಗಳು ಬಣ್ಣಿಸುತ್ತಿದ್ದರು.

ಖಾನರ ಮನಸ್ಸೆಲ್ಲ ಬಂಗಾಲದ ದಟ್ಟದರಿದ್ರರಾದ ಮುಸಲ್ಮಾನ ಬಾಂಧವರ ಬಗ್ಗೆ ಚಿಂತಿಸುತ್ತಿತ್ತು. ಅವರ ಉದ್ಧಾರದ ಬಗ್ಗೆ ಗಾಂಧೀಜಿಯೊಡನೆ ದೀರ್ಘವಾಗಿ ಸಮಾಲೋಚಿಸಿದರು. ಅವರಲ್ಲಿ ಹೋಗಿ ಬೆರೆತು ಅವರ ಬದುಕನ್ನು ಹಸನುಗೊಳಿಸುವ ರಚನಾತ್ಮಕ ಕ್ರಾಂತಿ ತರಬೇಕು ಎಂದು ಯೋಚಿಸಿದರು. ಬಂಗಾಳಕ್ಕೆ ಹೋಗುವ ಎಲ್ಲ ಸಿದ್ಧತೆ ಮಾಡಿಕೊಂಡರು. ಅಲ್ಲಿನ ಗೆಳೆಯರಿಗೆ ಪತ್ರ ಬರೆದರು. ಈ ಮಧ್ಯೆ ಮಥುರಾ ಮತ್ತು ಅಲಿಘಡಗಳಿಗೆ ಹೋದರು. ಅದ್ಭುತ ಸ್ವಾಗತ ದೊರೆಯಿತು. ಧಾರ್ಮಿಕ ಸಮಾರಂಭಗಳಿಗೆ ಎಂದೂ ಮನಸೋಲದ ಖಾನರು. "ಭಾರತದ ಜನ ಹಳ್ಳಿಗಳಲ್ಲಿ ಕಡು ಬಡತನದಿಂದ ಬಳಲುತ್ತಿದ್ದಾರೆ. ನಮಗಾಗಿ ದುಡಿದು ಅನ್ನ ಬೆಳೆಯುತ್ತಾರೆ. ನಮ್ಮ ದುಂದು ವೆಚ್ಚಗಳ ಸಮಾರಂಭಗಳು ಅವರಿಗೆ ಅವಮಾನವಾದಂತಾಗುವುದಿಲ್ಲವೇ?" ಎಂದು ಪ್ರಶ್ನಿಸಿ ನಿರಾಕರಿಸುತ್ತಿದ್ದರು. "ದಾಸ್ಯವನ್ನೇ ಪ್ರೀತಿಸುವಂತಹ ಅಧೋಗತಿಗೆ ನಾವು ಇಳಿದಿದ್ದೇವೆ. ಅದೇ ನಮ್ಮನ್ನು ಸ್ವಾತಂತ್ರ್ಯದಿಂದ ದೂರ ಇಟ್ಟಿದೆ. ಹಿಂದೂಗಳು, ಮುಸ್ಲಿಮರು ಈ ದೇಶದಲ್ಲಿ ಒಂದಾಗಿ 'ನಾವು ಸ್ವತಂತ್ರರು' ಎಂದು ಎದ್ದು ನಿಲ್ಲುವ ವರೆಗೆ ಈ ವಿದೇಶೀ ದಬ್ಬಾಳಿಕೆ ಕೊನೆಯಾಗುವುದಿಲ್ಲ" ಎಂದು ಬೋಧಿಸಿದರು.

"ಇಸ್ಲಾಮ್ ಧರ್ಮ ಸ್ವಾತಂತ್ರ್ಯವನ್ನು ಬೋಧಿಸಿದೆ. ಅದರೆ

ನಾವೇಕೆ ದಾಸ್ಯದಲ್ಲಿ ನರಳುತ್ತಿದ್ದೇವೆ. ಇದು ಧರ್ಮಕ್ಕೆ ಅಪಚಾರ ವಲ್ಲವೇ" ಎಂದು ಪ್ರಶ್ನಿಸಿದರು.

ವರ್ಧಾದಲ್ಲಿದ್ದಾಗ ಖಾನರ ಮಗಳು ಮೆಹರ್‌ತಾಜ್ ಇಂಗ್ಲೆಂಡಿನಿಂದ ಮೀರಾಬಹೆನ್ನರೊಡನೆ ಹಿಂತಿರುಗಿದಳು. ಘನಿಖಾನ್, ವಲಿಖಾನ್ ಮತ್ತು ಅಲಿಖಾನ್ ತಂದೆಯೊಡನಿರಲು ಬಂದರು. ಮೂರು ವರ್ಷಗಳ ನಂತರ ಈ ಸಂಸಾರ ಗಾಂಧೀಜಿಯ ಬಿಡಾರದಲ್ಲಿ ಒಟ್ಟುಗೂಡಿದ್ದವು. ಮೆಹರ್ ತಾಜಳನ್ನು ಅಲ್ಲಿನ ಮಹಿಳಾಶ್ರಮದಲ್ಲಿ ಮೀರಾಬಹೆನ್ನರೊಡನೆ ಸೇವಾ ಶಿಕ್ಷಣ ಪಡೆಯಬೇಕೆಂದು ಖಾನರು ನಿರ್ಧರಿಸಿದರು. ಆಕೆಯೂ ಸಂತೋಷ ದಿಂದ ಒಪ್ಪಿದಳು. ಗಾಂಧೀಜಿಗೆ ಬಹಳ ಸಂತೋಷವಾಯಿತು.

ಈ ಆನಂದದ ದಿನಗಳು ಬೇಗ ಕಳೆದು ಹೋದವು. ಖಾನರು ಬಂಗಾಳಕ್ಕೆ ಹೋಗಿ ಎಲ್ಲಿ ಮುಸ್ಲಿಮರನ್ನು ರಾಷ್ಟ್ರೀಯ ಆಂದೋಳನದ ಪರವಾಗಿ ಸಂಘಟಿಸುವರೋ ಎಂದು ಭಯಗೊಂಡು ಬ್ರಿಟಿಷ್ ಸರ್ಕಾರ ೧೯೩೪ ರ ಡಿಸೆಂಬರ್ ಏಳರಂದು ಮತ್ತೆ ಬಂಧಿಸಿತು. ಬೊಂಬಾಯಿನ ಕ್ರಿಶ್ಚಿಯನ್ ಸಮಾಜದಲ್ಲಿ ಮಾಡಿದ ಭಾಷಣಕ್ಕಾಗಿ ಖಟ್ಲೆ ಹೂಡಿ ನ್ಯಾಯಾಲಯದ ಮುಂದೆ ನಿಲ್ಲಿಸಿತು.

ಆ ಸಮಯಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಕಾನೂನು ಭಂಗ ಮಾಡಿ ಸೆರೆಮನೆಗೆ ಹೋಗಬಾರದೆಂದೂ ಹಳ್ಳಿಹಳ್ಳಿಗಳಲ್ಲಿ ರಚನಾತ್ಮಕ ಕಾರ್ಯದಿಂದ ಜನತೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಂಘಟಿಸಬೇಕೆಂದೂ ನಿರ್ಣಯಿ ಸಲಾಗಿತ್ತು. ಆದ್ದರಿಂದ ಖಾನರ ಮೇಲಿನ ಖಟ್ಲೆಯಲ್ಲಿ ಅವರ ಪರ ವಾದಿಸಬೇಕೆಂದು ಗಾಂಧೀಜಿ ಸೂಚಿಸಿದರು. ಭೂಲಾಭಾಯಿ ದೇಸಾಯಿ ಯವರೂ, ಕೆ. ಎಂ. ಮುನ್ಷಿಯವರೂ ಮತ್ತು ಕನುಂಗೋ ಅವರೂ ಅಪ ರಾಧಿಯ ಪರವಾದಿಸಿದರು. ಗಫಾರ್‌ಖಾನರು ಒಂದು ಸತ್ಯನಿಷ್ಠವಾದ ಲಿಖಿತ ಹೇಳಿಕೆಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದರು. ಅದರಲ್ಲಿ:

"ನನ್ನ ಅಂದಿನ ಭಾಷಣ ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯ ಬಗ್ಗೆ ವಿವರವಾದ ವರ್ಣನೆ ಮಾಡುವುದಾಗಿತ್ತೇ ಹೊರತು ಯಾರ ಮೇಲೂ ದೂಷಣೆ ಮಾಡುವುದಾಗಿರಲಿಲ್ಲ. ಪ್ರಾಸಂಗಿಕವಾಗಿ ಗಡಿನಾಡಿನಲ್ಲಿ ನಡೆದ

ದೌರ್ಜನ್ಯಗಳನ್ನು ಸತ್ಯನಿಷ್ಠವಾಗಿ ವರ್ಣಿಸಿದ್ದೇನೆ. ಸರ್ಕಾರದ ವಿರುದ್ಧ ದಂಗೆಯೇಳುವಂತೆ ಪ್ರೇರೇಪಿಸುವ ಉದ್ದೇಶವೇ ಇರಲಿಲ್ಲ. ಇದರಿಂದ ರಾಜದ್ರೋಹದ ಆಪಾದನೆಗೆ ಗುರಿಯಾಗುವ ಇಚ್ಛೆಯೂ ಇರಲಿಲ್ಲ. ಅಧಿಕಾರಿಗಳು ನನ್ನ ಭಾಷಣವನ್ನು ಸರಿಯಾಗಿಯೇ ವರದಿ ಮಾಡಿದ್ದಾರೆ. ಅಲ್ಲಲ್ಲಿ ಕೆಲವು ಪದಗಳು ಅವರಿಗೆ ತಿಳಿಯದೇ ಹೋಗಿರಬಹುದು. ಅದರೆ ಯಾವುದನ್ನೂ ನಿರಾಕರಿಸುವುದಿಲ್ಲ. ಕೆಲವು ವಾಕ್ಯಗಳು ಕಟುವಾಗಿದ್ದರೆ ಅದಕ್ಕೆ ಕ್ಷಮೆಬೇಡುತ್ತೇನೆ. ಆದರೆ ಆ ಘಟನೆಗಳ ವರದಿ ಅಸತ್ಯವಾದು ದೇನೂ ಅಲ್ಲ ಎಂದು ನ್ಯಾಯಾಲಯ ತಿಳಿಯಬೇಕು. ನಾನು ನಿಷ್ಠಾವಂತ ಕಾಂಗ್ರೆಸ್ಸಿನವನಾಗಿ ಅದರ ನಿರ್ಣಯಗಳಿಗೆ ಬದ್ಧನಾಗಿದ್ದೇನೆ. ಈಗ ಕಾನೂನು ಭಂಗ ಚಳುವಳಿಗೆ ಅನುಮತಿಯಿಲ್ಲ ಎಂದೂ ಬಲ್ಲೆ. ಆದ್ದರಿಂದ ಆ ಭಾಷಣ ಯಾವ ರಾಜದ್ರೋಹದ ಉದ್ದೇಶದಿಂದಲೂ ಮಾಡಿದ್ದಲ್ಲ. ಅಲ್ಲಿ ನಾನು ನನ್ನ ಇಂಗ್ಲಿಷ್ ಅಧ್ಯಾಪಕರ ಬಗ್ಗೆ ಪ್ರಶಂಸಿದ್ದೇನೆ. ಮುಗ್ಧರಾದ ಪಠಾಣರ ಮೇಲೆ ನಡೆದ ಕ್ರೂರ ಧಾಳಿಗಳ ಬಗ್ಗೆ ಸತ್ಯವಾದುದನ್ನೇ ನುಡಿದಿದ್ದೇನೆ. ಯಾರನ್ನೂ ನೋಯಿಸಬೇಕೆಂದು ಅಲ್ಲ" ಎಂದು ನುಡಿದರು.

ನ್ಯಾಯಾಲಯದಲ್ಲಿ ಸೇರಿದ್ದ ಜನಸ್ತೋಮ ಗಫಾರ್‌ಖಾನರು ಅಲ್ಲಿಗೆ ಬಂದೊಡನೆ ಎದ್ದು ನಿಂತು ಗೌರವ ತೋರಿಸಿದ್ದರು. ನ್ಯಾಯಮೂರ್ತಿ ದೇಸಾಯಿಯವರೂ ಗಫಾರ್‌ಖಾನರ ಪ್ರಾಮಾಣಿಕತೆಯನ್ನು ಪ್ರಶಂಸಿಸಿದರು. ಆದರೂ ಅವರಾಡಿದ ಕೆಲವು ಮಾತುಗಳು ಕಾನೂನಿನ ಪರಿಧಿಯೊಳಗೆ 'ರಾಜದ್ರೋಹ'ಕರವಾಗುವುದೆಂದು ನಿರ್ಣಯಿಸಿ ಎರಡು ವರ್ಷ ಕಠಿಣ ಶಿಕ್ಷೆ ವಿಧಿಸಿದರು. ಅಣ್ಣ ಡಾ. ಖಾನ್ ಸಾಹೇಬರಿಗೆ ಈ ಅಗಲಿಕೆ ದೊಡ್ಡ ಆಘಾತವಾಯಿತು. ಮಕ್ಕಳು ತಂದೆಯಿಂದ ದೂರವಾಗಿ ಉಳಿದರು. ಗಾಂಧೀಜಿ ಈ ಬಗ್ಗೆ ಸರ್ಕಾರದ ನಿಲುವನ್ನು ಖಂಡಿಸಿದರು. ಗಫಾರ್ ಖಾನರನ್ನು ಮೊಂಟಾಯಿನ ಡೈಕುಲ್ಲಾ ಸೆರೆಮನೆಗೆ ಕಳುಹಿಸಲಾಯಿತು. ಅಲ್ಲಿನ ಹವೆ ಅವರಿಗೆ ಒಗ್ಗಲಿಲ್ಲ. ಅನಾರೋಗ್ಯದಿಂದ ಬಳಲಿದರು.

ಅಲ್ಲಿಂದ ಗಫಾರ್‌ಖಾನರನ್ನು ಮೊದಲು ಸಬರ್ಮತಿ ಜೈಲಿಗೆ, ನಂತರ ಬರೈಲಿ ಜೈಲಿಗೆ ವರ್ಗಾಯಿಸಿದರು. ಅವರನ್ನು ಗಾಂಧೀಜಿಯವರಿಂದ

ಎಷ್ಟು ದೂರ ಸಾಗಿಸಿದರೆ ಅಷ್ಟು ಕ್ಷೇಮ ಎಂದು ಆಗಿನ ಮಧ್ಯಪ್ರದೇಶದ ಸರ್ಕಾರ ಅಭಿಪ್ರಾಯಪಟ್ಟಿತ್ತು. ಅವರು ಜೈಲಿನಲ್ಲಿದ್ದರೂ ಅವರ ಪ್ರಭಾವ ಸುತ್ತಲಿನ ಜನರ ಆಕ್ರೋಶವನ್ನು ಹೆಚ್ಚಿಸಿ ಸರ್ಕಾರದ ಬಗ್ಗೆ ಅವಿಶ್ವಾಸ ಬೆಳೆಯುತ್ತದೆ ಎಂದು ಬ್ರಿಟಿಷ್ ಅಧಿಕಾರಿಗಳು ವರದಿ ಮಾಡಿದ್ದರು. ಗಾಂಧೀಜಿ ೧೯೩೫ ರ ಮೇ ತಿಂಗಳಿನಲ್ಲಿ ಭೇಟಿಗೆ ಬಂದಾಗ ಸರ್ಕಾರ ದೊಡನೆ ವ್ಯವಹರಿಸಿ ಗಫಾರ್‌ಖಾನರನ್ನು 'ಎ' ತರಗತಿ ಖೈದಿಯನ್ನಾಗಿ ಪರಿವರ್ತಿಸಲು ಕಾರಣರಾದರು. ಖಾನರ ಆರೋಗ್ಯ ದಿನದಿನಕ್ಕೆ ಕೆಡು ತ್ತಿತ್ತು. ಖೈದಿಯಾಗಿ ಅವರ ಉತ್ತಮ ನಡತೆಯಿಂದ ನಾಲ್ಕುವರೆ ತಿಂಗಳ ರಿಯಾಯ್ತಿ ದೊರೆತು ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಗಡಿನಾಡು ಪ್ರಾಂತಕ್ಕೆ ಪ್ರವೇಶಿಸಕೂಡದೆಂಬ ಆಜ್ಞೆ ಜಾರಿಮಾಡಲಾಯಿತು. ಆದ್ದರಿಂದ ಖಾನರು ಮತ್ತೆ ವರ್ಧಾಕ್ಕೆ ಹಿಂತಿರುಗಿದರು.

೧೯೩೬ ರಲ್ಲಿ ಗಾಂಧೀಜಿ ವರ್ಧಾದಿಂದ ಆರು ಮೈಲಿ ದೂರದ ಸೇವಾಗ್ರಾಮದಲ್ಲಿ ಕುಟೀರ ನಿರ್ಮಿಸಿಕೊಂಡು ಆಶ್ರಮವಾಸಿಗಳಾದರು. ಅದಕ್ಕೆ ಮುಂಚೆ ಮೀರಾಬಹೆನ್ ಅಲ್ಲಿ ತನ್ನ ಕುಟೀರ ಕಟ್ಟಿಕೊಂಡು ಗ್ರಾಮ ಸೇವೆಯಲ್ಲಿ ನಿರತರಾಗಿದ್ದರು. ಆಮೇಲೆ ಅಲ್ಲಿ ಕಸ್ತೂರಿಬಾ ಕುಟೀರ, ಮಹ ದೇವ ದೇಸಾಯಿಯವರ ಕುಟೀರಗಳೂ, ಇತರ ಕಾರ್ಯಕರ್ತರ ನಿವಾಸಗಳೂ ಎದ್ದವು. ಸೇವಾಗ್ರಾಮ ಭಾರತದ ಮಧ್ಯಬಿಂದುವಾಗಿ ರಾಷ್ಟ್ರನಾಯಕರ ಸ್ಫೂರ್ತಿಕೇಂದ್ರವಾಯಿತು. ಗಫಾರ್‌ಖಾನರು ದಿನವೂ ಸೇವಾಗ್ರಾಮಕ್ಕೆ ನಡೆದು ಹೋಗಿ ದಿನವೆಲ್ಲ ಗಾಂಧೀಜಿಗೆ ಸಹಾಯಕರಾಗಿ ಕೆಲಸ ಮಾಡುತ್ತಿ ದ್ದರು. ಅದೇ ವರ್ಷ ಅಕ್ಟೋಬರ್ ಎರಡರಂದು ಗಾಂಧೀಜಿಯ ಅರ ವತ್ತೇಳನೆಯ ಜನ್ಮದಿನ ಬಂತು. ಸೇವಾಗ್ರಾಮದ ಕುಟೀರದಲ್ಲಿನ ಪ್ರಾರ್ಥನಾ ಸಭೆಗೆ ರಾಷ್ಟ್ರನಾಯಕರೆಲ್ಲ ಆಗಮಿಸಿದ್ದರು. ವಿಶೇಷವಾಗಿ ಗಫಾರ್‌ಖಾನರು ಅಂದು ಅಲ್ಲಿ ಉಪಸ್ಥಿತರಿದ್ದುದನ್ನು ಗಾಂಧೀಜಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಇಬ್ಬರ ಹೃದಯಗಳೂ ಮನಸ್ಸುಗಳೂ ಒಂದೇ ದಿವ್ಯ ಶ್ರುತಿಗೆ ಸ್ವರಗೂಡಿಸಿದ್ದುದರಿಂದ ಆ ದಿನದ ಆನಿರ್ವಚನೀಯ ಆನಂದ ಆಶ್ರಮವಾಸಿಗಳೆಲ್ಲರನ್ನೂ ಸೂರೆಗೊಂಡಿತು. ಮುಂದೆ ಅದೇ ತಿಂಗಳಿನಲ್ಲಿ ವಾರಣಾಸಿಯಲ್ಲಿ ನಿರ್ಮಿತವಾದ 'ಭಾರತಮಾತೆ ಮಂದಿರ'ದ ಪ್ರಾರಂಭೋತ್ಸವಕ್ಕೆ ಗಾಂಧೀಜಿ ತಮ್ಮ ಆತ್ಮೀಯ ಬಂಧುವಿನಂತೆ ಗಫಾರ್

ಖಾನರನ್ನು ಅತ್ಯಂತ ಆದರದಿಂದ ಬರಮಾಡಿಕೊಂಡರು. ಭಗವಾನ್ ದಾಸರು ಇಸ್ಲಾಮ್ ಧರ್ಮದ ಆಳವಾದ ಅಧ್ಯಯನ ನಡೆಸಿದ್ದವರು, ಆ ಅಪೂರ್ವ ಸಂದರ್ಭದಲ್ಲಿ ಪ್ರೇಮ, ಶಾಂತಿ ಮತ್ತು ಐಕ್ಯತೆಯನ್ನು ಸಾರುವ ಸರ್ವ ಧರ್ಮಗಳ ಮಹಾಪೂರ ಉಕ್ಕಿ ಹರಿದು ಭಾರತಮಾತೆಯ ಮಡಿಲಲ್ಲಿ ಮಾನವ ಕುಲ ಒಂದು ಎಂಬ ಭಾವನೆ ಪಸರಿಸಿ ನಿಂತಿತು.

ಗಾಂಧೀಜಿ ನುಡಿದರು, "ಇಲ್ಲಿ ಉದ್ಘೋಷಿತವಾದ ವೇದಮಂತ್ರಗಳು ನನ್ನಲ್ಲಿ ಪ್ರತಿಧ್ವನಿತವಾದವು. ನಾವು ದಿನವೂ ಆಶ್ರಮ ಪ್ರಾರ್ಥನೆಯಲ್ಲಿ ಪಠಿಸುವ ಸುಂದರ ಶ್ಲೋಕ ನೆನಪಾಯಿತು. ಇಪ್ಪತ್ತು ವರ್ಷಗಳಿಂದಲೂ ಆ ಶ್ಲೋಕ ನನ್ನಲ್ಲಿ ಆಳವಾಗಿ ಬೇರೂರಿದೆ,

ಸಮುದ್ರ ವಸನೇ ದೇವಿ ಪರ್ವತಸ್ತನ ಮಂಡಲೇ।
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ॥

ಈ ಭೂಮಿತಾಯಿಯ ಶ್ರದ್ಧಾ ಪೂರ್ಣ ಸೇವೆಗಾಗಿ ನಮ್ಮನ್ನು ಅರ್ಪಿಸಿಕೊಳ್ಳುವುದಕ್ಕಾಗಿಯೇ ಸೇರಿದ್ದೇವೆ. ನಮ್ಮನ್ನು ಹೆತ್ತತಾಯಿ ನಮ್ಮ ಹಾಗೆಯೇ ಒಂದು ದಿನ ಮೃತಳಾಗುವಳು. ಆದರೆ ಇಡೀ ಜೀವನ ವನ್ನು ಧರಿಸಿ ರಕ್ಷಿಸುವ ಈ ವಿಶ್ವಮಾತೆ ಅಮರ. ನಮ್ಮ ಕೊನೆಯುಸಿರಿನ ವರೆಗೂ ಆಕೆ ನಮ್ಮ ದೀಕ್ಷಾಬದ್ಧ ಸೇವೆಯನ್ನು ಬೇಡುತ್ತಾಳೆ".

ಗಫಾರ್‌ಖಾನರು ಧ್ವನಿಗೂಡಿಸಿದರು. "ಬಹುಕಾಲದ ಹಿಂದೆ ಸರ್ವ ವಿಧ ಪ್ರಾರ್ಥನೆಗಳಿಗೂ ಅವಕಾಶವಿದ್ದ ದೇಗುಲಗಳಿದ್ದವು. ಈ ಮಂದಿರ ಸರ್ವಧರ್ಮೀಯರ ಭಕ್ತಿಪೂರ್ವಕ ಪ್ರಾರ್ಥನೆಗಳಿಗೆ ಕೇಂದ್ರವಾಗಲಿ" ಎಂದು ಹಾರೈಸಿದರು.

ವಾರಣಾಸಿಯಿಂದ ಗಾಂಧೀಜಿ ಮತ್ತು ಬಾದ್‌ಷಾಖಾನರು ಅಲ ಹಾಬಾದ್‌ಗೆ ಹೋಗಿ ವರ್ಧಾಕ್ಕೆ ಹಿಂತಿರುಗಿದರು. ಆ ವೇಳೆಯಲ್ಲಿ ಬ್ರಿಟಿಷ್ ಸರ್ಕಾರದ ಗೃಹಮಂತ್ರಿ ಗಡಿನಾಡು ಪ್ರಾಂತಕ್ಕೆ ಹೋಗಿದ್ದಾಗ ಗಫಾರ್‌ಖಾನರು ಜನರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟುತ್ತಿರುವ ರೆಂದೂ, ಚುನಾವಣೆಗಳಲ್ಲಿ ಮತದಾರರನ್ನು ಅವರ ಹಾದಿಗೆ ಎಳೆಯುತ್ತಾ ರೆಂದೂ, ಸರ್ಕಾರ ಕರೆದ ಸಭೆಗಳಿಗೆ ಹಾಜರಾಗದೆ ಅಧಿಕಾರಿಗಳಿಗೆ



ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಗಾಂಧೀಜಿಯೊಡನೆ

ಅವಮಾನ ಮಾಡಿದರೆಂದೂ, ದೇಶವಲ್ಲೆಲ್ಲ ರಾಜದ್ರೋಹಕರ ಭಾಷಣ ಗಳನ್ನು ಮಾಡುತ್ತಿದ್ದಾರೆಂದೂ ಆಪಾದಿಸಿದ್ದರು. ಈ ಎಲ್ಲ ಆಪಾದನೆ ಗಳನ್ನು ಸಕಾರಣವಾಗಿ ನಿರಾಕರಿಸಿ ಗಫಾರ್‌ಖಾನರು ವರ್ಧಾದಿಂದಲೇ ಒಂದು ದೀರ್ಘ ಹೇಳಿಕೆಯನ್ನು ಪ್ರಕಟಿಸಿದರು. ಖುದಾಯಿ ಖಿದ್‌ಮತ್ ಗಾರರನ್ನು ಅಪ್ರಾಮಾಣಿಕರೆಂದೂ, ಹಿಂಸಾಚಾರದಲ್ಲಿ ತೊಡಗಿದವರೆಂದೂ ದೂರಿರುವುದನ್ನು ಪ್ರತಿಭಟಿಸಿದರು. ತಮ್ಮನ್ನು ವರ್ಷಗಟ್ಟಲೆ ತಮ್ಮ ಜನ ರಿಂದ ಬೇರ್ಪಡಿಸಿಟ್ಟು ನಿಷ್ಠಾವಂತರೂ ಪ್ರಾಮಾಣಿಕರೂ ಆದ ಕಾರ್ಯ ಕರ್ತರನ್ನು ದೂಷಿಸುವುದು ಬ್ರಿಟಿಷರಿಗೆ ಭೂಷಣವಲ್ಲವೆಂದರು. ಕಾಯಾ, ವಾಚಾ, ಮನಸಾ, ಅಹಿಂಸೆಗೆ ನಿಷ್ಠರಾಗಿ, ಗಾಂಧೀಜಿಯ ಅನುಯಾಯಿ ಗಳಾಗಿ, ಸತ್ಯಾಗ್ರಹದ ಸರ್ವ ನಿಯಮಗಳನ್ನು ಪಾಲಿಸುತ್ತಾ, ತಾವೇ ಶಿಕ್ಷೆಗಳಿಗೆ ಗುರಿಯಾಗಿ ಹೋರಾಡುತ್ತಿರುವ ಗಡಿನಾಡಿನ ರಾಷ್ಟ್ರಭಕ್ತರ ಬಗ್ಗೆ ಗೃಹಮಂತ್ರಿ ಆಡಿರುವ ಮಾತುಗಳು ಖಂಡನೀಯ ಎಂದರು. ತಮ್ಮ ಮಾತುಗಳಿಗೆ ಸಾಕ್ಷೀಭೂತವಾಗಿ ಈಗಾಗಲೇ ಗಡಿನಾಡಿಗೆ ಭೇಟಿಯಿತ್ತು ಪ್ರಶಂಸನೀಯ ವರದಿಗಳನ್ನು ಕೊಟ್ಟಿರುವ ಬೊಂಬಾಯಿನ ಖುರ್ಷದ್ ಬಹೆನ್ ನವರೋಜಿ, ಶ್ರೀ ವಿಠಲಭಾಯಿ ಪಟೇಲ್, ಫಾದರ್ ವೆರಿಯರ್ ಎಲ್ವಿನ್, ದೇವದಾಸ್ ಗಾಂಧಿ ಮುಂತಾದವರ ಹೇಳಿಕೆಗಳನ್ನು ಉದಹರಿಸಿ ದರು. "ಈಗ ಪ್ರಕಟಿಸಿರುವ ರಾಜಕೀಯ ಸುಧಾರಣೆಗಳು ಪೂರ್ಣ ಸ್ವರಾಜ್ಯವಲ್ಲ. ಅದನ್ನು ಸಾಧಿಸುವುದೇ ಖುದಾಯ್ ಖಿದ್‌ಮತ್‌ಗಾರರ ವ್ರತದೀಕ್ಷೆ" ಎಂದರು.

ಖುದಾಯಿ ಖಿದ್‌ಮತ್‌ಗಾರ್ ಸಂಘಟನೆಯನ್ನು ಕಾನೂನು ಬಾಹಿರ ಎಂದು ಸರ್ಕಾರ ಘೋಷಿಸಿತ್ತು. ಗಫಾರ್‌ಖಾನರ ಮೇಲಿನ ಪ್ರತಿಬಂಧಾಜ್ಞೆ ಯನ್ನೂ ವಿಸ್ತರಿಸಿತ್ತು. ಕಾಂಗ್ರೆಸ್ ಅಧ್ಯಕ್ಷ ಜವಹರಲಾಲರು ಈ ಬಗ್ಗೆ ತೀವ್ರವಾಗಿ ಪ್ರತಿಭಟಿಸಿದರು. ಗಫಾರ್‌ಖಾನರ ಬಗ್ಗೆ ಗೌರವ ಹೆಚ್ಚಿತು.

೧೯೩೭ ರಲ್ಲಿ ಗಾಂಧೀಜಿಯ ಆದೇಶದಂತೆ ಮೊದಲಬಾರಿಗೆ ಅಖಿಲ ಭಾರತ ಕಾಂಗ್ರೆಸ್ ಗ್ರಾಮಾಭಿಮುಖವಾಯಿತು. ಮಹಾರಾಷ್ಟ್ರದ ಫೈಜ್ ಪೂರ್ ಗ್ರಾಮದಲ್ಲಿ ನಡೆದ ಅಧಿವೇಶನಕ್ಕೆ ಜವಹರಲಾಲರೇ ಮತ್ತೆ ಅಧ್ಯಕ್ಷ ರಾಗಿ ಚುನಾಯಿತರಾದರು. ಗಾಂಧೀಜಿ ಕಾಂಗ್ರೆಸ್ ಸದಸ್ಯರಲ್ಲದಿದ್ದರೂ

ಅಧಿವೇಶನಕ್ಕೆ ಬಂದು ಅಲ್ಲಿನ ಸ್ವದೇಶೀ ವಸ್ತು ಪ್ರದರ್ಶನದ ಆರಂಭೋತ್ಸವ ನೆರವೇರಿಸಿದರು. ಖಾನ್ ಅಬ್ದುಲ್ ಗಫಾರ್‌ಖಾನರೂ ಜೊತೆಯಲ್ಲಿದ್ದರು. ಅಧಿವೇಶನದಲ್ಲಿ ಗ್ರಾಮ ಪುನರುಜ್ಜೀವನ ಕಾರ್ಯವನ್ನು ಗಾಂಧೀ ಪ್ರಣೀತ ರಚನಾತ್ಮಕ ಕ್ರಾಂತಿಯ ಮೂಲಕ ನೆರವೇರಿಸಿದಾಗ ಮಾತ್ರವೇ ನಿಜವಾದ ಸ್ವರಾಜ್ಯ ಪ್ರಾಪ್ತವಾದೀತು ಎಂದು ಪ್ರಭಾವಯುತವಾಗಿ ವಾದಿಸಿದರು.

ಜವಹರಲಾಲರು ಮಾತನಾಡುತ್ತಾ, "ಹಲವು ವರ್ಷಗಳಿಂದ ನಮ್ಮೊಡನಿರಲು ಆಗದೆ ಬಂಧನದಲ್ಲಿದ್ದ ರಾಷ್ಟ್ರವೀರ ಖಾನ್ ಅಬ್ದುಲ್ ಗಫಾರ್ ಖಾನರಿಗೆ ಹಾರ್ದಿಕ ಸ್ವಾಗತ ಬಯಸುತ್ತೇನೆ. ಅವರಿಗೂ ಅವರ ಅನುಯಾಯಿಗಳಾದ ಗಡಿನಾಡಿನ ವೀರ ದೇಶ ಸೇವಕರಿಗೂ ಅವರ ನಿಸ್ಸೀಮ ತ್ಯಾಗ ಬಲಿದಾನಗಳಿಗಾಗಿ ರಾಷ್ಟ್ರ ಋಣಿಯಾಗಿದೆ. ಬ್ರಿಟಿಷ್ ಸರ್ಕಾರ ಅವರನ್ನು ತನ್ನ ಪ್ರಾಂತಕ್ಕೆ ಕಾಲಿಡದಂತೆ ಹಲವು ವರ್ಷಗಳಿಂದ ಪ್ರತಿಬಂಧಿಸಿರುವುದು ನಾಚಿಕೆಗೇಡು. ಎಲ್ಲ ಕಡೆ ಕಾಂಗ್ರೆಸ್ಸಿನ ಮೇಲೆ ಪ್ರತಿಬಂಧಕಾಜ್ಞೆ ರದ್ದಾಗಿದ್ದರೂ ಗಡಿನಾಡಿನಲ್ಲಿ ಕಾಂಗ್ರೆಸ್ಸನ್ನು ಕಾನೂನು ಬಾಹಿರ ಸಂಸ್ಥೆ ಎಂದೇ ಪರಿಗಣಿಸಲಾಗಿದೆ. ಈ ದಬ್ಬಾಳಿಕೆಯಿಂದ ಮೇಲು ನೋಟಕ್ಕೆ ನಾವು ಬಲಹೀನರಾಗಿ ಕಂಡರೂ ನಮ್ಮ ಪ್ರಚಂಡ ನೈತಿಕಶಕ್ತಿ ಬೆಳೆಯುತ್ತಲೇ ಸಾಗಿದೆ. ಗಫಾರ್‌ಖಾನರೂ ಅವರ ಖುದಾಯಿ ಖಿದ್‌ಮತ್‌ಗಾರ್ ಪಡೆಯವರೂ ನಮ್ಮ ಹೋರಾಟದ ಅಪ್ರತಿಮ ಮುಂದಾಳುಗಳಾಗಿರುವುದೂ ನಮಗೊಂದು ಹೆಮ್ಮೆ" ಎಂದರು.

ಫೈಜ್‌ಪುರ ಕಾಂಗ್ರೆಸ್ಸಿನ ಸಮಾರೋಪದ ದಿನವೇ ೧೯೩೬ ರ ಡಿಸೆಂಬರ್ ೧೪ ರಂದು ಗಡಿನಾಡು ಸರ್ಕಾರ ಸಾರ್ವಜನಿಕ ಶಾಂತಿಪಾಲನೆ ಕಾನೂನಿನ ಐದನೇ ವಿಧಿ ನಿಯಮದಂತೆ ಗಫಾರ್‌ಖಾನರ ಮೇಲೆ ಮತ್ತೆ ಆಜ್ಞೆ ಹೊರಡಿಸಿತು. "ನೀವು ಗಡಿನಾಡು ಪ್ರಾಂತದೊಳಕ್ಕೆ ಬರುವುದನ್ನೂ ಅಲ್ಲಿ ನೆಲೆಸುವುದನ್ನೂ ಸ್ವಲ್ಪ ಕಾಲ ಇರುವುದನ್ನೂ ನಿಷೇಧಿಸಲಾಗಿದೆ. ಇದು ಒಂದು ವರ್ಷಕಾಲ ಜಾರಿಯಲ್ಲಿರುತ್ತದೆ" ಎಂದು ಗೌರ್ನರರ ಆಜ್ಞೆಯನ್ನು ಜಾರಿಮಾಡಿದರು. ಚುನಾವಣೆಗಳು ಘೋಷಿತವಾದುದರಿಂದ ಯಾವ ಕಾಂಗ್ರೆಸ್ ನಾಯಕರೂ ಗಡಿನಾಡಿಗೆ ಪ್ರವೇಶಿಸದಂತಾಯಿತು.

ಗಫಾರ್‌ಖಾನರು ವರ್ಧಾಕ್ಕೆ ಹಿಂತಿರುಗಿದರು.

ಮಹಾತ್ಮಗಾಂಧಿ ಮತ್ತು ಗಡಿನಾಡಿನ ಗಾಂಧಿ ಇವರ ಪರಸ್ಪರ ಬಾಂಧವ್ಯ ಸಾಮಾನ್ಯತೆಯನ್ನು ಮೀರಿನಿಂತು ಆಧ್ಯಾತ್ಮಿಕ ಸೌರಭದಿಂದ ಪರಿಮಳ ಬೀರಿತು ಎಂದು ಅವರೊಡನೆ ಸೇವಾ ಗ್ರಾಮದಲ್ಲಿದ್ದ ಪ್ಯಾರೆ ಲಾಲರು ಗಫಾರ್‌ಖಾನರ ಜೀವನ ಕುರಿತು ಬರೆದಿರುವ ಗ್ರಂಥದಲ್ಲಿ ಹೇಳಿದ್ದಾರೆ. ಅವರದೇ ಮಾತುಗಳಲ್ಲಿ:-

"ಆ ದಿನಗಳು ಅವರಿಬ್ಬರಿಗೂ ಅಮೂಲ್ಯ ಅನುಭವದ ದಿನಗಳಾದವು. ಇಬ್ಬರೂ ತಮ್ಮ ಆಂತರಿಕ ಅನುಭವಗಳನ್ನು ಹಂಚಿಕೊಂಡರು. ಹಿಂದೂ ಮುಸ್ಲಿಮ್ ಐಕ್ಯದ ಉತ್ಕಟ ಆಕಾಂಕ್ಷೆ ಹೊಂದಿದ್ದ ಗಾಂಧೀಜಿಗೆ ಗಫಾರ್‌ಖಾನರು ಅತ್ಯುತ್ತಮ ಮುಸ್ಲಿಮ್ ಸಂಪ್ರದಾಯದ ಪ್ರತೀಕವೆನಿಸಿದರು. ಅವರಂಥ ಶ್ರದ್ಧಾವಂತ, ಸರಳ, ಆಸ್ತಿಕ ಮನೋಧರ್ಮದ ಹಾಗೂ ಮತೀಯ ಸೌಹಾರ್ದದ ವ್ಯಕ್ತಿಯಾಗಿದ್ದ ನಿಜ ಮುಸಲ್ಮಾನರೆಲ್ಲಿ ದೊರಕಿಯಾರು? ಬಾದ್‌ಷಾಖಾನರಿಗಾದರೋ ಗಾಂಧೀಜಿ ಕೇವಲ ರಾಜಕೀಯ ನಾಯಕರೆನಿಸಿರಲಿಲ್ಲ. ಅವರ ಕೀರ್ತಿಯಾಗಲೀ ಪ್ರಸಿದ್ಧಿಯಾಗಲೀ ಖಾನರಿಗೆ ಮುಖ್ಯವೆನಿಸಲಿಲ್ಲ. ಅವರೊಬ್ಬ ಆಧ್ಯಾತ್ಮಿಕ ಸಾಧಕರು, ನಿಜವಾದ ಧಾರ್ಮಿಕ ಪ್ರವೃತ್ತಿಯುವರು, ಪ್ರಾರ್ಥನಾಪರರು, ದೇವರಲ್ಲಿ ಅಚಲ ನಂಬಿಕೆಯುಳ್ಳ ಸಾಧು ಪುರುಷರು ಎಂದೇ ಖಾನರು ಆಕರ್ಷಿತರಾದರು. ಅವರ ಶುದ್ಧ ವೈರಾಗ್ಯ ಜೀವನ, ಸೇವಾ ತತ್ಪರತೆ, ಅಂತರ್ಯವನ್ನು ಬೆಳಗಿ ಕೈಹಿಡಿದು ನಡೆಸುವ ಭಗವಂತನಲ್ಲಿ ಗಾಢವಾದ ಅವಲಂಬನೆ, ಜೀವನದ ಅತಿ ಸಣ್ಣ ವಿಷಯದಲ್ಲೂ ದೇವರ ಕೃಪೆಯ ಪ್ರಜ್ಞೆ ಇವುಗಳಿಗೆ ಖಾನರು ಮಾರುಹೋದರು.

"ನನ್ನಂಥ ಮುಸಲ್ಮಾನ ಅಥವ ಪಠಾಣ ಅಹಿಂಸೆಯಲ್ಲಿ ಶ್ರದ್ಧೆ ಹೊಂದುವದು ಆಶ್ಚರ್ಯವೇನಲ್ಲ. ಪ್ರವಾದಿ ಮಹಮ್ಮದರು ಮೆಕ್ಕಾದಲ್ಲಿದ್ದಾಗಲೇ ಅದನ್ನು ಅನುಷ್ಠಾನ ಮಾಡಿ ತೋರಿಸಿದ್ದಾರೆ. ಅಲ್ಲಿಂದಾಚೆಯೂ ಅನೇಕ ಸಾಧುಸಂತರು ಅಹಿಂಸೆಯ ಪಥವನ್ನು ತುಳಿದಿದ್ದಾರೆ. ಆದರೆ ಆ ದಿಶೆಯನ್ನು ನಾವು ಮರೆತಿದ್ದೆವು. ಈ ದಿವ್ಯಪಥವನ್ನು ವ್ಯಾಪಕಗೊಳಿಸಿ ನಮ್ಮ ರಾಷ್ಟ್ರೀಯ ವಿಮೋಚನೆಯ ಮಾರ್ಗವನ್ನಾಗಿ ಪರಿವರ್ತಿಸಿ

ಕೊಟ್ಟಿರುವುದೇ ಮಹಾತ್ಮಜಿಯ ಅಮೂಲ್ಯ ಕೊಡುಗೆ" ಎಂದು ಗಫಾರ್ ಖಾನರೇ ಹೇಳುತ್ತಿದ್ದರು.

"ಯಾವ ಉತ್ಕಟ ಪರಿಸ್ಥಿತಿಯಲ್ಲಾಗಲೀ ಗಾಂಧೀಜಿ ಒಂದು ದೃಢ ನಿರ್ಣಯಕ್ಕೆ ಬಂದಾಗ ಅದು ದೇವರಿಗೆ ಸಂಪೂರ್ಣ ಶರಣು ಬಂದ ಶುದ್ಧಾತ್ಮನಿಗೆ ಬೋಧೆಯಾದ ಅಂತರ್ವಾಣಿ ಎಂದೇ ನಾನು ಸ್ವೀಕರಿಸುತ್ತೇನೆ. ದೇವರ ದಾರಿ ಎಂದೂ ಅಸತ್ಯ ಮಾರ್ಗಕ್ಕೆಳೆಯಲಾರದು.

"ಬಾಪೂವಿನ ನಿರ್ಧಾರವನ್ನು ಪ್ರಶ್ನಿಸುವ ಸಂದರ್ಭವೇ ನನಗೆ ಬರಲಿಲ್ಲ. ಕಾರಣ ಅವರು ಎಲ್ಲವನ್ನೂ ದೈವಚಿತ್ತಕ್ಕೆ ಒಪ್ಪಿಸಿ ಅವನ ಅಣತಿಯನ್ನು ಆಲಿಸುತ್ತಿದ್ದರು. ನನಗಂತೂ ಯಾರು ಸಂಪೂರ್ಣವಾಗಿ ದೈವನಿಯಮಕ್ಕೆ ಶರಣಾಗಿ ಬಾಳುತ್ತಾರೆಯೋ ಅವರ ಮಾತೇ ನಮಗಿರುವ ಏಕೈಕ ಮಾನದಂಡ" ಎಂದು ಮತ್ತೊಂದು ಸಂದರ್ಭದಲ್ಲಿ ನುಡಿದರು.

ಹೀಗೆ ಅಹಿಂಸಾ ಮಾರ್ಗವನ್ನು ಪೂರ್ಣ ವಿಶ್ವಾಸದಿಂದ ಅಂಗೀಕರಿಸಿ ಆತ್ಮಶಕ್ತಿಯ ಅಪೂರ್ವ ಪ್ರಯೋಗದಲ್ಲಿ ತಲ್ಲೀನರಾದ ಗಫಾರ್‌ಖಾನರು ಎಂದೂ ಯಾವ ಸ್ಥಾನಮಾನಗಳಿಗೂ ಸ್ಪರ್ಧಿಸಲಿಲ್ಲ. ಅಧಿಕಾರಕ್ಕಾಗಲೀ ಶ್ರೀಮಂತಿಕೆಗಾಗಲೀ ಮರುಳಾಗಲಿಲ್ಲ. ಮಾನವನ ಮಾನವೀಯತೆಯಲ್ಲೇ ಅವರಿಗೆ ತೃಪ್ತಿ. ಮಾನವ ಕುಲ ಒಂದಲ್ಲ ಒಂದು ದಿನ ಕೌಟುಂಬಿಕ ಪ್ರೇಮದಿಂದ ಬಾಳುತ್ತದೆ ಎನ್ನುವುದನ್ನು ಅವರು ನಂಬಿದ್ದರು. ಪ್ರೇಮದ ಪರಿಧಿಯನ್ನು ಹಿಗ್ಗಿಸಿದಷ್ಟೂ ಅದು ಪ್ರಬಲ ನೈತಿಕ ಶಕ್ತಿಯಾಗುತ್ತದೆ. ಸಾಮೂಹಿಕ ಅಹಿಂಸೆ ಒಂದು ಅಪ್ರತಿಹತ ಶಕ್ತಿ. ಮಾನವ ಸಮಾಜದ ಉಳಿವಿಗೆ, ಅದರ ವಿಕಾಸಕ್ಕೆ ಸತ್ಯಾಗ್ರಹಕ್ಕಿಂತ ಅನ್ಯ ಪಥವೇ ಇಲ್ಲ ಎಂದು ಗಫಾರ್‌ಖಾನ್ ಆಚರಿಸಿ ತೋರಿದರು.

೧೯೩೭ ರಲ್ಲಿ ಬ್ರಿಟಿಷ್ ಸರ್ಕಾರಕ್ಕೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೂ ಒಂದು ತಾತ್ಕಾಲಿಕ ಒಡಂಬಡಿಕೆಯಾಗಿ ಹನ್ನೊಂದು ಬ್ರಿಟಿಷ್ ಆಡಳಿತ ಪ್ರಾಂತಗಳಿಗೆ ಚುನಾಯಿತ ಸರ್ಕಾರಗಳು ಏರ್ಪಟ್ಟುವು. ಗಡಿನಾಡು ಪ್ರಾಂತದಲ್ಲೂ ಇತರ ಪ್ರಾಂತಗಳಂತೆ ಕಾಂಗ್ರೆಸ್ ಈ ಚುನಾವಣೆಯಲ್ಲಿ ಪ್ರಚಂಡ ಬಹುಮತಗಳಿಸಿತು. ಗಡಿನಾಡಿಗೆ ಬರ

ಕೂಡದೆಂದು ಖಾನ್‌ಸಹೋದರರ ಮೇಲೆ ಪ್ರತಿಬಂಧಕಾಜ್ಞೆ ಮುಂದು ವರಿದೇ ಇತ್ತು. ಆದರೆ ಅವರ ಪ್ರಭಾವ ಅಜೇಯವಾಯಿತು. ಗಫಾರಾ ಖಾನರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. “ಪೂರ್ಣ ಸ್ವರಾಜ್ಯ ದೊರೆಯುವವರೆಗೆ ನನಗೆ ಯಾವ ಆಂಶಿಕ ಸ್ವಾತಂತ್ರ್ಯವೂ ಸಮ್ಮತಿ ಯಾಗುವುದಿಲ್ಲ” ಎಂದುಬಿಟ್ಟರು. ಅಧಿಕಾರ ಸ್ಥಾನಗಳಲ್ಲಿದ್ದರೆ ಜನತೆಯಿಂದ ಬಹಳ ದೂರವಾಗಿಬಿಡುತ್ತೇವೆಂದು ಗಾಂಧೀಜಿ ಎಚ್ಚರಿಸುತ್ತಿದ್ದರು. ಸರ್ಕಾರಗಳಿಂದ ಸಮಾಜದಲ್ಲಿ ಕ್ರಾಂತಿ ಆಗುವುದಿಲ್ಲ. ಅದು ಪ್ರಜಾಪ್ರಭುತ್ವ ವಾದರೆ ಸ್ವಲ್ಪ ಸಹಕಾರಿಯಾದೀತು ಅಷ್ಟೆ ಎಂದು ಅವರ ಮತ. ಗಫಾರ್‌ಖಾನರಿಗೂ ಇದು ಒಪ್ಪಿಗೆಯಾಯಿತು. ೧೯೩೭ ರ ಆಗಸ್ಟ್‌ವರೆಗೆ ಗಡಿನಾಡಿಗೆ ಹೋಗಲು ಅವರನ್ನು ಬಿಡಲೇ ಇಲ್ಲ. ಅನಂತರ ಗಾಂಧೀಜಿ ಮನವೊಲಿಸಿ ಅವರನ್ನು ಗಡಿನಾಡಿನ ಪ್ರವಾಸಕ್ಕೆ ಒಪ್ಪಿಸಿದರು.

೧೨. ಗಡಿನಾಡಿನಲ್ಲಿ ಗಾಂಧೀಜಿ

೧೯೩೭ ರಲ್ಲಿ ಸೀಮಿತ ಸ್ವಯಮಾಡಳಿತ ಪದ್ಧತಿ ಪ್ರಾಯೋಗಿಕವಾಗಿ ಹನ್ನೊಂದು ಪ್ರಾಂತಗಳಲ್ಲಿ ಜಾರಿಗೆ ಬಂತು. ಚುನಾವಣೆಗಳಲ್ಲಿ ಭಾಗವಹಿಸಲು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳು ನಿರ್ಧರಿಸಿದವು. ದೇಶದಲ್ಲಿ ಒಂದು ಉತ್ಸಾಹದ ಪ್ರವಾಹ ಉಕ್ಕಿಹರಿಯಿತು. ಪೂರ್ಣ ಸ್ವರಾಜ್ಯದ ಗುರಿ ಸಾಧಿಸಲು ಕೋಟ್ಯಾಂತರ ಸಾಮಾನ್ಯ ಜನತೆಯ ನೈತಿಕ ಬೆಂಬಲ ಕಾಂಗ್ರೆಸ್ ಸಂಸ್ಥೆಗೆ ಉಂಟು ಎಂದು ಸಿದ್ಧಪಡಿಸಲು ಈ ಅವಕಾಶವನ್ನು ಬಳಸಿಕೊಳ್ಳಲಾಯಿತು. ಸರ್ದಾರ್ ಪಟೇಲರೂ, ಜವಹರಲಾಲರೂ ಮಿಂಚಿನಂತೆ ದೇಶದಲ್ಲೆಲ್ಲ ಓಡಾಡಿದರು. ಆದರೆ ಗಡಿನಾಡು ಪ್ರಾಂತಕ್ಕೆ ಅವರ ಪ್ರವೇಶವನ್ನು ಪ್ರತಿಬಂಧಿಸಲಾಗಿತ್ತು. ಮುಸ್ಲಿಮರಿಗೆ ಸ್ಥಳಗಳ ಮೀಸಲಾತಿ ಪದ್ಧತಿ ತಂದು ಬ್ರಿಟಿಷ್ ಸರ್ಕಾರ ಹಿಂದೂ ಮುಸಲ್ಮಾನರಲ್ಲಿ ತೀವ್ರ ಸ್ಪರ್ಧೆಗೆ ಪ್ರೋತ್ಸಾಹವಿತ್ತಿತು. ಮೊದಲೇ ಒಡೆದಿದ್ದ ಘಾಯಕ್ಕೆ ಉಪ್ಪು ಸುರಿದಂತಾಯಿತು. ಎಲ್ಲೆಲ್ಲೂ ವೈಷಮ್ಯಗಳಿಗೆ ಎಡೆಕೊಟ್ಟಂತಾಗಿ ಜಾತೀಯ ಭಾವಾವೇಶಗಳು ತೀವ್ರವಾಗಿ ಬೆಳೆದವು.

ಗಫಾರ್‌ಖಾನರ ಮೇಲೂ ಪ್ರತಿಬಂಧಕಾಜ್ಞೆ ಇದ್ದುದರಿಂದ ಅವರು ತಮ್ಮ ಜನರ ಮಧ್ಯೆ ಈ ಸಮಯದಲ್ಲಿ ಇರಲಾಗಲಿಲ್ಲ. ಆದರೆ ಗಡಿನಾಡಿನಲ್ಲಿ ಅವರ ಮತ್ತು ಡಾ.ಖಾನ್ ಸಾಹೇಬರ ಜನಪ್ರಿಯತೆ ಹೆಚ್ಚುತ್ತಲೇ ಇತ್ತು. ಕಾಂಗ್ರೆಸ್ ಉಮೇದುವಾರರಿಗೆಲ್ಲ ಅಖಂಡ ಜಯಲಭಿಸಿ ಡಾ. ಖಾನ್ ಸಾಹೇಬರು ವಿಧಾನ ಸಭೆಯಲ್ಲಿ ಮುಖಂಡರಾದರು. ಚುನಾವಣೆಯಲ್ಲಿ ಸ್ಪರ್ಧಿಸಲು ಗಫಾರ್‌ಖಾನರು ನಿರಾಕರಿಸಿದ್ದರು. ಅವರಿಗೆ ಅಧಿಕಾರ ಸ್ಥಾನದ ಆಕರ್ಷಣೆ ಎಂದಾಗಲೂ ಇರಲಿಲ್ಲ. ಸಾಮಾನ್ಯ

ಕಾರ್ಯಕರ್ತನಾಗಿ ಕಾಂಗ್ರೆಸ್ ಸಂಸ್ಥೆಗೆ ಸೇವೆ ಸಲ್ಲಿಸುವುದೇ ತಮಗೆ ಸಂತೋಷ ಎಂದರು. ಖುದಾಯಿ ಖಿದ್ಮತ್‌ಗಾರರು ಎಲ್ಲ ಮೀಸಲು ಕ್ಷೇತ್ರಗಳಲ್ಲೂ ಗೆದ್ದು ಬಂದರು. ಕಾಂಗ್ರೆಸ್‌ಗೆ ದೊಡ್ಡ ಬಹುಮತ ದೊರತು ಡಾ. ಖಾನ್ ಸಾಹೇಬರು ಗಡಿನಾಡು ಪ್ರಾಂತದ ಮುಖ್ಯಮಂತ್ರಿಯಾಗಿ ಚುನಾಯಿತರಾದರು. ರಾಷ್ಟ್ರೀಯ ಕಾಂಗ್ರೆಸ್ ಈ ಚುನಾವಣೆಗಳಲ್ಲಿ ಏಕೈಕ ಬಹುಸಂಖ್ಯಾತ ಜಾತ್ಯಾತೀತ ಜನಪ್ರಿಯ ರಾಜಕೀಯ ಸಂಘಟನೆಯಾಯಿತು. ಗಫಾರ್‌ಖಾನರ ಸಹಯೋಗ ಈ ಸಾಧನೆಗೆ ಒಂದು ಪ್ರಮುಖ ಪ್ರಭಾವವಾಗಿತ್ತು. ಸಹಸ್ರಾರು ಭಾರತೀಯ ಮುಸ್ಲಿಮರು ಕಾಂಗ್ರೆಸ್ಸಿಗೆ ಬೆಂಬಲವಾಗಿ ನಿಂತರು. ಮೌಲಾನಾ ಅಬುಲ್ ಕಲಾಮ್ ಅಜಾದರು ದೇಶ ನಾಯಕರೆಂದೇ ಪರಿಗಣಿಸಲ್ಪಟ್ಟರು. ಆದರೆ ಮುಸ್ಲಿಮ್ ಲೀಗ್ ಗಾಂಧೀಜಿಯನ್ನೂ, ಕಾಂಗ್ರೆಸ್ ಸಂಸ್ಥೆಯನ್ನೂ ಹಿಂದೂಗಳ ಪ್ರತಿನಿಧಿಯೆಂದೇ ಪ್ರಚಾರ ಮಾಡುತ್ತಾ ಮುಸ್ಲಿಮರಿಗೆ ಪ್ರತ್ಯೇಕತೆಯ ಕಿಚ್ಚನ್ನು ಹೆಚ್ಚಿಸುತ್ತಲೇ ಸಾಗಿತು.

೧೯೩೭ ರ ಪ್ರಾಂತೀಯ ಸ್ವಯಮಾಡಳಿತ ಬಂದ ನಂತರ ಗಫಾರ್ ಖಾನರ ಮೇಲಿದ್ದ ಪ್ರತಿಬಂಧಕಾಜ್ಞೆ ರದ್ದಾಯಿತು. ಆರು ವರ್ಷಗಳ ಕಾಲ ತಮ್ಮ ಕ್ಷೇತ್ರದಿಂದ ಬಹಿಷ್ಕೃತರಾಗಿದ್ದ ಬಾದ್‌ಷಾಖಾನರನ್ನು ಮತ್ತೆ ಅಲ್ಲಿನ ಇಡೀ ಜನಸ್ತೋಮ ಅತ್ಯಂತ ಪ್ರೀತಿಯಿಂದ ಸ್ವಾಗತಿಸಿತು. ಪೆಷಾವರಿನಲ್ಲಿ ನಡೆದ ಒಂದು ಭಾರಿ ಸಾರ್ವಜನಿಕ ಸಭೆಯಲ್ಲಿ ಖಾನರು ಮಾತನಾಡಿದರು, "ನಮಗೀಗ ಲಭಿಸಿರುವುದು ಪೂರ್ಣ ಸ್ವರಾಜ್ಯವಲ್ಲ. ಅದು ಇನ್ನೂ ದೂರದ ಗುರಿಯಾಗಿಯೇ ಉಳಿದಿದೆ. ಅದಕ್ಕಾಗಿ ಇನ್ನೂ ಹೆಚ್ಚು ತ್ಯಾಗ ಬಲಿದಾನಗಳು ಬೇಕಾದೀತು. ಆ ಪೂರ್ಣ ಸ್ವಾತಂತ್ರ್ಯಕ್ಕಾಗಿ ನನ್ನ ಬಾಳು ಮೀಸಲು ಸತತವಾಗಿ ಹೋರಾಡುತ್ತಾ ನನ್ನ ತಾಯ್ನಾಡನ್ನು ವಿದೇಶೀ ಆಡಳಿತದಿಂದ ಮುಕ್ತಗೊಳಿಸುವುದೇ ನನ್ನ ದೀಕ್ಷೆ" ಎಂದರು. ಕಾಂಗ್ರೆಸ್ ಅಧ್ಯಕ್ಷ ಜವಹರಲಾಲರು ೧೯೩೭ ರ ಅಕ್ಟೋಬರನಲ್ಲಿ ಗಡಿನಾಡು ಪ್ರಾಂತಕ್ಕೆ ಭೇಟಿ ನೀಡಿದರು. ಖುದಾಯಿ ಖಿದ್ಮತ್‌ಗಾರರ ಉತ್ಸಾಹ ಉಕ್ಕೇರಿ ನಿಂತಿತು. ಅದ್ಭುತ ಸ್ವಾಗತ ನೀಡಿದರು. ನೂರಾರು ಸ್ವಾಗತ ಮಂಟಪಗಳನ್ನು ದಾರಿಯುದ್ದಕ್ಕೂ ನಿರ್ಮಿಸಿ ಮೆರವಣಿಗೆ ನಡೆಸಿದರು ನೆಹರೂ ಅವರದು ಇದೇ ಮೊದಲ ಭೇಟಿ. ಅಲ್ಲಿ

ಕಡೆಯೂ ಗಫಾರ್‌ಖಾನರ ಪ್ರಖರ ಪ್ರಭಾವದ ದರ್ಶನವಾಯಿತು. "ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಇಂಥ ಮಹಾವ್ಯಕ್ತಿ ಮತ್ತೊಬ್ಬರಿಲ್ಲ. ಭಾರತದ ನಿಜವಾದ ಧೀರೋದ್ದಾತ ಪರಂಪರೆಗೆ ಇವರೊಂದು ದಿವ್ಯ ಪ್ರತೀಕ. ಗಫಾರ್‌ಖಾನರು "ಫಕೀರ್-ಇ-ಅಫಗನ್" ಮಾತ್ರವಲ್ಲ, ಅವರು "ಫಕೀರ್-ಇ-ಹಿಂದ್" ಎಂದು ಜವಹರಲಾಲರು ಮುಕ್ತಕಂಠದಿಂದ ಹೊಗಳಿದರು. ಮುಂದುವರೆದು,

"ಜಾತೀಯ ವೈಷಮ್ಯಗಳು ಸಾಮಾನ್ಯ ಜನರಲ್ಲಿ ಇರುವುದಿಲ್ಲ. ರಾಜಕೀಯ ಕಾರಣಗಳಿಗಾಗಿ ಅವನ್ನು ಕೆರಳಿಸಿ ದುರ್ಲಾಭ ಪಡೆಯಲು ಪಟ್ಟಭದ್ರಹಿತಗಳು ಯಾವಾಗಲೂ ಹವಣಿಸುತ್ತಿರುತ್ತವೆ. ನಮ್ಮ ದಾಸ್ಯವನ್ನು ಹೆಚ್ಚಿಸಲು ಅದನ್ನೇ ಸಾಧನವನ್ನಾಗಿ ಬಳಸುತ್ತಾರೆ" ಎಂದರು.

ಸಾವಿರಾರು ಪಠಾಣ ಯುವಕರು ದೀಕ್ಷೆ ತೊಟ್ಟು ದೇಶಕ್ಕಾಗಿ ದಿಟ್ಟತನದಿಂದ ಅಸಹಕಾರ ಚಳುವಳಿಗಳಲ್ಲಿ ಭಾಗವಹಿಸಿದ್ದನ್ನು ನೆಹರು ಭಾವುಕರಾಗಿ ಸ್ಮರಿಸಿದರು. "ಕೆಲವು ಜನ ದಾಸ್ಯದಲ್ಲೇ ಇರಲು ಬಯಸುವುದನ್ನು ಭಾರತದಲ್ಲಿ ನಾವು ಕಾಣುತ್ತೇವೆ. ಆದರೆ ಭಾರತ ಈಗ ಅಜೇಯವಾದ ಸ್ವಾತಂತ್ರ್ಯದೆಡೆಗೆ ಸಾಗುತ್ತಿದೆ. ಅದು ಸ್ವತಂತ್ರವಾಗಲೇಬೇಕು. ನಾವಿರಲಿ ಇಲ್ಲದಿರಲಿ ಯುವಕರಾದ ನೀವು ಸ್ವತಂತ್ರ ಭಾರತದ ಮುಕ್ತ ಪರಿಸರದಲ್ಲಿ ಉಸಿರಾಡುವಿರೆಂದು ನನ್ನ ದೃಢ ವಿಶ್ವಾಸ" ಎಂದರು.

ಮೂರು ದಿನಗಳ ಎಡಬಿಡದ ಕಾರ್ಯಕ್ರಮಗಳನ್ನು ಮುಗಿಸಿ ಹಿಂತಿರುಗಿದಾಗ ಜವಹರಲಾಲರು ಈ ಗಡಿನಾಡಿನ ಸ್ವಾತಂತ್ರ್ಯ ಯೋಧರ ದೇಶಪ್ರೇಮ, ಶಿಸ್ತು, ಭ್ರಾತೃಭಾವ, ಭಾರತೀಯತೆಗಳನ್ನು ಮನಸಾರ ಮೆಚ್ಚಿಕೊಂಡರು. ಈ ಬಗ್ಗೆ ಡಾ. ರಾಮಮನೋಹರ ಲೋಹಿಯಾ ಅವರಿಗೆ ಒಂದು ದೀರ್ಘ ಪತ್ರ ಬರೆದು ವಿವರಿಸಿದರು. ಗಡಿನಾಡು ಪ್ರಾಂತದಲ್ಲಿ ಯಾವ ಮತೀಯ ಗಲಭೆಗಳಿಗೂ ಅವಕಾಶವಿರಲಿಲ್ಲ. ಜಾತೀಯ ಸೌಹಾರ್ದ ಅಲ್ಲಿನ ಜನರ ಸ್ವಭಾವ ಸಹಜ ಗುಣವಾಗಿತ್ತು. ಗಫಾರ್ ಖಾನರ ಪ್ರಭಾವದಿಂದ ಯಾವ ಪ್ರತ್ಯೇಕತೆಯನ್ನೂ ಪಠಾಣರು ಪುರಸ್ಕರಿಸುತ್ತಿರಲಿಲ್ಲ. ಬ್ರಿಟಿಷರ ಕುತಂತ್ರಗಳಿಗೆ ಬಲಿಯಾಗಿ ಅನೇಕ ಮುಸ್ಲಿಮ್ ಧಾರ್ಮಿಕ ಮುಖಂಡರು ಹಿಂದೂಗಳ ಬಗ್ಗೆ ದ್ವೇಷ ಪ್ರೇರೇಪಿಸಿದರೂ

ಖುದಾಯಿ ಖಿದ್‌ಮತ್‌ಗಾರರು ಮಣಿಯಲಿಲ್ಲ. 'ಕೆಂಪುಅಂಗಿ' ಯ ಯೋಧರು ಇದ್ದ ಕಡೆ ಕುಟಿಲತೆಯಾಗಲೀ, ಮತದ್ವೇಷವಾಗಲೀ, ದೇಶ ದ್ರೋಹವಾಗಲೀ ಸುಳಿಯಲು ಯಾವ ಘಟನೆಯೂ ನಡೆಯುತ್ತಿರಲಿಲ್ಲ. ಅನೇಕ ಬುಡಕಟ್ಟು ಜನಾಂಗಗಳು ಒಗ್ಗೂಡಿ ದೇಶರಕ್ಷಣೆಗೆ ಪಣತೊಟ್ಟು ನಿಲ್ಲುತ್ತಿದ್ದವು. ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದನ್ನೆಂದೂ ಅವರು ಸಹಿಸುತ್ತಿರಲಿಲ್ಲ. ಬಡತನದಲ್ಲಿದ್ದರೂ ಯಾರನ್ನೂ ಯಾಚಿಸುತ್ತಿರಲಿಲ್ಲ. ಮಾತಿಗಿಂತ ಕೃತಿಯಲ್ಲಿ ಅವರ ಪ್ರವೃತ್ತಿ. ನೆಹರೂ ಅವರು ವಿವರಿಸಿರು ವಂತೆ, "ಈ ಜನ ಧೀರರ ಅಹಿಂಸೆಯನ್ನು ಪ್ರದರ್ಶಿಸಿದ್ದಾರೆ. ಹೇಡಿತನ ಅವರಲ್ಲಿ ಲವಲೇಶವೂ ಇರಲಿಲ್ಲ. ಈ ಶಿಸ್ತಿನ ಸಿಪಾಯಿಗಳು ಅಗಾಧ ಜನಸಂದಣಿಯ ಸಭೆಗಳನ್ನು ಸಂಘಟಿಸಿ ನಡೆಸಿಕೊಡುತ್ತಿದ್ದ ರೀತಿ ಅಸದೃಶ ವಾಗಿತ್ತು. ಅಹಿಂಸೆ ಎಂದೂ ಬಲಹೀನತೆಯಲ್ಲ; ವೀರ ಯೋಧರ ಅಸದೃಶಶಕ್ತಿ: ಸಶಸ್ತ್ರ ಪಡೆಗಿಂತ ಮಿಗಿಲಾದ ನೈತಿಕಬಲ ಎನ್ನುವುದನ್ನು ಈ ಜನ ಪ್ರದರ್ಶಿಸಿ ಲೋಕಕ್ಕೆ ಮಾದರಿ ಎನಿಸಿದ್ದಾರೆ."

ಇತರ ದೇಶಗಳಲ್ಲೂ ಜನತಾ ಚಳುವಳಿಗಳು ತಮ್ಮ ಹಕ್ಕುಗಳನ್ನು ಒತ್ತಾಯಿಸಲು ಶಾಂತಿಯುತ ಸಮರ ಹೂಡಿರುವುದುಂಟು. ಜನತಾ ಚಳು ವಳಿಗಳು ಶಾಂತಿಯುತ ಮಾರ್ಗಗಳನ್ನವಲಂಬಿಸುವುದು ಅನಿವಾರ್ಯ. ಭಾರತ ದಲ್ಲಿ ಈ ಶಾಂತಿಯುತ ಚಳುವಳಿ ಇತರೆಡೆಗಳಂತೆ ಕೇವಲ ನಿಷ್ಕ್ರಿಯ ಪ್ರತಿಭಟನೆಯಾಗಿರಲಿಲ್ಲ. ಪ್ರತಿಹಿಂಸೆಗೆ ಪ್ರಚೋದನೆ ಮಾಡುವ ಶಕ್ತಿಗಳು ಸುಲಭವಾಗಿ ಜನಶಕ್ತಿಯನ್ನು ಒಡೆದು ಬಿಡುತ್ತವೆ. ವಿಧ್ವಂಸಕತೆಗೆ ಕೈ ಹಾಕಿದೊಡನೆ ಸಶಸ್ತ್ರ ಸೈನ್ಯಗಳ ಕೈ ಮೇಲಾಗಿ ಜನ ಸೋತುಬಿಡುತ್ತಾರೆ. ಗಾಂಧೀ ಪ್ರಣೀತ ಅಹಿಂಸಾ ಸಮರ ಈ ಪಾಶ್ಚತ್ಯ ಶಾಂತಿ ಚಳುವಳಿಗಳಂತೆ ಕೇವಲ ನಿಷ್ಕ್ರಿಯ ವಿರೋಧವಾಗಿರಲಿಲ್ಲ. ಕ್ರಿಯಾಶೀಲವೂ, ನೈತಿಕ ಪ್ರತಿಭಟನಾಶೀಲವೂ, ರಚನಾತ್ಮಕ ದೀಕ್ಷಾಬದ್ಧವೂ ಆದ ಈ 'ಸತ್ಯಾಗ್ರಹ' ಸಮರ ವಿಶ್ವಕ್ಕೆ ಹೊಸ ಪ್ರಭಾವಯುತ ಮಾರ್ಗಕ್ಕೆ ನಾಂದಿಯಾಗಿತ್ತು. ನಿಷ್ಕ್ರಿಯ ಅಸಹಕಾರದ ಹಳೆಯ ಸಿದ್ಧಾಂತಕ್ಕೆ ಬದಲಾಗಿ ಪ್ರತಿಸ್ಪರ್ಧಿ ಕ್ರಿಯಾತ್ಮಕ ಚಳುವಳಿಯಾಗಿ ಬೆಳೆಯುತ್ತಿತ್ತು. ನಿಸ್ಸೀಮ ತ್ಯಾಗ, ಬಲಿದಾನ ಗಳಿಗೂ, ಸರ್ವ ವಿಧವಾದ ದಬ್ಬಾಳಿಕೆಗೂ ಎದೆಯೊಡ್ಡಿ ಪ್ರತಿಹಿಂಸೆಗೆ ಕೈಹಾಕದೆ ನಿಲ್ಲುವ ಧೈರ್ಯಕ್ಕೆ ಆದ್ಯತೆ ನೀಡಿ ಆತ್ಮಬಲದಿಂದ ವೈರಿಯ

ಹೃದಯವನ್ನು ಗೆದ್ದು ಸತ್ಯದರ್ಶನ ಮಾಡಿಸುವ ಗಾಂಧೀ ಮಾರ್ಗಕ್ಕೆ ಈ ಖುದಾಯಿ ಖಿದ್‌ಮತ್‌ಗಾರ್ ಚಳುವಳಿ ಒಂದು ಅಸಾಮಾನ್ಯ ಉದಾಹರಣೆ ಎಂದು ನೆಹರು ನುಡಿದಿದ್ದಾರೆ.

೧೯೩೮ ರಲ್ಲಿ ಹರಿಪುರ ಕಾಂಗ್ರೆಸ್ ಅಧಿವೇಶನ ಬಾಬು ಸುಭಾಸ ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ಪ್ರಾಂತಗಳಲ್ಲಿನ ಕಾಂಗ್ರೆಸ್ ಮಂತ್ರಿಮಂಡಲಗಳು ಜನಪ್ರಿಯವಾಗಿದ್ದವು. ಬ್ರಿಟಿಷ್ ಆಡಳಿತಾಧಿಕಾರಿಗಳು ಅಡೆತಡೆಗಳನ್ನೊಡ್ಡಿದರೂ ಅನೇಕ ಸುಧಾರಣೆಗಳಾದವು. ಗಡಿನಾಡಿನಲ್ಲಿ ಡಾ. ಖಾನ್ ಸಾಹೇಬರ ಸರ್ಕಾರ ಪಖ್ತೂ ಭಾಷೆಯನ್ನು ಶಾಲೆಗಳಲ್ಲಿ ಜಾರಿಗೆ ತಂದಿತು. ರೈತರ ಸಾಲ ತೀರ್ವೆಗಳಿಗೆ ನೆರವು ನೀಡಿತು. ರಾಜಕೀಯ ಚಟುವಟಿಕೆಗಳಿಗೆ ಸ್ವಾತಂತ್ರ್ಯ ನೀಡಿತು. ಗಡಿನಾಡಿನ ಜನರ ಮೇಲೆ ಹೇರಿದ್ದ ಅನೇಕ ಅಪರಾಧೀ ನಿಯಂತ್ರಣ ಕಾಯಿದೆಗಳನ್ನು ತಿದ್ದುಪಡಿಸಿತು. ಎಲ್ಲ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿತು. ಪಠಾಣರು ಮಿಕ್ಕೆಲ್ಲ ಭಾರತೀಯರೊಡನೆ ಮಿಳಿತವಾಗಿ ಸಮಾನ ಪ್ರಜೆಗಳಂತೆ ವ್ಯವಹರಿಸುವಂತಾಯಿತು. ಸ್ವಾತಂತ್ರ್ಯ ಸಂಗ್ರಾಮದ ಯೋಧರಾಗಿ ಗಫಾರ್‌ಖಾನ್ ಅಖಿಲ ಭಾರತ ನಾಯಕ ಪಂಕ್ತಿಯಲ್ಲಿ ಗಣ್ಯರಾದರು.

ಗಾಂಧೀಜಿ ಗಡಿನಾಡು ಪ್ರಾಂತದಲ್ಲಿ ಪ್ರವಾಸ ಮಾಡಲು ಇಚ್ಛಿಸಿದರು. ಬಿಡುವಾಗದೆ ಇದ್ದುದರಿಂದ ತಮ್ಮ ಆತ್ಮೀಯ ಕಾರ್ಯದರ್ಶಿ ಮಹದೇವ ದೇಸಾಯಿಯವರನ್ನು ಕಳುಹಿಸಿಕೊಟ್ಟರು. ೧೯೩೮ ರ ಏಪ್ರಿಲ್‌ನಲ್ಲಿ ಹರಿಜನ ಪತ್ರಿಕೆಯಲ್ಲಿ ಮಹದೇವ ದೇಸಾಯಿ ತಮ್ಮ ಅನುಭವಗಳನ್ನು ಪ್ರಕಟಿಸಿದರು:

“ಮುಖ್ಯ ಮಂತ್ರಿ ಖಾನಸಾಹೇಬರೊಡನೆ ಮನೆ ತಲುಪಿದಾಗ ಗಫಾರ್ ಖಾನರು ಎಂದಿನಂತೆ ಹಳ್ಳಿಗಳಿಗೆ ಹೋಗಿದ್ದಾರೆಂದು ತಿಳಿಯಿತು. ನಾವೂ ಕಷ್ಟಪಟ್ಟು ಅವರಿದ್ದೆಡೆಗೆ ನಡೆದೆವು. ಅವರಾಗ 'ನಮಾಜ್'ಗೆ ಹೋಗಿದ್ದರು. ಅವರೆಂದೂ ಈ ಪ್ರಾರ್ಥನೆಯ ನಿಯಮವನ್ನು ಬಿಟ್ಟಿರುತ್ತಿರಲಿಲ್ಲ. ಆಗ ತಾನೇ ಒಂದು ರೋಚಕ ಘಟನೆ ಆ ಹಳ್ಳಿಯಲ್ಲಿ ನಡೆದಿತ್ತು. ಒಂದು ಶವ ಸಂಸ್ಕಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ಬಾದ್‌ಷಾಖಾನರು ಇರಬೇಕೆಂದು ಸತ್ತವರ ಬಂಧುಗಳು ಆಗ್ರಹ ಮಾಡಿದರು. ಹತ್ತಿರದ

ಮಸೀದಿಯಲ್ಲಿ ಅದು ಕೂಡದು ಎಂದು ಸಾಂಪ್ರದಾಯಿಕ ಮೌಢ್ಯದ ಮೌಲ್ವಿಗಳು ಹಠತೊಟ್ಟರು. ದೂರಕ್ಕೆ ಹೋಗಲು ಸಮಯವಿರಲಿಲ್ಲ. ಗಫಾರ್‌ಖಾನರು ತಾವು ಮಕ್ಕಾ ಮದೀನಗಳಲ್ಲಿ ಇಸ್ಲಾಮ್ ಧರ್ಮಾಚರಣೆಗಳನ್ನು ತಿಳಿದುಕೊಂಡಿರುವುದಾಗಿಯೂ ದೂರದ 'ಮಖ್‌ಬಾರಾ'ಕ್ಕೆ ಹೋಗುವ ಅವಶ್ಯಕತೆಯಿಲ್ಲವೆಂದೂ ಮೌಲ್ವಿಗಳೊಡನೆ ವಾದ ಮಾಡಿದರು. ಆದರೆ ಅವರು ಒಪ್ಪಲಿಲ್ಲ. ಗಫಾರ್‌ಖಾನರು 'ಷರಿಯತ್'ಗೆ ವಿರೋಧವಾಗಿ ನಡೆಯುತ್ತಾರೆ ಎಂದು ಗುಲ್ಲೆಬ್ಬಿಸಿದರು. 'ನಿಮ್ಮ ಮತದಂತೆಯೇ ನಡೆಯಲಿ ಈಗ ಇಲ್ಲಿ ವಾದ ಮಾಡುವುದು ಸರಿಯಲ್ಲ' ಎಂದು ಖಾನರು ಒಪ್ಪಿದರು. ಆ ಮೇಲೆ ಮೌಲ್ವಿಗಳು ಖಾನರನ್ನು ಮನಬಂದಂತೆ ಆಡಿಕೊಂಡರು ಎಂದು ತಿಳಿದ ಗ್ರಾಮಸ್ಥರು ಅವರ ಮೇಲೆ ಎರಗಿ ಬಂದರು. ಮೌಲ್ವಿಗಳು ಛರ್ರಿ ಚಾಕುಗಳಿಂದ ಪ್ರತಿಭಟಿಸಿದಾಗ ಖುದಾಯಿ ಖಿದ್‌ಮತ್‌ಗಾರರು ಮೇಲೆ ಬಿದ್ದು ಅವರನ್ನು ಘಾಸಿಗೊಳಿಸಿ ಅವಮಾನಮಾಡಿ ಅಸ್ತ್ರಗಳನ್ನು ಕಿತ್ತುಕೊಂಡರೆಂದು ಗಫಾರ್‌ಖಾನರಿಗೆ ತಿಳಿಯಿತು. 'ಬಲಾತ್ಕಾರಿಸುವುದು ಸತ್ಯಾಗ್ರಹ ನಿಯಮಕ್ಕೆ ಅಪಚಾರ. ಏನೇ ಬಂದರೂ ಎಲ್ಲ ವಿಪತ್ತುಗಳಿಗೂ ನೀವೇ ಎದೆಕೊಟ್ಟು ನಿಲ್ಲಬೇಕು. ನಿಮ್ಮ ಕಡೆ ಸತ್ಯವಿರುವಾಗ ಯಾವ ಬಲಿದಾನಕ್ಕೂ ಹಿಂಜರಿಯಬಾರದು. ನೀವು ಮಾಡಿದ ತಪ್ಪಿಗಾಗಿ ನಾನು ನಿಮ್ಮ ನಾಯಕನಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಆದ್ದರಿಂದ ಮೂರು ದಿನಗಳ ಉಪವಾಸವ್ರತ ಕೈಕೊಂಡಿದ್ದೇನೆ' ಎಂದು ಖಾನರು ನಿರ್ಧರಿಸಿಬಿಟ್ಟರು. ಸುತ್ತಲಿನ ವಾತಾವರಣವೇ ಹಠಾತ್ತನೆ ಬದಲಾಯಿತು. ಎಲ್ಲರಿಗೂ ಪಶ್ಚಾತ್ತಾಪ ಉಂಟಾಗಿ ಉಪವಾಸ ನಿಲ್ಲಿಸಲು ಆರ್ತರಾಗಿ ಪ್ರಾರ್ಥಿಸಿದರು. 'ನನ್ನ ಸಂಕಲ್ಪ ಅಚಲ. ನೀವೆಲ್ಲರೂ ಒಟ್ಟಾಗಿ ಈ ರೀತಿಯ ಘಟನೆಗೆ ಮುಂದೆ ಎಂದೂ ಅವಕಾಶಕೊಡುವುದಿಲ್ಲ ಎಂದು ಸಂಕಲ್ಪಿಸಿ ನನಗೆ ವಚನಕೊಡಿ' ಎಂದಾಗ ಒಂದು ಮಹಾಪರಿವರ್ತನೆಯ ಪವಾಡವೇ ನಡೆದು ಹೋಯಿತು."

ಆ ನಿಸರ್ಗ ಸುಂದರ ಗುಡ್ಡಗಾಡಿನ ಉದ್ದಗಲಕ್ಕೂ ಮಹದೇವ ದೇಸಾಯಿ ಮತ್ತು ಗಫಾರ್‌ಖಾನ್ ಸಂಚರಿಸಿದರು. ಬಹುಪಾಲು ಅವರು ಖಾದಿಧಾರಿಗಳು. ಜೊಗಳಿಯ ಷರಾಯಿ ಮತ್ತು ಉದ್ದನೆಯ ಕುರ್ತಾ, ತಲೆಯ ಮೇಲೆ ಕುಚ್ಚಿನ ರುಮಾಲು ಇದು ಸಾಮಾನ್ಯ ಉಡುಪು. ಆ

ಪ್ರಕೃತಿ, ಆ ಹಸಿರು ಗ್ರಾಮಗಳು, ಆ ಜನರ ವಿಶ್ವಾಸದ ಆತಿಥ್ಯ, ನೋಡಲು ಒರಟು ಸೈನಿಕರಂತೆ ಕಂಡರೂ ಆ ಖುದಾಯಿ ಖಿದ್‌ಮತ್‌ಗಾರರ ವಿನಯಪೂರ್ಣ ಸೇವಾದೀಕ್ಷೆ ಇವೆಲ್ಲವೂ ದೇಸಾಯಿಯವರಿಗೆ ಆನಂದಾನುಭವವೆನಿಸಿತು. 'ಎಲ್ಲಿ ಹೋದರೂ ಅವರು ಕೇಳುತ್ತಿದ್ದ ಪ್ರಶ್ನೆ ಒಂದೇ : ಗಾಂಧೀಜಿ ಇಲ್ಲಿಗೆ ಎಂದು ಬರುತ್ತಾರೆ?'

ಅದೇ ವರ್ಷ ಮೇ ಒಂದರಂದು ಗಾಂಧೀಜಿ ಪೆಷಾವರಿನಿಂದ ಇಪ್ಪತ್ತೈದು ಮೈಲಿ ದೂರದ ನೌಷೇರಾಕ್ಕೆ ಬೊಂಬಾಯಿನಿಂದ ಬಂದಿಳಿದರು. ಗಫಾರ್‌ಖಾನರೊಡನೆ ಸಾವಿರಾರು ಸ್ವಯಂ ಸೇವಕರು ಹಾಜರಿದ್ದು ಅದ್ಭುತ ಸ್ವಾಗತ ನೀಡಿದರು. ಎಲ್ಲೂ ಶಿಸ್ತಿನಿಂದ ನಿಶ್ಶಬ್ದವಾಗಿ ವ್ಯವಸ್ಥಿತವಾಗಿ ಸೇರುತ್ತಿದ್ದ ಜನ ಗಾಂಧೀಜಿಯ ಪ್ರಾರ್ಥನಾ ಸಭೆಗಳಲ್ಲಿ ಭಾಗ ವಹಿಸುತ್ತಿದ್ದರು. ನೂರಾರು ಮಹಿಳೆಯರು ಸ್ನಾನ ಮಾಡಿ ಮಡಿಯುಟ್ಟು ಭಕ್ತಿಭಾವದಿಂದ ಸೇರುತ್ತಿದ್ದರು. ಎಲ್ಲೂ ನೂಕು ನುಗ್ಗಲಿರುತ್ತಿರಲಿಲ್ಲ. ಆತ್ಮೀಯ ಬಂಧುವಿನಂತೆ ಬಂದ ಮಹಾಪುರುಷನೊಬ್ಬನ ಸೇವೆಗಾಗಿ ಎಲ್ಲರೂ ಕಾತರದಿಂದ ಕಾದು ನಿಂತಿರುತ್ತಿದ್ದರು. ಇಂಗಿತವನ್ನರಿತು ಮಾತನ್ನೇ ಆಡದೆ ಸೇವೆ ಸಲ್ಲಿಸುತ್ತಿದ್ದ ಆ ಮುಗ್ಧ ಶಾಂತಯುತ ದೃಢಕಾಯರಾದ ಗಿರಿಜನರ ಮಧ್ಯೆ ಈ ಅರೆನಗ್ನರಾದ, ಕಿರು ಆಕಾರದ, ಮುಗುಳ್ನಗೆಯ, ಕೋಲು ಹಿಡಿದು ಸಾಗುತ್ತಿದ್ದ ಚಿತ್ರ ಅವಿಸ್ಮರಣೀಯವಾಗಿತ್ತು. ಕುರಿ ಕಾಯುತ್ತಿದ್ದ ಮುಗ್ಧ ಬಡಜನರೊಡನೆ ಎರಡು ಸಾವಿರ ವರ್ಷಗಳ ಹಿಂದೆ ಮಿಳಿತವಾಗಿ ನಡೆದ ಪವಿತ್ರಾತ್ಮ ಏಸುವಿನ ಚಿತ್ರ ಮರುಕಳಿಸಿದಂತಿತ್ತು.

ಪೇಷಾವರಿನಲ್ಲಿ ದೊಡ್ಡ ಸಭೆ ಸೇರಿತು. ಅಲ್ಲಿನ ಇಸ್ಲಾಮಿಯಾ ಮಹಾವಿದ್ಯಾಲಯ ಮತ್ತು ಎಡ್‌ವರ್ಡ್ಸ್ ಕಾಲೇಜುಗಳಲ್ಲಿ ಗಾಂಧೀಜಿಗೆ ಬಿನ್ನವತ್ತಳೆಗಳನ್ನರ್ಪಿಸಿದರು. ತಾವು ಇಂಥ ದೇಣಿಗೆಗಳನ್ನು ಸ್ವೀಕರಿಸಲು ಹಿಂಜರಿಯುವುದಾಗಿ ತಿಳಿಸಿ ಅಹಿಂಸಾ ಧರ್ಮದ ಬಗ್ಗೆ ಮತ್ತು ಸತ್ಯಾಗ್ರಹದ ಬಗ್ಗೆ ಹೀಗೆ ವಿವರಿಸಿದರು :-

"ಇಲ್ಲಿನ ಉರ್ದು ಪತ್ರಿಕೆಯೊಂದರಲ್ಲಿ ನಾನು ಈ ವೀರ ಪಠಾಣರನ್ನು ಅಹಿಂಸೆಯ ಕಡೆಗೆ ಒಲಿಸಿಕೊಂಡು ನಿರ್ವೀರ್ಯರನ್ನಾಗಿಸಿದ್ದೇನೆ ಎಂದು ಆರೋಪಿಸಲಾಗಿದೆ. ಆದರೆ ಮಿತ್ರರಾದ ಖಾನ್ ಸಾಹೇಬರು ನನ್ನಲ್ಲಿಗೆ

ಬರಮಾಡಿಕೊಂಡು ಅಹಿಂಸೆಯ ನಿಜವಾದ ಅರ್ಥವನ್ನು ನಿಮಗೆ ತಿಳಿಸಲು ಕೋರಿದ್ದಾರೆ. ಅವರಿಗೆ ಅಹಿಂಸೆ ಒಂದು ನಿಸ್ಸೀಮವಾದ ವೀರರ ಸಾಧನ ಎನಿಸಿದೆ. ಅತ್ಯಂತ ಪ್ರಬಲ ಹಿಂಸಾಚಾರಕ್ಕಿಂತಲೂ ಅಹಿಂಸೆ ಮಿಗಿಲಾದ ಶಕ್ತಿ ಎಂಬವರು ಅರಿತಿದ್ದಾರೆ. ಬಾದ್‌ಷಾಖಾನರ ನಿಜವಾದ ಅನುಯಾಯಿಗಳಾಗಲು ನೀವು ನಿಜವಾದ ಅಹಿಂಸಾ ಯೋಧರಾಗಬೇಕು. ಅದಕ್ಕಾಗಿ ದೀಕ್ಷಾಬದ್ಧರಾಗಬೇಕು. ಸುತ್ತಲೂ ದಿನ ದಿನವೂ ಕ್ರೂರ ಹಿಂಸೆ ತಾಂಡವವಾಡುತ್ತಿದೆ. ಅದರದೇ ಎಲ್ಲೆಲ್ಲೂ ವಿಜೃಂಭಣೆ ಎನಿಸುತ್ತಿದೆ. ಸೈನ್ಯಾಚರಣೆಗಳು, ಶಸ್ತ್ರಗಳು, ಬಾಂಬುಧಾಳಿಗಳು, ನಾವಿಕ ಬಲ ತಮ್ಮ ಅಟ್ಟಹಾಸ ಹರಡಿಕೊಂಡಿವೆ. ಇವುಗಳ ಮಧ್ಯೆ ಆತ್ಮಶಕ್ತಿ ಅಥವಾ ಅಹಿಂಸಾಬಲ ಈ ಎಲ್ಲ ಹಿಂಸಾಬಲಕ್ಕೂ ಮೀರಿದ ಅಜೇಯ ಶಕ್ತಿ ಎಂದು ನೀವು ಅರ್ಥಮಾಡಿಕೊಳ್ಳಿ. ನನಗಾದರೋ ಅಹಿಂಸೆ ಒಂದು ಸ್ವಭಾವ ಸಹಜ ಸ್ಫೂರ್ತಿಯಂತೆ ಚಿಮ್ಮಿಬಂತು. ನನ್ನ ಬಾಲ್ಯದ ಪರಿಸರ ಮತ್ತು ಪ್ರಭಾವಗಳು ಕಾರಣವಾದವು. ಈ ಶಕ್ತಿಯ ಅದ್ವಿತೀಯ ಸಾಮರ್ಥ್ಯ ನನಗೆ ಗೋಚರವಾದುದು ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲಿ ವರ್ಣದ್ವೇಷದ ದಳ್ಳುರಿಯೆದುರು ನಾನು ಅದನ್ನು ಪ್ರಯೋಗಿಸಿದಾಗ. ಆ ವಿಜಯದ ಕಾರಣವಾಗಿ ನನ್ನಲ್ಲಿ ಗಾಢವಾದ ನಂಬಿಕೆ ಬೇರೂರಿತು. ಹಿಂಸೆಗಿಂತ ಶುದ್ಧ ಅಹಿಂಸೆಯ ಬಲ ಅತ್ಯಂತ ಪ್ರಬಲ ಶಕ್ತಿ ಎಂಬ ಸತ್ಯ ನನಗೆ ಸಾಕ್ಷಾತ್ಕಾರವಾಯಿತು.

"ಅದರ ಹಿಂಸಾಬಲ ಪ್ರಯೋಗಕ್ಕೆ ಹೇಗೋ ಹಾಗೆಯೇ ಅಹಿಂಸಾ ಮಾರ್ಗ ಶಿಕ್ಷಣಕ್ಕೂ ವ್ಯವಸ್ಥಿತ ತರಬೇತಿ ಬೇಕು. ಅದಕ್ಕಿಂತಲೂ ಈ ಶಿಕ್ಷಣ ಕಠಿಣವಾದುದು. ಈ ಶಿಕ್ಷಣದ ಮೊದಲ ಆಧಾರ ಈಶ್ವರನಲ್ಲಿ ಅಚಲ ಜೀವಂತ ನಂಬಿಕೆ. ದೈವಭಕ್ತನಾದವನು ಬಾಯಲ್ಲಿ ದೇವರ ಹೆಸರು ಹೇಳುತ್ತಾ ಎಂದಿಗೂ ಪಾಪಕಾರ್ಯದಲ್ಲಿ ತೊಡಗುವುದು ಸಾಧ್ಯವೇ ಇಲ್ಲ. ಅವನ ಬಲ ಶಸ್ತ್ರದ ಶಕ್ತಿಯ ಮೇಲೆ ನಿಲ್ಲುವುದಿಲ್ಲ. ಪರಮಾತ್ಮನಲ್ಲಿನ ಅಚಲ ಶ್ರದ್ಧೆಯೆ ಅವನ ಆಧಾರ. ಆದರೆ ಆತ ಹೇಡಿಯಾಗಲಾರ. ಹೇಡಿತನ ಎಂದಿಗೂ ಈಶ್ವರ ಶ್ರದ್ಧೆಯ ಸಂಕೇತವಲ್ಲ. ದೇವರಲ್ಲಿ ನಿಜವಾದ ನಂಬಿಕೆಯುಳ್ಳವನು ವೀರಯೋಧರಂತೆ ಕತ್ತಿಯನ್ನು ಪ್ರಯೋಗಿಸ

ಬಲ್ಲವನಾದರೂ ಅದನ್ನು ಬಳಸುವುದಿಲ್ಲ. ಕಾರಣ ಎಲ್ಲ ಮಾನವರಲ್ಲಿ ಅವನು ದೇವರ ಪ್ರತಿಬಿಂಬವನ್ನೇ ಕಾಣುತ್ತಾನೆ.

"ಇಸ್ಲಾಮ್ ಧರ್ಮ ವಿಶ್ವಭ್ರಾತೃತ್ವವನ್ನು ಸಾರುತ್ತದೆ. ಇದು ಕೇವಲ ಮುಸಲ್ಮಾನರೊಳಗೆ ಸೋದರಭಾವ ಎಂದು ತಿಳಿಯಬಾರದು. ವಿಶ್ವಮಾನವರೆಲ್ಲರೊಡನೆ ಸೋದರತ್ವ ಎಂದೇ ನಾನು ತಿಳಿದಿದ್ದೇನೆ. ಮುಸ್ಲಿಮರ 'ಅಲ್ಲಾ', ಹಿಂದೂಗಳ 'ಈಶ್ವರ', ಕ್ರೈಸ್ತಬಂಧುಗಳ 'ದೇವರು' ಒಂದೇ ಎಂಬ ಗಾಢವಾದ ಅರಿವು ಅಹಿಂಸಾ ಶಿಕ್ಷಣಕ್ಕೆ ಎರಡನೇ ಆಧಾರ. ದೇವರು ಒಂದು ಅನ್ಯಾದೃಶ, ವರ್ಣನಾತೀತ, ಊಹಾತೀತ, ಅತ್ಯದ್ಭುತ ಶಕ್ತಿ ವಿಶೇಷ ಎಂದು ಎಲ್ಲ ಧರ್ಮಗಳೂ ಅವನ ಅನಂತಗುಣ ವಿಶೇಷಗಳನ್ನು ಅಸಂಖ್ಯಾತ ನಾಮಗಳಿಂದ ಸಂಬೋಧಿಸಿವೆ. ಆದ್ದರಿಂದ ದೇವರಲ್ಲಿ ನಂಬಿಕೆಯುಳ್ಳವರು ವಿಶ್ವಭ್ರಾತೃತ್ವ ಭಾವನೆಯನ್ನು ಅಂಗೀಕರಿಸಲೇಬೇಕಾಗುತ್ತದೆ. ಮಾನವಕುಲವನ್ನೆಲ್ಲವನ್ನು ಸೋದರ ಸೋದರಿಯರಂತೆ ಕಂಡಾಗ ಮಾತ್ರವೇ ನಾವು ಆಸ್ತಿಕರಾಗುತ್ತೇವೆ. ಎಲ್ಲ ಧರ್ಮಗಳಿಗೂ ಸಮಾನ ಗೌರವ ಕೊಡುವುದೇ ಅದಕ್ಕೆ ದಾರಿ. ನಿಮಗೆ ಇಸ್ಲಾಮ್ ಧರ್ಮದಲ್ಲಿ ಶ್ರದ್ಧೆ. ನನಗೆ ಹಿಂದೂ ಧರ್ಮದಲ್ಲಿ ನಂಬಿಕೆ. ಕ್ರೈಸ್ತರಿಗೆ ಅವರದರಲ್ಲಿ ಗಾಢ ಭಕ್ತಿ. ಒಬ್ಬರಿಗೆ ಮತ್ತೊಬ್ಬರ ಮತದ ಬಗ್ಗೆ ಅಸಹನೆ ಬಂದರೆ ಅದು ಹಿಂಸೆಯ ಒಂದು ಮುಖ. ಒಂದು ಧರ್ಮ ಮತ್ತೊಂದಕ್ಕಿಂತ ಶ್ರೇಷ್ಠ ಅಥವಾ ಕೀಳು ಎಂಬುದೇ ತಪ್ಪು.

"ಸತ್ಯನಿಷ್ಠೆ ಮತ್ತು ಶುದ್ಧ ಚಾರಿತ್ರ್ಯ ಮೂರನೆಯ ಆಧಾರ. ಸತ್ಯಾಗ್ರಹ ಶಿಕ್ಷಣಕ್ಕೆ ಅಗತ್ಯ. ಭಗವಂತನನ್ನು ಪೂಜಿಸುವವನು ಇವೆರಡನ್ನೂ ಪಡೆದಿರುವುದು ಅನಿವಾರ್ಯ. ನೀವು ನಿಮ್ಮ ನೇತಾರರಾದ ಗಫಾರ್‌ಖಾನರನ್ನು ಅನುಸರಿಸುತ್ತೀರಿ ಎಂದಾಗ ಈ ಎಲ್ಲ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಅರ್ಥ. ಅವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನೀವೆಲ್ಲ ಜನತೆಯ ನಾಯಕರಾಗಿ ವರ್ತಿಸಬೇಕು. ಈ ಮಹೋನ್ನತ ಆದರ್ಶಕ್ಕಾಗಿ ನಿಸ್ಸೀಮ ತ್ಯಾಗ ಬಲಿದಾನಗಳಿಗೆ ಸಿದ್ಧರಾಗಬೇಕು. ಆಗ ನಿಮ್ಮ ಅಹಿಂಸೆ ನಿಜವಾದ ಶೂರರ ಅಹಿಂಸೆ ಎನಿಸಿಕೊಳ್ಳುತ್ತದೆ. ಬಲಹೀನರ ಉಪಾಯ ವೇದಾಂತ ಆಗುವುದಿಲ್ಲ.

ನೀವೆಂದಿಗೂ ನಿರ್ವೀರ್ಯರೆನಿಸುವುದು ಸಾಧ್ಯವೇ ಇಲ್ಲ.

"ಸತ್ಯಾಗ್ರಹ ಎನ್ನುವುದು ಬಲಹೀನರ ಮಾರ್ಗ ಎಂದು ನಾನು ತಿಳಿದಿದ್ದರೆ ಅದನ್ನು ಗಫಾರ್‌ಖಾನರಂತಹ ವೀರ ಯೋಧರ ಮುಂದೆ ಮಂಡಿಸುತ್ತಲೇ ಇರಲಿಲ್ಲ. ಪಠಾಣರು ಎಂದೂ ತಾವು ದುರ್ಬಲರೆಂದು ಹೇಳುವುದಿಲ್ಲ. ಪ್ರೇಮಮಾರ್ಗದ ಸೃಜನಶೀಲ ಶಕ್ತಿಯೇ ಸತ್ಯಾಗ್ರಹದ ತಿರುಳು. ಕೇವಲ ನಿಮ್ಮ ಗೆಳೆಯರನ್ನಷ್ಟೇ ಅಲ್ಲ ನಿಮ್ಮ ಶತ್ರುಗಳೆಂದು ಕೊಂಡಿರುವವರನ್ನೂ ಪ್ರೀತಿಸುವುದು ಅಗತ್ಯ. ಎಲ್ಲ ದ್ವೇಷಗಳೂ ಪರಸ್ಪರ ತಪ್ಪು ತಿಳಿವಳಿಕೆಗಳಿಂದ ಬೆಳೆದು ನಿಲ್ಲುತ್ತವೆ. ಖಾನ್‌ಸಾಹೇಬರು ಇದನ್ನು ಹೃದಯಪೂರ್ವಕವಾಗಿ ಅಂಗೀಕರಿಸಿರುವುದರಿಂದಲೇ ಇತರರಿಗಿಂತ ಸಾವಿರ ಪಾಲು ಹೆಚ್ಚು ಬಲಶಾಲಿಗಳೆಂದೆನಿಸಿದ್ದಾರೆ. ಪಠಾಣ ಜನಾಂಗದಂತಹ ವೀರ ಸಮಾಜಕ್ಕೆ ಬೋಧಿಸಿದ್ದಾರೆ. ಅವರೊಡನೆ ನಾನು ಸಹಕರಿಸಲು ಸಂತೋಷಿಸುತ್ತಿದ್ದೇನೆ. ಈ ಮಾರ್ಗ ಯಾವಾಗಲೂ ಅಳ್ಳೆದೆಯವರಿಗೆ ಸಿದ್ಧಿಸಲಾರದು. ಸಾಧಿಸುವುದು ಅತ್ಯಂತ ಕಠಿಣ ಸಾಹಸ ಎಂದೂ ಬಲ್ಲೆ. ನಾನು ಐವತ್ತು ವರ್ಷಗಳ ಸತತ ಪ್ರಯತ್ನದಲ್ಲಿದ್ದೇನೆ. ಅತ್ಯುತ್ಕೃಷ್ಟ ಶುದ್ಧ ಜೀವನ ನಡೆಸಬೇಕಾಗುತ್ತದೆ. ಅತ್ಯಗಾಧ ಸಹನೆ ಇರಬೇಕಾಗುತ್ತದೆ. ಹುಲ್ಲಿನ ಎಸಳನ್ನು ಒಡೆದು ಸಾಗರವನ್ನು ಬರಿದು ಮಾಡಲು ಪ್ರಯತ್ನಿಸುವವನ ಅಪರಿಮಿತ ಸಹನೆ ಬೇಕಾದೀತು."

ಗಫಾರ್ ಖಾನರು ಗಾಂಧೀಜಿಯನ್ನು ಗಡಿನಾಡಿನ ಅನೇಕ ಹಳ್ಳಿಗಳಿಗೆ ಕರೆದೊಯ್ದರು. ಹಳ್ಳಿಹಳ್ಳಿಯಲ್ಲಿ ಸಹಸ್ರಾರು ಸ್ತ್ರೀ ಪುರುಷರು ಉತ್ಸಾಹದಿಂದ ಸ್ವಾಗತಿಸಿದರು. ಒಂದೊಂದು ಹಳ್ಳಿಯಲ್ಲೂ ಅವರ ಪದ್ಧತಿಯಂತೆ ಕೊಬ್ಬಿದ ಒಂದು ಆಡನ್ನೂ ಗಾಂಧೀಜಿಗೆ ಉಡುಗೊರೆಯಾಗಿ ಅವರೇ ನೇಯ್ದ ಕಂಬಳಿಯನ್ನೂ ತಂದಿರುತ್ತಿದ್ದರು. ಅತಿಥಿ ಸತ್ಕಾರ ಅವರ ಧರ್ಮ ಎಂದೇ ಆಚರಿಸುತ್ತಿದ್ದರು. ಖಾನರ ತೌರೂರಾದ ಉಕ್‌ಮನ್ ಜಾಯ್‌ನಲ್ಲಂತೂ ಜನರ ಸಂತೋಷ ಉಕ್ಕಿ ಹರಿಯಿತು. ಎಲ್ಲ ಕಡೆಯೂ ಖುದಾಯಿ ಖಿದ್‌ಮತ್‌ಗಾರರು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು. ಎಲ್ಲರದೂ ಒಂದೇ ದೃಷ್ಟಿ. ಅಹಿಂಸೆಯ ಮಾರ್ಗವನ್ನು ಕಲಿಸಿದ ಗುರು ಎಂಬ ಅತ್ಯಂತ ಗೌರವ ಭಾವನೆ. "ನೀವು ಕಲಿಸಿದ ಶೂರರ ಅಹಿಂಸೆ

ನಮ್ಮಲ್ಲಿ ಕ್ರಾಂತಿಯನ್ನು ತಂದಿದೆ. ಹೊಸ ಜೀವನಕ್ಕೆ ಸಿದ್ಧ ಮಾಡಿದೆ. ನಿಜವಾದ ಧೈರ್ಯ ಮತ್ತು ಸಾಹಸ ನಮಗೆ ಅರಿವಾಗಿದೆ. ಮನುಷ್ಯರಿಗೆ ಹೆದರಬೇಡ; ದೇವರಿಗೆ ಹೆದರು; ಅವನಲ್ಲಿ ಭಕ್ತಿಶ್ರದ್ಧೆಯೇ ಅಹಿಂಸೆಯ ಆಧಾರ. ನಿರ್ಭಯತೆ ನಮ್ಮನ್ನು ನಮ್ಮ ಸಮಸ್ಯೆಗಳನ್ನೆದುರಿಸಿ ಪರಿಹರಿಸುವ ಸಾಮರ್ಥ್ಯ ನೀಡುತ್ತದೆ. ಜಾತೀಯ ವೈಷಮ್ಯ, ಬಡತನ, ನಿರುದ್ಯೋಗಗಳನ್ನು ನಿರ್ಮೂಲ ಮಾಡುವ ಮಾರ್ಗ ತೋರಿದ್ದಿರೀ. ಪ್ರಾಮಾಣಿಕವಾಗಿ ಪ್ರೇಮದಿಂದ ಬಾಳುವುದನ್ನು ಅಹಿಂಸೆ ಕಲಿಸಿದೆ" ಎಂದು ಬಿನ್ನವತ್ತಳೆಗಳನ್ನರ್ಪಿಸುತ್ತಿದ್ದರು.

ಚಾರ್‌ಸಡ್ಡಾದಲ್ಲಿ ಗಾಂಧೀಜಿ ಹೃತ್ಪೂರ್ವಕವಾಗಿ ಅವರನ್ನು ಶ್ಲಾಘಿಸಿದರು. "ನಿಮ್ಮ ಮಧ್ಯೆ ಬಾಳಲು ನನ್ನ ಅಂತರಂಗ ಆಶಿಸುತ್ತದೆ. ಖಾನ್ ಸಹೋದರರು ಆತ್ಮೀಯರಾಗಿದ್ದಾರೆ. ನಿಮ್ಮ ಸಾಧನೆ ನನ್ನನ್ನಾಕರ್ಷಿಸಿದೆ. ದೈವಭಕ್ತನಾದವನು ಎಂದೂ ಕತ್ತಿಯನ್ನು ನಂಬಿ ಬದುಕಲಾರ. ನೀವು ದೇವರ ಸೇವಕರು ಎಂದು ಹೇಳಿ ಮಾನವಲೋಕಕ್ಕೇ ಸೇವೆ ಸಲ್ಲಿಸುವವರಾಗಿದ್ದೀರಿ. ಅಹಿಂಸಾ ಮಾರ್ಗವನ್ನಂಗೀಕರಿಸಿದಲ್ಲದೆ ನಿಮ್ಮ ಈ ಆದರ್ಶ ಸಿದ್ಧಿಸಲಾರದು. ಪಠಾಣರಾದ ನಿಮ್ಮ ಬಗ್ಗೆ ಜನ. ಅನೇಕ ತಪ್ಪು ಕಲ್ಪನೆಗಳನ್ನು ಹರಡಿದ್ದಾರೆ. ನನ್ನನ್ನೂ ಅನೇಕ ಸಾರೆ ಹಲವರು ಎಚ್ಚರಿಸಿದ್ದಾರೆ. ಭಾರತದ ಎಲ್ಲೆಡೆಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಸತ್ಯಾಗ್ರಹ ಸ್ವಯಂಸೇವಕರು ಇಲ್ಲಿ ಇದ್ದೀರಿ. ನಿಮ್ಮ ಶಿಸ್ತು ಸಂಯಮಗಳು ಅಹಿಂಸಾ ಮನೋಧರ್ಮದಲ್ಲಿ ಆಳವಾದ ಬೇರು ಬಿಟ್ಟಿಲ್ಲದೆ ಶಾಶ್ವತ ಶಕ್ತಿ ಬರುವುದಿಲ್ಲ. ಕೇವಲ ಬಾಹ್ಯ ಶಿಸ್ತಷ್ಟೇ ನಿಮಗೆ ಪ್ರಯೋಜನವಾಗದು. ಈ ಗಡಿನಾಡಿನ ಪಠಾಣರು ಭಾರತಕ್ಕೆ ಸ್ವಾತಂತ್ರ್ಯ ತರುವುದಷ್ಟೇ ಅಲ್ಲ. ಇಡೀ ಮಾನವ ಲೋಕಕ್ಕೆ ಭಾರತದ ಮೂಲಕ ಅಹಿಂಸಾ ಸಮರದ ಅಮೋಘ ಸಂದೇಶವನ್ನು ಬೀರುವಂತಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ" ಎಂದರು.

ಜಗತ್ತು ಯುದ್ಧಗಳಿಂದ ತತ್ತರಿಸುತ್ತಿದೆ. ಶಸ್ತ್ರಗಳು ವಿಜೃಂಭಿಸಿವೆ. ನಾವು ವಿನಾಶದೆಡೆಗೆ ಧಾವಿಸುತ್ತಿದ್ದೇವೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಹಿಂಸಾ ಯೋಧರಾಗಿ ಬಲಿದಾನಕ್ಕೆ ಸಿದ್ಧವಾದ ಮಾತ್ರವೇ ಹೊಸ

ದಾರಿ ಅನಾವರಣವಾದೀತು. ನಮ್ಮ ಹೃದಯಗಳಲ್ಲಿ ದ್ವೇಷದ ಕಿಡಿ ಮತ್ತು ಕತ್ತಿಯಲ್ಲಿ ನಂಬಿಕೆ ಇದ್ದರೆ ಅದು ಸಾಧ್ಯವಿಲ್ಲ. ಭಗವಂತನ ಹೆಸರಿನಲ್ಲಿ ನಾವು ಸೇವಕರೆನಿಸಿ ಅವನ ಪ್ರೇಮರಾಜ್ಯವನ್ನು ನಿರಾಕರಿಸ ಲಾದೀತೇ" ಎಂದು ಗಾಂಧೀಜಿ ಅವರನ್ನೆಚ್ಚರಿಸಿದರು.

ದೇಶದಲ್ಲಿ ಅನೇಕ ಕಡೆ ಮತೀಯ ಘರ್ಷಣೆಗಳಲ್ಲಿ ಸೋದರರು ಪರಸ್ಪರ ಹೊಡೆದಾಡಿ ಸಾಯುತ್ತಿರುವುದನ್ನು ಗಾಂಧೀಜಿ ಸ್ಮರಿಸಿ ಮರುಗಿ ದರು. ನಮ್ಮದು "ವೀರರ ಅಹಿಂಸೆಯಾಗಿದ್ದರೆ ಸತ್ಯಾಗ್ರಹಿಗಳು ಈ ಹಿಂಸಾತ್ಮಕ ಘಟನೆಗಳಲ್ಲಿ ಮುನ್ನುಗ್ಗಿ ಪ್ರಾಣಾರ್ಪಣೆ ಮಾಡಿ ರಕ್ತದ ಹೊಳೆಯನ್ನು ತಡೆಗಟ್ಟುತ್ತಿದ್ದರು" ಎಂದು ನುಡಿಯುತ್ತಿದ್ದರು. "ಈ ನನ್ನ ಕನಸು ಇನ್ನೂ ದೂರದಲ್ಲಿಯೇ ಉಳಿದಿದೆ. ನೀವು ನಿಮ್ಮ ಶ್ರದ್ಧೆಯಿಂದ, ನಿಮ್ಮ ಬಲಿದಾನದಿಂದ ನನ್ನಲ್ಲಿ ಆಶಾಕಿರಣ ಮೂಡಿಸಿದ್ದೀರಿ" ಎಂದು ಈಶಸೇವಕರ ಪಡೆಯನ್ನು ಆಶೀರ್ವದಿಸಿದರು.

ಮೇ ಎಂಟರಂದು (೧೯೩೭) ಗಡಿನಾಡಿನಿಂದ ಪ್ರಯಾಣ ಮಾಡಿದರು. ೧೯೩೮ ರ ಅಕ್ಟೋಬರಿನಲ್ಲಿ ಮತ್ತೆ ಗಡಿನಾಡಿನ ಪೆಷಾವರಿಗೆ ಬಂದರು, ವಿಶ್ರಾಂತಿ ಪಡೆಯಲು ಬಂದಿದ್ದರು. ಎರಡನೇ ಮಹಾಯುದ್ಧ ಅತ್ಯಂತ ಘೋರ ಸ್ವರಗಳನ್ನು ಮುಟ್ಟಿತ್ತು. ಪೆಷಾವರಿನಿಂದ ಹರಿಜನ ಪತ್ರಿಕೆಗೆ ತಮ್ಮ ಪ್ರಸಿದ್ಧ ಲೇಖನ "ನಾನು ಜೆಕೋಸ್ಲೋವೇಕಿಯದ ಪ್ರಜೆಯಾಗಿ ದ್ದರೆ?" (ಇಫ್ ಐಪರ್ ಎ ಜೆಕ್) ಬರೆದರು. ಪ್ರಚಂಡ ಅಸ್ತ್ರಶಕ್ತಿಯ ಸಾಧನಗಳಿಂದ ಸಣ್ಣ ದೇಶವಾದ ಜೆಕೋಸ್ಲೋವೇಕಿಯದ ಮೇಲೆ ಹಿಟ್ಲರ್ ಧಾಳಿ ಮಾಡಿದ. ಗಾಂಧೀಜಿ ಈ ರಾಕ್ಷಸ ಕೃತ್ಯವನ್ನು ಖಂಡಿಸುತ್ತಾ ಜೆಕ್ಕರಿಗೆ ಹೇಗೆಂದರು, "ಈ ಧಾಳಿಗೆ ತುತ್ತಾಗಿ ನುಚ್ಚು ನೂರಾಗುವುದು ಖಂಡಿತ. ಆದರೆ ನಾನೇದಾರೂ ಜೆಕ್ಕನಾಗಿದ್ದರೆ ಬೃಹದ್ ಶಸ್ತ್ರಬಲದ ರಾಕ್ಷಸ ದೇಶಗಳ ಬಲವನ್ನಾಗಲೀ ಬೆಂಬಲವನ್ನಾಗಲೀ ನಿರಾಕರಿಸಿ ಎದೆಕೊಟ್ಟು ನಿಲ್ಲುತ್ತಿದ್ದೆ. ಅವರ ಆಜ್ಞೆಗಳಿಗೆ ಮಣಿಯದೆ ಮರಣವನ್ನು ಸಂತೋಷ ದಿಂದ ಸ್ವಾಗತಿಸುತ್ತಿದ್ದೆ. ನಿಶ್ಶಸ್ತ್ರನಾಗಿ ನಿಂತು ಬಲಿದಾನಕ್ಕೆ ಸಿದ್ಧನಾಗು ತ್ತಿದ್ದೆ. ದೇಹ ನಾಶವಾದರೂ ಆತ್ಮವನ್ನು ರಕ್ಷಿಸಿಕೊಳ್ಳುವ ಮಾರ್ಗ ಅದೊಂದೇ. ಆತ್ಮಗೌರವದಿಂದ ಸಾಯುವುದು ಹೇಡಿಯಂತೆ ದಾಸ್ಯ

ವನ್ನೊಪ್ಪಿಕೊಳ್ಳುವುದಕ್ಕಿಂತ ಲೇಸು. ಗಾಢಶ್ರದ್ಧೆಯಿಂದ ನನ್ನ ಗೌರವವನ್ನು ಕಾಪಾಡಿಕೊಳ್ಳುತ್ತಿದ್ದೆ. ಹಿಟ್ಲರನ ಅಧಿಕಾರ ನನ್ನ ಮೇಲೆ ನಡೆಯದು ಎಂದು ಆತನಿಗೆ ಮನದಟ್ಟಾಗುತ್ತಿತ್ತು. ಇಲ್ಲದಿದ್ದರೂ ನನ್ನ ಹೋಣೆ ನನ್ನ ಆತ್ಮೋದ್ಧಾರ ಎಂಬ ಸಮಾಧಾನದಿಂದ ಮರಣವನ್ನಪ್ಪುವುದೇ ನನ್ನ ಪರಮ ಧರ್ಮ ಎಂದು ತಿಳಿದು ಅಹಿಂಸಾತ್ಮಕ ಹೋರಾಟವಲ್ಲಿ ಮಡಿಯು ತ್ತಿದ್ದೆ." ಈ ಲೇಖನ ಲೋಕ ಪ್ರಸಿದ್ಧವಾಯಿತು.

ಮೀರಾಬಹೆನ್ ಅವರಿಗೆ ಈ ಲೇಖನ ಕಳುಹಿಸುವಾಗ, "ನನ್ನ ಮುಂದೆ ಈ ಕ್ಷಣದಲ್ಲಿ ಅಪ್ರತಿಹತ ದೈವಭಕ್ತ ಖಾನ್ ಅಬ್ದುಲ್ ಗಫಾರ್ ಖಾನರು ಕುಳಿತಿದ್ದಾರೆ. ಅವರ ಪ್ರಯೋಗವೇ ನನ್ನ ನಂಬಿಕೆಗೆ ಸಾಕ್ಷಿ. ಈತ ಪರಮ ವೀರರ ಸಂತತಿಗೆ ಸೇರಿದ ಪಠಾಣ. ಶತಮಾನಗಳಿಂದ ಶಸ್ತ್ರ ಶಕ್ತಿಯನ್ನಾಶ್ರಯಿಸಿ ಹೋರಾಡಿದ ಯೋಧರ ವಂಶದವರು. ಅವರೆ ತನ್ನ ಅಹಿಂಸಾ ದೀಕ್ಷೆಯಿಂದ ಸತ್ಯಾಗ್ರಹಶಕ್ತಿಯನ್ನು ಮೆರೆಸಿದ್ದಾರೆ. ಸಾವಿರಾರು ಪಠಾಣ ಸೈನಿಕರನ್ನು ತನ್ನ ದಾರಿಗೆ ಪರಿವರ್ತಿಸಿದ್ದಾರೆ. ಅವರಿಗೆಲ್ಲ ತಮ್ಮ ಮಹಾನಾಯಕನಲ್ಲಿ ಅಚಲ ಶ್ರದ್ಧೆ. ಅವರ ಮಾತು ದೈವವಾಣಿ. ಈ ಪ್ರಯೋಗ ಯಶಸ್ವಿಯಾಗುವುದೆಂಬ ಪೂರ್ಣ ಶ್ರದ್ಧೆಯಿದೆ......ಜಗತ್ತಿನ ಯಾವುದೇ ಪ್ರಚಂಡ ಭೌತಶಕ್ತಿಗೂ ಮಣಿಯದ ದೃಢ ಸಂಕಲ್ಪದಿಂದ ಹೃದಯದಲ್ಲಿ ಯಾವ ದ್ವೇಷಕ್ಕೂ ಅಸ್ಪದ ಕೊಡದೆ ಎದುರಿಸಿ ನಿಲ್ಲುವ ನಿರ್ಭಯತೆಗಿಂತ ಮಿಗಿಲಾದ ಧೈರ್ಯವುಂಟೆ? ಆತ್ಮವೊಂದೇ ಅಮರ. ಮಿಕ್ಕೆಲ್ಲ ನಶ್ವರ ಎಂಬ ಪರಮ ಶ್ರದ್ಧೆ ಈ ನಿರ್ಭೀತ ಶೌರ್ಯದ ಆಧಾರ. ಸತ್ಯಾ ಗ್ರಹಿಯಾದವನಿಗೆ ಮಾತ್ರವೇ ಈ ವೀರ ಸಾಹಸ ಸಾಧ್ಯ" ಎಂದು ಬರೆದಿ ದ್ದಾರೆ ಗಾಂಧಿಜೀ.

ಗಫಾರ್‌ಖಾನರ ಅಪರಿಮಿತ ಪ್ರೇಮಾದರಗಳ ಆತಿಥ್ಯದಿಂದ ಗಾಂಧೀ ಜಿಯ ಆರೋಗ್ಯ ಸುಧಾರಿಸಿತು. ಉತ್‌ಮನ್‌ಜಾಯ್‌ನಲ್ಲಿದ್ದ ಖಾನರ ಮನೆ ನಿಸರ್ಗ ಸೌಂದರ್ಯದ ಮಧ್ಯೆ ಒಂದು ಹಿತವಾದ ಆರೋಗ್ಯಧಾಮ ವಾಯಿತು. ಅಲ್ಲಿ ತಂಗಿದ್ದಾಗ ಗಾಂಧೀಜಿಯ ರಕ್ಷಣೆಗೆಂದು ಖಾನರು ಇಬ್ಬರು ಸಿಪಾಯಿಗಳನ್ನು ನೇಮಿಸಿದರು. ಗಾಂಧೀಜಿಗೆ ಅದು ಸರಿಯೆನಿ ಸಲಿಲ್ಲ. ಖಾನರಿಗೆ ತಿಳಿಸಿ ಹೇಳಿದರು. ಪೋಲೀಸರ ಅವಶ್ಯಕತೆ ಕಿಲ್ಲ

ಸಂದರ್ಭಗಳಲ್ಲಿ ಉಂಟು ಎಂದವರು ಒಪ್ಪಿದರೂ ಸತ್ಯಾಗ್ರಹಿಯಾದವನು ಸ್ವಂತ ರಕ್ಷಣೆಗೆಂದು ಅಂಥ ಶಸ್ತ್ರಬಲದ ಆಶ್ರಯ ಪಡೆಯುವುದು ಅಸಂಗತ ಎಂದರು. ಅದೇ ಸಮಯಕ್ಕೆ ದೇಶದ ಗಡಿಗಳಲ್ಲಿ ಪರಕೀಯರ ಧಾಳಿ ಎದುರಿಸಲು ನಿಶ್ಶಸ್ತ್ರ ಸ್ವತಂತ್ರ ಭಾರತ ಹೇಗೆ ಸಿದ್ಧವಾಗಬೇಕು ಎಂಬ ಬಗ್ಗೆ ಖಾನರಿಗೂ ಗಾಂಧೀಜಿಗೂ ದೀರ್ಘ ಸಂಭಾಷಣೆಗಳು ನಡೆದವು. ಒಂದು ಲಕ್ಷ ಜನ ಅಹಿಂಸಾ ಯೋಧರಾದ ಖುದಾಯಿ ಖಿದ್‌ಮತ್‌ಗಾರರು ಪೂರ್ಣವಾಗಿ ಸತ್ಯಾಗ್ರಹ ಜೀವನಕ್ಕೆ ಒಲಿದು ಬಂದಿರುವುದಾದರೆ ಯಾವುದೇ ಆಕ್ರಮಣಕಾರರನ್ನಾಗಲಿ ಅಹಿಂಸಾತ್ಮಕವಾಗಿ ಎದುರಿಸಿ ಶುದ್ಧವಾದ ಪ್ರೇಮ ಮತ್ತು ಸೇವೆಗಳಿಂದ ಅವರ ಮನಃ ಪರಿವರ್ತನೆ ಮಾಡಬಹುದು ಎಂಬ ನಂಬಿಕೆ ಇಬ್ಬರಲ್ಲೂ ಅಂಕುರಿಸಿ ನಿಂತಿತು. ಅನೇಕ ಖುದಾಯಿ ಖಿದ್‌ಮತ್‌ಗಾರರು ಪ್ರತ್ಯೇಕ ಪ್ರತ್ಯೇಕವಾಗಿ ಗಾಂಧೀಜಿಯನ್ನು ಭೇಟಿಯಾಗಿ ತಮ್ಮ ಪೂರ್ಣ ವಿಶ್ವಾಸವನ್ನು ವ್ಯಕ್ತಮಾಡಿದರು. ಖಾನರು ಅತ್ಯಂತ ಶ್ರದ್ಧೆಯಿಂದ ಗಾಂಧೀಜಿಯ ಮಾತುಗಳನ್ನು ಪುಷ್ಟು ಭಾಷೆಗೆ ಭಾಷಾಂತರಿಸುತ್ತಿದ್ದರು. ಈ ಶಿಸ್ತಿನ ಅಹಿಂಸಾಯೋಧರ ಪ್ರಾಮಾಣಿಕತೆ ಸ್ಫಟಿಕದಂತೆ ನಿರ್ಮಲವಾಗಿದ್ದುದು ಗಾಂಧೀಜಿಗೆ ಹರ್ಷವೆನಿಸಿತು. ಕ್ರಮೇಣ ಅವರಲ್ಲಿ ಅಲ್ಪಸ್ವಲ್ಪ ಸೇಡು ಮನೋಭಾವ, ಪ್ರತಿಹಿಂಸೆಯ ದ್ವೇಷ ಮತ್ತು ಅಲ್ಪ ಕಾರಣಕ್ಕೂ ಶಸ್ತ್ರ ಎತ್ತುವ ಸ್ವಭಾವ ಮಾಯವಾಗುತ್ತದೆ ಎಂಬ ನಿರೀಕ್ಷೆ ಪ್ರಬಲವಾಗಿ ಚಿಮ್ಮಿ ಬಂದಿತು.

ಪಠಾಣರ ಸಮಾಜ ಈ ಸತ್ಯಾಗ್ರಹ ಜೀವನ ದೀಕ್ಷೆಯನ್ನು ಅಂಗೀಕರಿಸಲು ಯಾವ ಯಾವ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಖಾನರು ಗಾಂಧೀಜಿಯೊಡನೆ ಚರ್ಚಿಸಿದರು. ಹಳ್ಳಿಹಳ್ಳಿಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸುಧಾರಣೆಗಳಿಗೆ ಖುದಾಯಿ ಖಿದ್‌ಮತ್‌ಗಾರರು ಸೇವಾ ಮನೋಭಾವದಿಂದ ಕಾರ್ಯಮಗ್ನರಾಗಲು ತೀರ್ಮಾನಿಸಿದರು. ಖಾದಿ ಗ್ರಾಮೋದ್ಯೋಗಗಳು, ಜಾತೀಯ ಸೌಹಾರ್ದ, ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆ, ಭೂಸುಧಾರಣೆ, ಆರ್ಥಿಕ ಸಮತೆ, ಸ್ವಾತಂತ್ರ್ಯ ರಕ್ಷಣೆ, ಸ್ವಾವಲಂಬನೆ ಮುಂತಾದ ಅನೇಕ ಕಾರ್ಯಕ್ರಮಗಳು ರೂಪಿತವಾದವು.

"ಮನುಷ್ಯನ ಸ್ವಭಾವ ಪ್ರೇಮ ತತ್ವಕ್ಕೆ ಮಣಿಯುತ್ತದೆ. ಪ್ರತಿವಾದಿಯೊಡನೆ ಹೋರಾಡುವಾಗಲೂ ಅವನ ಬಗ್ಗೆ ಪ್ರೇಮದಿಂದ ವರ್ತಿಸುತ್ತಾ ವಿಶ್ವಾಸಕ್ಕೆ ಪಾತ್ರನಾಗುವ ಪ್ರಯತ್ನವೇ ಸತ್ಯಾಗ್ರಹದ ಬಲ. ಪ್ರತಿವಾದಿಯನ್ನು ಶಿಕ್ಷಿಸುವುದೇ ಗುರಿಯಲ್ಲ. ಅವನ ಸ್ನೇಹಿತನಂತೆ ನಡೆದು ಕೊನೆಗೆ ಪರಸ್ಪರ ಅರಿವಿನಿಂದ ಸ್ನೇಹವನ್ನುಳಿಸಿಕೊಳ್ಳುವುದು ಸಾಧ್ಯ ಎಂದು ಖಚಿತಪಡಿಸಬೇಕು." ಈ ಮಾತುಗಳನ್ನು ಹೇಳುತ್ತಾ ಗಾಂಧೀಜಿ ತಾವು ಹೇಗೆ ದಕ್ಷಿಣ ಆಫ್ರಿಕದಲ್ಲಿದ್ದಾಗ ಅಲ್ಲಿನ ಗೌರ್ನರ್ ಜನರಲ್ ಆಗಿದ್ದ ಜನರಲ್ ಸ್ಮಟ್ಸ್ ತಮ್ಮನ್ನು ಪರಮ ಶತ್ರು ಎಂದು ಮೊದಲು ತಿಳಿದಿದ್ದು ಕ್ರಮೇಣ ಅವರ ಬಾಂಧವ್ಯ ಸ್ನೇಹಮಯವಾಗಿ ಪರಿಣಮಿಸಿತು ಎಂದು ತಿಳಿಸಿದರು.

"ಕಾಲ ಎಲ್ಲವನ್ನೂ ಪರಿವರ್ತಿಸುತ್ತದೆ. ವ್ಯವಸ್ಥೆಗಳು ಶಿಥಿಲವಾಗುತ್ತವೆ. ಕೊನೆಗೆ ನಿಲ್ಲುವುದು ಅಹಿಂಸೆಯ ಮೇಲೆ ಆಧಾರಿತವಾದ ಮಾನವೀಯ ಬಾಂಧವ್ಯಗಳು ಮಾತ್ರ. ಏಸು ಕ್ರಿಸ್ತನು ಬೋಧಿಸಿದ 'ನಿನ್ನ ಶತ್ರುವನ್ನೂ ಪ್ರೀತಿಸು' ಎನ್ನುವ ಬೋಧೆ ಎರಡು ಸಾವಿರ ವರ್ಷಗಳಾದರೂ ಇನ್ನೂ ನಮಗೆ ಮನದಟ್ಟಾಗಿಲ್ಲ. ಹಾಗೆಯೇ ಇಸ್ಲಾಮ್ ಧರ್ಮದ ಶಾಂತಿಯುತ ಬಾಳ್ವೆಯ ಸಂದೇಶ ಪಲ್ಲಟವಾಗುತ್ತಿವೆ. ಪವಿತ್ರ ಖುರಾನ್ ಬೋಧಿಸುವುದು ಅಹಿಂಸೆಯ ಸಂದೇಶ ಎಂದು ನನಗೆ ಪೂರ್ಣ ನಂಬಿಕೆ. ಆ ಗ್ರಂಥವನ್ನು ಶ್ರದ್ಧೆಯಿಂದ ಓದಿದ್ದೇನೆ. ಅನಂತ ಕಾಲದ ಪ್ರವಾಹದಲ್ಲಿ ಒಂದೆರಡು ಸಾವಿರ ವರ್ಷಗಳೂ ಅಲ್ಪವೇ. ಎಲ್ಲ ಧರ್ಮಗಳೂ ಅವುಗಳ ಕೇಂದ್ರ ಸಂದೇಶವಾದ ಅಹಿಂಸಾ ಧರ್ಮದ ಅಡಿಗಲ್ಲಿನ ಮೇಲೆ ನಿಂತು ಅವರ ಅನುಯಾಯಿಗಳ ಬಾಳನ್ನು ರೂಪಿಸಿದರೆ ಮಾತ್ರವೇ ಅವು ಸಾರ್ಥಕವಾಗಿ ಉಳಿಯುತ್ತವೆ. ಕೇವಲ ಬುದ್ಧಿ ಗ್ರಾಹ್ಯವಾದರೆ ಸಾಲದು ಪ್ರತಿಯೊಂದು ಪ್ರೇಮಸೂತ್ರವೂ ಹೃದಯವನ್ನಾವರಿಸಿ ನಿಂತು ಜೀವನವನ್ನೂ ಪರಿವರ್ತಿಸಬೇಕು."

ಗಾಂಧೀಜಿ ಸತತವಾಗಿ ಹೇಳುತ್ತ ಬಂದ ಮಾತುಗಳು ಆ ಮುಗ್ಧ ಹೃದಯದ ಶ್ರದ್ಧಾಳುಗಳಲ್ಲಿ ಆಳವಾಗಿ ಬೇರೂರುತ್ತಿದ್ದುವು. ಗಫಾರ್ ಖಾನರಂತೂ ತಲ್ಲೀನರಾಗುತ್ತಿದ್ದರು. ಪುಷ್ತು ಭಾಷೆಯಲ್ಲಿ ವಿವರಿಸುತ್ತಿ

ದ್ದರು. ಅಹಿಂಸಾ ಧರ್ಮ ಮಾನವನ ಪೂರ್ಣತೆಗೆ ಬೇಕಾದ ಅನಿವಾರ್ಯ ಗುಣ. ಅಹಿಂಸೆಯ ಸಂಪೂರ್ಣ ಶಕ್ತಿ ನಮಗೆ ಅರಿವಾಗುವುದು ಕಠಿಣ. ಅರಿವಿಗೆ ಬಂದುದಷ್ಟನ್ನೇ ಅನುಷ್ಠಾನ ಮಾಡಿದಾಗಲೂ ಎಂತಹ ಅದ್ಭುತ ಪರಿಣಾಮ ಮಾಡಬಲ್ಲದು ಎಂದು ಗಾಂಧೀಜಿ ಪ್ರಯೋಗ ಮಾಡಿನೋಡಿದ್ದರು. ಮನುಷ್ಯನ ದೌರ್ಬಲ್ಯಗಳು ಅನೇಕ. ಆದರೆ ದೃಢ ಸಂಕಲ್ಪ ಶಕ್ತಿಯನ್ನೂ ದೇವರು ಕರುಣಿಸಿದ್ದಾನೆ. ಅತ್ಯಂತ ಕಠಿಣ ಸಮಸ್ಯೆಗೂ ಅಹಿಂಸಾತ್ಮಕ ಪರಿಹಾರವುಂಟು. ಅದನ್ನು ದೃಢ ವಿಶ್ವಾಸದಿಂದ ಬಾಳಿಗೆ ಅನ್ವಯಿಸುವುದು ಮಾನವನ ಸಂಕಲ್ಪ ಶಕ್ತಿಗೆ ಸಾಧ್ಯ. ಖುದಾಯಿ ಖಿದ್‌ಮತ್‌ಗಾರರ ಪರಿವರ್ತನೆಯನ್ನು ಸಾಧಿಸಿದ ಖಾನ್‌ಅಬ್ದುಲ್ ಗಫಾರ್ ಖಾನರ ಸಾಧನೆಯನ್ನು ಗಾಂಧೀಜಿ ಹೃತ್ಪೂರ್ವಕ ಮೆಚ್ಚಿದ್ದರು. ಈ ಪ್ರವಾಸದಲ್ಲಿ ತಾವೇ ಆ ಸ್ವಯಂ ಸೇವಕರ ಮಧ್ಯೆ ಇದ್ದು ನೇರವಾಗಿ ಕಂಡುಕೊಂಡರು. ಅವರ ಮಹಾಪ್ರಯೋಗ ಪಥದಲ್ಲಿ ಈ ಅನುಭವ ಅವರಿಗೊಂದು ಹೊಸ ಪ್ರೇರಣಾ ಸಾಧನವೆನಿಸಿತು.

ಜೀಲಮ್ ನದಿಗೂ ಸಿಂಧೂ ನದಿಗೂ ಮಧ್ಯೆ ಈಗ ಗಡಿನಾಡು ಪ್ರಾಂತಕ್ಕೆ ಸೇರಿದಂತೆ ಪ್ರಸಿದ್ಧ ಬೌದ್ಧ ಕೇಂದ್ರವಾಗಿದ್ದ ತಕ್ಷಶಿಲೆ ಇದೆ. ಗಾಂಧೀಜಿ ಹಿಂತಿರುಗುವಾಗ ಈ ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡಿದರು. ಒಂದು ಸಾವಿರ ವರ್ಷ ಇಲ್ಲಿ ಬೌದ್ಧ ಧರ್ಮದ ಮಹಾವಿದ್ಯಾಲಯಗಳೂ, ವಿಹಾರಗಳೂ, ಸ್ತೂಪಗಳೂ ಸುಪ್ರಸಿದ್ಧವಾಗಿದ್ದವು. "ನಮ್ಮ ಪೂರ್ವಜರೆಲ್ಲ ಬೌದ್ಧ ಧರ್ಮಾವಲಂಬಿಗಳಾಗಿದ್ದರೆಂದೇ ನಂಬಿಕೆ. ಇಸ್ಲಾಮ್ ಧರ್ಮ ನಂತರ ಬಂತು" ಎಂದರು ಗಫಾರ್ ಖಾನ್. ಅಕ್ರೋಧದಿಂದಲೇ ಕ್ರೋಧವನ್ನು ಜಯಿಸು ಎಂಬ ಬುದ್ಧ ಮಂತ್ರ ಮತ್ತೆ ಜೀವಂತವಾಗಿ ಇಲ್ಲಿ ಹರಡಿನಿಲ್ಲುತ್ತಿದ್ದುದನ್ನು ಸ್ಮರಿಸಿ ಗಾಂಧೀಜಿ ಪುಳಕಿತರಾದರು.

ಹಿಂತಿರುಗುತ್ತಾ ರೈಲಿನಲ್ಲಿ ಈ ಮಹತ್ವಪೂರ್ಣ ಪ್ರವಾಸವನ್ನು ಮೆಲುಕು ಹಾಕಿದರು. ಹೃದಯ ತುಂಬಿತ್ತು. ಹರಿಜನ ಪತ್ರಿಕೆಗೆ ೧೯೩೮ ರ ನವೆಂಬರ್ ೧೧ ರಂದು ಹೀಗೆ ಬರೆದರು:

"ಖುದಾಯಿ ಖಿದ್‌ಮತ್‌ಗಾರ್ ಚಳುವಳಿ ಯಶಸ್ವಿಯಾದೀತೋ ಇಲ್ಲವೋ ನಾನರಿಯೆ. ಆದರೆ ಅವರ ಮಹಾನಾಯಕರಾದ ಬಾದ್‌ಷಾಖಾನರ

ಬಗ್ಗೆ ನನಗೆ ಯಾವ ಸಂಶಯವೂ ಉಳಿದಿಲ್ಲ. ನಿಸ್ಸಂದೇಹವಾಗಿ ಆತ ಒಬ್ಬ ದೇವ ಮಾನವ. 'ಭಗವಂತ ನಿತ್ಯನಿರಂತರವಾಗಿ ಬಳಿಯಿದ್ದಾನೆ. ಅವನ ಚಿತ್ತವೇ ಸತ್ಯ; ಅವನ ಅನುಗ್ರಹವೇ ಯಶಸ್ಸನ್ನು ತರಬಲ್ಲದು' ಎಂದು ಖಾನರು ಕಾಯಾ ವಾಚಾ ಮನಸಾ ನಂಬಿದ್ದಾರೆ. ನಿಷ್ಕಾಮ ಕರ್ಮದಲ್ಲಿ ತಲ್ಲೀನರಾಗಿದ್ದಾರೆ. ಅಹಿಂಸಾಪಥಕ್ಕಿಂತ ಅನ್ಯಪಥವಿಲ್ಲ. ಪಠಾಣರ ಉದ್ಧಾರಕ್ಕೆ ಅದೊಂದೇ ಮಾರ್ಗ. ಹಿಂಸಾ ಮಾರ್ಗದಿಂದ ವಿಮುಕ್ತರಾಗಿ ಹೊಸ ಮಾನವ ಸಮಾಜ ಸೃಷ್ಟಿಸುವ ನಿಸ್ಸೀಮ ತಪಸ್ಸು ಅವರದು."

ಹಿಂತಿರುಗಿದೊಡನೆ ಗಾಂಧೀಜಿ ಗಫಾರ್‌ಖಾನರು ಕೈಕೊಂಡ ಗ್ರಾಮ ಪುನರ‍್ರಚನೆಯ ಕಾರ್ಯದಲ್ಲಿ ಸಹಕಾರ ನೀಡಲು ತಮ್ಮ ಆಶ್ರಮ ವಾಸಿಗಳಾಗಿದ್ದ ಮೀರಾಬಹೆನ್ ಅವರನ್ನೂ ಅಮ್ತುಲ್‌ಸಲಾಮ್ ಅವರನ್ನೂ ಗಡಿ ನಾಡು ಪ್ರಾಂತಕ್ಕೆ ಕಳುಹಿಸಿದರು. ವಿಶ್ವಯುದ್ಧದ ವಿನಾಶ ತಾಂಡವ ಪ್ರಪಂಚವನ್ನೆಲ್ಲ ಆವರಿಸಿ ನಿಲ್ಲುತ್ತಿತ್ತು. ಇಡೀ ಮಾನವ ಕುಲವೇ ವಿಹ್ವಲವಾಗಿ ಶಾಂತಿಗಾಗಿ ಮೊರೆಯಿಡುತ್ತಿತ್ತು. ದಾಸ್ಯದಲ್ಲಿದ್ದ ಭಾರತವೂ ಸಂಕಟಕ್ಕೆ ಸಿಕ್ಕಿತ್ತು. ಒಂದು ಹೊಸ ಬೆಳಕಿಗಾಗಿ ಕಾದು ನಿಂತಿತ್ತು. ಕಾಲ ಉರುಳಿತು.

೧೩. ಯುದ್ಧ ಮತ್ತು ಅಹಿಂಸೆ

ಎರಡನೆ ಮಹಾಯುದ್ಧ ೧೯೪೦ ರಲ್ಲಿ ಭಯಂಕರವಾಗಿ ವಿಶ್ವವನ್ನೆಲ್ಲ ಆವರಿಸುತ್ತಿತ್ತು. ಹಿಟ್ಲರ್ ನಿರ್ದಯವಾಗಿ ಅನೇಕ ದೇಶಗಳನ್ನು ನಿರ್ನಾಮ ಮಾಡಿ ಮುನ್ನುಗ್ಗುತ್ತಿದ್ದ. ಮಿತ್ರದೇಶಗಳು ಗಂಡಾಂತರಕ್ಕೆ ಸಿಕ್ಕಿದ್ದವು. ಪೂರ್ವದಿಂದ ಜಪಾನ್ ಭಾರತದ ಗಡಿಯವರೆಗೂ ಧಾವಿಸಿತ್ತು. ಬರ್ಮ, ಸಿಂಗಪುರ, ಮಲಯಗಳು ಧಾಳಿಗಳಿಗೆ ಬಲಿಯಾಗಿದ್ದವು. ಬ್ರಿಟಿಷ್ ಸಾಮ್ರಾಜ್ಯದ ಸೇನೆಗಳು ತತ್ತರಿಸಿ ಹಿಮ್ಮೆಟ್ಟುತ್ತಿದ್ದವು. ಭಾರತದಲ್ಲಿ ಲಕ್ಷಾಂತರ ವಿದೇಶೀ ಸೈನ್ಯ ಪಡೆಗಳೂ ಭಾರತದ ಸೈನ್ಯವೂ ಸಾವಿರಾರು ಕಡೆ ಬಿಡಾರ ಮಾಡಿ ಸೈನ್ಯಾಚರಣೆ ನಡೆಸುತ್ತಿದ್ದವು. ಬ್ರಿಟಿಷ್ ಸರ್ಕಾರ ಈ ದೇಶದಲ್ಲಿ ಕಡ್ಡಾಯವಾಗಿ ಯುವಕರನ್ನು ಸೈನ್ಯಕ್ಕೆ ಭರ್ತಿ ಮಾಡಿಸುತ್ತಿತ್ತು. ದೇಶದ ಸರ್ವ ಸಂಪತ್ತು ಈ ಪರದೇಶೀಯರ ರಕ್ಷಣೆಗಾಗಿ ಅವರ ಸಮರ ವೆಚ್ಚಕ್ಕಾಗಿ ಸೂರೆಯಾಯಿತು. "ನಮ್ಮನ್ನು ದಾಸ್ಯದಲ್ಲಿಟ್ಟು ಸಾಮ್ರಾಜ್ಯದ ಉಳಿವಿಗಾಗಿ ಯುದ್ಧ ಮಾಡಿ ಎಂದು ಹೇಳಲು ನಿಮಗೆ ನೈತಿಕ ಹಕ್ಕುಂಟೇ" ಎಂದು ಗಾಂಧೀಜಿ ಮತ್ತು ಕಾಂಗ್ರೆಸ್ ತೀವ್ರವಾಗಿ ಪ್ರತಿಭಟಿಸಿ ನುಡಿದರು.

ಸಾಮ್ರಾಜ್ಯಶಾಹಿಶಕ್ತಿಗಳು ಭಾರತವನ್ನು ಇನ್ನು ತಮ್ಮ ವಶದಲ್ಲಿಟ್ಟುಕೊಳ್ಳುವುದು ಅಸಾಧ್ಯವೆನಿಸಿತ್ತು. ರಾಷ್ಟ್ರೀಯ ಕಾಂಗ್ರೆಸ್ಸಿನೊಡನೆ ಸಂಧಾನದ ಮಾತು ಪ್ರಾರಂಭವಾಯಿತು. ಆದರೆ ಬ್ರಿಟಿಷ್ ಸರ್ಕಾರ ತೋರಿಕೆಯ ಸುಧಾರಣೆಗಳನ್ನು ಮುಂದೊಡ್ಡಿ ನಯವಂಚನೆಯ ಪಿತೂರಿಗಳಲ್ಲಿ ತೊಡಗಿತು. ಕೇಂದ್ರ ಸರ್ಕಾರದಲ್ಲಿ ಭಾರತೀಯರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವುದಾಗಿಯೂ ಯುದ್ಧ ಮುಗಿದೊಡನೆ ಒಂದು ರಾಜ್ಯಾಂಗ ರಚನಾಸಭೆ ರಚಿಸಿ ಸ್ವಾಯತ್ತ ಪ್ರಭುತ್ವವನ್ನು ನೀಡುವುದಾಗಿಯೂ ವೈಸ್‌ರಾಯ್

ವೇಪೆಲ್ಲರು ಘೋಷಿಸಿದರು. ೧೯೩೯ ರಲ್ಲಿ ರಾಜೇಂದ್ರ ಪ್ರಸಾದರನ್ನೂ ಮುಸ್ಲಿಮ್ ಲೀಗಿನ ಅಧ್ಯಕ್ಷರಾಗಿದ್ದ ಮಹಮ್ಮದಾಲಿ ಜಿನ್ನಾ ಅವರನ್ನೂ ಮಾತುಕತೆಗಳಿಗೆ ಆಹ್ವಾನಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ರಾಜೇಂದ್ರ ಪ್ರಸಾದರು ಸಮಗ್ರ ಭಾರತೀಯರ ಪರವಾಗಿ ತಮ್ಮ ಬೇಡಿಕೆಯನ್ನಿಡುತ್ತಾ ಮೊದಲು ನಿಸ್ಸಂದೇಹ ಮಾತುಗಳಲ್ಲಿ ಭಾರತದ ಸ್ವಾತಂತ್ರ್ಯವನ್ನು ಅಂಗೀಕರಿಸುವ ಘೋಷಣೆಯಾಗಬೇಕೆಂದೂ ಯುದ್ಧಾನಂತರ ರಾಜ್ಯಾಂಗ ರಚಿಸಿಕೊಳ್ಳುವ ಹಕ್ಕನ್ನು ಒಪ್ಪಿಕೊಳ್ಳಬೇಕೆಂದೂ ತಿಳಿಸಿದರು. ಜಿನ್ನಾ ಅವರು ಮುಸಲ್ಮಾನರ ಪರವಾಗಿ ಮಾತ್ರವೇ ಮಾತನಾಡಿ ಅವರಿಗಾಗಿ ಪ್ರತ್ಯೇಕವಾದ ರಾಜ್ಯಾಂಗ ಹಕ್ಕುಗಳಿರುವಂತಹ ಕೆಲವು ಮುಸ್ಲಿಮ್ ರಾಜ್ಯಗಳೇ ನಿರ್ಮಾಣವಾಗಬೇಕೆಂದೂ ತಾತ್ಕಾಲಿಕ ಸರ್ಕಾರದಲ್ಲಿ ಅವರ ಪ್ರತಿನಿಧಿಗಳು ಜನಸಂಖ್ಯೆಗನುಗುಣವಾದ ಪ್ರಮಾಣದಲ್ಲೇ ಇರಬೇಕೆಂದೂ ವಾದಿಸಿದರು. ಜಾತೀಯ ಸಮಸ್ಯೆಯನ್ನೇ ಪ್ರಧಾನವಾಗಿ ಮಾಡಿ ಒಡಕನ್ನೂ ಸೃಷ್ಟಿಸಿ ಸ್ವಾತಂತ್ರ್ಯದ ಬೇಡಿಕೆಯನ್ನು ತಳ್ಳಿ ಹಾಕುವ ಕುಟಿಲ ನೀತಿಯನ್ನು ಗಾಂಧೀಜಿ ಮತ್ತು ರಾಜೇಂದ್ರ ಪ್ರಸಾದರು ದೃಢವಾಗಿ ನಿರಾಕರಿಸಿದರು. ಗಾಂಧೀಜಿ ಹೀಗೆ ಟೀಕಿಸಿದರು, "ಹಳೆಯ ಜಾಡನ್ನೇ ಹಿಡಿದು ಹೊರಟಿದ್ದೀರಿ. ನಿಮ್ಮ ಸಾಮ್ರಾಜ್ಯಶಾಹಿ ಕೊನೆಗೊಂಡಿರುವುದಾದರೆ ನೀವು ಹೊಸ ಸಂದರ್ಭಕ್ಕೆ ತಕ್ಕಂತೆ ನುಡಿಯಬೇಕು. ಭಾರತದ ಸ್ವಾತಂತ್ರ್ಯ ಬೇಡಿಕೆಯನ್ನು ಮೊದಲು ತತ್ವಶಃ ಘೋಷಿಸುವುದಾದರೆ ಮುಂದಿನ ಮಾತುಕತೆಗಳನ್ನು ಸಿಧಾನವಾಗಿ ಕೈಗೊಳ್ಳಬಹುದು. ಗುಲಾಮಗಿರಿಯನ್ನು ಗುಡಿಸಿ ಹಾಕುವ ನಿರ್ಧಾರ ಮಾಡಿದ ಮೇಲೆ ಗುಲಾಮರನ್ನು ನಿಮಗೆ ಸ್ವಾತಂತ್ರ್ಯಬೇಕೇ ಎಂದು ಯಾವ ಯಜಮಾನನೂ ಕೇಳಲಾರ".

ಜಿನ್ನಾ ಅವರ ವಾದವೇ ಬೇರೆಯಾಗಿತ್ತು. ರಾಜ್ಯಾಂಗ ರಚನೆ ಸ್ವತಂತ್ರ ಭಾರತವನ್ನು ಘೋಷಿಸುವ ಮೊದಲು ಬ್ರಿಟಿಷರ ನೇತೃತ್ವದಲ್ಲೇ ಆಗಬೇಕೆಂದೂ ಮುಸ್ಲಿಮರ ಹಕ್ಕುಗಳು ಪೂರ್ಣವಾಗಿ ದೊರೆಯುವ ಒಪ್ಪಂದಬೇಕೆಂದೂ ಹಠಹಿಡಿದರು.

ಕಾಂಗ್ರೆಸ್ ರಚಿಸಿದ್ದ ಪ್ರಾಂತೀಯ ಸರ್ಕಾರಗಳು ರಾಜೀನಾಮೆ ಕೊಟ್ಟವು. ಮುಸ್ಲಿಮ್ ಲೀಗಿನ ಸರ್ಕಾರಗಳು ಕಾಂಗ್ರೆಸ್ಸಿನ ಧೋರಣೆ

ಗಳನ್ನು ಪ್ರತಿಭಟಿಸಿ ನಿಂತವು. ಮುಸ್ಲಿಮರ ವಿಮೋಚನಾ ದಿನ ಆಚರಿಸ ಬೇಕೆಂದು ಜಿನ್ನಾ ಕರೆಕೊಟ್ಟರು. ಇದರ ಹಿಂದೆ ಬ್ರಿಟಿಷ್ ರಾಜಕಾರಣಿ ಗಳ ಕೈವಾಡವಿತ್ತು. ಎಲ್ಲೆಲ್ಲೂ ಹಿಂದೂ ಮುಸ್ಲಿಮ್ ದಂಗೆಗಳೇಳುವಂತೆ ಪ್ರೇರಣೆನೀಡಿ ರಾಷ್ಟ್ರೀಯ ಚಳುವಳಿಯನ್ನು ನಿರ್ನಾಮ ಮಾಡಲು ಸಾಮ್ರಾಜ್ಯಶಾಹಿ ಹವಣಿಸಿತ್ತು. ಕಾಂಗ್ರೆಸ್ ಸಂಸ್ಥೆ ಬ್ರಿಟಿಷರ ಯುದ್ಧೋ ದ್ಯಮಗಳಿಗೆ ಯಾವ ರೀತಿಯ ಸಹಕಾರವನ್ನೂ ನೀಡಬಾರದೆಂದು ನಿರ್ಧರಿಸಿತು.

ರಾಮಘರ್ ಕಾಂಗ್ರೆಸ್ ಅಧಿವೇಶನದಲ್ಲಿ ಮೂರು ಪ್ರಧಾನ ಪ್ರಶ್ನೆ ಗಳನ್ನು ಗಾಂಧೀಜಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಾರರ ಮುಂದಿ ಟ್ಟರು. ಹಿಂದೂ ಮತ್ತು ಮುಸ್ಲಿಮ್ ಭಾರತಗಳೆಂಬ ಎರಡು ಹೋಳಾಗ ಬೇಕೆಂಬ ಬೇಡಿಕೆ ಬಂದರೆ ಹೇಗೆ ಎದುರಿಸಬೇಕು? ಈ ಸಮಯದಲ್ಲಿ ಸವಿನಯ ಶಾಸನಭಂಗ ಚಳುವಳಿ ಹೂಡಲು ದೇಶ ಸಿದ್ಧವಾಗಿದೆಯೇ? ರಾಜ್ಯಾಂಗ ಸಭೆಯೊಂದು ಕೇಳುವಾಗ ಅದರ ಖಚಿತ ಸ್ವರೂಪ ಸ್ಪಷ್ಟ ವಾಗಿದೆಯೇ?

ಅಬ್ದುಲ್ ಗಫಾರ್‌ಖಾನರು ಈ ಬಗ್ಗೆ ತಮ್ಮ ಖಚಿತವಾದ ಅಭಿ ಪ್ರಾಯಗಳನ್ನು ಸರಳ ಮಾತುಗಳಲ್ಲಿ ಹೀಗೆ ಹೇಳಿದರು:

"ಶಾಸನಭಂಗ ಚಳುವಳಿ ಕೇವಲ ಜೈಲಿಗೆ ಹೋಗುವುದಷ್ಟೇ ಆದರೆ ಗಡಿನಾಡಿನ ಜನ ಸಿದ್ಧರಾಗಿದ್ದಾರೆ. ಆದರೆ ಈ ಸತ್ಯಾಗ್ರಹದ ಅರ್ಥ ಅಷ್ಟಕ್ಕೇ ಸೀಮಿತವಲ್ಲ. ಜೈಲಿಗೆ ಹೋಗುವ ಜನ ಅದರ ತತ್ವವನ್ನು ಮನಗಾಣುವುದಿಲ್ಲ. ನಾವು ಸಮರ ಹೂಡಿರುವ ಆದರ್ಶಕಾರ್ಯಕ್ಕೆ ನಾವು ಅರ್ಹರಾಗಿದ್ದೇವೆಯೇ ಎಂಬ ಸಂಶಯ ನನಗಿದೆ. ಈಗ ತಾನೆ ನಾವು ಪ್ರಯೋಗಿಸಿದ ಮಂತ್ರಿಮಂಡಲ ರಚನೆಯಿಂದ ದೊರೆತ ಅಲ್ಪಸ್ವಲ್ಪ ಅಧಿಕಾರವೇ ನಮ್ಮನ್ನು ಪಲ್ಲಟಗೊಳಿಸಿದ್ದನ್ನು ಕಂಡಿದ್ದೇವೆ. ಅನೇಕರು ಭ್ರಷ್ಟರಾದುದನ್ನು ನೋಡಿದ್ದೇವೆ. ಸ್ವಾತಂತ್ರ್ಯ ಬಂದ ಮೇಲೆ ಅಧಿಕಾರ ನಿರ್ವಹಿಸಲು ಯೋಗ್ಯರೂ ನಿಜವಾದ ಸತ್ಯಾಗ್ರಹಿಗಳೂ ಆದ ಜನರ ತಂಡ ಗಳನ್ನು ನಿರ್ಮಿಸದೆ ನಾವು ಶಾಸನಭಂಗ ಚಳುವಳಿ ಹೂಡುವುದು ಅಪಾಯ

ಕಾರಿ ಎನಿಸುತ್ತದೆ. ಮೊದಲು ನಾವು ಶುದ್ಧರಾಗಬೇಕು. ಮಿಕ್ಕವರನ್ನು ಶುದ್ಧಗೊಳಿಸಬೇಕು.”

ಜವಹರಲಾಲರು, ರಾಜೇಂದ್ರಪ್ರಸಾದ್, ರಾಜಾಜಿ ಮತ್ತು ಮೌಲಾನಾ ಅಜಾದ್ ಚರ್ಚೆಯಲ್ಲಿ ಭಾಗವಹಿಸಿ ದೇಶದ ವಿಭಜನೆಯ ಸೂಚನೆಗಳನ್ನು ಪ್ರತಿಭಟಿಸಬೇಕು ಎಂದರು. ಆದರೆ ಚಳುವಳಿ ಹೂಡಲು ಈ ಸಮಯ ಉಚಿತವೇ ಎಂಬ ಶಂಕೆ ಎಲ್ಲರಲ್ಲಿಯೂ ಇತ್ತು. ೧೯೪೦ ರ ಮಾರ್ಚಿಯಲ್ಲಿ ಮುಸ್ಲಿಮ್ ಲೀಗ್ ಲಾಹೋರಿನಲ್ಲಿ ಸಭೆ ಸೇರಿ ಪಾಕಿಸ್ತಾನ ಬೇಡಿಕೆಯ ನಿರ್ಣಯವನ್ನು ಅಂಗೀಕರಿಸಿತು. ಜಿನ್ನಾ ಸಾಹೇಬರು ಪ್ರಬಲವಾಗಿ ಕಠಿಣವಾಗಿ ಟೀಕಿಸುತ್ತಾ, “ಈಗಿನ ಭಾರತದ ಐಕ್ಯತೆ ಕೃತಕವಾದುದು. ಅದು ಬ್ರಿಟಿಷರ ಸೃಷ್ಟಿ. ಅವರ ರಕ್ಷಣೆಯಲ್ಲಿ ಪೋಷಿತವಾದುದು. ಅವರ ಶಸ್ತ್ರವೇ ಅದಕ್ಕೆ ಆಶ್ರಯ. ಪ್ರಜಾಪ್ರಭುತ್ವ ತತ್ವ ಭಾರತಕ್ಕೆ ಒಗ್ಗದು. ಮುಸ್ಲಿಮರು ಒಂದು ಪ್ರತ್ಯೇಕ ರಾಷ್ಟ್ರ. ಅವರ ರಾಜ್ಯ ಅವರದಾಗಬೇಕು. ಅದಕ್ಕೆ ಪ್ರತ್ಯೇಕ ಗಡಿಗಳೂ ಪ್ರತ್ಯೇಕ ರಾಜ್ಯಾಡಳಿತವೂ ಆಗಲೇಬೇಕು.”

ಅದೇ ಏಪ್ರಿಲ್‌ನಲ್ಲಿ ರಾಷ್ಟ್ರೀಯವಾದಿ ಮುಸ್ಲಿಮರ ಸಮ್ಮೇಳನ ದೆಹಲಿಯಲ್ಲಿ ಸೇರಿತು. ಅದರಲ್ಲಿ ಕಾಂಗ್ರೆಸ್ಸಿಗರು, ಅಹ್ರಾರರು, ಜಮೈತ್ ಉಲೇಮಾ–ಇ–ಹಿಂದ್, ಷಿಯಾ ರಾಜಕೀಯ ಸಮ್ಮೇಳನ ಮುಂತಾದ ಮುಸ್ಲಿಮ್ ಸಂಸ್ಥೆಗಳು ಸೇರಿದ್ದುವು. ಸಿಂಧ್‌ನ ಆಗಿನ ಮುಖ್ಯಮಂತ್ರಿ ಅಲ್ಲಾಭಕ್ಷ್ ಅಧ್ಯಕ್ಷರಾಗಿದ್ದರು. ಪಾಕಿಸ್ತಾನ ರಚನೆಯನ್ನು ಅವರೆಲ್ಲ ವಿರೋಧಿಸಿದರು. “ಭೌಗೋಳಿಕವಾಗಿಯೂ ರಾಜಕೀಯವಾಗಿಯೂ ಭಾರತ ಒಂದೇ ಅಖಂಡ ದೇಶ. ದೇಶದ ಮೂಲೆ–ಮೂಲೆಗಳಲ್ಲೂ ಮುಸ್ಲಿಮರಿದ್ದಾರೆ. ಅವರ ಐತಿಹಾಸಿಕ ಮತ್ತು ಸಾಂಸ್ಕೃತಿಕ ನೆಲೆಗಳು ಎಲ್ಲೆಡೆಯಲ್ಲೂ ಹರಡಿ ನಿಂತಿವೆ. ಇವೆಲ್ಲವೂ ಅವರಿಗೆ ಪ್ರಾಣಕ್ಕಿಂತ ಪ್ರಿಯವಾದುವು. ರಾಷ್ಟ್ರೀಯ ದೃಷ್ಟಿಯಿಂದ ಪ್ರತಿಯೊಬ್ಬ ಮುಸಲ್ಮಾನನೂ ಭಾರತದಪ್ರಜೆ. ಸ್ವಾತಂತ್ರ್ಯಕ್ಕಾಗಿ ನಾವೆಲ್ಲ ಒಂದಾಗಿ ಹೋರಾಡಬೇಕು” ಎಂಬ ನಿರ್ಣಯ ಆ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಹರಿಜನ ಪತ್ರಿಕೆಯಲ್ಲಿ ಬರೆಯುತ್ತಾ ಗಾಂಧೀಜಿ:

"ಮುಸ್ಲಿಮ್ ಲೀಗಿನ ನಿರ್ಣಯ ದೇಶವನ್ನು ಪೇಚಿಗೆ ಸಿಕ್ಕಿಸಿರುವುದು ನಿಜ. ಆದರೆ ಆ ಕಾರಣಕ್ಕಾಗಿ ಸ್ವಾತಂತ್ರ್ಯ ಹೋರಾಟ ಕುಂಠಿತವಾಗಬೇಕಾಗಿಲ್ಲ. ಯಾರು ಯಾರನ್ನೂ ಬಲಾತ್ಕಾರವಾಗಿ ರಾಷ್ಟ್ರ ವಿಧೇಯರಾಗಬೇಕೆಂದು ಒತ್ತಾಯ ಮಾಡಲು ಸಾಧ್ಯವಿಲ್ಲ. ರಾಷ್ಟ್ರಪ್ರಜೆಗಳಲ್ಲಿ ಎಲ್ಲರಿಗೂ ಸ್ವಯಂ ನಿರ್ಣಯದ ಹಕ್ಕು ಇದ್ದೇ ಇರುತ್ತದೆ. ನಾವೀಗ ಒಂದು ಅವಿಭಕ್ತ ಕುಟುಂಬ. ಎಂಟು ಕೋಟಿ ಮುಸ್ಲಿಮರೂ ನಮ್ಮಲ್ಲಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಜಾತೀಯ ಐಕ್ಯತೆಯಿಲ್ಲದೆ ಸ್ವರಾಜ್ಯ ಕೈಗೂಡುವುದಿಲ್ಲ ಎಂದು ೧೯೧೯ರಲ್ಲಿ ಹೇಳಿದ ನಿಲುವನ್ನೇ ಮತ್ತೆ ದೃಢವಾಗಿ ಉಚ್ಚರಿಸುತ್ತೇನೆ" ಎಂದರು.

ಜಿನ್ನಾರವರು ಭಾರತೀಯರಲ್ಲ ಎಂದು ಯಾರೂ ಹೇಳಲಾಗುವುದಿಲ್ಲ. ಸಾಮಾನ್ಯ ಜನತೆಯಲ್ಲಿ ರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವಾಗ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಅಥವಾ ಸಿಖ್ ಎಂಬ ಭೇದಭಾವ ಬರುವುದೇ ಇಲ್ಲ. ಧರ್ಮದ ತಳಹದಿ ಪ್ರಮುಖವಾಗಿ ನೀತಿ ಮತ್ತು ನಡತೆ. ಯಾವ ಧರ್ಮವೂ ಮತ್ತೊಂದಕ್ಕೆ ವಿರೋಧ ಮಾಡಲೆಂದೇ ಹುಟ್ಟಿದ್ದಲ್ಲ ಎಂದು ಗಾಂಧೀಜಿ ಮತ್ತು ಗಫಾರ್‌ಖಾನ್ ಒತ್ತಿ ಒತ್ತಿ ಹೇಳುತ್ತಿದ್ದರು. ಡಾ.ಸಯ್ಯದ್‌ಮಹಮ್ಮದ್, ಅಸಫ್ ಅಲಿ, ಮೌಲಾನಾ ಅಜಾದ್ ಮುಂತಾದವರು ಪ್ರಬಲವಾಗಿ ದೇಶ ವಿಭಜನೆಯನ್ನು ವಿರೋಧಿಸಿದರು. ಕಾಂಗ್ರೆಸ್ ಮಂತ್ರಿಮಂಡಲಗಳನ್ನು ೧೯೩೭ ರಲ್ಲಿ ಬ್ರಿಟಿಷ್ ಪ್ರಾಂತಗಳಲ್ಲಿ ರಚಿಸಿ ನಡೆಸಿದಾಗ ಮತೀಯ ಸೌಹಾರ್ದ ಕದಡಲಿಲ್ಲ ಎಂದು ವಾದಿಸಿದರು.

ಯುದ್ಧ ವಿರೋಧಿ ಚಳುವಳಿಯನ್ನು ಸೀಮಿತವಾಗಿ ನಡೆಸಬೇಕೆಂದೂ ಅನಾವಶ್ಯಕ ಸಾಮೂಹಿಕ ಚಳುವಳಿಗಳಿಗೆ ಅವಕಾಶಕೊಡಬಾರದೆಂದೂ ಗಾಂಧೀಜಿಯ ಇಚ್ಛೆಯಾಗಿತ್ತು. ಆದರೆ ರಾಷ್ಟ್ರೀಯ ನಾಯಕರು ಈ ಯುದ್ಧ ಸಮಯದಲ್ಲಿ ಹಿಂಸೆ, ಅಹಿಂಸೆಗಳ ತಾತ್ವಿಕ ಚರ್ಚೆಗೆ ಎಡೆಕೊಡಬಾರದೆಂದೂ ದೇಶ ರಕ್ಷಣೆಯ ವಿಷಯದಲ್ಲಿ ಅಹಿಂಸೆಯ ಪ್ರಯೋಗ ಸಾಧ್ಯವಾಗಲಾರದೆಂದೂ ವಾದಿಸಿದರು. ಆ ವೇಳೆಗೆ ಯುದ್ಧದ ಕಾರ್ಮೋಡಗಳು ಭಾರತದ ಮೇಲೆ ಕಪ್ಪಾಗಿ ಹರಡಿದ್ದುವು. ಫ್ರಾನ್ಸ್

ಹಿಟ್ಲರನ ಧಾಳಿಗೆ ಬಲಿಯಾಗಿತ್ತು. ಮಿತ್ರರಾಷ್ಟ್ರಗಳು ಗೋಡೆಗೆ ಬೆನ್ನು ಕೊಟ್ಟು ಹೋರಾಡುತ್ತಿದ್ದ ಸಮಯ. ಭಾರತಕ್ಕೆ ಸ್ವಾತಂತ್ರ್ಯ ನೀಡಿ ಅದರ ಪೂರ್ಣ ಬೆಂಬಲ ಪಡೆಯುವ ಸಂಭವ ಹೆಚ್ಚಾಗಿತ್ತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಈ ಸಂದರ್ಭವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ವೇಳೆ ರಾಷ್ಟ್ರದ ಬೇಡಿಕೆಯನ್ನು ಬ್ರಿಟಿಷರು ಒಪ್ಪಿ ಸ್ವಾತಂತ್ರ್ಯ ನೀಡುವುದಾದರೆ ಭಾರತ ಶಸ್ತ್ರ ಸಜ್ಜಿತವಾಗಿಯೇ ಮಿತ್ರರಾಷ್ಟ್ರಗಳೊಡನೆ ಸೇರಿ ಹೋರಾಡುವುದು ಒಳಿತು ಎಂಬ ನಿರ್ಣಯಕ್ಕೆ ಬಂದಿತ್ತು. ಮಹಾತ್ಮ ಗಾಂಧೀಯವರ ತತ್ವನಿಷ್ಠೆಯ ಪರಾಕಾಷ್ಠ ಸೀಮೆಯನ್ನು ನಾವು ಮುಟ್ಟಲಾರೆವು. ಅವರನ್ನು ನಮ್ಮ ನಿರ್ಣಯಕ್ಕೆ ಸಮ್ಮತಿಸಿ ಎಂದು ಕೇಳು ವುದೂ ಸರಿಯಲ್ಲ. ಆದ್ದರಿಂದ ಅವರ ಪ್ರಯೋಗಗಳನ್ನು ಅವರು ವ್ಯಯಕ್ತಿಕವಾಗಿ ನಡೆಸಲು ಅನುವಾಗುವಂತೆ ಸಂಸ್ಥೆಯ ಜವಾಬ್ದಾರಿಯಿಂದ ಮುಕ್ತ ಮಾಡಬೇಕಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟವನ್ನು ಅಹಿಂಸಾತ್ಮಕ ಸತ್ಯಾಗ್ರಹ ಮಾರ್ಗದಲ್ಲಿ ನಡೆಸುವುದನ್ನು ಅಂಗೀಕರಿಸಿದ್ದೇವೆ. ಆದರೆ ಸ್ವತಂತ್ರ ಭಾರತ ಸೈನ್ಯ ಪಡೆಗಳನ್ನೆಲ್ಲ ವಿಸರ್ಜಿಸಿ ತನ್ನ ರಕ್ಷಣೆ ಮಾಡಿಕೊಂಡೀತೆಂದು ನಾವು ಭಾವಿಸುವುದಿಲ್ಲ" ಎಂಬ ಕಾರ್ಯಕಾರೀ ಸಮಿತಿಯ ಅಭಿಪ್ರಾಯವನ್ನು ಗಾಂಧೀಜಿಯೂ ಒಪ್ಪಿಕೊಂಡು ತಾವು ಕಾಂಗ್ರೆಸ್ಸಿಗೆ ರಾಜಿನಾಮೆ ನೀಡಿದರು. ಅವರೊಡನೆ ಸಹಮತರಾಗಿ ರಾಜೀನಾಮೆಯಿತ್ತ ಮತ್ತೊಬ್ಬ ರಾಷ್ಟ್ರೀಯ ನಾಯಕರೆಂದರೆ ಖಾನ್ ಅಬ್ದುಲ್ ಗಫಾರ್ ಖಾನರೊಬ್ಬರೇ. ತಾತ್ವಿಕ ಭಿನ್ನಾಭಿಪ್ರಾಯದಿಂದ ಅವರು ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯತ್ವಕ್ಕೆ ವಿದಾಯ ಹೇಳಿದರು. ಅಹಿಂಸಾ ಜೀವನ ಮಾರ್ಗ ಎಲ್ಲ ಸಂದರ್ಭಗಳಲ್ಲೂ ಪ್ರಯೋಗ ಮಾಡುವುದೇ ಉಚಿತ ಎಂಬ ದೃಢವಾದ ತತ್ವ ನಿಷ್ಠೆ ಖಾನರಲ್ಲಿ ಬೇರೂರಿತ್ತು.

ಇದೇ ಸಂದರ್ಭದಲ್ಲಿ 'ಖಾನ್ ಸಾಹೇಬರ ಅಹಿಂಸೆ' ಎಂಬ ಶೀರ್ಷಿಕೆಯಲ್ಲಿ ಗಾಂಧೀಜಿ ಹರಿಜನ ಪತ್ರಿಕೆಯಲ್ಲಿ ಬರೆದು ಖಾನ್ ಅಬ್ದುಲ್ ಗಫಾರ್ ಖಾನರ ಅಚಲ ತತ್ವನಿಷ್ಠೆಯನ್ನು ಮನಬಿಚ್ಚಿ ಮೆಚ್ಚಿಕೊಂಡರು:

"ತಮ್ಮ ಮತ್ತು ತಮ್ಮ ಅನುಯಾಯಿಗಳ ತತ್ವನಿಷ್ಠೆಯ ಬಗ್ಗೆ ಸ್ಪಷ್ಟ ತಿಳಿವಳಿಕೆಯುಳ್ಳ ಖಾನ್ ಸಾಹೇಬರಿಗೆ ಕಾರ್ಯಕಾರೀ ಸಮಿತಿ ಸದಸ್ಯತ್ವಕ್ಕೆ

ರಾಜಿನಾಮೆ ಕೊಡುವುದು ಅನಿವಾರ್ಯವಾಯಿತು. ಹಾಗಲ್ಲದೇ ಹೋಗಿದ್ದರೆ ಅವರ ಇಡಿ ಜೀವನದ ಕಾರ್ಯಕ್ಕೆ ಇತಿಶ್ರೀಯಾಗುತ್ತಿತ್ತು. ಖುದಾಯಿ ಖಿದ್‌ಮತ್‌ಗಾರರನ್ನು ಸೈನ್ಯದ ಸಿಪಾಯಿಗಳಾಗಿ ಸೇರಿಕೊಳ್ಳಿ ಎಂದವರು ಹೇಳಿದ್ದರೆ ಅಸಂಗತವಾಗುತ್ತಿತ್ತು. ಈ ಯುದ್ಧವೇ ಪ್ರತೀಕಾರದ ಹಿಂಸಾಚಾರ. ಸೇಡುತೀರಿಸಿಕೊಳ್ಳಬೇಡಿ, ಪ್ರತಿಹಿಂಸೆ ಮಾಡಬೇಡಿ, ಶಸ್ತ್ರಾಸ್ತ್ರಗಳನ್ನು ತ್ಯಾಗಮಾಡಿ ಎಂದು ಬೋಧಿಸಿ ಈಗ ಯಾವ ಮುಖದಿಂದ ಮತ್ತೆ ವಿಧ್ವಂಸಕ ಸೈನ್ಯಕ್ಕೆ ಸೇರಿ ಎಂದು ಅವರು ಹೇಳಿಯಾರು? ಅವರು ನಿಷ್ಠಾವಂತ ಮುಸಲ್ಮಾನರು. ಧರ್ಮಭೀರುಗಳು. ತಮ್ಮ ಕರ್ತವ್ಯದ ನಿಚ್ಚಳ ದೃಷ್ಟಿಪಡೆದಿದ್ದಾರೆ. ತಾವು ಕಂಡ ಸತ್ಯಕ್ಕೆ ತಲೆಬಾಗಿ ನಡೆದು ಫಲವನ್ನು ದೈವಚಿತ್ತಕ್ಕೆ ಬಿಡುವುದೇ ಅವರ ಪ್ರವೃತ್ತಿ. ತಮ್ಮ ಸಾಧನೆಯಲ್ಲಿ ಯಶಸ್ವಿಯಾದಲ್ಲಿ ಅವರು ನಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲರು" ಎಂದು ಬರೆದಿದ್ದಾರೆ.

ಈ ಘಟನೆ ಕ್ಷಿಪ್ರವಾಗಿ ಮರೆಯಾಯಿತು. ಬ್ರಿಟಿಷ್ ಸರ್ಕಾರ ಕಾಂಗ್ರೆಸ್ಸಿನ ಧೋರಣೆಯನ್ನು ಧಿಕ್ಕರಿಸಿ ಬಿಟ್ಟಿತು. ಯುದ್ಧೋದ್ಯಮಕ್ಕೆ ಸಹಕಾರ ನೀಡುವ ಸ್ನೇಹಹಸ್ತವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ೧೯೪೦ ರಲ್ಲಿ ಹಿಂತೆಗೆದುಕೊಂಡಿತು. ಸ್ವಾತಂತ್ರ್ಯ ಸಂಗ್ರಾಮ ಮತ್ತೊಂದು ಮಜಲು ಮುಟ್ಟಿತು. ಭಾರತವನ್ನು ತಮ್ಮ ಶಸ್ತ್ರ ಬಲದಿಂದ ಗುಲಾಮಗಿರಿಯಲ್ಲಿಟ್ಟಿರುವುದು ಬ್ರಿಟಿಷರ ಕುಟಿಲ ನೀತಿ ಎಂದು ಸ್ಪಷ್ಟವಾಯಿತು. ಕಾಂಗ್ರೆಸ್ ಮತ್ತೆ ಗಾಂಧೀಜಿಯಲ್ಲಿ ಮೊರೆಹೊಕ್ಕಿತು. ಅವರೇ ಸ್ವಾತಂತ್ರ್ಯ ಸಂಗ್ರಾಮದ ಮುಂದಿನ ಹೆಜ್ಜೆಗಳನ್ನು ನಿರ್ಧರಿಸಿ ನಾಯಕತ್ವ ವಹಿಸಿಕೊಳ್ಳಬೇಕು ಎಂದು ಕೋರಿಕೊಂಡಿತು. ಗಾಂಧೀಜಿಯೂ ಒಪ್ಪಿದರು. ಯುದ್ಧ ಸಿದ್ಧತೆಗಳ ವಿರೋಧವಾಗಿ ಬಹಿರಂಗವಾಗಿ ಚಳುವಳಿ ಮಾಡಲು ಬ್ರಿಟಿಷ್ ಸರ್ಕಾರ ಅಡ್ಡಿ ಮಾಡುವುದಿಲ್ಲ ಎಂದು ಘೋಷಿಸುವುದಾದರೆ ತಾವು ಈಗ ಸಾಮೂಹಿಕ ಸವಿನಯ ಶಾಸನಭಂಗ ಚಳುವಳಿ ಹೂಡುವುದಿಲ್ಲ ಎಂದರು ಗಾಂಧೀಜಿ. ಅಂತೆಯೇ ವೈಸ್‌ರಾಯರಿಗೆ ಪತ್ರ ಬರೆದರು:

"ಈ ಕಠಿಣ ಸಂದರ್ಭದಲ್ಲಿ ನಿಮಗೆ ತೊಂದರೆಕೊಟ್ಟು ನಿಮ್ಮ

ತಕ್ಷಣದ ಯುದ್ಧಕ್ರಮಗಳಿಗೆ ಅಡ್ಡಿಮಾಡುವ ಉದ್ದೇಶ ನಮಗಿಲ್ಲ. ಆದರೆ ನಮಗೆ ಸಂಪೂರ್ಣವಾದ ವಾಕ್ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕನ್ನು ನೀವು ಚ್ಯುತಿ ಗೊಳಿಸಬಾರದು. ಸ್ವರಾಜ್ಯದ ಅಡಿಗಲ್ಲೇ ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ. ಆದ್ದರಿಂದ ಭಾರತೀಯರಾದ ನಾವು ಈ ಸಾಮ್ರಾಜ್ಯಶಾಹೀ ಯುದ್ಧವನ್ನು ಬೆಂಬಲಿಸಲಾರೆವು. ಇವುಗಳ ವಿರುದ್ಧವಾಗಿ ಯುದ್ಧ ವಿರೋಧಿ ಪ್ರಚಾರವನ್ನು ಬಹಿರಂಗವಾಗಿ ಮಾಡುತ್ತೇವೆ" ಎಂದರು.

ಭಾರತದಲ್ಲಿ ಆಗ ಇದ್ದ ಒಂಬತ್ತು ಕೋಟಿ ಮುಸ್ಲಿಮರಾಗಲೀ ಮೂವತ್ತು ಲಕ್ಷ ಸಿಖ್ಖರಾಗಲೀ ತಾವೇ ಒಂದು ಪ್ರತ್ಯೇಕ ರಾಷ್ಟ್ರವಾಗುವೆವು ಎನ್ನುವುದಾದರೆ ನಮ್ಮ ಸ್ವಾತಂತ್ರ್ಯ ಅರ್ಥಹೀನವಾಗುತ್ತದೆ ಎಂದು ಗಾಂಧೀಜಿ ಪದೇಪದೇ ಎಚ್ಚರಿಸಿದರು. ಈ ಎಲ್ಲ ಸಮಸ್ಯೆಗಳು ಬಂದರೂ ನಾವು ಅಹಿಂಸಾಮಾರ್ಗದಿಂದಲೇ ಪರಿಹರಿಸಿಕೊಳ್ಳಬೇಕು. ಮತೀಯ ಸೌಹಾರ್ದ ಮತ್ತು ಶಾಂತಿ ಇಲ್ಲದೆ ಭಾರತಕ್ಕೆ ಮೋಕ್ಷವಿಲ್ಲ. ಇಸ್ಲಾಂ ಎಂದರೆ ಶಾಂತಿ ಎಂದೇ ಅರ್ಥ. ಅದು ಕೇವಲ ಮುಸಲ್ಮಾನರ ಶಾಂತಿ ಎನ್ನುವುದು ಅಪಹಾಸ್ಯವಾದೀತು. ವಿಶ್ವಶಾಂತಿಯೇ ನಮ್ಮ ಗುರಿ. ಅದನ್ನು ಸಾಧಿಸಲು ಅಹಿಂಸೆಯಲ್ಲದೆ ಅನ್ಯಮಾರ್ಗವಿಲ್ಲ ಎಂದು ಗಾಂಧೀಜಿ ಮತ್ತು ಗಫಾರ್‌ಖಾನ್ ಏಕಕಂಠದಿಂದ ಪ್ರತಿಪಾದಿಸಿದರು.

ಗಾಂಧೀಜಿಯ ನೇತೃತ್ವದಲ್ಲಿ ವಾಕ್ ಸ್ವಾತಂತ್ರ್ಯ ಪಡೆಯಲು ಮೊದಲ ಹೆಜ್ಜೆಯಾಗಿ ವ್ಯಕ್ತಿಗತ ಸತ್ಯಾಗ್ರಹ ಪ್ರಾರಂಭವಾಗಬೇಕೆಂದು ಕಾಂಗ್ರೆಸ್ ನಿರ್ಣಯಿಸಿತು. ದೊಡ್ಡ ಪ್ರಮಾಣದಲ್ಲಿ ಯಾವ ಸಾಮೂಹಿಕ ಪ್ರತಿಭಟನೆ ನಡೆಸದೆ ಸದ್ದುಗದ್ದಲವಿಲ್ಲದೆ ನಿಷ್ಠಾವಂತ ಅಹಿಂಸಾಯೋಧರು ಯುದ್ಧ ವಿರೋಧಿ ಪ್ರಚಾರ ಕೈಗೊಂಡು ಶಿಕ್ಷೆಗೆ ಒಳಗಾಗುತ್ತಾ ಸಾಗಬೇಕೆಂದು ನಿರ್ಣಯಿಸಲಾಯಿತು. ಆಚಾರ್ಯ ವಿನೋಬಾ ಭಾವೆ ಅವರನ್ನು ಗಾಂಧೀಜಿ ಮೊದಲ ಸತ್ಯಾಗ್ರಹಿ ಎಂದು ಘೋಷಿಸಿದರು. ಅನಂತರ ಜವಾಹರಲಾಲರು ಮುಂತಾದವರ ಪಟ್ಟಿಯಾದಿ ಬಿಡುಗಡೆ ಮಾಡುತ್ತ ಸಾಗಿದರು. ಗಫಾರ್ ಖಾನರು ಮತ್ತೆ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯತ್ವಕ್ಕೆ ಹಿಂತಿರುಗಿದರು. ಬೊಂಬಾಯಿನಲ್ಲಿ ಗಾಂಧೀಜಿಯೊಡನೆ ದೀರ್ಘವಾಗಿ ಚರ್ಚಿಸಿ ಪೇಷಾವರ್‌ಗೆ

ಹಿಂತಿರುಗಿದರು. ಖಾನರಿಗೆ ಗಾಂಧೀಜಿಯಿಂದ ಪತ್ರಬಂತು :

"ಬೊಂಬಾಯಿನಲ್ಲಾದ ನಮ್ಮ ಸಂಭಾಷಣೆಯನ್ನು ನೀವು ಆಳವಾಗಿ ಗ್ರಹಿಸಿದ್ದೀರಿ ಎಂದು ನಂಬಿದ್ದೇನೆ. ಯಾವುದೇ ಸಮಸ್ಯೆಯಿರಲಿ ಮೂಲಭೂತ ತತ್ವಗಳ ಬೆಳಕಿನಲ್ಲಿ ಪರಿಹರಿಸಬಹುದು. ಅದನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ನಮ್ಮ ಅಹಿಂಸೆ ಮೊದಲಾಗುವುದು ಮನೆಯಿಂದ ನಮ್ಮ ಮಕ್ಕಳು, ಹಿರಿಯರು, ನೆರೆಹೊರೆ ಅವರುಗಳ ಬಾಂಧವ್ಯದಲ್ಲಿ. ಇತರರ ತಪ್ಪುಗಳನ್ನು ಉದಾರವಾಗಿ ನೋಡಿ ಕ್ಷಮಿಸಬೇಕು. ಎಷ್ಟೋ ವೇಳೆ ನಮ್ಮ ತಿಳುವಳಿಕೆ ತಪ್ಪಾಗಿರುತ್ತವೆ, ಆದರೆ ನಮ್ಮ ತಪ್ಪುಗಳನ್ನು ಕ್ಷಮಿಸಿ ಬಿಡಬಾರದು. ಆಗ ಮಾತ್ರ ನಾವು ತಿದ್ದಿಕೊಳ್ಳಲು ಸಾಧ್ಯ. ಹೀಗೆ ಸಾಧನೆ ಮಾಡುತ್ತ ಮೇಲೇರಬೇಕು. ನಮ್ಮ ಅಹಿಂಸೆಯನ್ನು ನಮ್ಮ ರಾಜಕೀಯ ಬಂಧುಗಳಲ್ಲಿಯೂ ಪ್ರಯೋಗಿಸಬೇಕು. ಭಿನ್ನಾಭಿಪ್ರಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೋಡಬೇಕು. ತುಂಬ ತಾಳ್ಮೆಯಿಂದ ಅವರ ದೃಷ್ಟಿಯನ್ನು ತಿಳಿದು ಅವರಲ್ಲಿನ ದೋಷಗಳನ್ನು ಮನದಟ್ಟು ಮಾಡಿಕೊಡಬೇಕು. ನಮ್ಮ ಅಭಿಪ್ರಾಯಗಳನ್ನೂ ಆ ಮೂಲಕ ದೃಢಪಡಿಸಿಕೊಳ್ಳಬೇಕು. ಹೀಗೆ ಮುಂದುವರಿಯುತ್ತಾ ನಮ್ಮದಕ್ಕಿಂತ ಭಿನ್ನವಾದ ದೃಷ್ಟಿಯುಳ್ಳ ಮತ್ತು ಬೇರೆ ತತ್ವಗಳನ್ನು ಒಪ್ಪಿರುವ ರಾಜಕೀಯ ಪಕ್ಷಗಳೊಡನೆ ತಾಳ್ಮೆಯಿಂದಲೂ ಕೋಮಲತೆಯಿಂದಲೂ ವ್ಯವಹರಿಸಬೇಕು. ಅವರ ಅಭಿಪ್ರಾಯಗಳನ್ನು ಅವರ ದೃಷ್ಟಿಯಿಂದ ನೋಡಿ ಟೀಕೆಗಳನ್ನು ಅರ್ಥಮಾಡಿಕೊಳ್ಳಬೇಕು. ನಮಗೂ ಎದುರಾಳಿಗಳಿಗೂ ಅಂತರಗಳು ಹೆಚ್ಚಾದಷ್ಟೂ ಅಹಿಂಸಾ ತತ್ವದ ಅನುಷ್ಠಾನಕ್ಕೆ ಹೆಚ್ಚು ಅವಕಾಶವಾಗುವುದೆಂಬುದನ್ನು ನೆನಪಿನಲ್ಲಿಡಬೇಕು. ಈ ವಿಷಯದಲ್ಲಿ ನಮ್ಮ ಪರೀಕ್ಷೆಯಾಗಿ ತೇರ್ಗಡೆಯಾದರೆ ಮಾತ್ರವೇ ನಮಗೆ ತೀವ್ರವಾದ ಅನ್ಯಾಯವೆಸಗಿರುವ ಶತ್ರುಗಳೊಡನೆ ನಾವು ಯಶಸ್ವಿಯಾಗಿ ಸೆಣಸಬಹುದು......ಇದೇ ನಮ್ಮಿಬ್ಬರ ಸಂಭಾಷಣೆಯಲ್ಲಿ ಮುಖ್ಯವಾಗಿ ಒಂದು ವಿಚಾರ. ಮತ್ತೊಂದು ನಮ್ಮ ಅಹಿಂಸಾ ಸಮರಕ್ಕೆ ಬೇಕಾದ ಸಿದ್ಧತೆ. ಸತತವಾಗಿ ರಚನಾತ್ಮಕ ಕಾರ್ಯಗಳಲ್ಲಿ ಉಪಯುಕ್ತವಾಗಿ ತೊಡಗಿರುವುದೇ ನಮ್ಮ ಅಸ್ತ್ರ. ಹಿಂಸಾಯುದ್ಧದಲ್ಲಿ ಯೋಧರು ಬಳಸುವ

ಅಸ್ಪೃಶ್ಯಗಳಂತೆಯೇ ನಮ್ಮ ಹದಿನೆಂಟು ಅಂಶಗಳ ಜೀವನ ಪುನರುತ್ಥಾನ ನಿರ್ಮಾಣ ಕಾರ್ಯಕ್ರಮಗಳು. ಅವುಗಳ ಕೇಂದ್ರ ಶಕ್ತಿಯ ಸಂಕೇತವೇ ಚರಕ" ಎಂದು ಬರೆದಿದ್ದರು.

೧೯೪೦ರ ನವೆಂಬರ್‌ನಲ್ಲಿ ಪ್ರಾರಂಭವಾದ ವಯುಕ್ತಿಕ ಸತ್ಯಾಗ್ರಹದಲ್ಲಿ ಮೊಟ್ಟಮೊದಲು ವಿನೋಬಾ ನಂತರ ನೆಹರು, ಪಟೇಲ್, ಡಾ. ಖಾನ್‌ಸಾಹೇಬ್ ಮುಂತಾದವರು ಯುದ್ಧ ವಿರೋಧಿ ಭಾಷಣಗಳನ್ನು ಮಾಡಿ ಶಿಕ್ಷೆಗೊಳಗಾದರು. ಕ್ರಮೇಣ ದೇಶವಲ್ಲೆಲ್ಲ ಹರಡಿ ನಿಂತ ಈ ಚಳುವಳಿಯಲ್ಲಿ ೧೯೪೧ ರ ಏಪ್ರಿಲ್ ವೇಳೆಗೆ ೨೦,೦೦೦ ಸತ್ಯಾಗ್ರಹಿಗಳನ್ನೊಳಗೊಂಡಿತ್ತು. ಪ್ರತಿಯೊಬ್ಬರೂ ಕಾಂಗ್ರೆಸ್ಸಿನ ಶಿಸ್ತಿನ ಸ್ವಯಂ ಸೇವಕರಾಗಿ ಅಹಿಂಸಾಧರ್ಮವನ್ನು ಅಂಗೀಕರಿಸಿರಬೇಕು ಎಂದು ಗಾಂಧೀಜಿ ಕಡ್ಡಾಯ ಒಡ್ಡಿದ್ದರು. ಗಾಂಧೀಜಿ ಮತ್ತು ಗಫಾರ್‌ಖಾನರನ್ನು ಮಾತ್ರ ಬಂಧಿಸದೆ ಬಿಡಲಾಗಿತ್ತು. ಅವರು ನೇರವಾಗಿ ಭಾಷಣ ಚಳುವಳಿಯಲ್ಲಿ ಭಾಗವಹಿಸಿರಲಿಲ್ಲ. ಆದರೆ ಇಬ್ಬರೂ ಹಳ್ಳಿಗಳಲ್ಲಿ ರಚನಾತ್ಮಕ ಕಾರ್ಯಗಳನ್ನು ತೀವ್ರಗೊಳಿಸಿ ಸ್ವಾತಂತ್ರ್ಯ ಸಮರದ ಜಾಗೃತಿಯನ್ನುಂಟು ಮಾಡಿದರು.

ಅದೇ ವೇಳೆಗೆ ಆಗಲೇ ಸೆರೆಯಲ್ಲಿದ್ದ ಬಾಬುಸುಭಾಷ್ ಚಂದ್ರ ಬೋಸರು ಕಲ್ಕತ್ತೆಯ ತಮ್ಮ ಮನೆಯಿಂದ ಕಾಣೆಯಾಗಿ ಜರ್ಮನಿ ಸೇರಿದರು. ರಾಜಕೀಯ ಬಿಕ್ಕಟ್ಟು ತೀವ್ರವಾಗುತ್ತಲೇ ಸಾಗಿತು. ಪಂಡಿತ ನೆಹರು ಮತ್ತು ಮೌಲಾನಾ ಆಜಾದರನ್ನು ಸರ್ಕಾರ ಬಿಡುಗಡೆ ಮಾಡಿತು. ಕೇವಲ ಕೆಲವು ಕಾಂಗ್ರೆಸ್ ನಾಯಕರು ಮಾತ್ರ ತಮ್ಮ ವಿರೋಧ ಮಾಡುತ್ತಿದ್ದಾರೆ. ಇಡೀ ದೇಶ ನಮ್ಮ ಬೆಂಬಲಕ್ಕಿದೆ ಎಂದೇ ಬ್ರಿಟಿಷ್ ಸರ್ಕಾರ ಜಾಹೀರು ಮಾಡಿತು. ಈ ಭ್ರಮೆ ಬಹು ಬೇಗ ನಾಶವಾಗುತ್ತದೆ ಎಂದರು ಗಾಂಧೀಜಿ.

ಗಫಾರ್‌ಖಾನರು ತಮ್ಮ ಕ್ಷೇತ್ರದಲ್ಲಿ ನಡೆಸುತ್ತಿದ್ದ ಗ್ರಾಮ ಪುನರ್ರಚನೆಯ ಕಾರ್ಯಗಳು ತೀವ್ರವಾದವು. ಅವರ ಅನುಯಾಯಿಗಳಿಗೆ ನೂರಾರು ಶಿಕ್ಷಣ ಶಿಬಿರಗಳನ್ನು ನಡೆಸಿ ಅಹಿಂಸಾಯೋಧರನ್ನು ಸಿದ್ಧ ಮಾಡಿದರು. ಚರಕದ ಬಳಕೆ ಮತ್ತು ಖಾದಿ ಉತ್ಪಾದನೆ ಬ್ರಿಟಿಷ್

ಸಾಮ್ರಾಜ್ಯವಾದೀ ರಚನೆಯನ್ನು ನಿರಾಕರಿಸುವ ಸಂಕೇತವಾಯಿತು. ಗಡಿನಾಡಿನ ಗುಡ್ಡಗಾಡು ಜನಾಂಗಗಳಿಗೆ ಶಾಂತಿಪಾಠ ಕಲಿಸಿ ಯುದ್ಧ ವಿರೋಧೀ ಚಳುವಳಿಗಾರರಾಗಲು ಪ್ರೇರಣೆ ನೀಡಿದರು. ಎಲ್ಲವನ್ನೂ ಸೈನ್ಯದ ಶಿಸ್ತಿನಿಂದಲೂ ಸುಭದ್ರ ತತ್ವ ನಿಷ್ಠೆಯಿಂದಲೂ ಮಾಡುತ್ತಿದ್ದ ಗಫಾರ್‌ಖಾನರ ಕಾರ್ಯವನ್ನು ಮೆಚ್ಚಿ ಗಾಂಧೀಜಿ ಒಂದು ದೀರ್ಘ ಹೇಳಿಕೆ ನೀಡಿದರು. ಬರಲಿರುವ ಬೃಹದ್ ಸತ್ಯಾಗ್ರಹಕ್ಕೆ ಈ ಸಿದ್ಧತೆಯನ್ನು ಎಲ್ಲರೂ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಶೂರರ ಸತ್ಯಾಗ್ರಹ ಹೇಗೆ ನಡೆಯಬೇಕು, ಎಷ್ಟು ಅಹಿಂಸಾತ್ಮಕವಾಗಿ ಸಾಗಬೇಕು ಎಂದು ವಿವರಿಸಿದರು. ಎಲ್ಲದಕ್ಕೂ ಗಫಾರ್‌ಖಾನರ ಉದಾಹರಣೆಯನ್ನೇ ಗಾಂಧೀಜಿ ಬಳಸಿಕೊಂಡರು.

ಇಪ್ಪತ್ತೈದು ಸಾವಿರ ಸ್ವಯಂಸೇವಕರು ೧೯೪೧ ರಲ್ಲಿ ಸೆರೆ ಸೇರಿದರು. ಈ ಶಾಂತಿಯುತ ನೈತಿಕ ಪ್ರತಿಭಟನೆ ಒಂದು ದಿನ ಈ ಯುದ್ಧ ತಪ್ತ ವಿಶ್ವಕ್ಕೆ ಮಾರ್ಗದರ್ಶಕ ಎಂದು ಗಾಂಧೀಜಿ ಘೋಷಿಸಿದರು.

ಮತ್ತೊಂದು ಭಯಂಕರ ಸಾಮ್ರಾಜ್ಯ ಶಕ್ತಿಯಾಗಿ ಮುನ್ನಡೆಯುತ್ತಿತ್ತು. ಭಾರತದ ರಾಷ್ಟ್ರೀಯ ನಾಯಕರು ಈ ಪರಿಸ್ಥಿತಿಯನ್ನು ಗಂಭೀರವಾಗಿ ಚಿಂತಿಸಿ ಜಪಾನಿನ ಆಕ್ರಮಣ ಭಾರತದ ಗಡಿಯ ಮೇಲೆ ಆದಲ್ಲಿ ತಾವು ಪ್ರತಿಭಟಿಸಿ ನಿಲ್ಲುವುದಾಗಿ ಸಂಕಲ್ಪಿಸಿದರು. ಬ್ರಿಟಿಷರೊಡನೆ ಹೇಗೆ ಅಸಹಕಾರ ಸಮರ ನಡೆಸುತ್ತಿದ್ದೇವೆಯೋ ಹಾಗೆಯೇ ಅಥವಾ ಇನ್ನೂ ತೀವ್ರವಾಗಿ ಜಪಾನಿನ ಧಾಳಿಯನ್ನು ಪ್ರತಿರೋಧಿಸಿ ನಿಲ್ಲುವ ಜನರ ನೈತಿಕ ಶಕ್ತಿ ಬೆಳೆದು ನಿಲ್ಲಬೇಕೆಂದು ಗಾಂಧೀಜಿಯೂ ಕರೆಕೊಟ್ಟರು. ಭಾರತದ ಭೂಮಿಯಲ್ಲಿ ಯಾವ ಆಕ್ರಮಣಕಾರ ವಿದೇಶೀ ಶಕ್ತಿಗೂ ಎಳ್ಳಷ್ಟೂ ಸ್ಥಾನ ದೊರೆಯಲಾರದು ಎಂದು ಕಾಂಗ್ರೆಸ್ ನಿರ್ಣಯಿಸಿತು. ದೇಶವಲ್ಲೆಲ್ಲ ಒಂದು ಬಿರುಗಾಳಿ ಬೀಸತೊಡಗಿತು.

ಈ ಮಧ್ಯೆ ಜಿನ್ನಾ ನೇತೃತ್ವದ ಮುಸ್ಲಿಮ್‌ಲೀಗ್ ಸಮಯಸಾಧಕ ರಾಜಕಾರಣದ ಜಾಡು ಹಿಡಿದು ತನ್ನ ಪಾಕಿಸ್ತಾನ ಬೇಡಿಕೆಯನ್ನು ಪ್ರಬಲವಾಗಿ ಪ್ರತಿಪಾದಿಸತೊಡಗಿತು. ಬ್ರಿಟಿಷ್ ಚಕ್ರಾಧಿಪತ್ಯ ಅದನ್ನು ಪೋಷಿಸುತ್ತಲೂ ಇತ್ತು. ಅಷ್ಟರಲ್ಲಿ ಜಪಾನಿನ ಆಕ್ರಮಣದ ಅಪಾಯ ಎದ್ದು ನಿಂತು ಯುದ್ಧ ಸಮಯದ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಸರ್ ಸ್ಟಾಫರ್ಡ್ ಕ್ರಿಪ್ಸರನ್ನು ಭಾರತದ ಕಾಂಗ್ರೆಸ್ಸಿನೊಡನೆ ಸಂಧಾನಕ್ಕಾಗಿ ಕಳುಹಿಸಿದರು. ಸ್ವಾತಂತ್ರ್ಯ ಸಮರ ವಿಜಯದ ಘಟ್ಟ ಸಮೀಪಿಸುತ್ತಿತ್ತು. ದುಷ್ಟ ಸಮಯ ಸಾಧಕ ಶಕ್ತಿಗಳೂ ತಲೆಯೆತ್ತುತ್ತಿದ್ದವು. ಒಂದಲ್ಲ ಒಂದು ನೆಪ ಹೂಡಿ ಬ್ರಿಟಿಷರು ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರನ್ನು ಜನನಾಯಕರೆಂದು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹತ್ತಾರು ಹೊಸ ಹೊಸ ರಾಜಕೀಯ ನಾಯಕರನ್ನು ಕೃತಕವಾಗಿ ಮುಂಚೂಣಿಗೆ ತಂದು ನಿಲ್ಲಿಸುತ್ತಿದ್ದರು. ಪಾಕಿಸ್ತಾನದ ಬೇಡಿಕೆ ಮತ್ತು ರಾಜಮಹಾರಾಜರುಗಳ ಒಕ್ಕೂಟಗಳಿಗೆ ವಿಶೇಷ ಬೆಂಬಲ ಕೊಡಲಾಯಿತು. ವಿಪರೀತ ಗೊಂದಲದ ವಾತಾವರಣ ನಿರ್ಮಾಣವಾಗಿ ಭಾರತದ ಮುಸ್ಲಿಮರು ಇಬ್ಭಾಗವಾದರು. "ಇಸ್ಲಾಮ್ ಧರ್ಮಕ್ಕೆ ಅಪಾಯವೊದಗಿದೆ" ಎಂದು ಹುಯಿಲೆಬ್ಬಿಸಿದ ಮುಸ್ಲಿಮ್‌ಲೀಗಿಗೆ ಪ್ರಾಧಾನ್ಯ ದೊರೆಯಿತು. ಕಾಂಗ್ರೆಸ್ ಕಾರ್ಯಕಾರಣಿಯಲ್ಲಿ ಬಿಸಿ ಬಿಸಿ ಚರ್ಚೆಗಳಾದವು. ರಾಜಗೋಪಾಲಾಚಾರಿಯವರು

ತತ್ವಶಃ ದೇಶ ವಿಭಜನೆಯನ್ನು ಒಪ್ಪಬೇಕೆಂದು ಪ್ರತಿಪಾದಿಸಿದಾಗ ಬಹು ಸಂಖ್ಯಾತ ಸದಸ್ಯರು ಅದನ್ನು ವಿರೋಧಿಸಿದರು. ರಾಜಾಜಿ ಕಾಂಗ್ರೆಸಿನಿಂದ ದೂರವಾಗಿಬಿಟ್ಟರು. ಮೌಲಾನಾ ಅಜಾದ್, ಅಸಫ್ ಅಲಿ, ಸೈಯದ್ ಹುಸೇನ್, ಖಾನ್‌ಸಾಹೇಬ್, ಗಫಾರ್‌ಖಾನ್ ಮುಂತಾದವರು ಅಚಲವಾಗಿ ಕಾಂಗ್ರೆಸ್ಸಿನ ಪರ ನಿಂತು ಅಖಂಡ ಭಾರತದ ಬೆಂಬಲಿಗರಾಗಿ ನಿಂತರು. ಈ ಬಗ್ಗೆ ಗಫಾರ್‌ಖಾನರು ಹೀಗೆಂದರು, "ನಾನು ಈಗ ಕಾಂಗ್ರೆಸ್ ಸದಸ್ಯನಾಗಿಲ್ಲ. ಆದರೆ ನಾನೊಬ್ಬ ಶಿಸ್ತಿನ ಸಿಪಾಯಿ, ನನ್ನ ಕರ್ತವ್ಯಗಳಲ್ಲಿ ನಾನು ಮಗ್ನ. ವಾದವಿವಾದಗಳಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ. ಶುಷ್ಕ ವಾದದಿಂದ ಯಾವ ಪ್ರಯೋಜನವೂ ಆಗಲಾರದು. ನಾವು ಈಗಾಗಲೇ ಗಡಿನಾಡು ಪ್ರಾಂತದಲ್ಲಿ ಸ್ವಯಂ ನಿರ್ಣಯದ ಹಕ್ಕನ್ನು ಸಂಪಾದಿಸಿಕೊಂಡಿದ್ದೇವೆ. ಇದರಲ್ಲಿ ಜಾತಿಭೇದ ಮಾಡಲಾರೆವು. ಹಿಂದೂಗಳು ಸಿಕ್ಖರೂ ನಮ್ಮೊಡನೆ ಸಹಭಾಗಿಗಳು." ಪ್ರತ್ಯೇಕತೆಯ ಮನೋಭಾವವನ್ನು ಗಫಾರ್ ಖಾನರು ಪ್ರಬಲವಾಗಿ ನಿರಾಕರಿಸಿದರು.

ಆಗಸ್ಟ್ ೧೯೪೨ರಲ್ಲಿ ಬೊಂಬಾಯಿನಲ್ಲಿ ಸಮಾವೇಶವಾದ ಐತಿಹಾಸಿಕ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಗಾಂಧೀಜಿಯ ನಾಯಕತ್ವದಲ್ಲಿ ಪೂರ್ಣ ವಿಶ್ವಾಸ ಮತ್ತೆ ವ್ಯಕ್ತಪಡಿಸಿತು. ದೇಶಕ್ಕೆ ದೇಶವೇ ಏಕಕಂಠದಿಂದ ಗಾಂಧೀಜಿಯೊಡನೆ ಧ್ವನಿಗೂಡಿಸಿ, "ಈ ಕೂಡಲೇ ಭಾರತ ಬಿಟ್ಟು ಹೊರಡಬೇಕು (ಕ್ವಿಟ್ ಇಂಡಿಯಾ)" ಎಂದು ಘೋಷಿಸಿತು. ಸ್ವಾತಂತ್ರ್ಯಪ್ರಿಯ ಭಾರತೀಯರಿಗೆಲ್ಲ ಗಾಂಧೀಜಿ ಕೊಟ್ಟ ಮತ್ತೊಂದು ಸಂದೇಶ "ಮಾಡಿರಿ ಇಲ್ಲವೆ ಮಡಿಯಿರಿ (ಡು ಆರ್ ಡೈ)". ಈ ಘೋಷಣೆ ಬಂದ ಕೂಡಲೇ ಬ್ರಿಟಿಷ್ ಸಾಮ್ರಾಜ್ಯ ರೊಚ್ಚಿಗೆದ್ದಿತು. ಒಮ್ಮಿಂದೊಮ್ಮೆ ರಾಷ್ಟ್ರೀಯ ನಾಯಕರನ್ನೆಲ್ಲ ಸೆರೆಹಿಡಿದು ಜೈಲಿಗೆ ಹಾಕಿತು. ಹತ್ತು ಸಾವಿರಕ್ಕೂ ಹೆಚ್ಚು ಜನನಾಯಕರು ಬಂಧನಕ್ಕೊಳಗಾದರು. ಇನ್ನು ಯಾವ ಚಳುವಳಿಯನ್ನೂ ಹೂಡಿಲ್ಲವೆಂದು ಗಾಂಧೀಜಿ ಸ್ಪಷ್ಟಪಡಿಸಿದರೂ ಸರ್ಕಾರ ಸಿಡಿದೆದ್ದು ಸಿಂಹ ಪಂಜದಿಂದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ನಿರ್ನಾಮ ಮಾಡಿ ಬಿಡಲು ಹವಣಿಸಿತು. ಸಶಸ್ತ್ರ ಅಂತರ್‌ಯುದ್ಧವನ್ನೇ ಆರಂಭಿಸಿತು. ಒಂದು ಕಡೆ ಜಪಾನಿನ ಪ್ರಚಂಡ ಧಾಳಿ: ಮತ್ತೊಂದು ಕಡೆ ದೇಶದೊಳಗೆ ಕುದಿದೆದ್ದ ರಾಷ್ಟ್ರೀಯ ಪ್ರತಿಭಟನೆ. ಸಾಮ್ರಾಜ್ಯಶಾಹಿ

ಮುಂಜಾನೆ ನಸುಕಿನಲ್ಲೀ ಅರ್ಧ ಗಂಟೆ ದೈಹಿಕ ವ್ಯಾಯಾಮ. ಚಹಾಪಾನದ ನಂತರ ಶಿಬಿರಾರ್ಥಿಗಳನ್ನು ೫-೬ ಜನರ ಸಣ್ಣ ಸಣ್ಣ ಗುಂಪು ಗಳಾಗಿ ವಿಂಗಡಿಸುವುದು, ಬೇರೆ ಬೇರೆ ಹಳ್ಳಿಗಳಿಗೆ ಈ ತಂಡಗಳು ಹೋಗಿ ಸಾರ್ವಜನಿಕ ಸ್ವಚ್ಛತೆ, ರಸ್ತೆಗಳನ್ನು ಗುಡಿಸುವುದು, ಬಚ್ಚಲುಗಳ ನಿರ್ಮಾಣ ಮುಂತಾದ ಕಾರ್ಯಗಳನ್ನು ಕೈಗೊಳ್ಳುವುದು. ತಂಡದ ನಾಯಕ ನಾದವನು ಒಂದು ಚರಕವನ್ನು ತೆಗೆದುಕೊಂಡು ಹೋಗಿ ಗ್ರಾಮಸ್ಥರಿಗೆ ನೂಲುವ ಶಿಕ್ಷಣ ಕೊಡುವುದು. ಹೀಗೆ ೨-೩ ಗಂಟೆ ಕೆಲಸ. ನಂತರ ಶಿಬಿರಕ್ಕೆ ಹಿಂತಿರುಗಿ ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯ ಮೂಲ ತತ್ವಗಳ ಬೋಧನೆ. ಅಮೇಲೆ ಸರಳವಾದ ಗ್ರಾಮೀಣ ಊಟ ಮತ್ತು ವಿಶ್ರಾಂತಿ. ಅನಂತರ ಪ್ರಾರ್ಥನಾ ಸಭೆ. ಪ್ರತಿಯೊಬ್ಬರೂ ಪಾತ್ರವಹಿ ಸುವ ಸೂತ್ರ-ಯಜ್ಞ ಎರಡು ಗಂಟೆ ನಡೆಯುತ್ತಿತ್ತು. ಪ್ರತಿ ಶಿಬಿರದಲ್ಲಿ ಸಾವಿರಾರು ಲಡಿ ನೂಲು ಉತ್ಪಾದನೆಯಾಗುತ್ತಿತ್ತು. ಸಂಜೆ ಮತ್ತೆ ಉಪನ್ಯಾಸ ಗೋಷ್ಠಿ. ದಿನದ ಕೊನೆಯಲ್ಲಿ ಎಲ್ಲರೂ ಸಮವಸ್ತ್ರ ಧರಿಸಿ ಧ್ವಜ ವಂದನೆ. ರಾತ್ರಿ ಊಟದ ನಂತರ ಧಾರ್ಮಿಕ ಶಿಕ್ಷಣ. ಕೊನೆ ಯಲ್ಲಿ ಹಾಜರಿ ಉತ್ತರಿಸಿ ಹತ್ತು ಗಂಟೆಗೆ ವಿಶ್ರಮಿಸುವುದು.

ಈ ಸಮಯದಲ್ಲಿ ಗಡಿನಾಡು ಪ್ರಾಂತ ಕಾಂಗ್ರೆಸ್ ಸಮಿತಿಯ ಸುಶಿ ಕ್ಷಿತ ಸ್ವಯಂಸೇವಕರ ಸಂಖ್ಯೆ ಒಂದು ಲಕ್ಷಕ್ಕೂ ಮೀರಿತ್ತು. ಕಾಂಗ್ರೆಸ್ ಅಧಿವೇಶನಗಳಲ್ಲಿ ಅವರದೇ ಮುಖ್ಯ ಜವಾಬ್ದಾರಿ. ಮತ್ಯಾವ ಪ್ರಾಂತ ದಿಂದಲೂ ಇಂಥದ ಶಿಸ್ತಿನ ಸೇವಕರು ಸೇರುತ್ತಿರಲಿಲ್ಲ.

೧೯೪೨. ಜಗತ್ತಿನ ಇತಿಹಾಸ ರಂಗೇರಿ ನಿಲ್ಲುತ್ತಿತ್ತು. ಜನವರಿಯಲ್ಲಿ ವಾರ್ಧಾದಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಗಾಂಧೀಜಿ ಭಾಗ ವಹಿಸಿದ್ದರು. ಅವರು ಸಮಗ್ರ ದೃಷ್ಟಿಯಿಂದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಕಾಂಗ್ರೆಸ್ಸಿಗರ ಸ್ವಂತ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಒಂದು ವ್ಯಾವ ಹಾರಿಕ ಮಾರ್ಗ ಸೂಚಿಸಿದರು. ತಮ್ಮ ಹಾಗೆ ಶುದ್ಧ ಅಹಿಂಸಾ ನಿಷ್ಠೆಗೆ ಯಾವುದೇ ಸಂದರ್ಭದಲ್ಲಿ ಅತ್ಯಾಚಾರಗಳನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲದಿದ್ದರೂ. ಇತರ ಬಹುಮಂದಿ ಸದಸ್ಯರು ಅಹಿಂಸಾ ಮಾರ್ಗ ವನ್ನು ರಾಜಕೀಯ ಕ್ಷೇತ್ರದ ಒಂದು ಉಪಯುಕ್ತ ಧೋರಣೆ ಎಂದು

ಮಾತ್ರ ಅಂಗೀಕರಿಸುವುದಾದರೆ ತಾವು ಅಡ್ಡಿ ಬರುವುದಿಲ್ಲ ಎಂದು ಪ್ರತಿಪಾದಿಸಿದರು. ಈ ಭಿನ್ನಾಭಿಪ್ರಾಯಗಳನ್ನು ಅತಿಯಾಗಿ ಹಿಗ್ಗಿಸಿ ಸಂಸ್ಥೆಯ ಒಡಕಿಗೂ ತಾವು ಕಾರಣರಾಗುವುದಿಲ್ಲವೆಂಬ ದೃಢ ನಿಲುವಿಗೆ ಬಂದರು. ಯಾರಿಗೆ ಕಾಂಗ್ರೆಸ್ಸಿನ ನೇರ ಪ್ರತಿಭಟನೆಯ ಕಾರ್ಯ ಒಪ್ಪಲು ಸಾಧ್ಯವಿಲ್ಲವೋ ಅಂಥವರು ರಾಜಕೀಯಾತೀತವಾದ ರಚನಾತ್ಮಕ ಕಾರ್ಯಗಳಲ್ಲಿ ತಲ್ಲೀನರಾಗಬೇಕೆಂದು ಸೂಚಿಸಿದರು. ಇದರಿಂದ ದೇಶಕ್ಕೆ ದೇಶವೇ ಅಹಿಂಸಾ ಪ್ರಧಾನ ಮಹಾಸಮರಕ್ಕೆ ನಿಶ್ಶಬ್ದವಾಗಿ ತೊಡಗಿ ನೈತಿಕ ಶಕ್ತಿ ಪ್ರಚಂಡವಾಗಿ ಪ್ರವಹಿಸುತ್ತದೆ ಎಂದು ಗಾಂಧೀಜಿ ನಂಬಿದ್ದರು. ಸವಿನಯ ಶಾಸನ ಭಂಗಕ್ಕೆ ಪರ್ಯಾಯವಾದ ಒಂದು ಅತ್ಯಗತ್ಯ ಚಟುವಟಿಕೆ ಸ್ವಾತಂತ್ರ್ಯ ಸಮರಕ್ಕೆ ಪೋಷಕವಾಗಿ ನಿಲ್ಲುವುದು ಎಂದು ಗಫಾರ್ ಖಾನರೂ ಸಮ್ಮತಿಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವವನ್ನು ಬಿಟ್ಟುಕೊಟ್ಟು ಕಾಂಗ್ರೆಸ್ಸಿನದೇ ಕಾರ್ಯಕ್ರಮವಾದ ರಚನಾತ್ಮಕ ಕಾರ್ಯದಲ್ಲಿ ತೊಡಗಿದರು.

"ಕಾಂಗ್ರೆಸ್ ಸಂಸ್ಥೆಯಲ್ಲಿ ಯಾವ ಅಧಿಕೃತ ಸ್ಥಾನವನ್ನೂ ಪಡೆಯದೇ ಹೊರಗೆ ನಿಂತು ನನ್ನ ಜೀವನ ನಿಷ್ಠೆಯನ್ನು ಪಠಾಣರಿಗೆ ಬೋಧಿಸುವುದು ಹೆಚ್ಚು ಸುಲಭವೆನಿಸುತ್ತದೆ. ಕಾಂಗ್ರೆಸ್ ಆಗಿಂದಾಗ್ಗೆ ತನ್ನ ಧೋರಣೆಗಳನ್ನು ಬದಲಿಸಬಹುದು. ಪರಿಸ್ಥಿತಿಗನುಗುಣವಾಗಿ ಪ್ರತಿಕ್ರಿಯಿಸಬಹುದು. ಆದರೆ ಅಹಿಂಸೆಯಲ್ಲಿನ ನನ್ನ ತತ್ವನಿಷ್ಠೆ ಅಚಲವಾದುದು. ಈ ತತ್ವಾನುಷ್ಠಾನದಿಂದ ನನ್ನ ಮತ್ತು ಕಾಂಗ್ರೆಸ್ಸಿನ ಸಂಬಂಧ ಇನ್ನೂ ಹೆಚ್ಚು ಫಲದಾಯಕವಾಗುವುದೆಂದು ನನ್ನ ಖಚಿತ ಅಭಿಪ್ರಾಯ" ಎಂದು ಹೇಳಿಕೆ ನೀಡಿದರು.

ಯುದ್ಧ ಜ್ವಾಲೆ ಪ್ರಬಲವಾಗಿ ದೇಶದ ಕ್ಷಿತಿಜದಲ್ಲಿ ತನ್ನ ದಳ್ಳುರಿಯನ್ನು ಝಳಪಿಸುತ್ತಿತ್ತು. ರಂಗೂನ್ ಜಪಾನರ ಧಾಳಿಗೆ ಬಲಿಯಾಯಿತು. ಸುಭಾಸಚಂದ್ರ ಬೋಸರ ಭಾರತ ರಾಷ್ಟ್ರೀಯ ಸೈನ್ಯ (ಐ. ಎನ್. ಎ.) ಸೈಂಧವನಂತೆ ಎದ್ದು ನಿಂತಿತು. ಸಾವಿರಾರು ಭಾರತೀಯ ಸೈನಿಕರು ಬ್ರಿಟಿಷರ ಸೈನ್ಯವನ್ನು ತೊರೆದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳತೊಡಗಿದರು. ಆದರೆ ಹಠಾತ್ತನೆ ಸುಭಾಸರು ಬರ್ಮಾದಲ್ಲಿ ವಿಮಾನಾಪಘಾತದಲ್ಲಿ ಮಡಿದರು. ಜಪಾನ್ ಪೂರ್ವ ಏಷ್ಯದಲ್ಲಿ

೧೪. 'ಕ್ವಿಟ್ ಇಂಡಿಯಾ'

ಕಾಲ ಸರಿಯಿತು. ಯುದ್ಧದ ಜ್ವಾಲೆಗಳು ಹಬ್ಬಿದವು. ಭಾರತ ತನ್ನ ಇಚ್ಛೆಗೆ ವಿರುದ್ಧವಾಗಿ ಯುದ್ಧ ಕ್ಷೇತ್ರವಾಗುತ್ತಿತ್ತು. ಅದಕ್ಕಾಗಿ ಬಡ ಜನತೆ ತೆತ್ತ ಬೆಲೆ ಅಪಾರ. ಕೃತಕ ಕ್ಷಾಮಗಳನ್ನು ನಿರ್ಮಾಣ ಮಾಡಿ ಧನ ಧಾನ್ಯಗಳನ್ನೆಲ್ಲ ಅಗಾಧ ಅಂತರಾಷ್ಟ್ರೀಯ ಸೇನೆಗಳ ಮತ್ತು ಸೆರೆಯಾಳುಗಳ ಶಿಬಿರಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಜಪಾನ್ ಮುನ್ನುಗ್ಗಿ ಬಂದು ಭಾರತದ ಗಡಿಯಲ್ಲಿ ಸಮರ ಹೂಡಿತ್ತು. ಸಹನೆಯ ಬಟ್ಟಲು ತುಂಬಿ ತುಳುಕಿತು. ಭಾರತದ ಜನತೆ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ಹೂಡಬೇಕಾಯಿತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಬಾರ್ಡೋಲಿಯಲ್ಲಿ ಸಭೆ ಸೇರಿ ನಿರ್ಣಯಮಾಡಿ ಮತ್ತೆ ಬೊಂಬಾಯಿನ ನಿರ್ಣಯವನ್ನು ದೃಢಪಡಿಸಿತು. ಸ್ವಾತಂತ್ರ್ಯ ಘೋಷಣೆಯಾದರೆ ಯುದ್ಧದಲ್ಲಿ ತಾವು ಬ್ರಿಟನ್ನಿನೊಡನೆ ಸಹಕರಿಸುವ ಭರವಸೆ ನೀಡಿತು. ಮೌಲಾನಾ ಆಜಾದರು ಅಧ್ಯಕ್ಷರಾಗಿದ್ದರು. ಗಾಂಧೀಜಿಯೇ ದೇಶದ ನಾಯಕರೆಂದು ಎಲ್ಲರೂ ಅಂಗೀಕರಿಸಿದರು. ಆದರೆ ಗಾಂಧೀಜಿ ಬಾರ್ಡೋಲಿ ನಿರ್ಣಯ ಮತ್ತೆ ಬೊಂಬಾಯಿ ನಿರ್ಣಯಕ್ಕೆ ಹಿಂತಿರುಗಿದುದರಿಂದ ತಮ್ಮ ಸಮ್ಮತಿ ಇಲ್ಲವೆಂದರು. ಕಾರಣ ಯಾವುದೇ ಸಂದರ್ಭದಲ್ಲಿಯೂ ಯುದ್ಧದಲ್ಲಿ ಸಹಕಾರ ನೀಡುವುದಕ್ಕೆ ಅಹಿಂಸಾ ತತ್ವನಿಷ್ಠರಾದ ತಮಗೆ ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು. "ದೇಶ ಸ್ವಾತಂತ್ರ್ಯಕ್ಕಾಗಿ ನಾನು ಹೋರಾಡುವಾಗ, ಯುದ್ಧ ವಿರೋಧಿ ಚಳುವಳಿಯನ್ನು ಬೆಂಬಲಿಸುವ ಸತ್ಯಾಗ್ರಹವನ್ನು ಮಾತ್ರ ನಾನು ನಡೆಸಬಲ್ಲೆ" ಎಂದರು.

ಗಫಾರ್‌ಖಾನರು ಎಂದಿನಂತೆಯೇ ಗಾಂಧೀಜಿಯ ಪಕ್ಕದಲ್ಲಿ ನಿಂತರು. ಬಾರ್ಡೋಲಿ ನಿರ್ಣಯವನ್ನು ಕುರಿತು ಹೀಗೆಂದರು:

"ನಾನು ರಾಜಕಾರಣಿಯಲ್ಲ. ವಕೀಲಿವಾದಗಳು ನನಗೆ ಅರ್ಥವಾಗುವುದಿಲ್ಲ. ರಾಜತಾಂತ್ರಿಕ ವ್ಯವಹಾರ ಅರಿಯೆ. ನನ್ನ ಮುಖ್ಯ ಗುರಿ ಭಾರತದ ಸ್ವಾತಂತ್ರ್ಯ. ಮಿತ್ರರು ಇಚ್ಛೆಪಟ್ಟಿದ್ದರಿಂದ ಮತ್ತೆ ಕಾರ್ಯಕಾರಿಣಿ ಸದಸ್ಯತ್ವ ಒಪ್ಪಿದೆ. ನನ್ನ ತತ್ವನಿಷ್ಠೆ ಅಚಲ. ಅಹಿಂಸಾ ಧರ್ಮ ಕೇವಲ ತಾತ್ಕಾಲಿಕ ಧೋರಣೆ ಅಲ್ಲ. ಅದು ಶಾಶ್ವತ ಜೀವನ ತತ್ವ (ಕ್ರೀಡ್). ಅಹಿಂಸೆ ಒಂದು ಸೃಜನಾತ್ಮಕ ನಿಗಿನಿಗಿ ಶಕ್ತಿ. ಅದರ ಮೂಲಕ ಮಾತ್ರವೇ ಪಠಾಣರು ತಮ್ಮ ದಾಸ್ಯವನ್ನೂ ಆತ್ಮನಾಶವನ್ನೂ ನೀಗಿಕೊಳ್ಳಲು ಸಾಧ್ಯ. ಕ್ರಿಯಾತ್ಮಕ ಅಹಿಂಸೆಯೇ ಭಾರತ ವಿಮೋಚನೆಗೆ ಏಕೈಕ ಮಾರ್ಗ. ಆದ್ದರಿಂದ ಈಗಿನ ಯುದ್ಧದಲ್ಲಿ ಮಾತ್ರವಲ್ಲ ಯಾವುದೇ ಹಿಂಸಾತ್ಮಕ ಯುದ್ಧದಲ್ಲೂ ನಾನು ಸಹಕರಿಸಲು ಸಾಧ್ಯವೇ ಇಲ್ಲ."

ಇದೇ ಘಾಟಿಯಲ್ಲಿ ಜೋಂಬಾಯಿನಲ್ಲಿ ಭಾಷಣ ಮಾಡಿದರು. "ಈ ಭಯಾನಕ ಹಿಂಸಾ ಪ್ರಪಂಚದಲ್ಲಿ ಅಹಿಂಸೆ ಒಂದು ಅಜೇಯ ಶಕ್ತಿ. ಮನಸ್ಸಿನಲ್ಲಿ ಹಿಂಸೆಯನ್ನು ಚಿಂತಿಸಿದರೆ ಕಾರ್ಯದಲ್ಲಿ ಎಂದೂ ಅಹಿಂಸೆ ಮೂಡಲಾರದು. ಹಿಂಸೆ – ಶೋಷಣೆಗಳ ಮೇಲೆ ಆಧಾರಿತವಾದ ಯಾವುದೇ ಸಮಾಜ ಅಹಿಂಸಾತ್ಮಕ ತಳಹದಿಯ ಸಮಾಜ ನಿರ್ಮಿಸಲು ಅಸಮರ್ಥ. ಹಿಂಸೆಯಿಂದ ಹಿಂಸೆ ಮಾತ್ರವೇ ಉತ್ಪನ್ನವಾದೀತು" ಎಂದರು.

ಗಾಂಧೀಜಿಯ ಸಲಹೆಯಂತೆ ಗಫಾರ್‌ಖಾನರು ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಗಳಲ್ಲಿ ಪೂರ್ಣವಾಗಿ ತೊಡಗಿಕೊಂಡರು. ಸಾವಿರಾರು ಕಾಂಗ್ರೆಸ್ ಸ್ವಯಂಸೇವಕರಿಗಾಗಿ ಶಿಕ್ಷಣ ಶಿಬಿರಗಳನ್ನು ಆ ಪ್ರಾಂತದ ಉದ್ದಗಲಕ್ಕೂ ವ್ಯವಸ್ಥೆ ಮಾಡಿದರು. ಅಹಿಂಸಾ ಧರ್ಮದ ಮೂಲಭೂತ ಸಂದೇಶವನ್ನೂ ಸತ್ಯಾಗ್ರಹ ಸಮರದ ಸಿದ್ಧತಾ ತರಬೇತಿಯನ್ನೂ ಸುಮಾರು ಮೂವತ್ತು ಸಾವಿರ ಖುದಾಯಿ ಖಿದ್‌ಮತ್‌ಗಾರ ಪಡೆಯ ಸದಸ್ಯರಿಗೆ ನೀಡಿದರು. ಈ ಶಿಕ್ಷಣ ಶಿಬಿರಗಳ ದಿನಚರಿ ಹೀಗಿರುತ್ತಿತ್ತು:

ಸರ್ಕಾರ ತನ್ನ ನೈತಿಕ ಶಕ್ತಿಯನ್ನೇ ಕಳೆದುಕೊಂಡು ನಿರ್ನಾಮದ ದಾರಿ ಹಿಡಿಯುತ್ತಿತ್ತು. ದೇಶವನ್ನು ಛಿದ್ರ ಛಿದ್ರ ಮಾಡುವ ರಾಕ್ಷಸ ಹಿಂಸೆ ಆವರಿಸಿ ನಿಂತಿತ್ತು.

ಗಫಾರ್‌ಖಾನರು ಆಗ ಪೆಷಾವರಿನಲ್ಲಿದ್ದರು. 'ಕ್ವಿಟ್ ಇಂಡಿಯಾ' ನಿರ್ಣಯಕ್ಕೆ ಪೂರ್ಣ ಬೆಂಬಲ ವ್ಯಕ್ತಪಡಿಸಿದರು. ತಾಳ್ಮೆಯಿಂದ ಅಹಿಂಸಾತ್ಮಕವಾಗಿ ಚಳುವಳಿ ಪ್ರಾರಂಭಿಸಿ ನಡೆಸಲು ತಮ್ಮ ಒಂದು ಲಕ್ಷ ಸ್ವಯಂ ಸೇವಕರಿಗೆ ಆಜ್ಞೆಮಾಡಿದರು. ರಚನಾತ್ಮಕ ಕಾರ್ಯದಲ್ಲಿ ಸತತವಾಗಿ ತೊಡಗಿರುತ್ತಾ ಯುದ್ಧ ನೀತಿಯ ವಿರುದ್ಧವಾಗಿ ಎಲ್ಲೆಲ್ಲೂ ಬ್ರಿಟಿಷರನ್ನು ಪ್ರತಿಭಟಿಸಿ ನಿಲ್ಲುವಂತೆ ಜನಜಾಗೃತಿ ಕೈಗೊಳ್ಳಬೇಕು ಎಂದರು.

ಸಮಾಚಾರ ಸಂಪರ್ಕ ಸಾಧನಗಳಾದ ಸರ್ಕಾರೀ ಸಂಸ್ಥೆಗಳನ್ನು ನಾಶ ಮಾಡಬೇಕೆಂದು ಜನ ತಾವೇ ನಿರ್ಣಯಿಸಿಬಿಟ್ಟರು. ಅಂಚೆತಂತಿ ಕಛೇರಿಗಳು, ರೈಲು ನಿಲ್ದಾಣಗಳು, ಕೇಂದ್ರ ಕಾರ್ಯಾಲಯಗಳು, ಸೈನಿಕ ಕೇಂದ್ರಗಳು ಧಾಳಿಗಳಿಗೆ ಒಳಗಾದವು. ಗಫಾರ್‌ಖಾನರು ತಮ್ಮ ಅನುಯಾಯಿಗಳಿಗೆ ಖಚಿತವಾದ ನಿರ್ದೇಶನಗಳನ್ನು ನೀಡಿ ಯಾವುದೇ ವಿಧ್ವಂಸಕ ಕಾರ್ಯ ಕೈಗೊಂಡರೆ ಆ ಕೂಡಲೇ ಸತ್ಯಾಗ್ರಹಿಗಳು ಅಧಿಕಾರಿಗಳಲ್ಲಿಗೆ ನೇರವಾಗಿ ಹೋಗಿ ಅಪರಾಧವನ್ನು ಮಾಡಿದ ಕಾರಣ ತಿಳಿಸಿ ತಮ್ಮ ಜವಾಬ್ದಾರಿ ಒಪ್ಪಿಕೊಂಡು ಎಂಥ ಕಠಿಣ ಶಿಕ್ಷೆಗೂ ಹೆದರದೆ ಅಂಗೀಕರಿಸಬೇಕು. ಅದು ಸತ್ಯಾಗ್ರಹದ ಪ್ರಥಮ ನಿಯಮ ಎಂದು ನಿಯಮಗಳನ್ನು ಮನದಟ್ಟು ಮಾಡಿದರು. ದೊಡ್ಡ ದೊಡ್ಡ ಸಭೆಗಳು ಗಡಿನಾಡಿನ ಪ್ರದೇಶದಲ್ಲೆಲ್ಲ ನಡೆದು ಸರ್ಕಾರದೊಡನೆ ಸಂಪೂರ್ಣ ಅಸಹಕಾರ ಮಾಡಿ ಎಂದು ಜನತೆಗೆ ಕರೆಕೊಡಲಾಗುತ್ತಿತ್ತು. ಡಾ.ಖಾನ್ ಸಾಹೇಬರು ತಮ್ಮ ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ನೀಡಿ, ಕೆಂಪು ಅಂಗಿ ಸಮವಸ್ತ್ರ ಧರಿಸಿ, ಪೆಷಾವರಿನ ಕೇಂದ್ರ ಸಚಿವಾಲಯಕ್ಕೆ ಹೋಗಿ ಅಲ್ಲಿನ ನೌಕರರನ್ನೆಲ್ಲ ದೇಶ ಪ್ರೇಮದಿಂದ ಆಂದೋಳನದಲ್ಲಿ ಧುಮುಕಿರಿ ಎಂದು ಪ್ರೇರೇಪಿಸಿದರು. ನೂರಾರು ನೌಕರರು ಸೇರಿದರು. ಕೋರ್ಟುಗಳಲ್ಲಿ ನ್ಯಾಯಾಧೀಶರ ಮುಂದೆ ನಿಂತು ಬ್ರಿಟಿಷ್ ಆಧಿಪತ್ಯದ ದಾಸ್ಯವನ್ನು ಬಿಸುಟು ಸ್ವತಂತ್ರರಾಗಿ ಹೊರಗೆ ಬನ್ನಿ ಎಂದು ಘೋಷಿಸಿದರು. 'ಕ್ವಿಟ್ ಇಂಡಿಯಾ' ಸಂದೇಶ ದೇಶ

ದೇಶದ ಮೂಲೆ ಮೂಲೆಗಳಲ್ಲಿ ಹರಡಿ ನಿಂತಿತು.

ಬ್ರಿಟಿಶರ ದಾಸರಾಗಿ ಅವರಿಗೆ ಸ್ವಾಮಿ ಭಕ್ತಿಯನ್ನು ತೋರಿಸುತ್ತಾ ರಾಷ್ಟ್ರೀಯ ಚಳುವಳಿಗಳ ವಿರುದ್ಧ ಕೆಲಸ ಮಾಡುತ್ತಿದ್ದ ಪ್ರತಿಕ್ರಿಯಾವಾದಿಗಳೂ ಹುಟ್ಟಿಕೊಂಡರು. ಲಂಚ ರುಷುವತ್ತುಗಳಿಗೋ, ಅಧಿಕಾರ ಪ್ರಶಸ್ತಿಗಳ ಮೋಹದಿಂದಲೋ, ದಾಸ್ಯವನ್ನೇ ಅಪ್ಪುವ ಸ್ವಭಾವದಿಂದಲೋ ನೌಕರಶಾಹಿ ಅನೇಕ ಆಮಿಷಗಳಿಗೆ ಒಳಗಾಗಿ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕಲು ಹವಣಿಸುತ್ತಿತ್ತು.

೧೯೪೨ ಅಕ್ಟೋಬರ್‌ನಲ್ಲಿ ಗಫಾರ್‌ಖಾನರು ತಾವೇ ನೇರವಾಗಿ ಚಳುವಳಿಗೆ ಧುಮುಕಿದರು. ಐವತ್ತು ಖುದಾಯಿ ಖಿದ್ಮತ್‌ಗಾರರೊಡನೆ ಚಾರ್‌ಸದ್ದಾದಿಂದ ಹೊರಟು ಮದ್‌ದಾನ್ ಎಂಬಲ್ಲಿನ ಜಿಲ್ಲಾ ನ್ಯಾಯಾಲಯದ ಧಾಳಿಗಾಗಿ ಪಾದಯಾತ್ರೆ ಘೋಷಿಸಿದರು. ಹಳ್ಳಿ ಹಳ್ಳಿಗಳಲ್ಲಿ ಸಭೆಗಳಾದವು. ಮಧ್ಯೆ ಪೋಲೀಸರು ತಡೆದರು. ಸತ್ಯಾಗ್ರಹಿಗಳು ತಾವೇ ಕೈಗಳನ್ನು ಕಟ್ಟಿಕೊಂಡು ಮುಂದುವರೆದರು. ಆ ಕೂಡಲೇ ಲಾಠಿಯಿಂದ ಹೊಡೆಯುತ್ತಾ ಪೋಲೀಸರು ಎರಗಿದರು. ಗಫಾರ್‌ಖಾನರಿಗೆ ಬಲವಾದ ಪೆಟ್ಟು ಬಿದ್ದು ಪಕ್ಕೆಯ ಮೂಳೆ ಮುರಿದವು. ಎಲ್ಲರನ್ನೂ ದಸ್ತಗಿರಿ ಮಾಡಿ ಮದ್‌ದಾನ್ ಜೈಲಿಗೆ ಹಾಕಲಾಯಿತು. ಅಲ್ಲಿಂದ ರಿಸಾಲ್‌ಪುರ ಜೈಲಿಗೂ ಮತ್ತೆ ಹರಿಪುರ ಜೈಲಿಗೂ ಸಾಗಿಸಿದರು. ಅನಂತರ ಗಫಾರ್‌ಖಾನರನ್ನು ಅವರ ಗೆಳೆಯರಿಂದ ಪ್ರತ್ಯೇಕಿಸಿ ಅಬೋಟಾಬಾದ್ ಸೆರೆಮನೆಯಲ್ಲಿ ಬಂಧಿಸಿಟ್ಟರು.

ಬ್ರಿಟಿಷ್ ಅಧಿಕಾರಿಗಳಿಗಿಂತ ಕೆಲವು ಭಾರತೀಯ ಜೈಲಾಧಿಕಾರಿಗಳು ಸತ್ಯಾಗ್ರಹಿಗಳನ್ನು ಕ್ರೂರವಾಗಿ ಹಿಂಸಿಸಿ ಅವಮಾನಗೊಳಿಸುತ್ತಿದ್ದುದು ಗಫಾರ್‌ಖಾನರಿಗೆ ತುಂಬ ನೋವುಂಟುಮಾಡಿತು. ಒಮ್ಮೆ ಕರ್ನಲ್ ಸ್ಮಿತ್ ಎಂಬ ಜೈಲುಗಳ ಮುಖ್ಯಾಧಿಕಾರಿ ಅಬೋಟಾಬಾದಿನ ಸೆರೆಮನೆಗೆ ಬಂದ. ಗಫಾರ್‌ಖಾನರನ್ನು ಇಟ್ಟಿದ್ದ ಸ್ಥಿತಿ ಕಂಡು ಆತನಿಗೆ ದುಃಖವೆನಿಸಿತು. ಆ ಕೂಡಲೇ ಗೌವರ್ನರ್ ಸರ್ ಜಾರ್ಜ್ ಕನ್ನಿಂಗ್‌ಹ್ಯಾಮ್ ಅವರಿಗೆ ತಂತಿ ಕಳುಹಿಸಿ ಸರ್ಕಾರಿ ಆಜ್ಞೆಯನ್ನು ಬದಲಿಸಿ ಜೈಲರಿಗೆ ಖಾನರ ಬಗ್ಗೆ ಗೌರವ

ದಿಂದ ನಡೆದುಕೊಳ್ಳಬೇಕೆಂದು ಆಗ್ರಹಿಸಿದ. "ಇಂಥ ವೀರ ವಿನಯ ಪೂರ್ವಕ ಎದುರಾಳಿಯನ್ನು ಸರ್ಕಾರ ಎಂದೂ ಅವಮಾನಿಸುವ ನೀಚತನಕ್ಕೆ ಕೈಹಾಕಬಾರದು" ಎಂದು ಹೇಳಿದ. ಖಾನರನ್ನು ಬೇರೆ ಸೆರೆಮನೆಗೆ ಬದಲಾಯಿಸಿ ಹೆಚ್ಚು ಅನುಕೂಲಗಳನ್ನು ನೀಡಿ ಅವರ ಮಗ ವಲೀಖಾನ್ ಅದೇ ಸೆರೆಮನೆಯಲ್ಲಿದ್ದುದರಿಂದ ಜೊತೆಗೂಡಿಸಿದ. ಆದರೆ ಮತ್ತೆ ಕ್ಷಿಪ್ರವಾಗಿ ಗಫಾರ್‌ಖಾನರನ್ನು ೧೯೪೩ ರಲ್ಲಿ ಹರಿಪುರ ಜೈಲಿಗೆ ವರ್ಗಾಯಿಸಲಾಯಿತು. ಯಾವ ಕಟ್ಟಳೆಯನ್ನೂ ಹಾಕದೆ ಸ್ಥಾನ ಬಂಧಿತ ಖೈದಿಗಳನ್ನಾಗಿಟ್ಟರು. ಆ ವೇಳೆಗೆ ದೇಶದಲ್ಲಿ ನಾಯಕರ ಬಿಡುಗಡೆಗಳಾಗಿದ್ದರೂ ಖಾನರು ಒಳಗೇ ಕೊಳೆಯಬೇಕಾಯಿತು.

ಈ ಕಡೆಯ ಸತ್ಯಾಗ್ರಹ ಸಮರದಲ್ಲಿ ತಾವು ವಹಿಸಿದ ಪಾತ್ರವನ್ನು ಗಫಾರ್‌ಖಾನರು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಬಣ್ಣಿಸಿದ್ದಾರೆ :

"ಬೃಹದ್ ಪ್ರಮಾಣದ ಜನ ಆಂದೋಲನ ಗಡಿನಾಡಿನಲ್ಲಿ ವ್ಯಾಪಕವಾಗಿ ಹರಡಿತು. ಆ ವೇಳೆಗೆ ಚಳುವಳಿಯ ಕೇಂದ್ರ ಸ್ಥಾನವಾಗುವಂತೆ 'ಸರ್ದಾರ್ ಯಾಬ್' ನದೀ ತೀರದಲ್ಲಿ ಗಾಂಧೀಜಿ ಹಾಕಿಕೊಟ್ಟ ಯೋಜನೆಯಂತೆ ಒಂದು ವಸತಿ ಕೇಂದ್ರ ಸ್ಥಾಪಿಸಿದೆ. ಖುದಾಯಿ ಖಿದ್‌ಮತ್‌ಗಾರರಿಗೆ ಅಹಿಂಸಾ ಸಮರದ ತರಬೇತಿ ಇಲ್ಲಿ ನಡೆಯುತ್ತಿತ್ತು. ಅತ್ಯಂತ ಸರಳ ಗ್ರಾಮ ರೀತಿಯ ಜೀವನ. ಕಠಿಣ ದಿನಚರಿ ಮತ್ತು ಸಂಕಲ್ಪಬದ್ಧತೆಯ ಪ್ರತಿಜ್ಞೆಗಳನ್ನು ದೃಢಪಡಿಸುವ ಶಿಕ್ಷಣ ಕೊಡಲಾಗುತ್ತಿತ್ತು. "ಮರ್ಕಜ್-ಇ-ಅಲಾ-ಇ-ಖುದಾಯಿಖಿದ್‌ಮತ್‌ಗಾರ್" ಕೇಂದ್ರ ಒಂದು ಆಶ್ರಮವೆಂದೇ ಪ್ರಸಿದ್ಧವಾಯಿತು. ಅಲ್ಲಿಗೆ ಗಾಂಧೀಜಿ ತಮ್ಮ ಆಶ್ರಮವಾಸಿಗಳಾದ ಮೀರಾಬೆನ್ (ಮ್ಯಾಡಲೀನ್ ಸ್ಲೇಡ್ ಎಂಬ ಬ್ರಿಟಿಷ್ ಮಹಿಳೆ) ಮತ್ತು ಬೀಬಿ ಅಮ್ತುಲ್ ಸಲಾಮ್ ಅವರನ್ನು ಕಳುಹಿಸಿದ್ದರು.

"ನಾನು ನನ್ನ ಪ್ರಾಂತದಲ್ಲಿ ಸವಿನಯ ಶಾಸನ ಭಂಗ ಪ್ರಾರಂಭಿಸಲು ನಿಶ್ಚಯಿಸಿದೆ. ಪ್ರಾಂತೀಯ ಕಾಂಗ್ರೆಸ್ ಸಮಿತಿ ನನ್ನನ್ನು ಚಳುವಳಿಯ 'ಸರ್ವಾಧಿಕಾರಿ' ಯಾಗಿ ನೇಮಿಸಿತು. ಈ ಪದ ನನ್ನನ್ನು ಯಾವಾಗಲೂ ಘಾಸಿಮಾಡುತ್ತದೆ. ಆದ್ದರಿಂದ ನನ್ನ ಜೊತೆಗಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏನನ್ನೂ ಮಾಡುವುದಿಲ್ಲ ಎಂದು ನಿರ್ಧರಿಸಿದೆ.

ಯಾವುದೇ ಪ್ರತಿಭಟನಾ ಕಾರ್ಯ ಕೈಗೊಂಡರೂ ಅದರ ಪೂರ್ಣ ಜವಾಬ್ದಾರಿ ಯನ್ನು ಕಾರ್ಯಕರ್ತರು ಕೂಡಲೇ ಪೋಲೀಸರಿಗೆ ತಿಳಿಸಬೇಕು. ಅದರಿಂದ ನಿರುಪದ್ರವಿ ಪ್ರಜೆಗಳಿಗೆ ಅವರು ಕೊಡುವ ತೊಂದರೆ ತಪ್ಪುತ್ತದೆ ಎಂದು ಕಡ್ಡಾಯ ಮಾಡಿದೆ. ಬ್ರಿಟಿಷ್ ಸರ್ಕಾರದ ಪ್ರತಿಕ್ರಿಯೆ ತೀವ್ರವಾಗಿತ್ತು. ಆಗ ಅಲ್ಲಿ ಇಸ್ಕಂದರ್ ಮಿರ್ಜಾ ಅವರು ಜಿಲ್ಲಾಧಿಕಾರಿ. ಬ್ರಿಟಿಷರಿಗಿಂತ ಕ್ರೂರ ದಬ್ಬಾಳಿಕೆ ಕೈಗೊಂಡರು. (ಮುಂದೆ ಇವರು ಪಾಕಿಸ್ಥಾನದ ಅಧ್ಯಕ್ಷ ರಾದರು.) ತಾವೇ ಲಾಠಿ ಹಿಡಿದು ಹೊಡೆದು ಬಡಿದು ಒಬ್ಬ ಸ್ವಯಂ ಸೇವಕನನ್ನು ಕೊಂದುಬಿಟ್ಟರು. (ಪಾಕಿಸ್ತಾನದ ಅಧ್ಯಕ್ಷರಾದ ಮೇಲೆ ಈ ಮಿರ್ಜಾ 'ಇಸ್ಲಾಮ್' ಉದ್ಧಾರಕರೆಂದು ಹೇಳಿಕೊಂಡು ನನ್ನನ್ನು ಇಸ್ಲಾಮ್ ಧರ್ಮದ ಶತ್ರು, ದ್ರೋಹಿ ಎಂದು ಕರೆದರು)".

ಹರಿಪುರದ ಹಜಾರಾ ಕೇಂದ್ರ ಸೆರೆಮನೆಯಲ್ಲಿ ಸಾವಿರಾರು ಖುದಾಯಿ ಖಿದ್‌ಮತ್‌ಗಾರರು ಸೆರೆಯಾಳಾಗಿದ್ದರು. ಗಫಾರ್‌ಖಾನರು ಅವರನ್ನು ಉಪಯುಕ್ತ ಉತ್ಪಾದನಾ ಕಾರ್ಯಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಿದರು. ಸಣ್ಣಮಗ್ಗಗಳಲ್ಲಿ ನೂಲಿನ ಪಟ್ಟಿ ತಯಾರಿಸುವುದನ್ನು ಕಲಿಸಿ ಅವರು ಖೈದಿ ಗಳಾಗಿ ಹಣಗಳಿಸಿಕೊಳ್ಳುವಂತೆ ಏರ್ಪಡಿಸಿದರು. ಅಲ್ಲದೆ ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡಿದರು. ಸ್ವತಃ ಖಾನರು ಕೋಳಿ ಸಾಕಾಣೆಗೆ ತೊಡಗಿ ಮೊಟ್ಟೆಗಳನ್ನು ಮಾರಿಸಿ ಬಂದು ಹಣವನ್ನು ಜೈಲು ಅಧಿಕಾರಿಗಳ ಮೂಲಕ ತಮ್ಮ ಕೇಂದ್ರ ಆಶ್ರಮಕ್ಕೆ ಕಳುಹಿಸುತ್ತಿದ್ದರು.

ಒಮ್ಮೆ ಜೈಲು ಮುಖ್ಯಾಧಿಕಾರಿ ಕರ್ನಲ್ ಸ್ಮಿತ್ ಭೇಟಿ ನೀಡಿದಾಗ ಗಫಾರ್‌ಖಾನರು ಕೋಳಿ ಮರಿಗಳಿಗೆ ಪ್ರೀತಿಯಿಂದ ಆಹಾರ ನೀಡುತ್ತಾ ಪ್ರಪಂಚವನ್ನೇ ಮರೆತು ತಲ್ಲೀನರಾಗಿದ್ದರು. ಆತ ಸದ್ದು ಮಾಡದೆ ಖಾನರ ಹಿಂದೆ ಬಂದು ನಿಂತ. ಆ ದೃಶ್ಯ ಅವನನ್ನು ಸೆರೆ ಹಿಡಿದಿತ್ತು. ಸ್ವಲ್ಪ ಹೊತ್ತಿನ ನಂತರ ಮೆಲುದನಿಯಲ್ಲಿ 'ನಮಸ್ಕಾರ' ಎಂದು ಖಾನರನ್ನು ಸಂಬೋಧಿಸಿದ. ಈತ ೧೯೩೦ ರಲ್ಲಿ ಹರಿಪುರದ ಜೈಲಿನಲ್ಲಿ ಕಿರಿಯ ಅಧಿಕಾರಿ. ಆಗ ರಾಜಕೀಯ ಅಪರಾಧಿಗಳನ್ನು ಅತ್ಯಂತ ಕ್ರೂರ ವಾಗಿ ಶಿಕ್ಷಿಸಿದ್ದ. ಖಾನರನ್ನೂ ಅವಮಾನಗೊಳಿಸಿದ್ದ. ಈಗ ಅವನ ಮನೋಧರ್ಮ ಬದಲಾಗಿತ್ತು. ಸತ್ಯಾಗ್ರಹದ ಪ್ರಕ್ರಿಯೆಗಳನ್ನು ನೋಡಿ

ಈ ಧೀರನಾಯಕರಲ್ಲಿ ಅವನಿಗೆ ಗೌರವ ಬೆಳೆದಿತ್ತು. ಖಾನರನ್ನು ಕುರಿತು, 'ಇದೇನು ಮಾಡುತ್ತಿದ್ದೀರಿ' ಎಂದು ಸ್ನೇಹ ಗೌರವಗಳಿಂದ ವಿಚಾರಿಸಿದ. ಖಾನರು ನಸುನಗುತ್ತಾ, "ಇಲ್ಲಿ ನೋಡಿ, ಈ ಮರಿಗಳು ಮನುಷ್ಯನಿಗೆ ಎಂಥ ಪಾಠ ಕಲಿಸುತ್ತವೆ! ಅವುಗಳನ್ನು ಕೊಂದು ತಿನ್ನುವುದೇ ನಮ್ಮ ಉದ್ದೇಶ. ನಮ್ಮನ್ನು ಕಂಡರೆ ಅವಕ್ಕೆ ಯಾವಾಗಲೂ ಪ್ರಾಣಭಯ. ಆದರೆ ನೋಡಿ, ಸ್ವಲ್ಪ ಪ್ರೀತಿ ತೋರಿಸಿದರೆ ಸಾಕು ಎಷ್ಟು ಅಕ್ಕರೆಯಿಂದ ಮರುಸ್ಪಂದಿಸುತ್ತವೆ! ನಿರ್ಭಯವಾಗಿ ತೊಡೆಯ ಮೇಲೇರಿ ನಲಿಯುತ್ತವೆ! ಈ ಅನುಭವದಿಂದ ಅಹಿಂಸೆ ಅಥವ ನಿರ್ವ್ಯಾಜ ಪ್ರೇಮ ಎಂಥ ಅಜೇಯಶಕ್ತಿ ಎಂದು ತಿಳಿಯಬಾರದೆ?"

೧೯೪೩ರ ಫೆಬ್ರುವರಿಯಲ್ಲಿ ಗಾಂಧೀಜಿ ತಮ್ಮ ಐತಿಹಾಸಿಕ ಇಪ್ಪತ್ತೊಂದು ದಿನಗಳ ಅಂತಃಶುದ್ಧಿ ಉಪವಾಸವ್ರತ ಕೈಕೊಂಡರು. ತಮ್ಮದೇ ನಿರ್ಬಲತೆ ಮತ್ತು ತಪ್ಪುಗಳ ಪರಿಣಾಮವಾಗಿ ನಡೆದ ಹಿಂಸಾ ಕೃತ್ಯಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಈ ಅಗ್ನಿ ಪರೀಕ್ಷೆ ನಡೆಯಿತು. ಆದರೆ ಬ್ರಿಟಿಷ್ ಆಡಳಿತ ಕೈಗೊಂಡ ಸಾವಿರ ಪಾಲು ಹೆಚ್ಚು ಕ್ರೂರವೂ ಅಮಾನುಷವೂ ಆದ ದಬ್ಬಾಳಿಕೆ ಮತ್ತು ಹಿಂಸಾಚಾರವನ್ನು ಗಾಂಧೀಜಿ ಖಂಡಿಸಿದರು. ಜನತೆಯಿಂದ ಅವರ ನಾಯಕರನ್ನು ಹಠಾತ್ತಾಗಿ ಬೇರ್ಪಡಿಸಿ ಅವರನ್ನು ರೊಚ್ಚಿಗೆಬ್ಬಿಸಿ ಅವಮಾನಗೊಳಿಸಿದ್ದರ ಪರಿಣಾಮವಾಗಿ ದೊಡ್ಡ ದೊಡ್ಡ ಜನಸಂದಣಿಗಳು ತಾಳ್ಮೆಗೆಡುವುದು ಸಹಜ – ಆದರೆ ಒಂದು ವ್ಯವಸ್ಥಿತ ಶಸ್ತ್ರ ಸಜ್ಜಿತ ಯುದ್ಧ ಸಿದ್ಧವಾದ ಪ್ರಬಲ ಸರ್ಕಾರ ನಿಶ್ಶಸ್ತ್ರ ಜನ ಜಂಗುಳಿಯ ಮೇಲೆ ಮುಚ್ಚಿಟ್ಟು ಎರಗಿ ಧ್ವಂಸ ಮಾಡಲು ತೊಡಗುವುದು ಯಾವ ನಾಗರಿಕ ಸಂಸ್ಥೆಗೂ ಗೌರವ ತರಲಾರದು ಎಂದು ಗಾಂಧೀಜಿ ಸ್ಪಷ್ಟವಾಗಿ ನುಡಿದರು. ಸತ್ಯಾಗ್ರಹ ಸಮರ ದೇಶದ ಸರ್ವೆಡೆಗಳಲ್ಲೂ ಬೂದಿಮುಚ್ಚಿದ ಕೆಂಡದಂತೆ ಜೀವಂತವಾಗಿಯೇ ಸಾಗಿತು. ಸಾಮ್ರಾಜ್ಯಶಾಹಿಯ ಆಂತರಿಕ ನೈತಿಕ ಬಲ ಉಡುಗಿ ಹೋಗುತ್ತಿತ್ತು. ಭಾರತದ ಜನತೆಯನ್ನು ವಿಶ್ವಾಸಗಳಿಸಿಕೊಳ್ಳಲು ಅಗಾಧ ಪ್ರಯತ್ನ ಕೈಗೊಂಡರು.

೧೯೪೫ ರಲ್ಲಿ ಎಲ್ಲ ರಾಷ್ಟ್ರೀಯ ನಾಯಕರನ್ನೂ ಬಿಡುಗಡೆ ಮಾಡಲಾಯಿತು. ಗಡಿನಾಡು ಪ್ರಾಂತದಲ್ಲಿ ವಿಧಾನ ಸಭೆಯ ಅನೇಕ ಸದಸ್ಯರು

ಹೊರಗೆ ಬಂದು ಸಭೆಗೆ ಹಾಜರಾದರು. ಕೃತಕವಾಗಿ ಅಧಿಕಾರ ಹಿಡಿದಿದ್ದ ಔರಂಗಜೇಬ್‌ಖಾನ್ ಸರ್ಕಾರ ವಿಶ್ವಾಸ ಕಳೆದುಕೊಂಡು ಉರುಳಿತು. ಮತ್ತೆ ಡಾ॥ ಖಾನ್ ಸಾಹೇಬರೇ ಪ್ರಧಾನಮಂತ್ರಿಯಾದರು. ಆವರೆ ವಿಗೂ ಸೆರೆಮನೆಯಲ್ಲೇ ಇದ್ದ ಗಫಾರ್‌ಖಾನರ ಬಿಡುಗಡೆ ಆಯಿತು. ಇತರ ಸುಮಾರು ಎಂಟುನೂರು ಸ್ವಯಂಸೇವಕರೂ ಬಿಡುಗಡೆಯಾದರು. ಮತ್ತೆ ಸಂಗ್ರಾಮ ಕ್ಷೇತ್ರಕ್ಕೆ ಗಫಾರ್‌ಖಾನರು ಮರಳಿದರು.

೧೫. ವಿಭಜನೆಯ ಕಂಪನಗಳು

ಮೇ ೧೯೪೫ ರಲ್ಲಿ ಜರ್ಮನಿ ಮಿತ್ರರಾಷ್ಟ್ರಗಳಿಗೆ ಶರಣಾಯಿತು. ಜೂನ್‌ನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರನ್ನೆಲ್ಲ ಬಿಡುಗಡೆ ಮಾಡಿದರು. ಇನ್ನೂ ಜಪಾನ್ ಸೋತಿರಲಿಲ್ಲ. ಭಾರತದ ಆಕ್ರಮಣಕ್ಕಾಗಿ ಮುಂದುವರೆಯುತ್ತಲೇ ಇತ್ತು. ಭಾರತದ ಸಹಕಾರವಿಲ್ಲದೆ ಗೆಲ್ಲುವಂತಿಲ್ಲ ಎಂದು ಬ್ರಿಟಿಷರಿಗೆ ಅನ್ನಿಸುತ್ತಿತ್ತು. ಸತ್ಯಶೋಧಕ ಗಾಂಧೀ ಈ ಸಮಯದಲ್ಲಿ ಹೀಗೆಂದರು :

"ಇಡೀ ಭಾರತ ಒಂದು ಸೆರೆಮನೆ. ವೈಸ್‌ರಾಯರು ಅದರ ಕಾವಲುಗಾರ. ನಲವತ್ತು ಕೋಟಿ ಭಾರತೀಯರಷ್ಟೇ ಅಲ್ಲ ಪ್ರಪಂಚದ ಇತರ ಕಡೆಯೂ ಕೋಟಿ ಕೋಟಿ ಜನ ದಾಸ್ಯದಲ್ಲಿದ್ದಾರೆ. ಬ್ರಿಟಿಷರ ಸೆರೆಯಲ್ಲಿದ್ದಾರೆ. ಆದರೆ ಒಂದು ತೀರ್ಪಿನ ದಿನ ಬಂದೇ ಬರುತ್ತದೆ. ಅಧ್ಯಾತ್ಮ ನ್ಯಾಯದೇವತೆಯ ಮುಂದೆ ಕಾವಲುಗಾರನೇ ಅಪರಾಧಿಯೆನಿಸುತ್ತಾನೆ. ಸೆರೆಯಾಳುಗಳಲ್ಲ .....

"ಸತ್ಯ ಮತ್ತು ಅಹಿಂಸಾನಿಷ್ಠವಾದ ಭಾರತಕ್ಕಾಗಿ ನಾನು ಯಾವ ವಕಾಲತ್ತನ್ನೂ ವಹಿಸಬೇಕಾಗಿಲ್ಲ. ಈ ಪಥದ ಅನುಯಾಯಿಗಳು ಪ್ರತಿ ಹೆಜ್ಜೆಯಲ್ಲೂ ವಿನಮ್ರವಾಗಿ ನಡೆಯಬೇಕು. ಯಾವ ದಿಕ್ಕಿನಿಂದ ನಮ್ಮ ಸ್ವಾತಂತ್ರ್ಯ ಸಮರಕ್ಕೆ ಸಹಕಾರ ಸಿಕ್ಕಿದರೂ ಸ್ವಾಗತವುಂಟು. ಮಿತ್ರರಾಷ್ಟ್ರಗಳು ನಮ್ಮೊಡನೆ ಸಹಕರಿಸುವುದಾದರೆ ಬೇಗನೇ ಸ್ವಾತಂತ್ರ್ಯ ಬಂದೀತು. ಇಲ್ಲವಾದರೂ ನಮ್ಮ ಗುರಿಯೇನೂ ಜಾರಿ ಹೋಗುವುದಿಲ್ಲ. ಸ್ವಲ್ಪ ತಡವಾದೀತು. ನಾವೂ ಹೆಚ್ಚು ಬಲಿದಾನ ಮಾಡಬೇಕಾದೀತು. ಕ್ಲೇಶಪಡಬೇಕಾದೀತು. ಸತ್ಯ ಅಹಿಂಸೆಗಳಿಂದ ಗಳಿಸುವ ಸ್ವಾತಂತ್ರ್ಯಕ್ಕಾಗಿ ಈ ತ್ಯಾಗ ಬಲಿದಾನಗಳು ಏನೂ ಹೆಚ್ಚಲ್ಲ."

ಹೆಚ್ಚು ತಡಮಾಡದೆ ಭಾರತೀಯರೊಡನೆ ಸಂಧಾನಕ್ಕಾಗಿ ಬ್ರಿಟಿಷ್ ಸರ್ಕಾರ (ಕ್ಯಾಬಿನೆಟ್ ಮಿಷನ್) ಕಳುಹಿಸಿತು. ಸಿಮ್ಲಾದಲ್ಲಿ ರಾಷ್ಟ್ರೀಯ ನಾಯಕರ ಸಭೆಕರೆದರು. ಇಲ್ಲಿಯೂ ಕುಹಕ ರಾಜಕೀಯಕ್ಕೆ ಬ್ರಿಟಿಷರು ಕೈಹಾಕಿದರು. ಕಾಂಗ್ರೆಸ್ಸಿನೊಡನೆ ಮುಸ್ಲಿಮ್ ಲೀಗ್, ಸಿಖ್ ಜನಾಂಗದ ನಾಯಕರು, ಪರಿಶಿಷ್ಟಜಾತಿಗಳವರು ಆಹ್ವಾನಿತರಾದರು. ಕೇಂದ್ರದ ಮತ್ತು ಪ್ರಾಂತಗಳ ಚುನಾಯಿತ ಸಭೆಗಳಲ್ಲಿದ್ದ ನಾಯಕರನ್ನು ಬರಮಾಡಿಕೊಂಡರು. ಬಹುತೇಕ ಇವರೆಲ್ಲ ಕಾಂಗ್ರೆಸ್ ಅಥವ ಮುಸ್ಲಿಂ ಲೀಗಿನವರಾಗಿದ್ದರು. ಯಾವ ಸಂಸ್ಥೆಯ ಪ್ರತಿನಿಧಿಯಲ್ಲದಿದ್ದರೂ ಗಾಂಧೀಜಿ ಸಮ್ಮೇಳನಕ್ಕೆ ವಿಶೇಷ ಆಹ್ವಾನಿತರಾಗಿ ಬರಲು ವೈಸ್‌ರಾಯರು ಆಗ್ರಹಪೂರ್ವಕ ಬಿನ್ನಹ ಮಾಡಿದರು.

ಈ ಸಭೆಯಲ್ಲಿ ಜಿನ್ನಾ ಸಾಹೇಬರು ಮುಸ್ಲಿಮ್ ಲೀಗ್ ಭಾರತದ ಮುಸಲ್ಮಾನರ ಏಕೈಕ ಪ್ರತಿನಿಧಿ ಸಂಸ್ಥೆಯೆಂದು ಪರಿಗಣಿಸಲು ಆಗ್ರಹಿಸಿದರು. ಸಭೆಯಲ್ಲಿ ಹಾಜರಿದ್ದ ಗಡಿನಾಡಿನ ಪ್ರಧಾನಮಂತ್ರಿ ಡಾ. ಖಾನ್ ಸಾಹೇಬರು ಕೂಡಲೇ ಪ್ರತಿಭಟಿಸಿ, "ನಾನು ಕಾಂಗ್ರೆಸ್ಸಿಗನೂ ಹೌದು, ಮುಸಲ್ಮಾನನೂ ಹೌದು. ಜಿನ್ನಾರವರು ನನ್ನನ್ನು ಹಿಂದೂ ಎನ್ನುತ್ತಾರೆಯೆ?" ಎಂದು ಕೇಳಿದರು. ವೈಸ್‌ರಾಯರು ತಮ್ಮ ಕಾರ್ಯಕಾರೀ ಮಂಡಲಿಯಲ್ಲಿ ಕಾಂಗ್ರೆಸ್, ಮುಸ್ಲಿಮ್ ಲೀಗ್, ಪರಿಶಿಷ್ಟ ಪಂಗಡಗಳು ಮತ್ತು ಸಿಖ್ಖರ ಪ್ರತಿನಿಧಿಗಳಿಗೆ ಅವರವರ ಸಂಖ್ಯಾ ಪ್ರಮಾಣದಲ್ಲಿ ಸ್ಥಾನಗಳನ್ನು ಹಂಚುವುದಾಗಿ ಘೋಷಿಸಿದರು. ಜಿನ್ನಾರವರು ಮುಸ್ಲಿಮ್‌ಲೀಗ್ ಮಾತ್ರವೇ ಮುಸ್ಲಿಮರ ಹೆಸರುಗಳನ್ನು ಸೂಚಿಸಬೇಕೆಂದು ಹಠಹಿಡಿದರು. ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಅಜಾದರೂ ಗಾಂಧೀಜಿಯೂ ಇದನ್ನು ಒಪ್ಪಲಿಲ್ಲ. ಸಂಧಾನಗಳು ಮುರಿದುಬಿದ್ದವು.

ಸೆಪ್ಟೆಂಬರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಬೊಂಬಾಯಿನಲ್ಲಿ ಸೇರಿತು. ಗಾಂಧೀಜಿ ಮತ್ತು ಗಫಾರ್‌ಖಾನರು ಭಾಗವಹಿಸಿದ್ದರು. ಕರ್ನಾಟಕದ ಸದಸ್ಯರು ಗಫಾರ್‌ಖಾನರನ್ನು ಬರಮಾಡಿಕೊಂಡು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಅವರು ಅಹಿಂಸೆಯೇ ಅತ್ಯಂತ ಶ್ರೇಷ್ಠ ಆಯುಧವೆಂದೂ ತಾವು ಹಿಂಸಾಯುದ್ಧ ಅಹಿಂಸಾ ಸಮರಗಳೆರಡನ್ನೂ

ಗಡಿನಾಡಿನಲ್ಲಿ ಪ್ರತ್ಯಕ್ಷ ನೋಡಿ ಈ ನಿರ್ಣಯಕ್ಕೆ ಬಂದರೆಂದೂ ತಿಳಿಸಿದರು. ೧೯೪೨ರ ಚಳುವಳಿಯಲ್ಲಿ ಪಠಾಣರು ಅತ್ಯಂತ ಸಂಯಮದಿಂದ ಯಾವ ವಿಧ್ವಂಸಕ ಕೃತ್ಯಕ್ಕೂ ಕೈಹಾಕದೆ ಹೋರಾಡಿದುದನ್ನು ಸ್ಮರಿಸಿದರು. ಹಿಂದೂ ಮುಸಲ್ಮಾನ ಐಕ್ಯತೆಯ ಬಗ್ಗೆ ಒತ್ತುಕೊಟ್ಟು ಹೇಳುತ್ತಾ, 'ಬ್ರಿಟಿಷರ ಕುಟಿಲತೆಗೆ ಒಳಗಾಗಿ ನಾವು ಈ ಜಾತೀಯ ವೈಷಮ್ಯವನ್ನು ಬೆಳೆಸದಿರೋಣ. ಒಟ್ಟಿಗೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಹೋರಾಡೋಣ" ಎಂದರು.

ಲಾರ್ಡ್ ಪೆಥಿಕ್‌ಲಾರೆನ್ಸ್, ಸರ್ ಸ್ಟಾಫರ್ಡ್ ಕ್ರಿಪ್ಸ್ ಮತ್ತು ಲಾರ್ಡ್ ಅಲೆಕ್ಸಾಂಡರ್ ಬ್ರಿಟಿಷ್ ಮಂತ್ರಿಮಂಡಲದ ಆಯೋಗವಾಗಿ ಭಾರತಕ್ಕೆ ಬಂದು ಮತ್ತೆ ಸಂಧಾನಗಳ ಪ್ರಯತ್ನ ಮಾಡಿದರು. ಬಹುಮಟ್ಟಿಗೆ ಆಡಳಿತ ಸೂತ್ರಗಳನ್ನೆಲ್ಲ ಭಾರತೀಯ ಪ್ರತಿನಿಧಿಗಳಿಗೆ ವರ್ಗಾಯಿಸುವುದಾಗಿ ಆಶ್ವಾಸನೆಕೊಟ್ಟರು. ಆಗ ೧೧ ಪ್ರಾಂತಗಳಲ್ಲಿ ಚುನಾಯಿತ ಪ್ರಜಾಸರ್ಕಾರಗಳು ಏರ್ಪಟ್ಟಿದ್ದವು. ಐದು ರಾಜ್ಯಗಳಲ್ಲಿ ಮುಸ್ಲಿಮ್ ಲೀಗ್ ಪ್ರಧಾನವಾಗಿತ್ತು. ಅವುಗಳಲ್ಲಿ ಸ್ವಲ್ಪ ಹೆಚ್ಚು ಸಂಖ್ಯೆಯ ಮುಸಲ್ಮಾನರಿರುವ ರಾಜ್ಯಗಳನ್ನು ಬೇರೆಯೆಂದು ಪರಿಗಣಿಸಲಾಗುವುದೆಂದು ಬ್ರಿಟಿಷ್ ಪ್ರತಿನಿಧಿಗಳು ಅಭಿಪ್ರಾಯಪಟ್ಟರು. ಕಾಂಗ್ರೆಸ್ ಸಂಸ್ಥೆಯ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದ ಮೌಲಾನಾ ಅಜಾದ್, ಪಂಡಿತ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಖಾನ್‌ಅಬ್ದುಲ್ ಗಫಾರ್‌ಖಾನರು ಈ ಬಗ್ಗೆ ಚರ್ಚಿಸಿದರು. ಗಾಂಧೀಜಿಯೂ ಸಭೆಯಲ್ಲಿ ಭಾಗವಹಿಸಿದ್ದರು. ಬ್ರಿಟಿಷ್ ನಿಯೋಗವನ್ನು ಜವಾಹರಲಾಲರು ನೇರವಾಗಿ ಪ್ರಶ್ನಿಸಿದರು, "ನೀವು ಈ ಕೂಡಲೇ ನಿಮ್ಮ ಸೈನ್ಯಗಳನ್ನೆಲ್ಲ ವಾಪಸು ಕಳುಹಿಸಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವಿರಾ?" ಲಾರ್ಡ್ ವೇವಲ್ಲರು ಉತ್ತರಿಸುತ್ತಾ, "ಬಿಟ್ಟುಹೋಗುತ್ತೇವೆ. ಆದರೆ ನಿಮ್ಮಲ್ಲಿ ಯಾರಿಗೆ ಅಧಿಕಾರ ವಹಿಸಿಕೊಡೋಣ?" ಎಂದು ಸವಾಲು ಎಸೆದರು. ಅಧೀರರಾಗದೆ ನೆಹರು ಅಂದರು. "ದೇಶವನ್ನು ಮುಸ್ಲಿಮರಿಗೆ ವಹಿಸಿದರೂ ಅಡ್ಡಿಯಿಲ್ಲ. ಸ್ವಾತಂತ್ರ್ಯ ಘೋಷಿಸಿ." ಜಿನ್ನಾ ಸಾಹೇಬರು ಆ ಕ್ಷಣದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳ ಪ್ರಾಮಾಣಿಕತೆಯನ್ನು ಮೆಚ್ಚಿ ಈ ಬಗ್ಗೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಒಂದು ಸಮಿತಿ

ರಚಿಸಿಕೊಂಡು ತಮ್ಮ ತಮ್ಮಲ್ಲಿನ ಎಲ್ಲ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥ ಮಾಡಿಕೊಳ್ಳಲು ಒಪ್ಪಿದರು. ಆ ನಂತರ ನೆಹರು ಮತ್ತು ಜಿನ್ನಾ ಕೂಡಿ ಚರ್ಚಿಸಿದರು. ಆದರೆ ಕೊನೆಯಲ್ಲಿ ಲಾರ್ಡ್ ಫೆಥಿಕ್‌ಲಾರೆನ್ಸರು ಏನು ಒಪ್ಪಂದಕ್ಕೆ ಬಂದಿರಿ ಎಂದು ಪ್ರಶ್ನಿಸಿದಾಗ ಜಿನ್ನಾ ಯಾವ ಒಪ್ಪಂದಕ್ಕೂ ಬರಲು ನಿರಾಕರಿಸಿ ಬಿಟ್ಟರು. ಗಫಾರ್‌ಖಾನರಿಗೆ ತುಂಬ ಆಘಾತವಾಯಿತು. ಬ್ರಿಟಿಷರು ಹಿಂದೂಗಳನ್ನೂ ಮುಸ್ಲಿಮರನ್ನೂ ಪ್ರತ್ಯೇಕಿಸಿಯೇ ಸಂಧಾನ ಮಾಡುವುದಾಗಿ ತೀರ್ಮಾನಿಸಿಕೊಂಡಿದ್ದರು. ಬೆಲೂಚಿಸ್ತಾನ, ಸಿಂಧ್, ಪಂಜಾಬ್, ವಾಯವ್ಯಗಡಿ ಪ್ರಾಂತ ಮತ್ತು ಬಂಗಾಳ ಇವುಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿದ್ದಾರೆ ಎಂದು ಸಾರಿ ಪ್ರತ್ಯೇಕತೆಯ ಸಲಹೆಗಳನ್ನು ಮುಂದಿಟ್ಟರು. ವಾಸ್ತವವಾಗಿ ಇವೆಲ್ಲ ರಾಜ್ಯಗಳಲ್ಲೂ ಒಟ್ಟಿನಲ್ಲಿ ಎಲ್ಲೂ ಈ ಮುಸಲ್ಮಾನರ ಸಂಖ್ಯೆ ಶೇಕಡ ೫೫ ಕ್ಕಿಂತ ಹೆಚ್ಚಾಗಿರಲಿಲ್ಲ. ಅವರಲ್ಲೂ ಈ ಜನ ಗ್ರಾಮ ಗ್ರಾಮಗಳಲ್ಲಿ ಹಂಚಿಹೋಗಿದ್ದರು. ಅಲ್ಲದೆ ಅಂಕಿ ಅಂಶಗಳನ್ನು ಮುಸ್ಲಿಮ್ ಲೀಗ್ ಸರ್ಕಾರಗಳು ತಮಗೆ ಬೇಕಾದಂತೆ ತಿರುವು ಮುರುವು ಮಾಡಿದ್ದುವು. ಎಲ್ಲ ಮುಸ್ಲಿಮರೂ ರಾಷ್ಟ್ರೀಯ ಕಾಂಗ್ರೆಸ್ಸಿನ ವಿರೋಧಿಗಳು, ಹಿಂದೂಧರ್ಮ ಇಸ್ಲಾಮಿಗೆ ಮಾರಕ; ಭಾರತದಲ್ಲಿ ಇಸ್ಲಾಮ್‌ಧರ್ಮ ಅಪಾಯದಲ್ಲಿದೆ ಎಂಬ ಹುಯಿಲೆಬ್ಬಿಸಿದ್ದರು. ಸಿಂಧ್, ಬೆಲೂಚಿಸ್ತಾನ ಮತ್ತು ಗಡಿನಾಡು ಪ್ರಾಂತಗಳಲ್ಲಿ ಕಾಂಗ್ರೆಸ್ ಪರವಾದ ಮುಸ್ಲಿಮರು ಬಹುಸಂಖ್ಯೆಯಲ್ಲಿ ಚುನಾಯಿತರಾಗಿ ಬಂದು ಸರ್ಕಾರಗಳನ್ನು ರಚಿಸಿದ್ದರೂ ಜಿನ್ನಾ ಸಾಹೇಬರು ಅವರುಗಳನ್ನೆಲ್ಲ ನಿರಾಕರಿಸಿದರು. ಮೌಲಾನಾ ಅಜಾದರನ್ನೂ ಖಾನ್ ಅಬ್ದುಲ್ ಗಫಾರ್ ಖಾನರನ್ನೂ ಹೀನಾಮಾನವಾಗಿ ಹಿಯಾಳಿಸಿ ಅವರು ಇಸ್ಲಾಮ್ ಧರ್ಮದ ಶತ್ರುಗಳು ಎಂದು ಪ್ರಚಾರಮಾಡಿದರು. ಹಿಂದೂ ಮುಸ್ಲಿಮ್ ಗಲಭೆಗಳನ್ನು ಬ್ರಿಟಿಷ್ ಸರ್ಕಾರ ಮತ್ತು ಮುಸ್ಲಿಮ್ ಲೀಗುಗಳೆರಡೂ ಪ್ರಚೋದಿಸುತ್ತಲೇ ಇದ್ದುವು. ಉತ್ತರ ಭಾರತದ ಊರು ಊರುಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ ಈ ವಿಷಪೂರಿತ ಜಾತಿ ಘರ್ಷಣೆಗಳು ತೀವ್ರವಾಗುತ್ತಲೇ ಸಾಗಿದುವು.

ಬ್ರಿಟಿಷ್ ಮಂತ್ರಿಮಂಡಲ ನಿಯೋಗ ನಂತರ ದೆಹಲಿಗೆ ಬಂದಿತು. ಗಾಂಧೀಜಿ ಮತ್ತು ಗಫಾರ್‌ಖಾನ್ ದೆಹಲಿಯ ಹರಿಜನ ವಸತಿಯಲ್ಲಿ

ಬಿಡಾರವಮಾಡಿದರು. ದಿನವೂ ಸಂಜೆಯ ಸಾರ್ವತ್ರಿಕ ಪ್ರಾರ್ಥನಾ ಸಭೆಯಲ್ಲಿ ಗಫಾರ್‌ಖಾನರು ಖೊರಾನಿನಿಂದ ಆಯ್ದ ಭಾಗಗಳನ್ನು ಪಠಿಸುತ್ತಿದ್ದರು. "ಎಲ್ಲ ಪ್ರಾರ್ಥನೆಯೂ ವಿಶ್ವನಿಯಾಮಕನಾದ ಏಕೈಕ ಭಗವಂತನಿಗೆ ಸಲ್ಲುತ್ತದೆ. ಯಾವ ಧಾರ್ಮಿಕ ವಿಧಿಯೂ ಇದಕ್ಕೆ ವಿರೋಧವಿಲ್ಲ" ಎಂದು ಖಾನರು ಉಲ್ಲೇಖಿಸುತ್ತಿದ್ದರು.

ಬ್ರಿಟಿಷ್ ನಿಯೋಗ ಕೊನೆಗೆ ತನ್ನ ಸೂಚನೆಗಳನ್ನು ಪ್ರಕಟಿಸಿತು. ವಿಭಜನೆಯ ಮಾತನ್ನು ಅದು ಅಂಗೀಕರಿಸಲಿಲ್ಲ. ಆದರೆ ದೇಶವನ್ನು ಒಂದು ಕೇಂದ್ರಿತ ಅಧಿಪತ್ಯದಡಿಯಲ್ಲಿ ಮೂರು ಭಾಗವನ್ನಾಗಿ ಪರಿಗಣಿಸಬೇಕೆಂದೂ ರಾಜ – ಮಹಾರಾಜರುಗಳ ಅಧೀನದಲ್ಲಿರುವ ರಾಜ್ಯಗಳನ್ನು ಹಾಗೆಯೇ ಉಳಿಸಿಕೊಂಡು ಒಕ್ಕೂಟವಾಗಬೇಕೆಂದೂ ಸಲಹೆ ಮಾಡಿತು. ಮುಂದೆ ಬರಬೇಕಾದ ಹೊಸ ರಾಜ್ಯಾಂಗ ರಚಿಸಲು ಒಂದು ಸ್ವತಂತ್ರ ರಾಜ್ಯಾಂಗದ ರಚನಾ ಸಭೆಯನ್ನು ರೂಪಿಸಬೇಕೆಂದೂ ತಾತ್ಕಾಲಿಕವಾಗಿ ಈಗಿನ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನುಳ್ಳ ರಾಷ್ಟ್ರಮಟ್ಟದ ತಾತ್ಕಾಲಿಕ ಕೇಂದ್ರ ಸರ್ಕಾರವನ್ನು ರಚಿಸಿಕೊಳ್ಳಬಹುದೆಂದೂ ಸೂಚಿಸಿತು. ಅಲ್ಪಸಂಖ್ಯಾತರಾದ ಮುಸಲ್ಮಾನರಿಗೆ ವಿಶ್ವಾಸಬರುವಂತೆ ಪಂಜಾಬ್, ಸಿಂಧ್, ಬೆಲೂಚಿಸ್ಥಾನ ಮತ್ತು ಗಡಿನಾಡು ಪ್ರಾಂತಗಳನ್ನು ಮುಸ್ಲಿಮ್ ಬಹುಸಂಖ್ಯಾತ ರಾಜ್ಯಗಳೆಂದು ಪರಿಗಣಿಸಬೇಕೆಂದು ನಿಯೋಗ ವಾದಮಾಡಿತು. ಅಸ್ಸಾಮ್ ಮತ್ತು ಬಂಗಾಳಗಳಲ್ಲಿ ಮುಸ್ಲಿಮರು ಅಪಾರ ಸಂಖ್ಯೆಯಲ್ಲಿರುವುದರಿಂದ ಅವುಗಳನ್ನು ಪ್ರತ್ಯೇಕ ರೀತಿಯಲ್ಲಿ ವಿಂಗಡಿಸಲು ಯೋಚಿಸಲಾಗಿತ್ತು. ಆದರೆ ಎರಡು ಸ್ವತಂತ್ರ ರಾಷ್ಟ್ರಗಳಾಗಿ ದೇಶವನ್ನು ಒಡೆಯಲು ಈ ನಿಯೋಗ ನಿರಾಕರಿಸಿತು.

ಗಾಂಧೀಜಿ ಈ ಸಲಹೆಗಳನ್ನು ಯಾವುದೇ ರೀತಿಯಲ್ಲಿ ತಿರಸ್ಕಾರದ ಪರಿಗಣಿಸದೆ ಸೂಕ್ತ ರೀತಿಯಲ್ಲಿ ಪರಿಶೀಲನಾಯೋಗ್ಯವೆಂದು ಅಭಿಪ್ರಾಯ ಪಟ್ಟರು. ಮುಂದೆ ಬರುವ ರಾಜ್ಯಾಂಗ ರಚನಾ ಸಭೆ ಎಲ್ಲವನ್ನೂ ಕೂಲಂಕುಷವಾಗಿ ಶೋಧಿಸಿ ಕೊನೆಯ ಸ್ವತಂತ್ರ ತೀರ್ಮಾನಕ್ಕೆ ಬಂದರೆ ಬ್ರಿಟಿಷ್ ಸರ್ಕಾರ ಅದಕ್ಕೆ ಬದ್ಧವೆಂದು ಆಶ್ವಾಸನೆ ದೊರೆತ್ತಿತ್ತು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಮುಸ್ಲಿಮ್ ಲೀಗ್

ಎರಡೂ ರಾಷ್ಟ್ರೀಯ ಹಿತದೃಷ್ಟಿಯಿಂದ ಪರಿಶೀಲಿಸಬೇಕೆಂದು ಗಾಂಧೀಜಿ ಸಲಹೆ ಮಾಡಿದರು.

ಖಾನ್‌ಅಬ್ದುಲ್ ಗಫಾರ್‌ಖಾನರು ದೇಶ ಬಾಂಧವರಿಗೆಲ್ಲ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿಕೊಂಡು ಸ್ವಾತಂತ್ರ್ಯ ಪಡೆಯಬೇಕೆಂದು ಕಳಕಳಿಯ ಮನವಿ ಮಾಡಿಕೊಂಡರು. ಮೇ ೨೩ ರಂದು ಖಾನರು ಮಾತನಾಡುತ್ತಾ, "ನಾನೊಬ್ಬ ಖುದಾಯಿ ಖಿದ್‌ಮತ್‌ಗಾರ. ಮಾನವ ಸೇವೆಯೇ ಈಶ ಸೇವೆ ಎಂದು ನಂಬಿದ್ದೇನೆ. ಇಸ್ಲಾಮ್ ಧರ್ಮ ನನಗಿದನ್ನು ಬೋಧಿಸಿದೆ. ದಾಸ್ಯ ಶೃಂಖಲೆಗಳಲ್ಲಿ ತೊಳಲುತ್ತಿರುವವರಿಗೆ ಯಾವ ಧರ್ಮವೇ ಆಗಲಿ ಯಾವ ಸದ್ಗುಣಗಳೇ ಆಗಲಿ ಬೆಳೆಯಲಾರದು. ಆದ್ದರಿಂದ ಭಾರತದ ಸ್ವಾತಂತ್ರ್ಯ ನನಗೆ ಅಗತ್ಯ. ಇಡೀ ಭಾರತೀಯ ಜನಾಂಗದ ನೆಮ್ಮದಿ ಗಾಗಿ ನಾನು ಸ್ವಾತಂತ್ರ್ಯ ಬಯಸುತ್ತೇನೆ. ಈ ಸ್ವಾತಂತ್ರ್ಯ ಉಳಿದು ಬಾಳಬೇಕಾದರೆ ದೇಶದ ಸರ್ವಧರ್ಮಾನುಯಾಯಿಗಳ ಮಧ್ಯೆ ಸೌಹಾರ್ದ ಮತ್ತು ಸಹಕಾರಗಳಿಲ್ಲದೆ ಸಾಧ್ಯವೇ ಇಲ್ಲ. ನನ್ನ ಜೀವಮಾನದಲ್ಲೆಲ್ಲ ಈ ಆದರ್ಶಕ್ಕಾಗಿ ಶ್ರಮಿಸಿದ್ದೇನೆ. ಭಾರತವಾಗಲೀ ಯಾವ ಕೋಮಾಗಲೀ ದ್ವೇಷ ಮತ್ತು ಅಸೂಯೆಗಳ ಮೂಲಕ ತನ್ನ ವಿಕಾಸವನ್ನು ಸಾಧಿಸಿಕೊಳ್ಳ ಲಾರದು" ಎಂದರು.

ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಈ ಸಲಹೆಗಳಲ್ಲಿನ ದೋಷಗಳನ್ನು ಎತ್ತಿತೋರಿಸಿ ಅವುಗಳನ್ನು ಮತ್ತೆ ಪರಿಷ್ಕರಿಸಬೇಕೆಂದು ಕೇಳಿತು. ಭಾರತದ ಭಾಗವಾಗಿರುವ ಯಾವ ರಾಜ್ಯವನ್ನೇ ಆಗಲಿ ಕಡ್ಡಾಯ ವಾಗಿ ಕೋಮುವಾರು ಸಂಖ್ಯಾಬಲಗಳನ್ನೇ ಎತ್ತಿಹಿಡಿದು ಗುಂಪುಗಳನ್ನಾಗಿ ಮಾಡಬಾರದೆಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿತು. ಸ್ವತಂತ್ರ ರಾಜ್ಯಾಂಗ ರಚನಾ ಸಭೆಯನ್ನು ರೂಪಿಸುವ ಕ್ರಮಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿ ತ್ವರಿತವಾಗಿ ಸ್ವತಂತ್ರ ರಾಷ್ಟ್ರದ ಸ್ವರೂಪ ನಿರ್ಣಯವಾಗಬೇಕೆಂದು ಕಾಂಗ್ರೆಸ್ ಹೇಳಿತು,

ಮುಸ್ಲಿಮ್ ಲೀಗಾದರೋ ಬ್ರಿಟಿಷ್ ನಿಯೋಗದ ಸಲಹೆಗಳಲ್ಲಿ ಮುಸ್ಲಿಮ್ ಬಹುಸಂಖ್ಯಾತ ರಾಜ್ಯಗಳೆಂದು ಗುರ್ತಿಸಿರುವ ಆರು ಪ್ರಾಂತ ಗಳು ಪ್ರತ್ಯೇಕವಾಗಬೇಕೆಂದು ಕೇಳಿತು. ಈ ಪ್ರದೇಶವನ್ನೆಲ್ಲ ಒಟ್ಟು

ಗೂಡಿಸಿ ಪಾಕಿಸ್ತಾನವಾಗಬೇಕೆಂದು ಲೀಗ್ ಪ್ರಬಲವಾಗಿ ವಾದಿಸಿತು. ತಾತ್ಕಾಲಿಕ ಸರ್ಕಾರ ರಚಿಸಿಕೊಳ್ಳುವ ಬಗ್ಗೆ ಈ ಪ್ರತ್ಯೇಕತಾ ಸೂಚನೆಯನ್ನೇ ಮುಂದಿಟ್ಟು ಲೀಗ್ ಸಮಾನ ಪ್ರಮಾಣದ ಪ್ರಾತಿನಿಧ್ಯ ತನಗೆ ದೊರಕಬೇಕೆಂದು ಸಮೂದಿಸಿತು.

ಕೊನೆಗೆ ಬ್ರಿಟಿಷರ ಕುಟಿಲ ನೀತಿಯಿಂದ ಈ ತಾತ್ಕಾಲಿಕ ಸರ್ಕಾರದಲ್ಲಿ ಕಾಂಗ್ರೆಸ್‌ಗೆ ಆರು ಸ್ಥಾನಗಳೂ ಮುಸ್ಲಿಮ್‌ಲೀಗ್‌ಗೆ ಐದು. ಸಿಖ್ಖರಿಗೆ ಒಂದು, ಕ್ರೈಸ್ತರಿಗೆ ಒಂದು, ಪಾರ್ಸಿಗಳಿಗೆ ಒಂದು ಸ್ಥಾನಗಳು ಮೀಸಲಾದವು. ಈ ಮಧ್ಯಂತರ ಸರ್ಕಾರದಲ್ಲಿ ಜವಾಹರಲಾಲ್ ನೆಹರು. ಮೌಲಾನಾ ಅಜಾದ್, ಅಸಫ್‌ಅಲಿ ಮುಂತಾದ ಮುಖಂಡರು ಕೇಂದ್ರ ಮಂತ್ರಿಗಳಾದರು. ಹಾಗೆಯೇ ಮುಸ್ಲಿಮ್ ಲೀಗಿನ ಲಿಯಾಖತ್ ಅಲಿಖಾನ್, ಅಬ್ದುಲ್ ರಬ್ ನಿಷ್ಠರ್ ಮುಂತಾದವರು ಮಂತ್ರಿಮಂಡಲದ ಸದಸ್ಯರಾದರು. ವೈಸ್‌ರಾಯರು ಸರ್ಕಾರದ ಪ್ರಮುಖರಾದರೂ ಭಾರತೀಯರ ಕೈಗೆ ಸಾಕಷ್ಟು ಅಧಿಕಾರ ಲಭ್ಯವಾಯಿತು. ಎಂದಿನಂತೆ ಗಫಾರ್‌ಖಾನರು ಯಾವ ಅಧಿಕಾರ ಸ್ಥಾನವನ್ನೂ ಬಯಸದೆ ಮತ್ತೆ ಗಡಿನಾಡಿನ ಹಳ್ಳಿಹಳ್ಳಿಗಳಲ್ಲಿ ಸೇವೆ ಮಾಡುತ್ತಾ ನಿಂತರು. ನಮ್ಮದೇ ಸರ್ಕಾರ ಬಂದಿರುವುದರಿಂದ ತಮ್ಮ ಪ್ರಾಂತದ ಕಡು ಬಡತನ ನಿವಾರಣೆಗಾಗಿ ಏನಾದರೂ ಕ್ರಮಕೈಗೊಳ್ಳಬೇಕೆಂದು. ಗಡಿನಾಡಿನ ಪ್ರದೇಶದಲ್ಲಿ ಸಂಚರಿಸಿ ಪ್ರತ್ಯಕ್ಷ ಅನುಭವ ಪಡೆಯಬೇಕೆಂದು ಜವಾಹರಲಾಲರನ್ನು ಕೇಳಿಕೊಂಡರು. ಜವಾಹರಲಾಲರೂ ಒಪ್ಪಿ ಗಡಿನಾಡು ಪ್ರಾಂತದ ಪ್ರವಾಸಕೈಗೊಳ್ಳಲು ತೀರ್ಮಾನಿಸಿದರು.

ವೈಸ್‌ರಾಯರು ಸುಲಭವಾಗಿ ಈ ಪ್ರವಾಸಕ್ಕೆ ಅನುಮತಿ ನೀಡಲಿಲ್ಲ. ನೆಹರು ಹಠಹಿಡಿದರು. ಗಡಿನಾಡಿನ ಗೌರ್ನರಾಗಿದ್ದ ಸರ್ ಒಲಾಫ್ ಕೇರೋ ದೆಹಲಿಗೆ ಧಾವಿಸಿ ಬಂದು ಈ ಪ್ರವಾಸ ರದ್ದು ಗೊಳಿಸಲು ಪ್ರಯತ್ನಿಸಿದರು. ಏನೇನೋ ನೆಪಗಳನ್ನು ಒಡ್ಡಿದರು. ಜವಾಹರಲಾಲರೆಂದರು, "ನಾನು ಗಫಾರ್‌ಖಾನರಿಗೆ ಮಾತು ಕೊಟ್ಟಿದ್ದೇನೆ. ಅಲ್ಲಿಗೆ ಹೋಗಿಯೇ ತೀರುತ್ತೇನೆ." ಅಧಿಕಾರಿಗಳು ನಿರುಪಾಯರಾದರು. ಆದರೆ ಆ ಪ್ರಾಂತದ ಮುಸಲ್ಮಾನ ಮುಖಂಡರಲ್ಲಿ ಮುಸ್ಲಿಮ್ ಲೀಗ್ ಮತಾಂಧತೆಯನ್ನೆಲ್ಲ ಬಿತ್ತಿದ್ದರು. ಬೇರೆ ಬೇರೆ 'ಜಿಹಾದ್' ಗಳ [illegible]

ನೇಮಿಸಲಾಗಿದ್ದವರಿಗೆ ಸೂಚನೆಗಳು ಹೋದವು. ಅವರಲ್ಲನೇಕರು ಬ್ರಿಟಿಷ್ ಸೈನ್ಯಾಧಿಕಾರಿಗಳು. ರಕ್ಷಣಾಪಡೆಗಳವರು. ನೆಹರೂ ಪ್ರವಾಸಕ್ಕೆ ಅಡಚಣೆಗಳನ್ನೊಡ್ಡಿ ಅವರು ಜನತೆಯನ್ನು ನೇರವಾಗಿ ಸಂಪರ್ಕಿಸದಂತೆ ಪ್ರತಿಭಟನಾ ಸಭೆಗಳನ್ನವರು ಪ್ರೋತ್ಸಾಹಿಸಿದರು. ಗಡಿನಾಡು ಪ್ರಾಂತದ ಮುಖ್ಯ ಮಂತ್ರಿಯಾಗಿ ಡಾ॥ ಖಾನ್‌ಸಾಹೇಬರೇ ಜೊತೆಯಲ್ಲಿದ್ದರೂ ಅನೇಕ ಕಡೆ ಗೂಂಡಾಗಳನ್ನು ಕೂಡಿಸಿ ಗಲಭೆಗಳನ್ನು ಮಾಡಿಸಲು ಬ್ರಿಟಿಷರೂ ಅವರ ದಲ್ಲಾಳಿಗಳೂ ಪ್ರಯತ್ನಿಸಿದರು. ಷೇಕ್‌ಮಹಬೂಬ್ ಅಲಿ ಎಂಬ ರಾಜಕೀಯ ಏಜೆಂಟ್ ಮತ್ತು ಮಂದಾನ್ ಎಂಬಲ್ಲಿದ್ದ ಜಿಲ್ಲಾಧಿಕಾರಿ ಕರ್ಟಿಸ್ ಇಬ್ಬರೂ ಸೇರಿ ಖಿತೂರಿವಾದಿ ದೊಡ್ಡ ಜನರ ಗುಂಪು ಕಲ್ಲು – ದೊಣ್ಣೆಗಳೊಡನೆ ನೆಹರೂ ಅವರ ಮೇಲೆ ಎರಗಿ ಬರುವಂತೆ ಏರ್ಪಡಿಸಿದರು. ಕೇಂದ್ರ ಮಂತ್ರಿಗಳಾದರೂ ನೆಹರೂ ಅವರ ಅಧಿಕಾರ ಸ್ಥಾನಕ್ಕೆ ಅಲ್ಲಿನ ಚಿಲ್ಲರೆ ಅಧಿಕಾರಿಗಳು ಗೌರವಕೊಡಲೇ ಇಲ್ಲ. ಕಲ್ಲಿನ ಸುರಿಮಳೆಯಾಗಿ ನೆಹರು ಜೊತೆಯಲ್ಲಿದ್ದ ಗಫಾರ್‌ಖಾನರಿಗೆ ಬಲವಾದ ಪೆಟ್ಟು ತಗಲಿತು. ಡಾ॥ ಖಾನ್‌ಸಾಹೇಬರಿಗೆ ತಡೆಯಲಾಗಲಿಲ್ಲ. ವಾಹನದಿಂದ ಧುಮುಕಿ ಬಂದು ಒಂದು ರಿವಾಲ್ವರ್ ಒಡಿದು ಗುಂಪಿನ ಕಡೆ ನಿರ್ಭಯವಾಗಿ ನುಗ್ಗಿದರು. ಗುಂಪು ಹೆದರಿ ಓಡಿಹೋಯಿತು. ಈ ಪ್ರವಾಸದಲ್ಲಿ ಹತ್ತು ಹದಿನಾರು ಕಡೆ ಇಂಥ ವಿರೋಧ ಪ್ರದರ್ಶನಗಳನ್ನೇರ್ಪಡಿಸಿ ಗಫಾರ್‌ಖಾನರ ಮುಖಕ್ಕೆ ಮಸಿ ಬಳಿಯಲು ಮುಸ್ಲಿಮ್ ಲೀಗ್ ಮತ್ತು ಬ್ರಿಟಿಷ್ ಅಧಿಕಾರಿಗಳು ಪ್ರಯತ್ನಿಸಿದರು. ಸಾವಿರಾರು ಖುದಾಯಿ ಖಿದ್‌ಮತ್‌ಗಾರರನ್ನು ಸದೆಬಡಿದರು. ಆದರೂ ಗ್ರಾಮ ಗ್ರಾಮಗಳಲ್ಲಿ ಆ ಮುಗ್ಧ ಜನ ಗಫಾರ್‌ಖಾನರನ್ನೂ ನೆಹರೂ ಅವರನ್ನೂ ಆದರದಿಂದಕಂಡು ತಮ್ಮ ಒಳಿನ ಸ್ಥಿತಿಯನ್ನು ಬಿಂಬಿಸಿದರು. ಬಹುಸಂಖ್ಯಾತ ಮುಸ್ಲಿಮ್ ಪ್ರದೇಶಗಳಲ್ಲೆಲ್ಲಾ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಮುಸಲ್ಮಾನರು ಬೆಂಬಲ ಕೊಡದಂತೆ ತಡೆಯಲು ಪ್ರತಿಗಾಮೀ ಶಕ್ತಿಗಳೆಲ್ಲ ಒಂದುಗೂಡಿದವು. ಬ್ರಿಟಿಷ್ ಅಧಿಕಾರಿಗಳಂತೂ ತಾವು ದೇಶವನ್ನು ಬಿಟ್ಟು ಹೋಗುವ ಮುನ್ನ ಅದನ್ನು ಇಬ್ಭಾಗವಾಗಿ ಒಡೆದು ಹಂಚಬೇಕೆಂದು ಮೊದಲೇ ಸಂಕಲ್ಪಿಸಿದ್ದರು.

ಈ ಮಧ್ಯೆ ೧೯೪೫ ರಲ್ಲಿ ಜೈಲಿನಿಂದ ಹೊರ ಬಂದೊಡನೆ ಖಾನ್

ಅಬ್ದುಲ್ ಗಫಾರ್‌ಖಾನರು ಆರೋಗ್ಯ ಸುಧಾರಣೆಗಾಗಿ ಬೊಂಬಾಯಿಗೆ ಹೋದರು. ಆಗ ಅಲ್ಲಿ ಗಾಂಧೀಜಿ ಬಿರ್ಲಾರವರ ಅತಿಥಿಯಾಗಿ ಬಿಡಾರ ಮಾಡಿದ್ದರು. ಅವರೂ ಖಾನರನ್ನು ತಮ್ಮೊಡನಿರಲು ಪ್ರೀತಿಯಿಂದ ಆಹ್ವಾನಿಸಿದ್ದರು. ಈ ಸಮಯದಲ್ಲಿ ಈ ಇಬ್ಬರು ಗಾಂಧೀಗಳೂ ದೇಶದ ಗಂಭೀರ ಪರಿಸ್ಥಿತಿಯನ್ನು, ಅಹಿಂಸಾ ಸಂಸ್ಕೃತಿಯ ಪ್ರಗತಿಯನ್ನು ಆತ್ಮೀಯವಾಗಿ ಚರ್ಚಿಸಿದರು. ೧೯೪೨ ರ ಚಳುವಳಿಯಲ್ಲಿ ಎಲ್ಲ ಕಡೆಗಿಂತ ಪಠಾಣ ಸ್ವಯಂಸೇವಕರು ಗಡಿನಾಡಿನಲ್ಲಿ ನಡೆಸಿದ ಹೋರಾಟ ಅತ್ಯಂತ ಅಹಿಂಸಕ ಸಮರವೆನಿಸಿತ್ತು. ಭಾರತದ ಇತರ ಭಾಗಗಳಲ್ಲಿ ಗಾಂಧೀಜಿ ದೀರ್ಘಕಾಲದಿಂದ ತಾವೇ ನೇತೃತ್ವ ವಹಿಸಿ ಅಹಿಂಸಾ ಸಮರವ ಶಿಕ್ಷಣ ಕೊಡುತ್ತಿದ್ದರು. ಖಾನರು ಗಾಂಧೀಜಿಯನ್ನು ಕುರಿತು ಕೇಳಿದರು, "ಹೀಗೇಕೆ? ಅಷ್ಟು ದೀರ್ಘಕಾಲವಲ್ಲದಿದ್ದರೂ, ಪ್ರತ್ಯಕ್ಷ ಗುರುವಿಲ್ಲದಿದ್ದರೂ ಪಠಾಣರು ಅಹಿಂಸಾ ಧರ್ಮವನ್ನು ಅರಗಿಸಿಕೊಂಡಿದ್ದಾರಲ್ಲ! ಅತ್ಯಂತ ಘೋರ ದಬ್ಬಾಳಿಕೆಯನ್ನೆದುರಿಸಿ ಬ್ರಿಟಿಷರ ಕ್ರೂರ ಹಿಂಸೆಗಳಿಗೊಳಗಾದರೂ ಈ ಪಠಾಣ ಸತ್ಯಾಗ್ರಹಿಗಳು ಒಂದು ಸಾರಿಯೂ ಪ್ರತಿಹಿಂಸೆಗೆ ಕೈಹಾಕಲಿಲ್ಲ. ತಮ್ಮಲ್ಲಿ ಆಯುಧಗಳಿದ್ದೂ ತಾವು ಹುಟ್ಟು ವೀರ ಸೈನಿಕರಾದರೂ ಎದುರಾಳಿಯನ್ನು ಹಿಂಸಿಸಲಿಲ್ಲ."

ಗಾಂಧೀಜಿಯ ಉತ್ತರ ನೇರವಾಗಿತ್ತು:

> "ಅಹಿಂಸಾ ಧರ್ಮ ಹೇಡಿಗಳಿಗಲ್ಲ. ಅದು ವೀರರ ಗುಣ. ಧೈರ್ಯಶಾಲಿಗಳಿಗೆ ಮಾತ್ರ ಸಾಧ್ಯ. ಪಠಾಣರು ಇತರ ಭಾರತೀಯರಿಗಿಂತ ಹೆಚ್ಚು ಧೈರ್ಯಶಾಲಿಗಳು, ವೀರರು. ಆದ್ದರಿಂದಲೇ ಅವರು ಉತ್ತಮ ಅಹಿಂಸಾವಾದಿಗಳೂ ಆಗಲು ಸಾಧ್ಯವಾಯಿತು."

ಆತ್ಮಕಥೆಯಲ್ಲಿ ಇದನ್ನು ಸ್ಮರಿಸುತ್ತಾ ಖಾನರು, "ನನ್ನ ಧರ್ಮ ಬೋಧೆ ಇದನ್ನೇ ದೃಢೀಕರಿಸುತ್ತದೆ. ಪ್ರೇಮ ಸೌಹಾರ್ದಗಳೇ ಧರ್ಮ. ಸೇಡು ದ್ವೇಷಗಳನ್ನು ತುಂಬಿಕೊಂಡವರು ಧರ್ಮದ ಮರ್ಮವನ್ನೆಂದೂ ಅರಿತುಕೊಳ್ಳಲಾರರು" ಎಂದಿದ್ದಾರೆ.

೧೬. ದ್ವೇಷದ ಕಾಡ್ಗಿಚ್ಚು ಹಬ್ಬಿತು

ಬ್ರಿಟಿಷ್ ಮಂತ್ರಿಮಂಡಲ ನಿಯೋಗ ಯಾವ ಒಪ್ಪಂದವನ್ನೂ ತೀರ್ಮಾನಿಸದೆ ಹಿಂತಿರುಗಿತು. ಬ್ರಿಟಿಷ್ ಪ್ರಧಾನಿ ಲಾರ್ಡ್ ಅಟ್ಲೀ ಅಲ್ಲಿನ ಲೋಕಸಭೆಯಲ್ಲಿ ಈ ಬಗ್ಗೆ ಒಂದು ಹೇಳಿಕೆ ನೀಡಿದರು: "ನಾವು ಭಾರತವನ್ನು ಯಾರ ಕೈಗೆ ಹೇಗೆ ಹಸ್ತಾಂತರ ಮಾಡಬೇಕೆಂಬ ಬಗ್ಗೆ ತೀರ್ಮಾನಿಸಬೇಕಾಗಿದೆ. ಮುಂದೆ ರಚಿಸಲಾಗುವ ರಾಜ್ಯಾಂಗ ಸಭೆಯಲ್ಲಿ ಯಾವ ಯಾವ ಪ್ರಾಂತಗಳ ಪ್ರತಿನಿಧಿಗಳು ಯೋಗ್ಯ ಪ್ರಮಾಣದಲ್ಲಿರುವುದಿಲ್ಲವೋ ಅಂಥ ಪ್ರದೇಶಗಳಲ್ಲಿ ಈಗ ಅಲ್ಲಿ ರಚಿತವಾಗಿರುವ ಪ್ರಾಂತೀಯ ಸರ್ಕಾರಗಳ ಆಧಾರದ ಮೇಲೆಯೇ ಸ್ವತಂತ್ರ ಭಾರತಕ್ಕೆ ಅಧಿಕಾರ ವಹಿಸಿಕೊಡಲಾಗುವುದು" ಎಂದರು.

ಇದರಿಂದ ಗಡಿನಾಡು ಪ್ರಾಂತದ ಅಧಿಕಾರವನ್ನು ಆಗ ಅಸ್ತಿತ್ವದಲ್ಲಿದ್ದ ಡಾ|| ಖಾನ್‌ಸಾಹೇಬರ ಮಂತ್ರಿಮಂಡಲಕ್ಕೆ ಒಪ್ಪಿಸಬೇಕೆಂದು ನಿರ್ಣಯವಾದಂತಾಯಿತು. ಈ ಸೂಚನೆ 'ಇಬ್ಭಾಗವಾದಿ' ಗಳಿಗೆ ಸಹಿಸದಾಯಿತು. ಇದನ್ನು ಬುಡಮೇಲು ಮಾಡಬೇಕೆಂದು ಮುಸ್ಲಿಮ್ ಲೀಗ್ ಮುಖಂಡರು ಹಠತೊಟ್ಟರು. ಈ ಹಿಂದೆಯೇ ಮುಸ್ಲಿಮ್ ಲೀಗಿನ ಆಡಳಿತ ಪ್ರದೇಶಗಳಲ್ಲಿ ಘೋಷಿಸಲಾಗಿದ್ದ 'ನೇರ ಪ್ರತಿಭಟನೆ' (ಡೈರೆಕ್ಟ್ ಆಕ್ಷನ್) ಗಡಿನಾಡಿನಲ್ಲಿ ಅತ್ಯಂತ ಕ್ರೂರ ರೀತಿಯಲ್ಲಿ ಪ್ರಾರಂಭವಾಯಿತು. ಹಿಂದೂಗಳು, ಸಿಖ್ಖರು ಮತ್ತು ಇತರ ಮತಾನುಯಾಯಿಗಳ ಮೇಲಲ್ಲದೆ ಕಾಂಗ್ರೆಸ್ಸಿನ ಪರವಾಗಿದ್ದ ಎಲ್ಲ ಮುಸ್ಲಿಮರ ಮೇಲೂ ಕಟ್ಟಾಸಂಪ್ರದಾಯವಾದೀ ಇಸ್ಲಾಮ್ ಮುಖಂಡರ ದ್ವೇಷದ ಕಾಡ್ಗಿಚ್ಚು ಹಬ್ಬಿನಿಂತಿತು. ಅಸ್ಸಾಮ್, ಬಂಗಾಳ, ಪಂಜಾಬುಗಳಲ್ಲಿ ಕಂಡ ವಿಧ್ವಂಸಕ

ಜಾತೀಯ ದಂಗೆಗಳು ಸಾವಿರಾರು ನಿರಪರಾಧಿ ಮುಗ್ಧ ಗ್ರಾಮಸ್ಥರನ್ನು ಬಲಿತೆಗೆದುಕೊಂಡಿತು. ಬ್ರಿಟಿಷ್ ಅಧಿಕಾರಿ ವರ್ಗ ಈ ದ್ವೇಷಕ್ಕೆ ಎಣ್ಣೆ ಸುರಿಯಿತು.

೧೯೪೭ ರಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್ ಭಾರತದ ವೈಸರಾಯರಾಗಿ ನೇಮಿತರಾದರು. ಬಂದೊಡನೆ ಅವರು ಭಾರತವನ್ನು ಇಬ್ಭಾಗ ಮಾಡುವ ಯೋಜನೆಯನ್ನು ತೀರ್ಮಾನ ಮಾಡಿಕೊಂಡೇ ಬಂದಿದ್ದರು. ಮುಸ್ಲಿಮ್ ಬಹು ಸಂಖ್ಯಾ ಬಲವುಳ್ಳ ಪ್ರಾಂತಗಳ ಭವಿಷ್ಯವನ್ನು ಏಕಮುಖವಾಗಿ ಮುಸ್ಲಿಮ್ ಲೀಗ್ ತೀರ್ಮಾನಿಸುವುದೆಂದೂ ಮಿಕ್ಕ ಭಾರತ ಪ್ರದೇಶ ಕಾಂಗ್ರೆಸ್ಸಿನ ಸಲಹೆಯಂತೆ ಸ್ವತಂತ್ರ ರಾಷ್ಟ್ರಪೀಠಕ್ಕೆ ಒಳಪಡಬಹುದೆಂದೂ ಮೌಂಟ್‌ಬ್ಯಾಟನ್ನರು ವಾದ ಮಾಡಿದರು. ಅರ್ಧ ಪಂಜಾಬು, ಅರ್ಧ ಬಂಗಾಳ, ಸಿಂಧ್, ಬಲೂಚಿಸ್ತಾನಗಳನ್ನು ಪ್ರತ್ಯೇಕಿಸಲಾಯಿತು. ಅವುಗಳಲ್ಲಿನ ಮುಸ್ಲಿಮೇತರ ಪ್ರಜೆಗಳು ಅನಿವಾರ್ಯವಾಗಿ ಮುಸ್ಲಿಮ್ ಲೀಗನ್ನು ತಮ್ಮ ಪ್ರತಿನಿಧಿ ಸಂಸ್ಥೆ ಎಂದು ಅಂಗೀಕರಿಸಬೇಕಾಯಿತು. ಗಡಿನಾಡು ಪ್ರಾಂತದ ಸ್ಥಿತಿ ಬೇರೆಯಾಗಿತ್ತು. ಜನಸಂಖ್ಯೆಯ ಬಹುಭಾಗ ಮುಸ್ಲಿಮರಾಗಿದ್ದರು. ಆದರೆ ೧೯೪೬ ರ ಚುನಾವಣೆಯಲ್ಲಿ ಅಲ್ಲಿನ ಐವತ್ತು ಸದಸ್ಯರ ವಿಧಾನ ಸಭೆಯಲ್ಲಿ ೩೨ ಸ್ಥಾನಗಳು ಕಾಂಗ್ರೆಸ್‌ಗೆ ದೊರಕಿದ್ದವು. ಆಗಿನ ಪ್ರತ್ಯೇಕ ಮತದಾನ ಪದ್ಧತಿಯಲ್ಲಿಯೂ ಮೂವತ್ತೆಂಟು ಮುಸಲ್ಮಾನ ಪ್ರತಿನಿಧಿಗಳಲ್ಲಿ ೨೧ ಜನ ಕಾಂಗ್ರೆಸ್ಸಿನವರು. ಒಂಭತ್ತು ಹಿಂದೂ ಪ್ರತಿನಿಧಿಗಳೂ, ಇಬ್ಬರು ಸಿಖ್ಖ ಪ್ರತಿನಿಧಿಗಳೂ ಕಾಂಗ್ರೆಸ್ಸಿಗರೇ ಆಗಿದ್ದರು. ಹೀಗೆ ಮುಸ್ಲಿಮ್ ಲೀಗಿನ ಇಬ್ಭಾಗ ಯೋಜನೆಗೆ ಇವರೆಲ್ಲರೂ ವಿರೋಧ ವಾಗಿಯೇ ಇದ್ದರು. ಬಹಳ ಹೇಳಿ ಈ ಸ್ವಯಮಾಡಳಿತ ಪ್ರದೇಶದ ಅಭಿಪ್ರಾಯ ಕೇಳದೆ ದೇಶ ವಿಭಜನೆಗೆ ವಿರೋಧವಾಗಿದೆ ಎಂದು ಬ್ರಿಟಿಷರೂ ಮುಸ್ಲಿಮ್ ಲೀಗಿನವರೂ ಅಲ್ಲಿನ ರಾಷ್ಟ್ರೀಯ ಮನೋ ಭಾವದ ಮುಸ್ಲಿಮರನ್ನೂ ಮುಸ್ಲಿಮ್ ಲೀಗನ್ನಂಗೀಕರಿಸಬೇಕೆಂಬ ಪ್ರಚಾರ ದಲ್ಲಿ ತೊಡಗಿದರು. ಖಾನ್ ಅಬ್ದುಲ್ ಗಫಾರ್ ಖಾನರನ್ನು, ಅವರ ಸೋದರ ಮುಖ್ಯ ಮಂತ್ರಿ ಡಾ. ಖಾನ್ ಸಾಹೇಬರನ್ನೂ ಪಖ್ತೂನ್ಯದ ಬಲವಾದ ಪ್ರಗತಿಗಾಮಿ ರಾಜಕೀಯ ಶಕ್ತಿಗಳನ್ನು ಧ್ವಂಸಮಾಡಬೇಕೆಂದ

ಗಿವರು. ಅವರ ಮುಂದೆ ಎರಡೇ ಆಯ್ಕೆ ಮಂಡಿಸಿದರು. ಪಾಕಿಸ್ತಾನಕ್ಕೆ ಸೇರುವಿರೋ ಭಾರತಕ್ಕೆ ಸೇರುವಿರೋ ? ಈ ಜನಾಭಿಪ್ರಾಯ ಸಂಗ್ರಹದಲ್ಲಿ ಬ್ರಿಟಿಷ್ ಅಧಿಕಾರಿಗಳ ಮತ್ತು ಕಟ್ಟಾ ಪಾಕಿಸ್ತಾನವಾದಿಗಳ ಕೈವಾಡ ಪ್ರಬಲವಾಯಿತು. ಖುದಾಯಿ ಖಿದ್‌ಮತ್‌ಗಾರರ ಮೇಲೂ ಅವರ ಬೆಂಬಲಿಗರ ಮೇಲೂ ಬಲಾತ್ಕಾರದ ಒತ್ತಡಗಳು ಹೆಚ್ಚಾದವು. ಅಲ್ಲಲ್ಲಿ ಹಿಂಸಾತ್ಮಕ ಘರ್ಷಣೆಗಳಾಗಿ ಅನೇಕ 'ಜಿರ್ಗಾ' ಗಳಲ್ಲಿ ಸಾವಿರಾರು ನಿರಪರಾಧಿಗಳನ್ನು ಕೊಲ್ಲಲಾಯಿತು. ಭಯೋತ್ಪಾದಕತೆಯ ರಾಜಕೀಯ ಕುಟಿಲತೆ ಮೊದಲು ಪ್ರಾರಂಭವಾದುದು ಈ ಪ್ರದೇಶದಲ್ಲೇ.

ಕಲ್ಕತ್ತೆಯಲ್ಲಿ ಮುಸ್ಲಿಮ್ ಲೀಗಿನ ಸುಹ್ರವರ್ದಿ ಅವರು ಮುಖ್ಯಮಂತ್ರಿಯಾಗಿದ್ದರು. 'ನೇರ ಪ್ರತಿಭಟನೆ' ಕಾಲಕ್ಕೆ ಅವರು ಸಾವಿರಾರು ಮುಸ್ಲಿಮರನ್ನು ಪ್ರೇರೇಪಿಸಿ ಹಿಂದೂಗಳ ಮೇಲೆ ದಾಳಿಗೆ ಕಾರಣರಾದರು. ಜನರು ಹುಚ್ಚೆದ್ದು ಹೋರಾಡಿ ಹತರಾಗುತ್ತಿದ್ದ ದೃಶ್ಯ ಸಹಿಸಲಸಾಧ್ಯವಾಯಿತು. ಹಿಂದೂ ಜಾತೀಯ ಸಂಸ್ಥೆಗಳು ದ್ವೇಷದಿಂದ ಕಿಚ್ಚು ಹರಡಿ ಸಾವಿರಾರು ಮುಸ್ಲಿಮ್ ನಿರಪರಾಧಿಗಳನ್ನು ಕ್ರೂರವಾಗಿ ಕೊಲೆ ಮಾಡಿಬಿಟ್ಟವು. ಪೂರ್ವ ಬಂಗಾಳದ ಮುಸ್ಲಿಮ್ ಬಹು ಸಂಖ್ಯಾತ ಹಳ್ಳಿಗಳಲ್ಲಿ ಮುಸ್ಲಿಮರು ದಂಗೆಯೆದ್ದರು. ಗಫಾರ್‌ಖಾನರು ಕಣ್ಣೀರಿಟ್ಟರು. "ಮಾನವೀಯ ಪ್ರಜ್ಞೆಯುಳ್ಳ ಯಾವುದೇ ಮನುಷ್ಯ ಈ ಅಮಾನುಷ ಕೊಲೆ, ಅತ್ಯಾಚಾರ, ಭಯಂಕರ ಹಿಂಸೆಗಳನ್ನು ಕಂಡು ನಾಚಿಕೆಯಿಂದ ತಲೆ ತಗ್ಗಿಸಬೇಕಾಯಿತು" ಎಂದರು. ಎಲ್ಲೆಲ್ಲಿ ಒಂದು ಜಾತಿಯವರು ಅಲ್ಪಸಂಖ್ಯಾತರಾಗಿದ್ದರೋ ಅವರು ದಿಕ್ಕಾಪಾಲಾಗಿ ತಮ್ಮ ಮನೆಮಠಗಳನ್ನು ತ್ಯಜಿಸಿ ಅವರ ಜಾತಿ ಪ್ರಾಬಲ್ಯದ ಪ್ರದೇಶಗಳಿಗೆ ಓಡಿದ ಕರುಣಾಜನಕ ಘಟನೆ ಮನುಷ್ಯ ಜಾತಿಗೇ ಕಳಂಕವೆನಿಸಿತು. ಲಕ್ಷಾಂತರ ಜನ ಯಾವ ಕಾರಣವೂ ಇಲ್ಲದೆ ಪಾತಕಿಗಳ ಕೊಲೆಗಡುಕತನಕ್ಕೆ ಬಲಿಯಾದರು. ನವಖಲಿ ಜಿಲ್ಲೆಯಲ್ಲಿ ಈ ದುರಂತ ಅತ್ಯಂತ ಘೋರವಾಗಿತ್ತು. ಹಿಂದೂಗಳನ್ನು ನಾಯಿಗಳಂತೆ ಸದೆ ಬಡಿದರು. ಗತ ಇತಿಹಾಸದ ಚಂಗೀಸ್ ಖಾನನನ್ನೂ ನಾಚಿಸುವ ಅಮಾನುಷತೆ ಎಲ್ಲೆಲ್ಲೂ ತಾಂಡವವಾಡತೊಡಗಿತು. ಸರ್ಕಾರಗಳು ನಿಷ್ಕ್ರಿಯವಾದವು ಅಥವಾ ಬೆಂಬಲಿಗಳಾದವು.

ಬಿಹಾರದಲ್ಲಿ ಹಿಂದೂಗಳು ದ್ವೇಷದ ಕಾಡ್ಗಿಚ್ಚನ್ನು ಹೊತ್ತಿಸಿ ಮುಸ್ಲಿಮರ ಮೇಲೆ ಕ್ರೂರ ದಾಳಿಗಳಿಗೆ ಪ್ರಾರಂಭಿಸಿದರು. ಎಲ್ಲೆಲ್ಲೂ ಹಾಹಾಕಾರ ಹಬ್ಬಿತು. ಪೂರ್ವ ಮತ್ತು ಪಶ್ಚಿಮಗಳಲ್ಲಿನ ಪ್ರಾಂತಗಳಲ್ಲಿ ಗ್ರಾಮ ಗ್ರಾಮಗಳು ಹತ್ತಿ ಉರಿದವು. ಮಹಿಳೆಯರ ಮೇಲೆ ಅತ್ಯಾಚಾರ, ಮಕ್ಕಳ ಕಗ್ಗೊಲೆ, ನಿರಪರಾಧಿಗಳನ್ನು ಇರಿದು ಕೊಲ್ಲುವುದು, ಗೂಂಡಾ ದಾಳಿಗಳ ವಿಧ್ವಂಸಕ ಕೃತ್ಯಗಳು ದಿನದಿನವೂ ಹೆಚ್ಚಾಗತೊಡಗಿತು. ಪಂಜಾಬಿನಿಂದ ಸಿಖ್ಖರೂ ಹಿಂದುಗಳೂ ಲಕ್ಷಲಕ್ಷ ಸಂಖ್ಯೆಯಲ್ಲಿ ನಿರಾಶ್ರಿತರಾಗಿ ಪೂರ್ವಕ್ಕೂ ಮುಸ್ಲಿಮರು ಪಶ್ಚಿಮಕ್ಕೂ ದಾಂಗಾಂದ ಓಡಿ ಹೋದರು. ಪೂರ್ವ ಬಂಗಾಳದಿಂದ ಹಿಂದೂಗಳೂ ಬಿಹಾರದಿಂದ ಮುಸ್ಲಿಮರೂ ಅದೇ ರೀತಿ ನಿರಾಶ್ರಿತ ಶಿಬಿರಗಳ ಆಶ್ರಯ ಪಡೆಯಬೇಕಾಯಿತು. ದೇಶಕ್ಕೆ ದೇಶವೇ ಈ ರಕ್ತದ ಕಡಲಿನಲ್ಲಿ ಮುಳುಗಿತು. ಉತ್ತರ ಭಾರತವೆಲ್ಲ ಕಣ್ಣೀರಿನ ಪ್ರವಾಹದಲ್ಲಿ ತೊಯ್ದು ಹೋಯಿತು. ಸೂಕ್ಷ್ಮ ಸಂವೇದನೆಯ ಮುಸ್ಲಿಮರೂ ಹಿಂದೂಗಳೂ ಸಿಖ್ಖರೂ ಈ ಭಯೋತ್ಪಾದಕರ ಸಂಘರ್ಷಗಳನ್ನು ಸಹಿಸಲಾರದೆ ದೂರ ದೂರಕ್ಕೆ ವಲಸೆ ಹೋದರು. ಉದ್ದೇಶಪೂರ್ವಕವಾಗಿಯೇ ಎಬ್ಬಿಸಿದ್ದ ಈ ದಂಗೆಗಳಿಂದ ಮುಸ್ಲಿಮ್ ಲೀಗ್ ತನ್ನ ವಿಭಜನೆಯ ಬೇಡಿಕೆಗೆ ಪ್ರಬಲವಾದ ಕಾರಣ ಸಿಕ್ಕಿತೆಂದು ಎಲ್ಲ ಸಂಧಾನ ಸೂತ್ರಗಳನ್ನು ಮುರಿದು ಎರಡೇ ಒತ್ತಾಯಗಳನ್ನು ಮುಂದೊಡ್ಡಿತು. ಬ್ರಿಟಿಷರು ಇದ್ದು ಮುಸ್ಲಿಮರನ್ನು ರಕ್ಷಣೆ ಮಾಡಬೇಕು ಅಥವಾ ಮುಸ್ಲಿಮ್ ಇಂಡಿಯಾವನ್ನು ಪ್ರತ್ಯೇಕಿಸಿ ಮುಸ್ಲಿಮ್ ಲೀಗಿಗೆ ವಹಿಸಬೇಕು ಎಂದು ವಾದಿಸಿದರು. ಇಡೀ ದೇಶದ ಮೇಲೆ ತಮ್ಮ ನಿರಂಕುಶಾಧಿಕಾರ ಇರಬೇಕೆಂಬ ದುರಾಸೆಯಿಂದ ಇಂಗ್ಲೀಷರು ಈ ಹಿಂದೆ ಮೊಗಲ ಸಾಮ್ರಾಜ್ಯದಿಂದ ಭಾರತವನ್ನು ಕಸಿದು ಕೊಂಡಿದ್ದ ಹಾಗೆಯೇ ಈಗ ಮುಸ್ಲಿಮ್ ಸಾಮ್ರಾಜ್ಯಕ್ಕೆ ಅದನ್ನು ಒಪ್ಪಿಸಿ ಹೋಗಬೇಕೆಂದು ವಾದಿಸಿದವರೂ ಇದ್ದರು.

ಈ ದಾಯಾದಿ ಯುದ್ಧದ ಜ್ವಾಲೆ ಹಬ್ಬಿದಾಗ ಬ್ರಿಟನ್ನರದೇ ಮೇಲುಗೈಯಾಯಿತು. ಆದರೆ ಇಡೀ ದೇಶವನ್ನು ವಿಭಜಿಸಿಕೊಡಬೇಕೆಂದೂ ತಾವು ಹಿಂದೂ ಮುಸಲ್ಮಾನರನ್ನು ನಂಬುವುದು ಸಾಧ್ಯವಿಲ್ಲ

ವೆಂದೂ ಜಿನ್ನಾರವರು ಹಠತೊಟ್ಟರು. ಗಫಾರ್‌ಖಾನರೂ ಗಾಂಧೀಜಿಯೂ ಅನೇಕ ಪರ್ಯಾಯ ಪರಿಹಾರ ಮಾರ್ಗಗಳನ್ನು ಸೂಚಿಸಿದರೂ ಮುಸ್ಲಿಮ್ ಲೀಗ್ ಒಪ್ಪಲೇ ಇಲ್ಲ. ಕೊನೆಗೆ ಮಧ್ಯವರ್ತೀ ಸರ್ಕಾರವನ್ನು ಭಾರತೀಯರೇ ಆದ ಜಿನ್ನಾರವರೇ ರಚಿಸುವ ಅಧಿಕಾರ ಪಡೆಯಬೇಕೆಂದೂ ಅವರ ತೀರ್ಮಾನಗಳನ್ನು ಕಾಂಗ್ರೆಸ್ ಗೌರವಿಸಬೇಕೆಂದೂ ಈ ಕಾರ್ಯದಲ್ಲಿ ಬ್ರಿಟಿಷರ ಅಧಿಕಾರ ಎಳ್ಳಷ್ಟೂ ಇರಬಾರದೆಂದೂ ಗಾಂಧೀಜಿ ಸಲಹೆ ಮಾಡಿದರು. ಗಫಾರ್‌ಖಾನರೂ ಇದಕ್ಕೆ ಒಪ್ಪಿದರು. ದೇಶಕ್ಕೆಲ್ಲ ಅನ್ವಯಿಸುವಂತೆ ಒಂದೇ ರಾಜ್ಯಾಂಗದ ರಚನಾಸಭೆಗೆ ಸ್ವತಂತ್ರ ಭಾರತದ ರಾಜಕೀಯ ನಕ್ಷೆ ತಯಾರಿಸುವ ಸಂಪೂರ್ಣ ಅಧಿಕಾರಕೊಡಲು ವಾದಿಸಿದರು. ಜಿನ್ನಾರವರು ತಮ್ಮ ಪಾಕಿಸ್ತಾನ ಸಲಹೆಯನ್ನು ತರ್ಕಬದ್ಧವಾಗಿ ಈ ರಾಜ್ಯಾಂಗ ಸಭೆಯಲ್ಲಿ ಮಂಡಿಸಿ ಸ್ವಾಯತ್ತತೆಯನ್ನು ರೂಪಿಸಿಕೊಳ್ಳಬಹುದೆಂದೂ ಸೂಚಿಸಿದರು. ಆದರೆ ಈ ಸಲಹೆಯನ್ನು ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್ ಎರಡೂ ಒಪ್ಪಲಿಲ್ಲ. ಗಾಂಧೀಜಿ ಜೊಡನೆ ಸಹಮತರಾಗಿ ನಿಂತವರು ಗಫಾರ್‌ಖಾನರೊಬ್ಬರೇ.

ಬಿಹಾರದಲ್ಲಿ ಅತ್ಯಂತ ಘೋರ ಘರ್ಷಣೆಗಳು ಉಂಟಾದವು. ಸಾವಿರಾರು ಮುಸ್ಲಿಮ್ ಸಂಸಾರಗಳು ಧ್ವಂಸವಾದವು. ಸೇಡಿನ ಕಿಚ್ಚು ಊಹಾತೀತ ಮಜಲುಗಳಿಗೆ ಏರಿನಿಂತಿತ್ತು. ಕೊಲೆ, ದಾಳಿ, ಅತ್ಯಾಚಾರ, ಮಾನಭಂಗಗಳಿಗೆ ಕೊನೆಯೇ ಇಲ್ಲದಂತಾಗಿತ್ತು. ಗಫಾರ್‌ಖಾನರು ಏಕೈಕ ಶಾಂತಿದೂತರಾಗಿ ನಿಂತು ಸಾಂತ್ವನಗೊಳಿಸಲು ಪ್ರಯತ್ನ ಮಾಡಿದರು. ಹಿಂದೂಗಳಿಗೆ ಅವರಲ್ಲಿ ಅಪಾರ ವಿಶ್ವಾಸವಿತ್ತು. ಅವರ ಮಾತುಗಳಿಗೆ ಬೆಲೆಕೊಟ್ಟು ನಿರಪರಾಧಿ ಮುಸ್ಲಿಮರ ಆಸ್ತಿಪಾಸ್ತಿಗಳನ್ನು ಹಿಂದೂಗಳು ಹಿಂತಿರುಗಿಸಿದರು. ಬಿಹಾರ ಸರ್ಕಾರಕ್ಕೆ ಖಾನರು ಮನವಿ ಮಾಡಿಕೊಂಡು ನೂರಾರು ನಿರಾಶ್ರಿತ ಶಿಬಿರಗಳನ್ನು ವ್ಯವಸ್ಥೆಗೊಳಿಸಿದರು. ಆದರೂ ಅಶಾಂತಿಯ ಅಲೆ ಏರುತ್ತಲೇ ಇತ್ತು.

ಗಾಂಧೀಜಿ ಆಗ ನೌಖಾಲಿಯಲ್ಲಿ ಅಲ್ಪ ಸಂಖ್ಯಾತ ಹಿಂದೂಗಳ ಮಧ್ಯೆ ಇದೇ ರೀತಿ ಧೈರ್ಯ ತುಂಬುತ್ತಾ ಮುಸ್ಲಿಮರನ್ನೂ ಸಂತೈಸುತ್ತಾ ಹಳ್ಳಿ ಹಳ್ಳಿಗೆ ಪಾದಯಾತ್ರೆ ಮಾಡುತ್ತಿದ್ದರು. ಗಫಾರ್‌ಖಾನರು ಗಾಂಧೀಜಿಗೆ ಪತ್ರ

ಬರೆದು ಬಿಹಾರಿನಲ್ಲಿ ಸಾಂತ್ವನದ ಕಾರ್ಯಕ್ಕೆ ನೆರವಾಗಲು ಕೂಡಲೇ ಬರಬೇಕೆಂದು ಬಿನ್ನವಿಸಿಕೊಂಡರು. ಗಾಂಧೀಜಿ ಬಿಹಾರಕ್ಕೆ ಬಂದಾಗ ಇಡೀ ವಾತಾವರಣ ಧಗಧಗಿಸುವ ದ್ವೇಷಕ್ಕೆ ಪಕ್ಕಾಗಿ ಎಲ್ಲೆಲ್ಲೂ ಭಯ ಆವರಿಸಿತ್ತು. ಗಫಾರ್ ಖಾನರೂ ಗಾಂಧೀಜಿಯೂ ಒಟ್ಟಿಗೆ ಗ್ರಾಮಗಳಿಗೆ ಹೋಗಿ ಶಾಂತಿ ನೆಲಸುವಂತೆ ಕೈಂಕರ್ಯಕೈಗೊಂಡರು. ಮೃದುಲಾ ಬಹೆನ್ ಜೊತೆಗೂಡಿ ಕೆಲಸ ಮಾಡಿದರು. ಯಾವ ರಕ್ಷಣೆಯನ್ನೂ ಅಂಗೀಕರಿಸದೆ ಈ ಗಾಂಧೀ ದ್ವಯರು ಆವೇಶಪೂರಿತ ಜನರ ಮಧ್ಯೆ ನಿರ್ಭಯವಾಗಿ ಓಡಾಡುತ್ತಾ, ನೊಂದವರನ್ನೂ ಸಂತೈಸುತ್ತಾ, ನಿರಾಶ್ರಿತರಿಗೆ ಅಭಯ ನೀಡಿ ಸೇವಾಕಾರ್ಯ ಕೈಗೊಳ್ಳುತ್ತಾ ದ್ವೇಷದ ದಳ್ಳುರಿಯನ್ನು ಶಮನ ಮಾಡಿದ ರೀತಿ ಒಂದು ಅಸಾಧಾರಣ ಪ್ರೇಮಯಾತ್ರೆಯಾಗಿ ಪರಿಣಮಿಸಿತು. ಅಹಿಂಸಾಪಥದ ಸತ್ವ ಪರೀಕ್ಷೆಯಲ್ಲಿ ಈ ಇಬ್ಬರು ಸಂತಪುರುಷರು ಕೀರ್ತಿವೆತ್ತ ಪವಾಡ ಪುರುಷರಾದರು. ಆತ್ಮಶಕ್ತಿಯ ಪ್ರಭಾವಕ್ಕೆ ಎಂಥ ಕ್ರೂರ ಮೃಗಶಕ್ತಿಯೂ ಮಣಿಯುತ್ತದೆಂಬ ಸತ್ಯಕ್ಕೆ ಸಾಕ್ಷಿಯಾಗಿ ಜೀವವನ್ನೇ ಪಣವಾಗಿಟ್ಟು ಅಗ್ನಿದಿವ್ಯವನ್ನು ಮೆರೆದ ಮಹಾತ್ಮರ ಈ ಶಾಂತಿ ಯಾತ್ರೆ ಲೋಕವನ್ನೇ ಬೆರಗುಗೊಳಿಸಿತು.

ಬಿಹಾರ ಶಾಂತವಾಗುತ್ತಿದ್ದಂತೆ ಪಂಜಾಬಿನಲ್ಲಿ ಗಲಭೆಗಳು ಉದ್ಭವಗೊಂಡವು. ಸಿಖ್ಖರೂ ಹಿಂದೂಗಳೂ ಭಯಂಕರ ದಾಳಿಗಳಿಗೆ ಬಲಿಯಾಗಿ ಪೂರ್ವ ಪ್ರದೇಶಗಳಿಗೆ ಓಡಿಬಂದರು. ಅನಾಯಕ ಗೂಂಡಾರಾಜ್ಯ ಎಲ್ಲೆಲ್ಲೂ ಹರಡಿ ಕಾಡಿನ ನ್ಯಾಯ ವಿಜೃಂಭಿಸಿತು. ಗಡಿನಾಡು ಪ್ರಾಂತವೂ ಈ ದಂಗೆಗಳಿಗೆ ಬಲಿಯಾಯಿತು. ಡಾ. ಖಾನ್ ಸಾಹೇಬರ ಸರ್ಕಾರದ ಮೇಲೆ ಮುಸ್ಲಿಮ್ ಲೀಗ್ ವಿಷಕಾರುತ್ತಿತ್ತು. ಖುದಾಯಿ ಖಿದ್ಮತ್ ಗಾರರು ಈ ಘರ್ಷಣೆಗಳನ್ನು ಅತ್ಯಂತ ಅಹಿಂಸಾತ್ಮಕವಾಗಿಯೇ ಎದುರಿಸಿದರು.

ಗಫಾರ್ ಖಾನರು ನೇರವಾಗಿ ಪಂಜಾಬಿಗೆ ಹೊರಟರು. ಪಂಜಾಬಿನಲ್ಲಿ ಮುಸ್ಲಿಮ್ ಲೀಗ್ ಪ್ರಬಲವಾಗಿತ್ತು. ಪಾಕಿಸ್ತಾನ ರಾಜ್ಯದಲ್ಲಿ ತಮ್ಮದೇ ಪ್ರಮುಖಪಾತ್ರ ಎಂದು ಭಾವಿಸಿ ಸಿಂಧೀಯರನ್ನೂ, ಬಲೂಚಿಗಳನ್ನೂ ಮತ್ತು ಪಠಾಣರನ್ನೂ ಮುಸ್ಲಿಮರಾದರೂ ತಮಗಿಂತ ಕೀಳೆಂದೇ ಪರಿಗ

ಜಿನ ಮುಸ್ಲಿಮ್ ನಾಯಕರು ಭಾವಿಸಿದ್ದರು. ಗಫಾರ್‌ಖಾನರಿಗೆ ಪಂಜಾಬಿನಲ್ಲಿ ಶಾಂತಿ ಕಾರ್ಯಕ್ರಮಗಳನ್ನು ಸಂಘಟಿಸುವುದು ಕಠಿಣವಾಯಿತು. ಮುಸ್ಲಿಮ್ ಸರ್ಕಾರ ಅನೇಕ ಪಟ್ಟಣಗಳಿಗೆ ಅವರ ಪ್ರವೇಶವನ್ನು ನಿಷೇಧಿಸಿತು. ಬ್ರಿಟಿಷ್ ಸರ್ಕಾರ ಅಂಥ ಆಜ್ಞೆಗಳಿಗೆಲ್ಲ ಬೆಂಬಲನೀಡಿತು.

ಈ ಸಮಯಕ್ಕೆ ವೈಸ್‌ರಾಯರ ಸಲಹೆಯ ಮೇರೆಗೆ ಗಾಂಧೀಜಿ ಮತ್ತು ಜಿನ್ನಾ ಸಾಹೇಬರು ಒಂದು ಜಂಟಿ ಹೇಳಿಕೆ ಹೊರಡಿಸಿ ಯಾವುದೇ ವಿಭಜನೆಯ ಸಂಧಾನಗಳಿಗೆ ಮುಂಚೆ ಜಾತೀಯ ಗಲಭೆ ಮತ್ತು ಘೋರ ಹಿಂಸಾಚಾರಗಳು ಸಂಪೂರ್ಣವಾಗಿ ನಿಲ್ಲಬೇಕು ಎಂದು ಮನವಿ ಮಾಡಿಕೊಂಡರು. ವೈಸ್‌ರಾಯರಿಗೆ ಗಾಂಧೀಜಿ ಪತ್ರ ಬರೆದು ಶಾಂತಿ ನೆಲೆಸುವ ಮುನ್ನ ಅವರೇನಾದರೂ ದೇಶದ ವಿಭಜನೆ ಮಾಡಿದರೆ ಅವರು ಯೋಜಿಸಿರುವ ರಾಜಕೀಯ ಒಪ್ಪಂದಗಳು ಸುಟ್ಟು ಬೂದಿಯಾದಾವು ಎಂದು ಎಚ್ಚರಿಸಿದರು. ಪಾಕಿಸ್ತಾನ ಅಥವ ಭಾರತಕ್ಕೆ ಸೇರಲು ಜನಾಭಿಪ್ರಾಯ ಸ್ಪಷ್ಟವಾಗಿ ಮೂಡಿಬರಬೇಕೆಂದು ವಾದಿಸಿದರು. ಭಾವಾವೇಶ ವಶರಾದ ಜಾತೀಯ ವಾದಿಗಳು ಜನತೆಯನ್ನು ಹುಚ್ಚೆಬ್ಬಿಸಿ ಅಶಾಂತಿಯ ಒತ್ತಡಗಳನ್ನು ನಿರ್ಮಾಣ ಮಾಡಬಾರದೆಂದು ಪ್ರಾರ್ಥಿಸಿದರು. ಆದರೆ ದಿನದಿನಕ್ಕೆ ದಾಯಾದಿ ಮತ್ಸರ ವಿಷಪೂರ್ಣವಾಗುತ್ತಲೇ ಸಾಗಿತು. ಸಾಮಾನ್ಯ ಜನ ದುರ್ಧರ ದುಃಖ ಸಂಕಟಗಳಿಗೀಡಾದರು.

ಈ ಮಧ್ಯೆ ಲಾರ್ಡ್ ಮೌಂಟ್‌ಬ್ಯಾಟನ್ನರು ಗಡಿನಾಡು ಪ್ರಾಂತಕ್ಕೆ ಭೇಟಿನೀಡಲು ನಿಶ್ಚಯಿಸಿದರು. ಅದಕ್ಕೆ ಮುನ್ನ ನೆಹರು, ಜಿನ್ನಾ ಮತ್ತು ಗಡಿನಾಡಿನ ಗೌರ್ನರ್ ಸರ್ ಒಲಾಫ್ ಕೆರೋ ಇವರುಗಳೊಡನೆ ಸಂಧಾನ ನಡೆಸಿ ಗಡಿನಾಡಿನಲ್ಲಿ ಎಲ್ಲ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ವೈಸರಾಯರು ಡಾ. ಖಾನ್‌ಸಾಹೇಬರಿಗೆ ಸೂಚಿಸಿದರು. ಮುಖ್ಯಮಂತ್ರಿಯಾಗಿ ಡಾ. ಖಾನ್‌ಸಾಹೇಬರು ಈ ಬಿಡುಗಡೆಗೆ ಆಜ್ಞೆ ಮಾಡಿದರು. ಮುಸ್ಲಿಮ್ ಲೀಗಿನ ಕಾರ್ಯಕರ್ತರಿಗೂ, ಕಾಂಗ್ರೆಸ್ಸಿನ ಖುದಾಯಿ ಖಿದ್‌ಮತ್‌ಗಾರರಿಗೂ ಮಧ್ಯೆ ಮತ್ತೆ ತೀವ್ರವಾದ ಘರ್ಷಣೆಗಳು ಪ್ರಾರಂಭವಾದವು.

ಮೌಂಟ್‌ಬ್ಯಾಟನ್ನರು ಹೋದೆಡೆಯಲ್ಲೆಲ್ಲ ಪಂಜಾಬಿನ ಮುಸ್ಲಿಮ್

ನಾಯಕರ ನೇತೃತ್ವದಲ್ಲಿ ಪಾಕಿಸ್ತಾನ ಬೇಡಿಕೆಯ ಪ್ರದರ್ಶನಗಳು ಹೆಚ್ಚಿದವು. ಹಿಂದೂಗಳೂ, ಸಿಖ್ಖರೂ ಮತ್ತು ಖುದಾಯಿ ಖಿದ್‌ಮತ್‌ಗಾರರೂ ಒಗ್ಗಟ್ಟಾಗಿ ವಿರೋಧಿಸುತ್ತಿದ್ದರು. ಡಾ. ಖಾನ್‌ಸಾಹೇಬರ ಮತ್ತು ಗಫಾರ್‌ಖಾನರ ವಿರುದ್ಧ ಮುಸ್ಲಿಮ್ ಲೀಗಿನವರು ಕ್ಷುದ್ರ ಆರೋಪಗಳನ್ನು ಮಾಡುತ್ತ ಅಪಪ್ರಚಾರವನ್ನು ಹಬ್ಬಿಸಿದರು. ಪೆಷಾವರಿನಲ್ಲಿ ಸತತವಾಗಿ ಗಲಭೆಗಳನ್ನೆಬ್ಬಿಸಿದರು. ಖಾನರಿಂದ ಇಸ್ಲಾಮ್ ಧರ್ಮ ನಾಶವಾಗುತ್ತದೆ ಎಂದು ಕೂಗಾಡಿದರು. ಕೊಲೆ, ಲೂಟಿ ಮತ್ತು ಜಾತೀಯ ದಂಗೆಗಳು ಹರಡಿದವು. ಮತಾಂತರದ ಬಲಾತ್ಕಾರದಿಂದ ನೊಂದು ಹಿಂದೂಗಳೂ, ಸಿಖ್ಖರೂ ವಲಸೆ ಹೋದರು. ಆದರೂ ಖಾನ್‌ಸಾಹೇಬರ ಮಂತ್ರಿಮಂಡಲದಲ್ಲಿ ಜನರಿಗಿದ್ದ ವಿಶ್ವಾಸವನ್ನು ಅಲುಗಿಸಲಾಗಲಿಲ್ಲ. ಅಲ್ಪ ಸಂಖ್ಯಾತರ ರಕ್ಷಣೆಗೆ ಖಾನ್ ಸಾಹೇಬರು ಮತ್ತು ಖುದಾಯಿ ಖಿದ್‌ಮತ್‌ಗಾರರು ವಿಶೇಷ ಗಮನಕೊಟ್ಟರು. ಹತ್ತು ಸಾವಿರ ಸ್ವಯಂ ಸೇವಕರು ಪೆಷಾವರಿನಲ್ಲಿ ಬಿಡಾರಮಾಡಿ ಹಿಂದೂಗಳ ರಕ್ಷಣೆಗೆ ವಚನಬದ್ಧರಾಗಿ ದುಡಿದರು. ಪಠಾಣರು ಮುಸ್ಲಿಮರಾಗಿರಬೇಕಾದರೆ ಕಾಂಗ್ರೆಸ್ಸನ್ನು ತೊರೆದು ಮುಸ್ಲಿಮ್ ಲೀಗ್‌ಗೆ ಸೇರಬೇಕೆಂಬ ಪ್ರಬಲ ಪ್ರಚಾರ ನಡೆಯಿತು. ಅಂತಃಕಲಹದ ಬೀಜಗಳನ್ನು ಬ್ರಿಟಿಷ್ ಅಧಿಕಾರಿಗಳೂ ಸಂಪ್ರದಾಯವಾದಿ ಇಮಾಮ್‌ಗಳೂ ಬಿತ್ತಿದರು. ಮೇಜರ್ ಖುರ್ಷೀದ್ ಎಂಬ ಪಂಜಾಬಿ ಮುಸ್ಲಿಮ್ ನಾಯಕ ಖಾನ್ ಸಹೋದರರ ಮೇಲೆ ಸೇಡುತೀರಿಸಿಕೊಳ್ಳುವ ಹುನ್ನಾರಹೂಡಿ ಪೇಷಾವರದ ಸೈನ್ಯಾಧಿಕಾರಿಗಳನ್ನೂ ಶ್ರೀಮಂತರನ್ನೂ ಒಳಹಾಕಿಕೊಂಡ. 'ಘಾಜಿ ಫಯ್ಯೂಜ್' ಎಂಬ ಹೊಸ ಸಂಸ್ಥೆ ಹೂಡಿ ಜಾಲಬದಕ ಖಾನರುಗಳನ್ನೂ ಭೂಮಾಲೀಕರನ್ನೂ ಸೇರಿಸಿದ. ಆದರೆ ಗಡಿನಾಡಿನ ದೇಶ ಪ್ರೇಮಿ ಪಠಾಣರು ಇವ್ರುಗಳನ್ನೆಲ್ಲ ನಿರಾಕರಿಸಿದರು. ಬರಲಿರುವ ಪಾಕಿಸ್ತಾನದಲ್ಲಿ ಪಠಾಣರನ್ನು ಕೀಳಾಗಿ ಕಾಣುವ ಪಂಜಾಬಿ ಜನರು ತಮ್ಮ ಸಂಸ್ಕೃತಿ ನಾಶಮಾಡಲು ಪಂಜಾಬಿ ಮುಸ್ಲಿಮರು ವಿಚಾರ ಮಾಡುವರೆಂಬ ಅನುಮಾನ ಅವರಿಗಿತ್ತು.

ಕೇವಲ ಒಂದು ವರ್ಷದ ಹಿಂದೆ ಪ್ರಬಲ ಬಹುಮತದಿಂದ ಕಾಂಗ್ರೆಸ್ ಮಂತ್ರಿಮಂಡಲವನ್ನು ಚುನಾಯಿಸಿದ ಈ ಪ್ರಾಂತದಲ್ಲಿ ಮತ್ತೆ ಜನಾಭಿ

ಪ್ರಾಯ ಸಂಗ್ರಹಿಸಬೇಕೆಂದು (ರೆಫರೆಂಡಮ್) ಬ್ರಿಟಿಷರು ಸಲಹೆ ಮಾಡಿದರು. ಗಾಂಧೀಜಿ ಮತ್ತು ಗಫಾರ್‌ಖಾನ್ ಇದನ್ನು ನಿರಾಕರಿಸಿದರು.

ಇಷ್ಟಾದರೂ ವಾತಾವರಣ ವಿಪರೀತವಾಗಿ ಹದಗೆಡುತ್ತಿತ್ತು. ನಿರಪರಾಧಿಗಳ ಕೊಲೆ ಲೂಟಿಗಳು ಹೆಚ್ಚಾದವು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ದೆಹಲಿಯಲ್ಲಿ ಸಭೆ ಸೇರಿ ಮೌಂಟ್‌ಬ್ಯಾಟನ್ನರ ವಿಭಜನಾ ಯೋಜನೆಯನ್ನು ಚರ್ಚಿಸಿತು. ಗಫಾರ್‌ಖಾನರು ಬಲವಾಗಿ ವಿರೋಧಿಸಿದರು. ರಾಜಾಜಿಯವರೂ ಸರ್ದಾರ್ ಪಟೇಲರೂ ಬೆಂಬಲಿಸಿದರು. ಗಾಂಧೀಜಿಯಂತೂ ತೀವ್ರವಾಗಿ ತಮ್ಮ ಅಸಮ್ಮತಿಯನ್ನು ಸೂಚಿಸಿದರು. "ಎರಡು ಅನಿಷ್ಟಗಳಲ್ಲಿ ಅಂದರೆ ಬ್ರಿಟಿಷ್ ಆಳ್ವಿಕೆಯ ಮುಂದುವರಿಕೆ ಮತ್ತು ವಿಭಜನೆ – ಈ ಎರಡರಲ್ಲಿ ಯಾವುದು ಕಡಮೆ ಅನಿಷ್ಟ ವಿಚಾರ" ಎಂದು ಚರ್ಚಿಸಿದರು. ಕೊನೆಗೆ ವಿಭಜನೆಯನ್ನು ಒಪ್ಪುವ ಸೂಚನೆಗಳೇ ಪ್ರಬಲವಾಯಿತು.

೧೭. ಹೃದಯಗಳು ಬಿರಿದವು

೧೯೪೭ರ ಮೇ ಆರಂದು ಮೌಂಟ್‌ಬ್ಯಾಟನ್ ತಮ್ಮ ನಿವಾಸಕ್ಕೆ ಗಾಂಧೀಜಿಯನ್ನೂ ಜಿನ್ನಾರವರನ್ನೂ ಬರಮಾಡಿಕೊಂಡರು. ಬೇರೆ ಬೇರೆಯಾಗಿ ಚರ್ಚಿಸಿದರು. ಈ ಇಬ್ಬರು ಮಹತ್ವದ ನಾಯಕರು ತಮ್ಮ ತಮ್ಮಲ್ಲಿ ಆತ್ಮೀಯ ಮಾತುಕತೆ ನಡೆಸಲು ಅನುವುಮಾಡಿದರು. ಮಾರನೆಯ ದಿನ ಗಾಂಧೀಜಿಯೇ ಜಿನ್ನಾರವರ ನಿವಾಸಕ್ಕೆ ಹೋಗಿ ಮಾತು ಮುಂದುವರಿಸಿದರು. ಅನಂತರ ಪ್ರೆಸ್‌ರಾಯರಿಗೆ ವರದಿ ಮಾಡುತ್ತ ಗಾಂಧೀಜಿ:-

“ಜಿನ್ನಾರವರೇ ಸಿದ್ಧಮಾಡಿ ನಾವಿಬ್ಬರೂ ಸಹಿ ಹಾಕಿದ್ದ ಹೇಳಿಕೆಯಲ್ಲಿ ಅಂಗೀಕರಿಸಿರುವಂತೆ ಮೈತ್ರಿ ಮತ್ತು ಅಹಿಂಸೆಯಲ್ಲಿ ಜಿನ್ನಾ ತಮ್ಮ ನಂಬಿಕೆಯನ್ನು ವ್ಯಕ್ತ ಮಾಡಿದರು. ಪಾಕಿಸ್ತಾನ ಮತ್ತು ದೇಶ ವಿಭಜನೆಗಳ ಮಾತೂ ಚರ್ಚೆಗೆ ಬಂತು. ಅಹಿಂಸೆಯಲ್ಲಿ ನಂಬಿಕೆ ಇರುವುದಾದರೆ ಈ ವಿಷಯದಲ್ಲೂ ತಮ್ಮ ವಿರೋಧಿಗಳ ಜೊತೆ ತಾಳ್ಮೆಯಿಂದ ಚರ್ಚಿಸಿ ತಮ್ಮ ವಾದಕ್ಕೆ ಅವರ ಸಮ್ಮತಿ ಪಡೆಯಲು ಶಾಂತ ರೀತಿಯ ಪ್ರಯತ್ನಗಳನ್ನು ಮಾಡುವಂತೆ ಕೋರಿದೆ. ಆದರೆ ಜಿನ್ನಾ ಆ ಬಗ್ಗೆ ಯಾವುದೇ ಚರ್ಚೆಗೆ ಸಿದ್ಧವಿರಲಿಲ್ಲ. ಪಾಕಿಸ್ತಾನದ ರಚನೆಯ ಸಿದ್ಧಾಂತ ಮತ್ತಾವ ಅಭಿಪ್ರಾಯಕ್ಕೂ ಎಡೆಕೊಡುವುದಿಲ್ಲ ಎಂದು ಖಚಿತವಾಗಿ ಹೇಳಿಬಿಟ್ಟರು. ಹಾಗೆ ಅಹಿಂಸಾವಾದಿಯಾದವನಿಗೆ ಯಾವ ವಿಷಯವೂ ಪರಸ್ಪರ ತಿಳುವಳಿಕೆಯ ಚರ್ಚೆಗೆ ಹೊರತಾದುದಲ್ಲ. ದೇವರ ಅಸ್ತಿತ್ವವನ್ನು ಚರ್ಚಿಸಬೇಕಾದರೂ ನಾವು ಸಿದ್ಧವಾಗಿರಬೇಕು” ಎಂದು ತಿಳಿಸಿದರು.

ಗಫಾರ್‌ಖಾನರ ಹೃದಯ ಭಾರವಾಗಿತ್ತು. ದುಃಖಿತರಾಗಿದ್ದರು. ಅವರೂ ಅವರ ಪಖ್ತೂನರ ಪಠಾಣ ಅನುಯಾಯಿಗಳೂ ನಿರಾಶರಾ

ಕಾಂಗ್ರೆಸ್ ಸದಸ್ಯರಾಗಿದ್ದರು. ರಾಷ್ಟ್ರೀಯ ಸಂಸ್ಥೆಯೊಡನೆ ಸೇರಿ ಹೋಗಿದ್ದರು. ಹಠಾತ್ತನೆ ಈ ದೇಶಕ್ಕೂ ಈ ಸಂಸ್ಥೆಗೂ ಬಹಿಷ್ಕೃತರಾಗುವ ಸಂದರ್ಭ ಬಂದೊದಗಿತ್ತು. ದೆಹಲಿಯ ಮಾತುಕತೆಗಳು ಕೊನೆಗೊಂಡವು. ಗಾಂಧೀಜಿ ಅಲ್ಲಿಂದ ಕಲ್ಕತ್ತೆಗೆ ಹೊರಡಲನುವಾದರು. ಗಫಾರ್‌ಖಾನರು ಮಿತ್ರರೊಡನೆ ತಮ್ಮ ಭವಿಷ್ಯ ಕುರಿತು ವಿಚಾರಮಾಡಿದರು. “ನಾವೀಗ ಉಭಯತ್ರ ಬಹಿಷ್ಕೃತರು. ಆದರೆ ಮಹಾತ್ಮಜಿ ಇರುವವರೆಗೆ ನಾನಾವುದಕ್ಕೂ ಚಿಂತಿಸುವುದಿಲ್ಲ” ಎಂದರು. ಆ ದಿನ ಅವರಿಗೆ ಜ್ವರ. ಆದರೂ ರಾತ್ರಿ ಬಹಳ ಹೊತ್ತಿನವರೆಗೂ ಗಾಂಧೀಜಿಯ ಬಳಿ ಎಂದಿನಂತೆ ಅವರ ಕಾಲುಗಳನ್ನೊತ್ತುತ್ತಾ ಕುಳಿತೇ ಇದ್ದರು. ಬೇಡ ಅಂದರು ಬಾಪೂ. “ಇದು ಕಡೆಯ ದಿನ. ನನ್ನಂತೆ ಬಿಡಿ. ನನಗೆಲ್ಲವೂ ಸರಿ ಹೋಗುವುದು” ಖಾನ್ ಉತ್ತರ.

“ಇನ್ನೇನು ಸ್ವಲ್ಪ ದಿನಗಳಲ್ಲಿ ಹಿಂದೂಸ್ತಾನದಲ್ಲಿ ನಾವು ಪರಕೀಯರೆನಿಸಬಹುದು. ಪಾಕಿಸ್ತಾನದ ದಬ್ಬಾಳಿಕೆಯೊಳಕ್ಕೆ ನಮ್ಮನ್ನು ನೂಕಿದಾರು. ಬಾಪೂವಿನಿಂದ ದೂರವಾಗಿ, ಭಾರತದಿಂದಲೂ ದೂರವಾಗಿ, ನಿಮ್ಮೆಲ್ಲರನ್ನೂ ತ್ಯಜಿಸಿ ನಮ್ಮ ಭವಿಷ್ಯ ಹೇಗೆ ರೂಪಗೊಂಡೀತೋ ನಾನರಿಯೆ” ಗಫಾರ್ ಖಾನರ ಧ್ವನಿಭಾರವಾಗಿತ್ತು. ಬಾಪು ಇದನ್ನು ಕೇಳಿ ಅಂದರು:-

“ಬಾದ್‌ಷಾಖಾನ್ ಒಬ್ಬ ಧೀಮಂತ ಫಕೀರ. ಸ್ವಾತಂತ್ರ್ಯ ಬರುತ್ತದೆ. ಆದರೆ ಧೀರ ಪಠಾಣ ನಾಯಕನಿಗೆ ಬಿಡುಗಡೆ ಇಲ್ಲವಾಗುತ್ತದೆ. ಅವರ ಭವಿಷ್ಯ ಕ್ರೂರವಾದೀತು. ಆದರೆ ಈ ಬಾದಷಹ ಒಬ್ಬ ದೇವಮಾನವ. ಆತನಿಗೆ ಭಯವಿಲ್ಲ.”

ಮೇ 2 ರಂದು ಗಾಂಧೀಜಿ ಕಲ್ಕತ್ತೆಗೆ ಹೊರಟರು. ಗಫಾರ್‌ಖಾನರು ರೈಲು ನಿಲ್ದಾಣದಲ್ಲಿ ಅವರನ್ನು ಬೀಳ್ಕೊಟ್ಟರು. ಕೊನೆ ಘಳಿಗೆಯಲ್ಲಿ ದುಃಖ ಉಕ್ಕಿತು. ಆದರೆ ದೃಢವಾಗಿ ನುಡಿದರು, “ಮಹಾತ್ಮಜಿ! ನಾನು ನಿಮ್ಮ ಸೈನಿಕ. ನಿಮ್ಮ ವಾಕ್ಯ ನನಗೆ ನಿರ್ಣಾಯಕ ನುಡಿ. ನಿಮ್ಮಲ್ಲಿ ನನಗೆ ಅಖಂಡ ವಿಶ್ವಾಸವಿದೆ. ನಿಮ್ಮ ಆಸರೆಯನ್ನು ಬಿಟ್ಟು ನಾನು ಮತ್ತಾವ ಬೆಂಬಲವನ್ನೂ ಬಯಸುವುದಿಲ್ಲ.” ಗಾಂಧೀಜಿ ಮೌನವಾಗಿಯೇ

ಇದ್ದರು. ಕಲ್ಕತ್ತ ತಲುಪಿದ ನಂತರ ಪತ್ರ ಬರೆದರು. ಅವರೊಡನೆ ೩೬,೦೦೦ ರೂ.ಗಳ ಕಾಣಿಕೆಯನ್ನು ಖಾನರ ಉತ್‌ಮನ್-ಜಾಯ್ ಗ್ರಾಮದ ಶಾಲೆಯ ಕಟ್ಟಡ ನಿಧಿಗಾಗಿ ಕಳುಹಿಸಿದ್ದರು. ಈ ವಿಭಜನೆ ಒಂದು ಘೋರ ದುರಂತವೆಂದು ಬಗೆದ ಗಾಂಧೀಜಿ ಕೊನೆಯವರೆಗೂ ಅದಕ್ಕೆ ಪರ್ಯಾಯವಾಗಿ ಸೂಚನೆಗಳನ್ನು ಕೊಡುತ್ತಲೇ ಇದ್ದರು. ವೈಸರಾಯರಿಗೆ ರೈಲಿನಿಂದಲೇ ಪತ್ರ ಬರೆದರು:

"ಹೇಗೇ ವಾದ ಮಾಡಿದರೂ ಈ ದೇಶದ ವಿಭಜನೆಗೆ ಯಾವುದೇ ವಿಧದಲ್ಲಿ ಬ್ರಿಟಿಷ್ ಸರ್ಕಾರ ಬೆಂಬಲಿಗ ಪಕ್ಷವಾಗಿ ನಿಂತರೆ ಅದು ಅತ್ಯಂತ ಘೋರ ತಪ್ಪನ್ನೆಸಗಿದಂತಾಗುತ್ತದೆ. ಹಾಗೆ ಹೋಳಾಗಲೇ ಬೇಕಾದರೆ ಬ್ರಿಟಿಷರು ಈ ದೇಶವನ್ನು ಬಿಟ್ಟುಹೋದನಂತರ ಆಗಲಿ. ಭಾರತದ ಪಕ್ಷಗಳು ತಮ್ಮಲ್ಲೇ ಚರ್ಚಿಸಿ ನಿರ್ಣಯಿಸಲಿ. ಸಶಸ್ತ್ರ ಘರ್ಷಣೆಯಿಂದ ಬೇಕಾದರೂ ಇತ್ಯರ್ಥ ವಾಡಲಿ. ಜಿನ್ನಾರವರು ಹೇಳಿದಂತೆ ಅವರಿಗೆ ರಕ್ತ ಘರ್ಷಣೆಬೇಡ. ಎರಡೂ ಕಡೆ ಅಲ್ಪ ಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ನ್ಯಾಯ ಮಂಡಲಿಗಳೇರ್ಪಡಲಿ.

"ಈ ಸಮಯದಲ್ಲಿ ಗಡಿನಾಡು ಪ್ರಾಂತದಲ್ಲಾಗಲೀ ಇನ್ನಿತರ ಕಡೆಗಳಲ್ಲಾಗಲೀ ಜನಮತ ಸಂಗ್ರಹಣೆ (ರೆಫರೆಂಡಮ್) ಅತ್ಯಂತ ಅಪಾಯಕಾರಿಯಾದೀತು. ಗಡಿನಾಡಿನಲ್ಲಿ ಡಾ. ಖಾನ್‌ಸಾಹೇಬರನ್ನು ಕಡೆಗಣಿಸಿ ಏನೂ ಮಾಡತಕ್ಕದ್ದಲ್ಲ.

"ಪಂಜಾಬು ಮತ್ತು ಬಂಗಾಳಗಳನ್ನು ವಿಭಜಿಸುವುದು ಶುದ್ಧ ತಪ್ಪು. ಮುಸ್ಲಿಮ್ ಲೀಗಿಗೆ ಅದೊಂದು ಮಹಳ್ಳಾದೀತು. ಇನ್ನಷ್ಟು ವಿಧ್ವಂಸಕತೆ ಹೆಚ್ಚೀತು. ಈ ಎಲ್ಲ ಪ್ರಶ್ನೆಗಳು ಬ್ರಿಟಿಷರು ಹೋದ ನಂತರವೇ ಪರಸ್ಪರ ತಿಳುವಳಿಕೆಯಿಂದ ಇತ್ಯರ್ಥವಾಗಬೇಕಾದುದು ನ್ಯಾಯ ಮಾರ್ಗ.

"ಅರಾಜಕತ್ವದ ಚಳುವಳಿಯನ್ನು ನಿಮ್ಮ ಹಿಂದೆ ಬಿಟ್ಟು ಹೋಗಬೇಡಿ. ತಕ್ಷಣವೇ ಯಾವುದೇ ಒಂದು ಭಾರತೀಯ ಪಕ್ಷಕ್ಕೆ ಅಧಿಕಾರ ವಹಿಸಿ ತೆರಳಿರಿ. ಮುಂದೆ ಸುವ್ಯವಸ್ಥಿತ ಆಡಳಿತವನ್ನು ಇಡೀ ದೇಶಕ್ಕೆ ರಚಿಸಿಕೊಡಲು ಒಂದೇ ರಾಜ್ಯಾಂಗ ರಚನಾ ಸಭೆ ಏರ್ಪಟ್ಟರೆ ಮುಸ್ಲಿಮ್

ಲೀಗಿಗೆ ತನ್ನ ಆಡಳಿತ ಇಲ್ಲದ ರಾಜ್ಯಗಳ ಬಗ್ಗೆಯೂ ನಿರ್ಣಯಿಸುವಲ್ಲಿ ಒಂದು ಜವಾಬ್ದಾರಿ ಇರುತ್ತದೆ."

ಗಾಂಧೀಜಿಯ ಈ ಮಾತುಗಳನ್ನು ಮೌಂಟ್‌ಬೇಟನ್ನರು ತಿರಸ್ಕರಿಸಲಿಲ್ಲ. ಮೌನವಾಗಿ ಬಿಟ್ಟರು.

ಗಡಿನಾಡಿನಲ್ಲಿ ಕ್ರಮೇಣ ಹಿಂಸಾಚಾರಗಳು ಹೆಚ್ಚಿದವು. ಪಠಾಣರೂ ತಾಳ್ಮೆಗೆಟ್ಟು ಪಂಜಾಬಿ ಮುಸ್ಲಿಮರ ಮೇಲೆ ದ್ವೇಷ ಕಾರುತ್ತಿದ್ದರು. ಗಫಾರ್‌ಖಾನರು ದೃಢವಾಗಿ ಅಹಿಂಸಾ ಪಥವನ್ನು ನಂಬಿ ನಡೆದರು. ದ್ವೇಷದಿಂದ ಯಾರೂ ಏನನ್ನೂ ಸಾಧಿಸಲಾರರು. ಅದರಿಂದ ಇನ್ನಷ್ಟು ದ್ವೇಷ, ಇನ್ನಷ್ಟು ಪ್ರತಿಹಿಂಸೆ. ಅಹಿಂಸೆಯಿಂದ ಮಾತ್ರವೇ ನಮ್ಮಲ್ಲಿ ಪ್ರೀತಿ ಉಳಿದೀತು ಎನ್ನುತ್ತಿದ್ದರು. ಆದರೆ ಬ್ರಿಟಿಷ್ ಅಧಿಕಾರಿಗಳೂ ವೈಸರಾಯರೂ ಈ ದ್ವೇಷದ ಕಿಚ್ಚನ್ನು ಉಲ್ಬಣಗೊಳಿಸುತ್ತಾ ಗಡಿನಾಡಿನಲ್ಲಿ ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಜನರ ವಿಶ್ವಾಸವಿಲ್ಲ ಎನ್ನುವುದಕ್ಕೆ ಗಲಭೆಗಳನ್ನೇ ಆಧಾರವಾಗಿ ಮಾಡಿಕೊಂಡರು. ಗಫಾರ್‌ಖಾನರು ಮೌಂಟ್‌ಬ್ಯಾಟನ್ನರಿಗೆ ಸ್ಪಷ್ಟ ನುಡಿಗಳಲ್ಲಿ ಹೇಳಿದರು. "ನೀವೇ ಭಿನ್ನಾಭಿಪ್ರಾಯದ ಪಕ್ಷಗಳ ಮಧ್ಯೆ ನಿಷ್ಪಕ್ಷವಾಗಿ ತೀರ್ಮಾನಿಸಬೇಕಾದುದು ಧರ್ಮ. ಹಾಗಲ್ಲದೆ ಅಡ್ಡಹಾದಿ ಹಿಡಿದು ವಾದಿಸಿದರೆ ನಿಮ್ಮ ಸಂಧಾನಕ್ಕೆ ಬೆಲೆಯೇ ಇರುವುದಿಲ್ಲ."

ಈ ಮಧ್ಯೆ ಜಿನ್ನಾ ಹೊಸ ಹೊಸ ಸಮಸ್ಯೆಗಳನ್ನೊಡ್ಡುತ್ತಿದ್ದರು. ಪಂಜಾಬು ಮತ್ತು ಬಂಗಾಳ ಇಡಿಯಾಗಿ ಪಾಕಿಸ್ತಾನಕ್ಕೆ ಸೇರಬೇಕೆಂದೂ ಗಡಿನಾಡು ಮತ್ತು ಕಾಶ್ಮೀರಗಳಲ್ಲಿ ಅತ್ಯಗಾಧ ಬಹುಸಂಖ್ಯಾತರು ಮುಸ್ಲಿಮರಾದುದರಿಂದ ಅವುಗಳ ಪ್ರಶ್ನೆ ಈಗಾಗಲೇ ಇತ್ಯರ್ಥವಾದುದೆಂದೂ ವಾದಿಸಿದರು. ಗಡಿನಾಡಿನ ಖಾನ್ ಅಬ್ದುಲ್ ಗಫಾರ್‌ಖಾನ್ ಮತ್ತು ಕಾಶ್ಮೀರದ ಷೇಕ್ ಅಬ್ದುಲ್ಲ ಪ್ರಬಲವಾಗಿ ಅದನ್ನು ಅಲ್ಲಗಳೆದರು. ಇಬ್ಬರೂ ಕಾಂಗ್ರೆಸ್ಸಿನ ಪ್ರಥಮ ಶ್ರೇಣಿಯ ನಾಯಕರೆನಿಸಿದ್ದವರು.

ಮೌಂಟ್‌ಬ್ಯಾಟನ್ ಮೇ ೩೧ರಂದು ಲಂಡನ್ನಿನಿಂದ ಹಿಂತಿರುಗಿ ಬಂದು ಹೊಸ ಮಾತುಕತೆಗಳನ್ನು ಪ್ರಾರಂಭಿಸಿದರು. ಗಾಂಧೀಜಿ ದೆಹಲಿಗೆ ಬಂದರು. ಕಾಂಗ್ರೆಸ್ ನಾಯಕರೆಲ್ಲರೂ ಅಲ್ಲಿ ಇದ್ದರು. ಗಫಾರ್‌ಖಾನರೂ

ಗಾಂಧೀಜಿಯನ್ನು ಕಂಡು ಮಾತನಾಡಲು ಕಾತರರಾಗಿದ್ದರು. "ವಿಭಜನೆಗೆ ಮುಂಚೆ ದೇಶದಲ್ಲಿ ಸಂಪೂರ್ಣ ಶಾಂತಿ ನೆಲಸಲು ಮುಸ್ಲಿಮ್ ಲೀಗ್ ಸಂಕಲ್ಪಬದ್ಧರಾಗಿ ಸಹಕರಿಸಬೇಕು. ಜಾತೀಯ ಅಲ್ಪ ಸಂಖ್ಯಾತರಿಗೆ ಎಲ್ಲ ಕಡೆ ಭರವಸೆ ಇರಬೇಕು. ಇಲ್ಲವಾದರೆ ಜನ ದಿಕ್ಕುಗೆಟ್ಟು ಪ್ರಾಂತದಿಂದ ಪ್ರಾಂತಕ್ಕೆ ನಿರಾಶ್ರಿತರಾಗಿ ಓಡಿಹೋದಾರು. ರಕ್ತದ ಕೋಡಿ ಹರಿದೀತು" ಎಂದು ಗಾಂಧೀಜಿ ಬಲವಾಗಿ ಪ್ರತಿಪಾದಿಸಿದರು. ಗಡಿನಾಡು ಮತ್ತು ಬೆಲೂಚಿಸ್ತಾನಗಳಲ್ಲಿ ಪರಿಸ್ಥಿತಿ ಅತ್ಯಂತ ಶೋಚನೀಯವಾಗುವುದು ಎಂದು ಗಫಾರ್‌ಖಾನರು ಎಚ್ಚರಿಸಿದರು.

"ಶಾಂತಿಯುತವಾಗಿ ಸೋದರರಂತೆ ವಿಭಜನೆ ಮಾಡಿಕೊಂಡು ಪಾಕಿಸ್ತಾನವಾದರೂ ನನ್ನ ಅಭ್ಯಂತರವಿಲ್ಲ. ಆಗ ನನ್ನ ಸ್ಥಾನ ಖುದಾಯಿ ಖಿದ್‌ಮತ್‌ಗಾರರೊಡನೆ ಪಾಕಿಸ್ತಾನದಲ್ಲೇ ಇರುತ್ತದೆ. ಆದರೆ ಎಂದೂ ಸೋತು ಹಿಮ್ಮೆಟ್ಟುವುದಿಲ್ಲ. ವಿಭಜನೆಯಾದರೂ ಈ ಎರಡೂ ಭಾಗಗಳು ಬೇರೆ ಬೇರೆ ದೇಶವೆಂದು ಅಂಗೀಕರಿಸಲು ನಿರಾಕರಿಸಿ ಸೌಹಾರ್ದಕ್ಕಾಗಿ ಸತತವಾಗಿ ದುಡಿಯುವುದೇ ನನ್ನ ನಿಮ್ಮ ಕರ್ತವ್ಯ. ಅಹಿಂಸಾ ಯೋಧರಾದ ನಿಮಗೆ ಅದೇ ರಾಜಮಾರ್ಗ" ಎಂದು ಗಾಂಧೀಜಿ ಗಫಾರ್‌ಖಾನರನ್ನು ಆತ್ಮೀಯವಾಗಿ ಸಂತೈಸಿದರು.

ಕ್ಷಣ ಕ್ಷಣಕ್ಕೆ ರಾಜಕೀಯ ಪರಿಸ್ಥಿತಿ ಬದಲಿಸುತ್ತಲೇ ಇತ್ತು. ವಿಭಜನೆ ಆಗುವ ತನಕ ಅಶಾಂತಿ ನಿಲ್ಲದು: ಸ್ವಾತಂತ್ರ್ಯವೂ ಸಿಗುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ಕೂಡ ಹೇಳುತ್ತಿದ್ದರು. ಗಾಂಧೀಜಿ ಏಕಾಕಿಯಾದರು. ಜವಹರಲಾಲರೂ ಸರ್ದಾರ್ ಪಟೇಲರೂ ಗಾಂಧೀಜಿ ಯೊಡನೆ ವಾದಮಾಡಿದರು. ಆದರೆ ಗಾಂಧೀಜಿಗೆ ದೇಶ ವಿಭಜನೆಯ ಪರಿಣಾಮವಾಗಿ ಮುಂದೆ ಬಹುಕಾಲ ದೇಶಕ್ಕೆ ಬರಬಹುದಾದ ಅನಿಷ್ಟಗಳ ಚಿತ್ರಣ ಕಣ್ಣಿಗೆ ಕಟ್ಟಿತ್ತು. ತುಂಬ ದುಃಖದಿಂದ ಹೀಗೆ ನುಡಿದರು:

"ಇಂದು ನಾನು ಏಕಾಕಿ. ನೆಹರು ಸಹೋದ್ಯೋಗಿಗಳೂ ದೂರವಾಗಿದ್ದಾರೆ. ಬ್ರಿಟಿಷರ ಅಧಿಕಾರ ಇರುವಾಗಲೇ ವಿಭಜನೆ ಕೂಡದು ಎಂದು ನಾನು ಹೇಳುವುದನ್ನು ನೆಹರೂ ಮತ್ತು ಪಟೇಲ್ ನನಗೆ [illegible]. ವೃದ್ಧಾಪ್ಯದಿಂದ ನನಗೆ ಅರಳುಮರುಳಾಗಿದೆ ಎಂದು ಭಾವಿಸಿದ್ದಾರೆ.

ಆದರೂ ನನಗೆ ಸ್ಪಷ್ಟವಾಗಿ ಗೋಚರವಾಗುವ ಸತ್ಯವನ್ನು ನಾನು ಬಹಿರಂಗ ಪಡಿಸಲೇಬೇಕು. ಈ ವಿಭಜನೆಯ ಕಾರ್ಯವನ್ನು ನಾವು ತಪ್ಪಾಗಿ ಪ್ರಾರಂಭಿಸುತ್ತಿದ್ದೇವೆ. ಈ ಕೂಡಲೇ ಈ ಹೆಜ್ಜೆಯ ಪೂರ್ಣ ಪರಿಣಾಮದ ಕಲ್ಪನೆ ನಮಗಾಗುತ್ತಿಲ್ಲ. ಈ ದಾರುಣ ಬೆಲೆ ತೆತ್ತು ನಾವು ಪಡೆಯಬಹುದಾದ ಸ್ವಾತಂತ್ರ್ಯ ಭವಿಷ್ಯ ಕರಾಳವಾಗಿರುತ್ತದೆಂದು ನನಗೆ ಸ್ಪಷ್ಟವಾಗಿ ಮನವರಿಕೆಯಾಗಿದೆ. ಸೋದರ ಬಾದ್‌ಷಾಖಾನರ ಸಂಕಟ ನೋಡಲಾರೆ. ಅವರ ಆಂತರಿಕ ಕ್ಷೋಭೆ ನನ್ನ ಹೃದಯವನ್ನು ಇರಿಯುತ್ತಿದೆ. ಆದರೆ ನಾನು ಕುಸಿದು ಕಣ್ಣೀರಿಟ್ಟರೆ ಹೇಡಿತನವಾದೀತು. ಧೀರ ಪಠಾಣನೂ ಕುಸಿದಾನು. ಆದ್ದರಿಂದ ನನ್ನ ಪಾತ್ರವನ್ನು ನಾನು ನಿಶ್ಚಲ ಮನಸ್ಸಿನಿಂದ ನಿರ್ವಹಿಸುತ್ತೇನೆ. ಇದೇನು ಸಾಧಾರಣ ವಿಷಯವಲ್ಲ."

೧೯೪೭ರ ಜೂನ್ ಎರಡರಂದು ಲಾರ್ಡ್ ಮೌಂಟ್‌ಬ್ಯಾಟನ್ ಭಾರತವನ್ನು ಹೋಳುಮಾಡಿ ಎರಡು ರಾಷ್ಟ್ರಗಳನ್ನು ನಿರ್ಮಿಸುವ ಬ್ರಿಟಿಷ್ ಆಳರಸರ ತೀರ್ಮಾನವನ್ನು ಪ್ರಕಟಿಸಿದರು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಜೂನ್ ೩ ರಂದು ಸಭೆ ಸೇರಿತು. ಮೊಟ್ಟಮೊದಲನೆಯದಾಗಿ ಗಡಿನಾಡು ಪ್ರಾಂತದ ಪ್ರಶ್ನೆ ಬಂತು. ಗಫಾರ್‌ಖಾನರು ದಿಗ್ಭ್ರಮೆಗೊಂಡಿದ್ದರು. ಸತತವಾಗಿ ಕಾಂಗ್ರೆಸ್ಸಿನ ಬೆಂಬಲಿಗರಾಗಿ ನಿಂತು ಹೋರಾಡಿ ಜನಬೆಂಬಲದಿಂದ ಕಾಂಗ್ರೆಸ್ ಸರ್ಕಾರವನ್ನು ನಿರ್ಮಿಸಿಕೊಂಡಿರುವ ಗಡಿನಾಡಿನ ಜನತೆಯನ್ನು ಕಾಂಗ್ರೆಸ್ ಕಡೆಗಣಿಸಿ ವಿಶ್ವಾಸದ್ರೋಹ ಮಾಡಬಾರದು ಎಂದು ಮೊರೆಯಿಟ್ಟರು. ಸರ್ದಾರ್ ಪಟೇಲರೂ, ರಾಜಾಜಿಯವರೂ ಗಡಿನಾಡಿನಲ್ಲಿ ಜನಾಭಿಪ್ರಾಯ ಸಂಗ್ರಹಣೆಯ ಸಲಹೆಗೆ ಬೆಂಬಲವಿತ್ತರು. ಬ್ರಿಟಿಷ್ ಆಳರಸರ ಆಡಳಿತದಲ್ಲಿ ಮತ್ತು ಮುಸ್ಲಿಮ್ ಲೀಗಿಗೆ ಅವರು ತೊಡುತ್ತಿರುವ ಬೆಂಬಲಗಳ ಮಧ್ಯೆ ಈ ಜನಮತ ಗಣನೆ ಹಾಸ್ಯಾಸ್ಪದವಾಗುತ್ತದೆ ಎಂದು ಗಫಾರ್‌ಖಾನರು ವಿರೋಧಿಸಿದರು. ಹಿಂದುಸ್ತಾನವೋ ಪಾಕಿಸ್ತಾನವೋ ಎಂಬ ಮಾತಿನ ಮೇಲೆಯೇ ಚುನಾವಣೆ ನಡೆದು ಕಾಂಗ್ರೆಸ್ ಗೆದ್ದು ಬಂದಿರುವಾಗ ಈಗೇಕೆ ಮತ್ತೆ ಮತಗಣನೆ ಎಂದು ಕೇಳಿದರು. ಆದರೆ ಅವರದು ಅರಣ್ಯರೋದನವಾಯಿತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಗಾಧ ಬಹುಮತದಿಂದ ವಿಭಜ

ನೆಯ ಸಲಹೆಯನ್ನೂ ಗಡಿನಾಡಿನಲ್ಲಿ ಜನಮತ ಗಣನೆಯ ಸಲಹೆ ಯನ್ನೂ ಒಪ್ಪಿ ನಿರ್ಣಯಮಾಡಿತು. ಅದನ್ನು ವಿರೋಧಿಸಿದ ಏಕೈಕ ಸದಸ್ಯ ಖಾನ್‌ಅಬ್ದುಲ್ ಗಫಾರ್‌ಖಾನ್. ಗಾಂಧೀಜಿ ಸಹಮತರಾಗಿ ದ್ದರೂ ಅವರು ಸದಸ್ಯರಾಗಿರಲಿಲ್ಲ. ಸಂಕಟದ ಭಾರದಿಂದ ತೊಳಲಿ ಖಾನರು ಕಟುವಾಗಿ ನುಡಿದರು, “ನಮ್ಮನ್ನು ನೀವು ನಿರ್ದಯವಾಗಿ ತೋಳಗಳಿಗೆ ಬಲಿ ಕೊಟ್ಟುಬಿಟ್ಟಿರಿ.”

“ಸಮಿತಿ ಸಭೆಯಿಂದ ಹೊರಗೆ ಬಂದು ಮೆಟ್ಟಿಲುಗಳ ಮೇಲೆ ಕುಸಿದು ಕುಳಿತು ‘ತೋಬಾ ತೋಬಾ’ ಎಂದು ನಾನೇ ಅಳಲಿದ್ದೆ” ಎಂದು ಹೇಳಿಕೊಂಡಿದ್ದಾರೆ ಗಫಾರ್‌ಖಾನ್. ಸರ್ದಾರರೂ ರಾಜಾಜಿಯ ವರೂ ಖಾನರನ್ನು ಸಮಾಧಾನ ಪಡಿಸಿದರು. ಮೌಲಾನಾ ಅಜಾದರು, “ನೀವೀಗ ಮುಸ್ಲಿಮ್ ಲೀಗಿಗೆ ಸೇರಬೇಕು” ಎಂದರಂತೆ. ಖಾನರು ಈ ವಿಷಯ ಸ್ಮರಿಸುತ್ತಾ, “ನಾವು ಆಳವಾಗಿ ನಂಬಿದ್ದ ತತ್ವಗಳ ಬಗ್ಗೆ ಮತ್ತು ನಮ್ಮ ರಾಷ್ಟ್ರೀಯ ನಿಷ್ಠೆಯ ಬಗ್ಗೆ ಈ ಗೆಳೆಯರು ಏನೂ ತಿಳಿದುಕೊಂಡಂತಿಲ್ಲವಲ್ಲ ಎಂದು ನನಗೆ ಬಹಳ ನೋವಾಯಿತು” ಎಂದಿ ದ್ದಾರೆ.

ಗಾಂಧೀಜಿ ಮಾತ್ರ ನಿಶ್ಚಿತವಾಗಿ ನುಡಿದರು, “ ಇದ್ಯಾಗವಾದರೂ ಕೂಡ ಪಠಾಣ ಸೋದರರಿಗೇನಾದರೂ ತೊಂದರೆಯಾದಾಗ ಭಾರತ ಅವರಿಗೆ ನೆರವಾಗುವುದು ತನ್ನ ಪವಿತ್ರ ಕರ್ತವ್ಯವೆಂದು ಎಂದೆಣಿಸಬೇಕು. ನಾನಂತೂ ನನ್ನ ಕೊನೆಯುಸಿರಿನ ವರೆಗೆ ಇದೇ ಸೂಚನೆಯನ್ನು ಭಾರತ ಸರ್ಕಾರಕ್ಕೆ ಕೊಟ್ಟೇನು.”

ವಿಭಜನೆಯ ಒಪ್ಪಂದದ ಘೋಷಣೆಯ ನಂತರ ಗಫಾರ್‌ಖಾನರು ತಮ್ಮ ನಿಲುವನ್ನು ಸ್ಪಷ್ಟ ನುಡಿಗಳಲ್ಲಿ ಹೀಗೆ ತಿಳಿಸಿದರು:–

“ನಾವು ಮುಸ್ಲಿಮ್ ಲೀಗಿನ ವಿರೋಧಿಗಳಿರಬಹುದು. ಆದರೆ ಎಂದಿಗೂ ಇಸ್ಲಾಮ್ ಧರ್ಮದ ವಿರೋಧಿಗಳಲ್ಲ.... ಪಠಾಣರು ಸಂಪೂರ್ಣ ಸ್ವಾತಂತ್ರ್ಯವನ್ನೇ ಬಯಸುವವರು. ತಮ್ಮ ರಾಜ್ಯಾಂಗವನ್ನು ರಚಿಸಿಕೊಳ್ಳುವ ಹಕ್ಕು ಅವರಿಗಿರಬೇಕು. ಪೂರ್ಣವಾಗಿ ಅಧಿಕಾರ

ವರ್ಗಾವಣೆಯಾದ ನಂತರ ಯಾವ ಭಾಗಕ್ಕೆ ಸೇರಬೇಕೆಂದು ಪಠಾಣ ರಾಜ್ಯವೇ ನಿರ್ಣಯಿಸಬೇಕು. ಬ್ರಿಟಿಷರ ಮತ್ತು ಮುಸ್ಲಿಮ್ ಲೀಗಿನ ದಬ್ಬಾಳಿಕೆ ಯಡಿಯಲ್ಲಿ ಜನಮತಗಣನೆಯಾದರೆ ಎಂತಹ ಬಲಾತ್ಕಾರದ ನಿರ್ಣಯ ವಾದೀತು ಎಂದು ಮತ್ತೆ ಹೇಳಬೇಕಾಗಿಲ್ಲ."

ಗಾಂಧೀಜಿಗೂ ಈ ವಾದ ಸರಿ ಎನಿಸಿತು. ಅವರ ದೃಷ್ಟಿಯಲ್ಲಿ ಗಡಿನಾಡು ಪ್ರಾಂತದ ಅದ್ಭುತ ಪರಿವರ್ತನೆ ಆದುದು ಖುದಾಯಿ ಖಿದ್ ಮತ್‌ಗಾರರ ಅಹಿಂಸಾತ್ಮಕ ಆಂದೋಲನದಿಂದ. ವೀರರ ಅಹಿಂಸೆಯನ್ನು ಪಠಾಣರು ಪ್ರದರ್ಶಿಸಿರುವುದರಿಂದ ಮುಂದೆ ಅವರು ಸ್ವತಂತ್ರ ರಾಜ್ಯವಾಗಿ ಪಾಕಿಸ್ತಾನಕ್ಕೂ ಭಾರತಕ್ಕೂ ಒಂದು ಸುಂದರ ಸೌಹಾರ್ದದ ಕೊಂಡಿಯಾಗ ಬಲ್ಲರು ಎಂದು ಗಾಂಧೀಜಿಯ ನಂಬಿಕೆಯಾಗಿತ್ತು. ಜಿನ್ನಾರವರಿಗೂ ಲಾರ್ಡ್ ಮೌಂಟ್‌ಬೇಟನ್ನರಿಗೂ ಬರೆದು, "ಪಠಾಣ ನಾಯಕರೊಡನೆ ಸೌಹಾರ್ದ ಯುತವಾಗಿ ಕುಳಿತು ಮಾತುಕತೆಗಳ ಮೂಲಕ ಒಪ್ಪಂದಕ್ಕೆ ಬನ್ನಿ. ಗಫಾರ್‌ಖಾನರೂ ಅದಕ್ಕೆ ಸಹಕರಿಸಿ ಯಾರು" ಎಂದು ಸಲಹೆ ಮಾಡಿದರು. ಆದರೆ ನೆಹರೂ ಅವರು ಸರ್ದಾರ್ ಪಟೇಲರೂ ಈ ಬಗ್ಗೆ ಒಂದು ತೀರ್ಮಾನಕ್ಕೆ ಬಂದು ಬಿಟ್ಟಿದ್ದುದರಿಂದ ಜನಮತ ಗಣನೆಗೆ ಕಾಂಗ್ರೆಸ್ ಒಪ್ಪಬೇಕಾಯಿತು.

ಜೂನ್ ೧೮ರಂದು ಗಾಂಧೀಜಿ ಮತ್ತು ಗಫಾರ್‌ಖಾನರು ಜಿನ್ನಾ ಸಾಹೇಬರನ್ನು ಅವರ ಮನೆಯಲ್ಲಿ ಭೇಟಿಯಾದರು. ಪಠಾಣರು ಯಾವ ಘರ್ಷಣೆಗೂ ಆಸ್ಪದಕೊಡದೆ ತಮ್ಮ ಸ್ವಾಯತ್ತತೆಯ ಹಕ್ಕನ್ನು ಸ್ಥಾಪಿಸಿ ಕೊಳ್ಳಲು ಅವಕಾಶವಿರುವುದಾದರೆ ಪಾಕಿಸ್ತಾನದಲ್ಲಿ ಸೇರುವುದಾಗಿ ಖಾನರು ಭರವಸೆ ಇತ್ತರು. ಆದರೆ ಜಿನ್ನಾ ಸಾಹೇಬರು ಈ ಸಲಹೆಯನ್ನು ನಿರಾಕರಿಸಿ ಬಿಟ್ಟರು. ಗಫಾರ್‌ಖಾನರನ್ನು ಗಡಿನಾಡಿನ ಪ್ರತಿನಿಧಿಯೆಂದು ಒಪ್ಪಲು ಅವರು ಸಿದ್ಧರಾಗಲೇ ಇಲ್ಲ. ಗಫಾರ್‌ಖಾನರ ಮೂಲಕ ಅಲ್ಲಿ ಕಾಂಗ್ರೆಸ್ ಪ್ರಬಲವಾಗುವುದೆಂಬ ಶಂಕೆ ಇತ್ತು. ಯಾವ ಅಭಿಪ್ರಾಯ ಗಳಿಗೂ ಮನ್ನಣೆಕೊಡದೆ ಮುಸಲ್ಮಾನ ಬಹು ಸಂಖ್ಯೆಯ ಪ್ರದೇಶವೆಂಬ ಏಕೈಕ ನಿರ್ಣಯಕ್ಕೆ ಬಂದು ಗಫಾರ್‌ಖಾನರ ಸಲಹೆಗಳನ್ನೆಲ್ಲ ತಳ್ಳಿಹಾಕಿ ಬಿಡಲಾಯಿತು.

ಗಾಂಧೀಜಿಗೆ ತೀವ್ರ ಆಘಾತವೆನಿಸಿತು. ಮಾರನೇ ದಿನ ರಾತ್ರಿಯೆಲ್ಲ ನಿದ್ದೆ ಬರಲಿಲ್ಲ. ಬೆಳಗಿನ ಜಾವದಲ್ಲಿ ತಮ್ಮಷ್ಟಕ್ಕೆ ತಾವೇ ಹೀಗೆ ಹೇಳಿಕೊಳ್ಳುತ್ತಿದ್ದರೆಂದು ಶ್ರೀ ಪ್ಯಾರೆಲಾಲರು ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ:-

"ನನಗಿನ್ನು ೧೨೫ ವರ್ಷ ಬದುಕುವ ಆಸೆ ಉಳಿದಿಲ್ಲ. ಬಾದ್‌ಷಾ ಖಾನರು ಒಬ್ಬ ಮಹತ್ವಪೂರ್ಣ ವ್ಯಕ್ತಿ. ದಿನ ಕಳೆದಂತೆ ಅವರ ಆಳವಾದ ಆಧ್ಯಾತ್ಮಿಕ ಪ್ರವೃತ್ತಿಯನ್ನು ಕಾಣುತ್ತಲೇ ಸಾಗಿದ್ದೇನೆ. ತಾಳ್ಮೆ, ನಂಬಿಕೆ ಮತ್ತು ಅಹಿಂಸೆಗಳು ಅವರಲ್ಲಿ ತ್ರಿವೇಣಿಯಾಗಿ ಸಂಗಮಿಸಿ ಅವರನ್ನು ನಮ್ರತೆಯ ದಿವ್ಯಮೂರ್ತಿಯನ್ನಾಗಿಸಿವೆ. ಅಸಂಖ್ಯಾತ ಪಠಾಣರ ಹೃದಯಗಳಲ್ಲಿ ಅವರು ಚಕ್ರವರ್ತಿಯಂತೆ ರಾರಾಜಿಸುತ್ತಾರೆ. ಇಂಥ ಅಸಾಧಾರಣ ವ್ಯಕ್ತಿಗೆ ಸೋಲೆಂಬುದಿಲ್ಲ. ಯಾವುದೇ ತ್ಯಾಗ ಬಲಿದಾನಗಳಿಗೂ ಹಿಂಜರಿಯದೆ ಪಠಾಣರ ಕಲ್ಯಾಣಕ್ಕಾಗಿ ಅವರು ಕೊನೆಯುಸಿರಿನವರೆಗೂ ಸೇವೆಸಲ್ಲಿಸುವರೆಂದು ನನಗೆ ಪೂರ್ಣ ವಿಶ್ವಾಸವುಂಟು. ಅವರ ಬದುಕೇ ಈ ಸೇವೆಗೆ ಮೀಸಲು. ಅತಿ ವಿನಮ್ರ ತಪಸ್ವಿ. ಆತ್ಮಜ್ಯೋತಿಯನ್ನು ಬೆಳಗಿಸಿಕೊಂಡಿರುವ ಸಾಧಕ. ಯಾರನ್ನೂ ದ್ವೇಷಿಸದೆ ಸರ್ವರನ್ನೂ ಪ್ರೇಮದಿಂದ ಕಾಣುವ ಸತ್ಯಾಗ್ರಹಿ........ನಾನು ನಿದ್ರಿಸಲಾರೆ. ಆತನ ಬಗ್ಗೆ ಚಿಂತೆ ನನ್ನನ್ನು ನಿದ್ರಿಸಲು ಎಡೆಗೊಡುವುದಿಲ್ಲ" ಗಾಂಧೀಜಿಗೆ ಹೃದಯ ತುಂಬಿಬಂದಿತ್ತು.

ಮುಸ್ಲಿಮ್ ಲೀಗಿನವರು ಗಫಾರ್‌ಖಾನರನ್ನು ಹೇಯವಾಗಿ ನಿಂದಿಸತೊಡಗಿದರು. ಅನೇಕ ಆರೋಪಗಳನ್ನು ಹೊರಿಸಿದರು. ಮುಸ್ಲಿಮರಿಗೆ ದ್ರೋಹ ಬಗೆದಿದ್ದಾರೆಂದು ಅಪಪ್ರಚಾರ ಮಾಡಿದರು. ಅವರು ಅಫ್‌ಘಾನಿಸ್ತಾನದೊಡನೆ ಸೇರಿ ಪಾಕಿಸ್ತಾನವನ್ನು ವಿರೋಧಿಸಲು ಯತ್ನಿಸುತ್ತಿದ್ದಾರೆ ಎಂದರು. ಎಲ್ಲದಕ್ಕೂ ಖಾನರು ತಾಳ್ಮೆಯಿಂದಲೇ ಉತ್ತರಿಸುತ್ತ ಬಂದರು. ತಾವು ಕೈಕೊಂಡ ವ್ಯವಹಾರಗಳನ್ನೆಲ್ಲ ಮುಚ್ಚುಮರೆಯಿಲ್ಲದೆ ವಿವರಿಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿದರು.

ಜನಮತಗಣನೆಯ ನಿರ್ಣಯವಾದ ಮೇಲೆ ಗಫಾರ್‌ಖಾನರು ತಮ್ಮ ಅನುಯಾಯಿಗಳಿಗೆ ಈ ಗಣತಿಯಲ್ಲಿ ಭಾಗವಹಿಸಬಾರದೆಂದು ಆದೇಶಿಸಿದರು. ಇದರಿಂದ ವೈಸ್‌ರಾಯರು ಕುಪಿತರಾದರು. ಅವರು ಗಾಂಧೀಜಿಗೆ

ಬರೆದು ಗಫಾರ್‌ಖಾನರು ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಇದರಿಂದ ಗಡಿನಾಡಿನಲ್ಲಿ ಹಿಂಸಾತ್ಮಕ ಘರ್ಷಣೆಗಳ ಸಂಭವವಿದೆ. ಆದ್ದರಿಂದ ಖಾನರನ್ನು ಯಾವ ಚಳುವಳಿಗೂ ಆಸ್ಪದಕೊಡದಂತೆ ತಡೆಯಲು ಮನವಿ ಮಾಡಿ ಎಂದರು. ಗಾಂಧೀಜಿ, "ಗಫಾರ್‌ಖಾನರು ತಮ್ಮ ಅನುಯಾಯಿಗಳಿಗೆ ಮತಚಲಾಯಿಸಬೇಡಿರೆಂದು ಹೇಳಿದುವರಲ್ಲಿ ಏನೂ ತಪ್ಪಿಲ್ಲ. ಆದರೆ ಅವರು ಸಂಪೂರ್ಣ ಅಹಿಂಸಾತ್ಮಕ ಮಾರ್ಗವನ್ನನುಸರಿಸಬೇಕೆಂದೂ ಮುಸ್ಲಿಮ್ ಲೀಗಿನ ವಿರುದ್ಧವಾಗಿ ಮೆರವಣಿಗೆ ಪ್ರತಿ ಪ್ರದರ್ಶನಗಳನ್ನು ನಡೆಸಬಾರದೆಂದೂ ತಿಳಿಸಲಾಗಿದೆ" ಎಂದು ವೈಸ್‌ರಾಯರಿಗೆ ಹೇಳಿದರು. ಮುಸ್ಲಿಮ್ ಲೀಗ್ ಪ್ರಚಂಡವಾಗಿ ಅಪಪ್ರಚಾರಗಳಲ್ಲೂ, ಬಲಾತ್ಕಾರ ಹಿಂಸೆಯ ಒತ್ತಡತರುವುದರಲ್ಲೂ ತೊಡಗಿತ್ತು. ಅಧಿಕಾರಿವರ್ಗ ಅವರ ಪರವಾಗಿಯೇ ಇತ್ತು. ಇಂಥ ಕಠಿಣ ಪರಿಸ್ಥಿತಿಯಲ್ಲೂ ಖುದಾಯಿ ಖಿದ್‌ಮತ್‌ಗಾರರು ಯಾವ ಹಿಂಸೆಗೂ ತೊಡಗದೆ ಸಂಪೂರ್ಣವಾಗಿ ಅಹಿಂಸಾಯೋಧರಂತೆ ನಡೆದು ಕೊಳ್ಳಲು ಖಾನರು ಗಾಂಧೀಜಿಗೆ ಆಶ್ವಾಸನೆ ಇತ್ತರು. ಪ್ರತಿರೋಧಿಗಳ ಪ್ರಚೋದನೆಯಿಂದ ಅನೇಕ ಪಠಾಣರು ತೊಂದರೆಗೊಳಗಾದರು. ಗಫಾರ್‌ಖಾನರು ಎದೆಗೆಡದೆ ಶಾಂತಿಯುತ ಚಳುವಳಿಯನ್ನು ಸಂಘಟಿಸಿದರು. ಕಾಂಗ್ರೆಸ್ ಸಂಸ್ಥೆ ಅಲ್ಲಿ ನಿರ್ನಾಮವಾಗಬೇಕೆಂದು ಮುಸ್ಲಿಮ್ ಲೀಗಿನ ಹಠ. ಗಫಾರ್‌ಖಾನರಿಗೆ ಕಾಂಗ್ರೆಸ್ ಬಿಡುವಂತೆ ಬ್ರಿಟಿಷ್ ಸರ್ಕಾರವೂ ಅನೇಕ ಅಮಿಷಗಳನ್ನೊಡ್ಡಿತು. ಅಚಲವಾಗಿ ಗಾಂಧೀ ಮಾರ್ಗದಲ್ಲಿ ನಿಂತು ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸ್ಸನ್ನು ಪೋಷಿಸುವುದು ತಮ್ಮ ಧರ್ಮ ಎಂದು ತಿಳಿಸಿದ ಖಾನರು ಯಾವುದಕ್ಕೂ ಮಣಿಯಲಿಲ್ಲ. ಆದರೆ ಕೊನೆಗೆ ವಂಚನೆ ಧೂರ್ತತನ ಹಿಂಸಾಚಾರಗಳಿಂದ ಜನರನ್ನು ಬಲಾತ್ಕಾರವಾಗಿ ಮತಗಣನೆಯಲ್ಲಿ ತೊಡಗಿಸಿದರೂ ಮುಸ್ಲಿಮ್ ಲೀಗಿನ ಪರವಾಗಿ ಪಾಕಿಸ್ತಾನದಲ್ಲಿ ಲೀನವಾಗಲು ಬಂದ ಮತ ಶೇಕಡ ೫೦ ಮಾತ್ರ. ಗಫಾರ್‌ಖಾನರು ಈ ತೀರ್ಪಿಗೆ ಮಣಿಯಬೇಕಾಯಿತು.

೧೯೪೭ರ ಜುಲೈ ೨೨ ರಂದು ಗಫಾರ್‌ಖಾನರು ದೆಹಲಿಗೆ ಬಂದು ದೀರ್ಘವಾಗಿ ಗಾಂಧೀಜಿಯೊಡನೆ ಸಮಾಲೋಚಿಸಿದರು. ಕಾಂಗ್ರೆಸ್ ಸಂಸ್ಥೆ

ಗಡಿನಾಡಿನ ಬಗ್ಗೆ ತಮಗೆ ಪ್ರಬಲ ಬೆಂಬಲವಾಗಿ ನಿಂತು ಪಠಾಣರ ಹಕ್ಕೊತ್ತಾಯವನ್ನು ಬಲಗೊಳಿಸುವ ಬದಲು ಜಾರಿಕೆಯ ನಿಲುವನ್ನು ತಳೆದು ಬಿಟ್ಟಿತು ಎಂದು ಗಫಾರ್‌ಖಾನರು ಖಿನ್ನರಾಗಿದ್ದರು. ತಾವು ಪಾಕಿಸ್ತಾನದಲ್ಲೇ ಭದ್ರವಾಗಿ ನಿಂತು ಪಖ್ತೂನರ ಹಿತಾಸಕ್ತಿಗಳಿಗಾಗಿ ಸತತವಾಗಿ ಶ್ರಮಿಸುತ್ತೇವೆಂದೂ ತಮ್ಮ ಅಹಿಂಸಾಧರ್ಮಕ್ಕೆ ಎಂದೂ ಚ್ಯುತಿ ತರುವ ಕಾರ್ಯಕ್ಕೆ ಕೈಹಾಕುವುದಿಲ್ಲವೆಂದೂ ಗಾಂಧೀಜಿಗೆ ತಿಳಿಸಿ ಭಾರತದಿಂದ ಹೊರಟುಬಿಟ್ಟರು. ಈ ಕೊನೆಯ ಬೀಳ್ಕೊಡಿಕೆ ಅತ್ಯಂತ ರುದ್ರಗಂಭೀರ ಪ್ರಸಂಗವಾಗಿ ಇಬ್ಬರ ನೆನಪಿನಲ್ಲೂ ಶಾಶ್ವತವಾಗಿ ನಿಂತು ಬಿಟ್ಟಿತು. ೧೯೪೮ರ ಜನವರಿ ೩೦ ರಂದು ಗಾಂಧೀಜಿ ಹಂತಕನ ಗುಂಡಿಗೆ ಬಲಿಯಾದಾಗ ಗಫಾರ್‌ಖಾನ್, “ನಮ್ಮ ಕರಾಳ ದಿನಗಳಲ್ಲಿ ಅವರೊಬ್ಬರೇ ನಮಗೆ ಅಚಲವಾದ ದಾರಿ ದೀಪವಾಗಿ ನಿಂತು ಅಭಯದಾತರಾಗಿದ್ದರು” ಎಂದು ಶ್ರದ್ಧಾಂಜಲಿ ಅರ್ಪಿಸಿದರು.

೧೮. ಎಡಬಿಡದ ಹೋರಾಟ

೧೯೪೮ರಲ್ಲಿ ಪಾಕಿಸ್ತಾನ ನಾಮಕರಣ ಲೋಕಸಭೆಯ ಅಧಿವೇಶನಕ್ಕೆ ಖಾನ್‌ಅಬ್ದುಲ್ ಗಫಾರ್‌ಖಾನರೂ ಹೋಗಿದ್ದರು. ಅಲ್ಲಿನ ಪ್ರಧಾನಿ ಲಿಯಾಖತ್ ಅಲಿಖಾನ್ ಮುಸ್ಲಿಮ್‌ಲೀಗ್‌ನ ಮುಂದಾಳು. ಗಫಾರ್‌ಖಾನರ ಮತ್ತು ಪಠಾಣ ಜನಾಂಗದ ಅಖಂಡ ಭಾರತ ಭಕ್ತಿಯನ್ನು ಮುಸ್ಲಿಮ್ ಲೀಗ್ ಅಲ್ಲಗಳೆಯುತ್ತಿತ್ತು. ಆ ಸಭೆಯಲ್ಲಿ ಗಡಿನಾಡು ಪ್ರಾಂತದವರನ್ನು ದೇಶ ದ್ರೋಹಿಗಳೆಂದೂ ಹಿಂದೂಸ್ತಾನಿಗಳೆಂದೂ ಹೀಯಾಳಿಸಲಾಯಿತು. ಗಫಾರ್‌ಖಾನ್ ಕೆರಳಿ ನುಡಿದರು:–

“ನಾವು ನಿಜವಾದ ಇಸ್ಲಾಮ್ ಭಕ್ತರು. ಅಲ್ಲಿ ಹೇಳಿರುವ ‘ಷಾರಿಯತ್’ ಕಾನೂನನ್ನು ಗೌರವಿಸುತ್ತೇವೆ. ಸರ್ವರ ಭ್ರಾತೃತ್ವ ನಮ್ಮ ಧರ್ಮ. ಪಾಕಿಸ್ತಾನದ ಬಾವುಟಕ್ಕೆ ಸ್ವಾಮಿ ಭಕ್ತಿಯಿಂದ ನಡೆಯುತ್ತಿದ್ದೇವೆ. ನೀವೂ ಸಹೋದರರಂತೆ ನಡೆದುಕೊಳ್ಳುವುದಾದರೆ ಬಂಧುಗಳಾಗಿ ಜೀವಿಸುತ್ತೇವೆ. ಪಾಕಿಸ್ತಾನಕ್ಕೆ ನಿರಾಶ್ರಿತರಾಗಿಬಂದು ನಿಜವಾದ ‘ನಮಾಜ್’ ಎಂದರೇನು ಎಂದು ತಿಳಿಯದವರು ನಮ್ಮನ್ನೇ ಮುಸ್ಲಿಮರಲ್ಲವೆಂದು, ಮೂದಲಿಸುವುದು ಸರ್ವಥಾ ನ್ಯಾಯವಲ್ಲ.” ಲಿಯಾಖತ್ ಅಲಿಖಾನ್ ಅವಾಕ್ಕಾದರು.

ಪಾಕಿಸ್ತಾನದ ಸ್ಥಾಪಕ ಮಹಮ್ಮದಾಲಿ ಜಿನ್ನಾ ತಮ್ಮೊಡನೆ ಭೋಜನ ಮಾಡಲು ಗಫಾರ್‌ಖಾನರನ್ನು ಆಹ್ವಾನಿಸಿದರು. “ನೀವು ನಮ್ಮೊಡನೆ ಸಹಕರಿಸಿ ಕೆಲಸ ಮಾಡಿ” ಎಂದು ಕೇಳಿದರು. ಗಫಾರ್‌ಖಾನರೆಂದರು:–

"ನಮ್ಮದು ಪ್ರಮುಖವಾಗಿ ಸಮಾಜ ಸುಧಾರಣಾ ಚಳುವಳಿ. ನೀವೇ ಒಂದು ಬಾರಿ ಬ್ರಿಟಿಷ್ ಸರ್ಕಾರವನ್ನು ಪ್ರತಿಭಟಿಸಿ ನಮ್ಮ ಪರವಾಗಿ ವಾದಿಸಿದ್ದಿರಿ. ಬ್ರಿಟಿಷರು ನಮ್ಮ ಸಮಾಜ ಸೇವೆಯನ್ನು 'ರಾಜಕೀಯ ಚಳುವಳಿ' ಎಂದು ಕರೆದಿದ್ದರು. ನಮ್ಮ ಕಾರ್ಯಗಳಿಗೆಲ್ಲ ಅಡ್ಡಿಯನ್ನುಂಟು ಮಾಡಿ ನಮ್ಮನ್ನು ರಾಜಕೀಯ ಚಳುವಳಿಗೆ ತಳ್ಳಿದರು ಎಂದು ನೀವೇ ಹೇಳಿದ್ದಿರಿ. ಈಗ ಪಾಕಿಸ್ತಾನದಲ್ಲಿ ನಮ್ಮನ್ನು ದೇಶ ದ್ರೋಹಿಗಳೆಂದೂ ಹಿಂದೂ ಪಕ್ಷಪಾತಿಗಳೆಂದೂ ಲಿಯಾಖತ್ ಅಲಿಖಾನ್ ಹೇಳಿರುವಾಗ ನಮ್ಮ ಸಹಕಾರವನ್ನು ನೀವು ಬಯಸುವಿರಾ?"

ಜಿನ್ನಾರವರು ಆ ಕೂಡಲೆ ಲಿಯಾಖತ್ ಅಲಿಖಾನರ ಟೀಕೆ ತಪ್ಪೆಂದೂ ಅತ್ಯಂತ ಅನುಚಿತವೆಂದೂ ಹೇಳಿ ಸ್ನೇಹ ಹಸ್ತ ನೀಡಿದರು.

ಗಫಾರ್‌ಖಾನರು ಮುಂದುವರೆದು, "ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಹಿಂದುಳಿದಿರುವ ಜನಾಂಗ ಒಳ್ಳೆಯ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳುವುದು ಕಷ್ಟ. ಒಳ್ಳೆಯ ಪ್ರಜಾಪ್ರಭುತ್ವ ನಡೆಯಬೇಕಾದರೆ ರಾಜಕೀಯ ಪ್ರಜ್ಞೆ ಪ್ರಜೆಗಳಲ್ಲಿ ಅತ್ಯಗತ್ಯ. ಆದ್ದರಿಂದಲೇ ನಾನು ಸಾಮಾಜಿಕ ಸೇವೆಗೆ ಕಂಕಣ ಬದ್ಧನಾಗಿದ್ದೇನೆ" ಎಂದರು.

ಜಿನ್ನಾರವರ ಹೃದಯಕ್ಕೆ ಈ ಮಾತು ನಾಟಿತು. ಅವರು ಗಫಾರ್ ಖಾನರನ್ನು ಗಾಢವಾಗಿ ಅಪ್ಪಿದರು. ಖಾನರು ಬೇಡುವ ಎಲ್ಲ ಸಹಾಯವನ್ನು ಕೊಡಲು ಭರವಸೆ ಇತ್ತರು. ಉತ್ತರವಾಗಿ ಗಫಾರ್‌ಖಾನರು "ನನಗೆ ಸಹಾಯಕ್ಕಿಂತ ಹೆಚ್ಚಾಗಿ ನಿಮ್ಮ ಪೂರ್ಣ ವಿಶ್ವಾಸಬೇಕು. ಸಹಾಯ ಹಸ್ತಬೇಕು" ಎಂದರು.

ಗಫಾರ್‌ಖಾನರ ಗ್ರಾಮ ಪುನರ್ ನಿರ್ಮಾಣದ ಕಾರ್ಯಕ್ಕಾಗಿ ಎರಡು ಲಕ್ಷ ಚರಕಗಳನ್ನು ಒದಗಿಸಲು ಜಿನ್ನಾ ಮುಂದಾದರು. ಖುದಾಯಿ ಖಿದ್‌ಮತ್‌ಗಾರರನ್ನೆಲ್ಲ ಭೇಟಿಯಾಗಲು ಗಡಿನಾಡಿಗೆ ಬರುತ್ತೇನೆಂದರು.

"ಚರಕಗಳನ್ನು ಒದಗಿಸುವುದು ಸುಲಭ. ಅವನ್ನು ಸತತವಾಗಿ ತಿರುಗುವಂತೆ ಮಾಡುವುದು ಸುಲಭವಲ್ಲ. ನಾನು ಆ ಕಾರ್ಯಕ್ಕೆ ತೊಡಗುತ್ತೇನೆ" ಎಂದರು ಗಫಾರ್‌ಖಾನ್.

ಪಾಕಿಸ್ತಾನದ ವಿವಿಧ ಪ್ರಾಂತಗಳ ರಾಜ್ಯಪಾಲರು ಇನ್ನೂ ಬ್ರಿಟಿಷ್ ಅಧಿಕಾರಿಗಳೇ ಆಗಿದ್ದರು. ಹೊರಗಿನಿಂದ ವಲಸೆ ಬಂದ ಮುಸ್ಲಿಮ್ ಲೀಗಿನ ಸರ್ವಾಧಿಕಾರಿಗಳಿಗೆ ಸ್ಥಳೀಯ ಮುಖಂಡರಲ್ಲಿ ವಿಶ್ವಾಸವೇ ಇರಲಿಲ್ಲ. ಪರಸ್ಪರ ಸಂಶಯ, ಈರ್ಷೆ, ದ್ವೇಷಗಳು, ಆಂತರಿಕವಾಗಿ ಹೆಚ್ಚುತ್ತಲೇ ಸಾಗಿದವು. ಬಲೂಚಿಗಳೂ, ಸಿಂಧೀಯರೂ, ಬಂಗಾಳಿಗಳೂ, ಬಿಹಾರಿಗಳೂ, ಪಠಾಣರೂ ಕಡೆಗಣಿಸಲ್ಪಟ್ಟಿದ್ದರು. ಪಂಜಾಬಿಗಳದೇ ಎಲ್ಲ ಸ್ವಾಮ್ಯ, ಹೀಗಾಗಿ ಎಲ್ಲರೂ ಮುಸ್ಲಿಮರೇ ಆದರೂ ಪರಸ್ಪರ ಸೌಹಾರ್ದವೇ ಇರಲಿಲ್ಲ.

ಜಿನ್ನಾ ಅವರು ರಾಷ್ಟ್ರಾಧ್ಯಕ್ಷರಾಗಿ ಗಡಿನಾಡಿಗೆ ಭೇಟಿಯಿತ್ತರು. ಖುದಾಯಿ ಖಿದ್‌ಮತ್‌ಗಾರರೊಡನೆ ಸಮಾಲೋಚಿಸಲು ಇಚ್ಛಿಸಿದ್ದರು. ಆದರೆ ಮುಸ್ಲಿಮ್ ನಾಯಕರೂ, ಬ್ರಿಟಿಷ್ ರಾಜ್ಯಪಾಲರೂ ಸೇರಿ ಪಿತೂರಿ ನಡೆಸಿ ಈ ಭೇಟಿಯನ್ನು ರದ್ದುಗೊಳಿಸಿದರು. ಗಫಾರ್‌ಖಾನರ ಅನುಯಾಯಿಗಳು ಅನಾಗರಿಕ ಕೊಲೆಗಡುಕರೆಂದೂ, ಕಾಂಗ್ರೆಸ್ಸಿನ ಪರವಾಗಿ ಕೆಲಸ ಮಾಡುವ ಬೇಹುಗಾರರೆಂದೂ ಆರೋಪಿಸಿ ಜಿನ್ನಾರವರ ಮನಸ್ಸನ್ನು ಕೆಡಿಸಿದರು. ಮುಸ್ಲಿಮ್ ಲೀಗ್ ಪಕ್ಷವನ್ನು ಸೇರುವುದಾದರೆ ಮಾತ್ರವೇ ಗಫಾರ್‌ಖಾನರನ್ನು ಪುರಸ್ಕರಿಸುವುದಾಗಿ ಹಠ ಹಿಡಿದರು. ಜಿನ್ನಾ ಮಣಿಯಬೇಕಾಯಿತು.

ಜಿನ್ನಾರವರು ಅಲ್ಲಿಂದ ಹಿಂತಿರುಗಿ ಹೋದ ಕೂಡಲೇ ಲಿಯಾಖತ್ ಅಲಿಖಾನರೂ, ಗಡಿನಾಡಿನ ಗೌರ್ನರ್ ಕನ್ನಿಂಗ್‌ಹ್ಯಾಮರೂ ಗಫಾರ್‌ಖಾನ್ ಅವರ ಮಗ ಘನಿಖಾನ್ ಮತ್ತು ಸೋದರ ಡಾ ಖಾನ್‌ಸಾಹೇಬ್ ಎಲ್ಲರ ಮೇಲೂ ಗುರುತರವಾದ ರಾಜದ್ರೋಹ ಆಪಾದನೆಗಳನ್ನು ಹೊರಿಸಿದರು. ಬ್ರಿಟಿಷರ ಮೇಲೆ ಬಂಡಾಯವೆದ್ದಿದ್ದ ಇಪಿಫಕೀರ್ ಅವರಿಗೆ ಸಹಾಯ ಮಾಡುತ್ತಿದ್ದರೆಂದು ಗಫಾರ್‌ಖಾನರನ್ನು ದಸ್ತಗಿರಿ ಮಾಡಿದರು. ಆ ಸ್ಥಳದಲ್ಲೇ ಅತ್ಯುನ್ನತ ನ್ಯಾಯತೀರ್ಪಿನ ಶಿಕ್ಷೆಗೆ ಗುರಿ ಮಾಡಿದರು. ಗಫಾರ್‌ಖಾನರು ಹಿಂದಿನ ತಮ್ಮ ಎಲ್ಲ ಶಿಕ್ಷೆಗಳಲ್ಲಿ ಮಾಡಿದಂತೆಯೇ ತಾವು ನಿರಪರಾಧಿ ಎಂದಷ್ಟೇ ಹೇಳಿ ನ್ಯಾಯವಾದಿಗಳ ಮೂಲಕ ವಾದ ಮಂಡಿಸಲು ನಿರಾಕರಿಸಿದರು. ನ್ಯಾಯಾಧೀಶರು ನಲವತ್ತು ಸಾವಿರ

ರೂ. ಗಳ ಠೇವಣಿಯಿಟ್ಟು ಒಳ್ಳೆಯ ನಡತೆಯ ಭರವಸೆಕೊಡಬೇಕೆಂದು ಕೇಳಿದರು. ಅದನ್ನೂ ಖಾನರು ನಿರಾಕರಿಸಿದರು. ೧೯೪೮ ರ ಜೂನ್ ನಲ್ಲಿ ಅವರಿಗೆ ೩ ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ಪಶ್ಚಿಮ ಪಂಜಾಬಿನ ಮೌಂಟ್‌ಗೋಮರಿ ಜೈಲಿಗೆ ಕಳುಹಿಸಲಾಯಿತು. ನಾಡಿನ ಸ್ವಾತಂತ್ರ್ಯ ನಂತರ ಒಂದು ವರ್ಷ ಮುಗಿಯುವುದರಲ್ಲೇ ಈ ಗಡಿನಾಡಿನ ಗಾಂಧಿ ಎಂದು ಲೋಕಪ್ರಿಯರಾಗಿದ್ದ ನಿಸ್ಸೀಮ ಸ್ವಾತಂತ್ರ್ಯಯೋಧ ಮತ್ತೆ ಅದೇ ಹೋರಾಟಕ್ಕಾಗಿ ಪಾಕಿಸ್ತಾನದ ಸೆರೆಮನೆ ಸೇರಬೇಕಾಯಿತು.

ತಮ್ಮ ಆತ್ಮಕಥೆಯಲ್ಲಿ ಬರೆಯುತ್ತಾ ಗಫಾರ್‌ಖಾನರು, "ನಾವು ಯಾವುದೇ ಅಪರಾಧವನ್ನು ಮಾಡದೇ ಹೋದರೂ ಪ್ರಾರಂಭದಿಂದಲೂ ಪಾಕಿಸ್ತಾನ ಸರ್ಕಾರ ನಮಗೆ ಕೊಟ್ಟ ಶಿಕ್ಷೆ, ತೋರಿಸಿದ ತಿರಸ್ಕಾರ ಮತ್ತು ಕ್ರೌರ್ಯ ಬ್ರಿಟಿಷರಂತಹ ವಿದೇಶೀಯರ ದಬ್ಬಾಳಿಕೆಗಳಿಗಿಂತಲೂ ಹೆಚ್ಚಾಗಿತ್ತು. ಬ್ರಿಟಿಷರು ನಮ್ಮ ಮನೆಗಳನ್ನು ಲೂಟಿ ಮಾಡಲಿಲ್ಲ. ಮೆರವಣಿಗೆ ಮತ್ತು ಭಾಷಣಗಳನ್ನು ತಡೆಗಟ್ಟುತ್ತಿರಲಿಲ್ಲ. ಪತ್ರಿಕೆಗಳನ್ನು ಮಾತೃಭಾಷೆಯಲ್ಲಿ ಪ್ರಕಟಿಸಲು ಅಡ್ಡಿ ಮಾಡುತ್ತಿರಲಿಲ್ಲ. ನಮ್ಮ ಮಹಿಳೆಯರನ್ನು ಅಗೌರವದಿಂದ ಕಾಣುತ್ತಿರಲಿಲ್ಲ. ಆದರೆ ನಮ್ಮವರೇ ಆದ ಪಾಕಿಸ್ತಾನಿಗಳು ಎಲ್ಲವನ್ನೂ ಮಾಡಿದರು.

"ಬ್ರಿಟಿಷರ ಸೆರೆಮನೆಗಳಲ್ಲಿ ನಾನು ಹದಿನೈದು ವರ್ಷಗಳು ಕಳೆದೆ. ಅನಂತರ ಪಾಕಿಸ್ತಾನದ ಸೆರೆಮನೆಗಳಲ್ಲಿ ಮತ್ತೆ ಹದಿನೈದು ವರ್ಷ ಕೊಳೆಯಬೇಕಾಯಿತು. ವಾಸ್ತವವಾಗಿ ಪಾಕಿಸ್ತಾನದ ಸೆರೆಮನೆಗಳಲ್ಲಿ ಬ್ರಿಟಿಷರಿಗಿಂತ ಕ್ರೂರ ಅಮಾನಿಕ ನಿಯಮಗಳನ್ನು ಹೇರಲಾಯಿತು.

"ಪಾಕಿಸ್ತಾನದ ನಾಯಕರೊಡನೆ ಸೌಹಾರ್ದಯುತ ಬಾಂಧವ್ಯ ಬೆಳೆಸಲು ನನಗೆ ಅವಕಾಶವೇ ಆಗಲಿಲ್ಲ. ಈ ದೇಶ ಹುಟ್ಟಿದ್ದೇ ದ್ವೇಷದ ಜ್ವಾಲೆಯೊಳಗಿಂದ. ಪ್ರೀತಿ ಪ್ರೇಮಗಳಿಂದಲ್ಲ. ಅದ್ದರಿಂದ ಅದೇ ದ್ವೇಷ ಮಾತ್ಸರ್ಯಗಳ, ಅದೇ ಸೇಡು ಮತ್ತು ವಿರೋಧಗಳ ಮೂಲಕ ಬೆಳೆಯಿತು.

"ಬ್ರಿಟಿಷರ ಅನುಗ್ರಹದಿಂದ ಪಾಕಿಸ್ತಾನ ಹುಟ್ಟಿತು. ಹಿಂದೂಗಳನ್ನೂ ಮುಸಲ್ಮಾನರನ್ನೂ ಶಾಶ್ವತವಾಗಿ ಪ್ರತ್ಯೇಕಿಸಿ, ಯಾವಾಗಲೂ

ಯುದ್ಧ ಮಾಡುವಂತೆ ಪ್ರೇರೇಪಿಸುತ್ತಾ ಎಂದೂ ಸೋದರರಂತೆ ಬಾಳಲು ಅವಕಾಶ ಕೊಡದಿರುವುದೇ ಅವರ ಉದ್ದೇಶವಾಗಿತ್ತು."

ಗಫಾರ್‌ಖಾನರ ಬವಣೆಯನ್ನು ತಿಳಿದು ಭಾರತದ ರಾಜ್ಯಾಂಗ ಸಭೆಯಲ್ಲಿ ಪ್ರಧಾನಿ ಜವಹರಲಾಲರು ಕೆರಳಿ ನುಡಿದರು, "ಖಾನ್ ಸಹೋದರರು ಭಾರತ ಉಪಖಂಡದ ವಿಮೋಚನೆಗಾಗಿ ನಿಸ್ಸೀಮ ಬಲಿದಾನ ಮಾಡಿದ ಸತ್ಯಾಗ್ರಹಿಗಳು. ಅಹಿಂಸಾ ಸಮರದಲ್ಲಿ ಹಿರಿದಾದ ಪಾತ್ರ ವಹಿಸಿದರು. ಈ ಸುಸಂಸ್ಕೃತ ಮಹಾಯೋಧ ಯಾವುದೇ ರಹಸ್ಯ ಪಿತೂರಿಗಳಲ್ಲಿ ತೊಡಗುವರೆಂದು ಯಾವ ದೇಶಭಕ್ತನೂ ನಂಬಲು ಸಾಧ್ಯವೇ ಇಲ್ಲ. ಮುಚ್ಚುಮರೆಯಿಲ್ಲದ ದಿಟ್ಟತನ, ಶುದ್ಧ ಚಾರಿತ್ರ್ಯ, ನಿರ್ಭಯತೆ ಮತ್ತು ಜನತೆಯ ಸೇವೆಗಾಗಿ ತ್ಯಾಗ ದೀಕ್ಷೆ ಈ ಗುಣಗಳ ಸಾಕಾರ ಮೂರ್ತಿ ಅವರು. ಪಾಕಿಸ್ತಾನದಲ್ಲೇನಾಗುತ್ತಿದೆ ಎಂದು ನಾನು ಟೀಕೆಯಲ್ಲಿ ತೊಡಗುವುದಿಲ್ಲ. ಆದರೆ ನಮ್ಮ ಗೌರವಾನ್ವಿತ ಹಿರಿಯ ಸಹಚರರಾಗಿ ಹೋರಾಡಿದ ಖುದಾಯಿ ಖಿದ್‌ಮತ್‌ಗಾರರಿಗೂ, ಅವರ ನಾಯಕರಿಗೂ ಒದಗಿರುವ ಸಂಕಟವನ್ನು ಕೇಳಿ ನಮಗೆ ತೀವ್ರ ವೇದನೆಯಾಗಿದೆ."

೧೯೫೧ ರಲ್ಲಿ ಗಫಾರ್‌ಖಾನರನ್ನು ಖೈದಿಯಾಗಿಯೇ ಲಾಹೋರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ದರು. ಆಗ ಅವರಿಗೆ ಶ್ವಾಸಕೋಶಗಳ ಖಾಯಿಲೆ ಬಂದಿತ್ತು. ತೀವ್ರವಾಗಿ ಬಳಲಿದ್ದರು. ಜೈಲಿನ ಕಠಿಣಶಿಕ್ಷೆ ಆಘಾತ ಮಾಡಿತ್ತು.

ಜೈಲಿನಲ್ಲಿದ್ದಾಗಲೇ ಮತ್ತೆ ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿಖಾನರು ಸ್ನೇಹಿತರ ಮೂಲಕ ಸಂಧಾನ ನಡೆಸಿ ಗಫಾರ್‌ಖಾನರು ಮುಸ್ಲಿಮ್ ಲೀಗಿಗೆ ಸೇರಿ ಮಂತ್ರಿಮಂಡಲದ ಸ್ಥಾನವನ್ನು ಅಂಗೀಕರಿಸಲು ಬಿನ್ನಹ ಮಾಡಿದರು. ಉತ್ತರವಾಗಿ ಖಾನರು, "ಬಂಧಿಗಳಾಗಿರುವುದರಿಂದ ನಾನು ಯಾವ ರಾಜಕೀಯ ವಿವಾದದಲ್ಲೂ ಭಾಗಿಯಾಗಲಾರೆ, ಮಂತ್ರಿಮಂಡಲ ಸೇರಲು ಕೇಳಿದ್ದೀರಿ. ನನ್ನ ಮಟ್ಟಿಗೆ ಹೇಳುವುದಾದರೆ ಸರ್ಕಾರ ಜನ ಸೇವೆಗಾಗಿ ನಿರ್ಮಾಣವಾಗುವ ವ್ಯವಸ್ಥೆ ಮಾತ್ರ. ನೀವಾದರೂ ಅದನ್ನು ವಯ್ಯಕ್ತಿಕ ಅಧಿಕಾರ ಬೇಟೆಯ ಸಾಧನ

ವನ್ನಾಗಿ ಮಾತ್ರ ಪರಿಗಣಿಸುತ್ತಿದ್ದೀರಿ. ನಮ್ಮಿಬ್ಬರ ಮಧ್ಯೆ ಹೇಗೆ ಒಪ್ಪಂದ ಸಾಧ್ಯ?" ಎಂದು ತಿಳಿಸಿದರು.

ಅಲ್ಲಿಂದಾಚೆ ನಾಲ್ಕು ವರ್ಷ ಖೈದಿಗಳಾಗಿಯೇ ಇದ್ದರು. ಜವಹರ ಲಾಲರಿಗೆ ಬಾದ್‌ಷಾಖಾನರು ಪಡುತ್ತಿದ್ದ ಕಷ್ಟಗಳನ್ನು ಕೇಳಿ ನೋವಾಗುತ್ತಿತ್ತು. "ನಾವೇನನ್ನು ಮಾಡಲಾರದಂತೆ ನಿಸ್ಸಹಾಯಕ ಪ್ರೇಕ್ಷಕರಾಗ ಬೇಕಾಯಿತಲ್ಲ" ಎಂದು ಮಮ್ಮಲ ಮರುಗಿದರು. "ಭಾರತದಲ್ಲಿ ಹುಟ್ಟಿದ ಅತ್ಯಂತ ಶ್ರೇಷ್ಠ ಪುತ್ರ; ತಾಯ್ನಾಡಿನ ಸೇವೆಯಲ್ಲಿ ಅದ್ವಿತೀಯರು: ಎಲ್ಲೇ ಇದ್ದರೂ ಸ್ವಾತಂತ್ರ್ಯ ಮತ್ತು ಮಾನವೀಯ ಮೌಲ್ಯಗಳಿಗಾಗಿ ಸತತವಾಗಿ ಹೋರಾಡುವ ಆ ದಿವ್ಯಚೇತನ ನಮ್ಮನ್ನು ಆ ಆದರ್ಶದ ದಾರಿಯಲ್ಲಿ ನಡೆಸಲು ಸದಾ ದಾರಿ ದೀಪವಾಗಿಯೇ ಉಳಿದೀತು. ಪಾಕಿಸ್ತಾನ ಈ ಮಹಾಮಹಿಮನನ್ನು ನಡೆಸಿಕೊಳ್ಳುತ್ತಿರುವ ರೀತಿ ಆ ದೇಶಕ್ಕೆ ಯಾವ ಗೌರವವನ್ನೂ ತರಲಾರದು" ಎನ್ನುತ್ತಿದ್ದರು.

೧೯೫೩ ರಲ್ಲಿ ಪಾಕಿಸ್ತಾನದ ಪ್ರಧಾನಮಂತ್ರಿ ಸರ್ದಾರ್ ಬಹದೂರ್ ಖಾನರು ಜೈಲಿಗೆ ಬಂದು ಗಫಾರ್‌ಖಾನರನ್ನು ಭೇಟಿ ಮಾಡಿದರು. ಅವರನ್ನು ದೀರ್ಘಕಾಲ ಸೆರೆಯಲ್ಲಿಟ್ಟಿರಲು ಸರ್ಕಾರ ಇಚ್ಛಿಸುವುದಿಲ್ಲವೆಂದೂ ಆದರೆ ಅವರಿಗಾಗಿರುವ ಸಂಕಷ್ಟಗಳಿಗಾಗಿ ಗಫಾರ್‌ಖಾನರು ಸರ್ಕಾರವನ್ನು ಕ್ಷಮಿಸಲಾರರೆಂದೂ ಮಂತ್ರಿಗಳು ಅನುಮಾನಪಟ್ಟರು. ಗಫಾರ್‌ಖಾನರು ಪ್ರಶಾಂತರಾಗಿಯೇ ಹೀಗೆ ಹೇಳಿದರು. "ಅಹಿಂಸಾವಾದಿಯಾದ ಖುದಾಯಿ ಖಿದ್‌ಮತ್‌ಗಾರನಾಗಿ ನಾನೆಂದೂ ಯಾರ ಬಗ್ಗೆಯೂ ಸೇಡಿನ ಅಥವ ಪ್ರತಿಹಿಂಸೆಯ ಯೋಚನೆಯನ್ನು ಮಾಡಲಾರೆ. ಆದರೆ ನನ್ನನ್ನು ನಿರಪರಾಧಿ ಎಂದು ತಿಳಿದು ನನ್ನಿಂದ ಏನೂ ಅಪಾಯವಿಲ್ಲ ಎಂದು ನಿಮಗೆ ಪೂರ್ಣವಿಶ್ವಾಸ ಬರುವವರೆಗೆ ನನ್ನ ಬಿಡುಗಡೆಯ ಬಗ್ಗೆ ನೀವೇನೂ ಕಾತರರಾಗಬೇಕಾಗಿಲ್ಲ."

೧೯೫೪ ರ ಜನವರಿ ಐದರಂದು ಪಾಕಿಸ್ತಾನ ಸರ್ಕಾರ ಅಧಿಕೃತ ಘೋಷಣೆ ಹೊರಡಿಸಿ ಗಫಾರ್‌ಖಾನರನ್ನೂ ಅವರೊಡನಿದ್ದ ನೂರಾರು ಅನುಯಾಯಿಗಳನ್ನೂ ಬಿಡುಗಡೆ ಮಾಡಿತು. ಅವರು ಪಂಜಾಬಿನ ನಿವಾಸಿಗಳಾಗಿ ಉಳಿಯಬೇಕೆಂದೂ ಆ ಆಜ್ಞೆಯಲ್ಲಿ ಸೂಚಿಸಲಾಗಿತ್ತು. ಸೆರೆಯಿಂದ

ಬಿಡುಗಡೆಯಾದರೂ ಅವರ ಚಲನವಲನಗಳ ಮೇಲಿನ ನಿರ್ಬಂಧಗಳು ಸಡಿಲವಾಗಲೇ ಇಲ್ಲ. ರಾವಲ್‌ಪಿಂಡಿಯಲ್ಲಿ ವಾಸಮಾಡುತ್ತಿದ್ದರು.

ಅದೇ ವರ್ಷ ಪಾಕಿಸ್ತಾನದ ಲೋಕಸಭೆಯ ಸದಸ್ಯರಾಗಿ ಅದರ ಆಯವ್ಯಯ ಅಧಿವೇಶನದಲ್ಲಿ ಭಾಗವಹಿಸಲು ಗಫಾರ್‌ಖಾನರಿಗೆ ಅನುಮತಿ ನೀಡಲಾಯಿತು. ಆ ಸಭೆಯಲ್ಲಿ ಮಾತನಾಡುತ್ತಾ, "ಪಾಕಿಸ್ತಾನದ ಪ್ರಜೆಯಾಗಿ ನಿಷ್ಠೆಯಿಂದ ಜನಸೇವಾ ಕಾರ್ಯಕ್ಕೆ ತೊಡಗುವುದಕ್ಕೆ ನನಗೆ ಸಾಧ್ಯವಾಗದ ಹಾಗೆ ನಿರ್ಬಂಧ ಪಡಿಸಲಾಗಿದೆ. ಬ್ರಿಟಿಷರ ಕಾಲಕ್ಕಿಂತಲೂ ಹೆಚ್ಚಾಗಿ ನಮ್ಮ ನಮ್ಮಲ್ಲಿ ಸಂಶಯ, ಮತ್ಸರ, ಸೇಡು ಮನೆಮಾಡುತ್ತಿವೆ. ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿರುವುದು ಒಟ್ಟು ಭಾರತದಲ್ಲಿ ನಾವು ಕೈಕೊಂಡ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಎಂದು ಮರೆಯಬಾರದು. ಈ ಸಮರದಲ್ಲಿ ನಾನು ಪ್ರಾಮಾಣಿಕವಾಗಿ ದುಡಿದಿದ್ದೇನೆ. ಈಗ ಪಾಕಿಸ್ತಾನಕ್ಕೆ ಶಪಥ ಬಯಸಿ ನನ್ನ ಪಾಲಿನ ಕರ್ತವ್ಯಗಳನ್ನು ನಿರ್ವಹಿಸ ಬಯಸುತ್ತೇನೆ.

"ನನ್ನದು ಅಹಿಂಸಾ ಧರ್ಮ. ಪ್ರೇಮ ಸೌಹಾರ್ದಗಳಿಂದ ಮಾತ್ರವೇ ಸ್ವಾತಂತ್ರ್ಯದ ಫಲ ಎಲ್ಲರಿಗೂ ಸಮಾನವಾಗಿ ದೊರೆತೀತು. ಹಗೆತನ, ದ್ವೇಷಗಳು ಹಿಂಸೆಯ ರೂಪಗಳೆಂದು ನನ್ನ ನಂಬಿಕೆ. ನಿಷ್ಠಾವಂತ ರಾಷ್ಟ್ರಕನಾಗಿ ಸೇವೆ ಸಲ್ಲಿಸಬಯಸುತ್ತೇನೆ. ಪಾಕಿಸ್ತಾನ ಸದಾ ಶಾಂತಿಪ್ರಿಯ ರಾಷ್ಟ್ರವಾಗಬೇಕೆಂದೂ, ಅಂತರ್‌ರಾಷ್ಟ್ರೀಯ ವೇದಿಕೆಯಲ್ಲಿ ಶಾಂತಿದೂತ ದೇಶವಾಗಿ ನಡೆದುಕೊಳ್ಳಬೇಕೆಂದೂ, ಎಲ್ಲ ದೇಶಗಳ ಸ್ನೇಹವೇ ನಮ್ಮ ಗುರಿಯಾಗಿರಬೇಕೆಂದೂ ನಾನು ಬಯಸುತ್ತೇನೆ. ನೆರೆಹೊರೆಯ ರಾಷ್ಟ್ರಗಳೊಂದಿಗೆ ನಾವು ಸೌಹಾರ್ದ ಭಾವನೆಯಿಂದ ಸಹಕರಿಸಿ ಯಾವುದೇ ವಿವಾದ ಬಂದರೂ ಪರಸ್ಪರ ಮಾತುಕತೆಗಳಿಂದ, ಒಪ್ಪಂದಗಳಿಂದ ಪರಿಹರಿಸಿಕೊಳ್ಳಬೇಕು. ನಮ್ಮ ಜನರ ಜೀವನ ಗುಣಮಟ್ಟ ಮೇಲೇರಬೇಕು" ಎಂದರು.

ಪಾಕಿಸ್ತಾನದ ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿ ಗಫಾರ್‌ಖಾನರು ಎಲ್ಲ ಸಭೆಗಳಲ್ಲೂ ಹಾಜರಿದ್ದು ಸಹಕರಿಸಿದರು. ಸತತವಾಗಿ ಪ್ರಜಾಪ್ರಭುತ್ವ ತತ್ವಗಳನ್ನು ಪ್ರತಿಪಾದಿಸಿದರು. ಅಹಿಂಸೆಯಿಲ್ಲದೆ ಪ್ರಜಾ

ತಂತ್ರ ಯಶಸ್ವಿಯಾಗುವುದಿಲ್ಲ ಎಂದು ಎಚ್ಚರಿಸಿದರು. ಗ್ರಾಮ ಸ್ವರಾಜ್ಯ, ಪ್ರಾಂತೀಯ ಸಂಸ್ಕೃತಿಗಳ ವರ್ಧನೆ, ಭಾಷಾವಾರು ರಾಜ್ಯಗಳ ಸ್ವಾಯತ್ತತೆ, ವಿಕೇಂದ್ರಿತ ಆರ್ಥಿಕ ವ್ಯವಸ್ಥೆಗಳ ಆಧಾರದ ಮೇಲೆ ರಾಜ್ಯಾಂಗವನ್ನು ರೂಪಿಸಲು ಸಲಹೆ ಮಾಡುತ್ತಲೇ ಬಂದರು. ಸ್ವಾತಂತ್ರ್ಯ ಬಂದು ಏಳೆಂಟು ವರ್ಷಗಳು ಕಳೆದರೂ ರಾಜ್ಯಾಂಗವನ್ನಂಗೀಕರಿಸಿ ಚುನಾವಣೆಗಳ ಮೂಲಕ ಪ್ರಜಾಪ್ರಭುತ್ವವನ್ನು ಸ್ಥಾಪಿಸದೇ ಇರುವುದನ್ನು ಖಂಡಿಸಿದರು. ಬಲಾತ್ಕಾರದಿಂದ ಅಧಿಕಾರವಹಿಸಿ ಕೇಂದ್ರೀಕೃತ ಸರ್ವಾಧಿಕಾರ ಪಡೆದ ಶ್ರೀಮಂತ ವರ್ಗ ಮಣಿಯಲೇ ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯ ನಾಯಕರೆನಿಸಿದ್ದ ವೀರಯೋಧರನ್ನು ಪಾಕಿಸ್ತಾನ ಯಾವ ರೀತಿಯಲ್ಲೂ ಗೌರವಿಸಲೇ ಇಲ್ಲ. ಬದಲಾಗಿ ಬ್ರಿಟಿಷರೊಡನೆ ಸೇರಿ ಸತತವಾಗಿ ರಾಷ್ಟ್ರವಿರೋಧಿ ಶಕ್ತಿಗಳನ್ನು ಬೆಳೆಸುತ್ತಲೇ ಬಂದಿದ್ದ ಮುಸ್ಲಿಮ್ ಮುಖಂಡರು ಪಾಕಿಸ್ತಾನದ ಅಧಿಕಾರ ಸೂತ್ರ ಹಿಡಿದು ಬ್ರಿಟಿಷ್ ಆಡಳಿತಗಾರರ ಮತ್ತು ಸೈನ್ಯಾಧಿಕಾರಿಗಳ ಬೆಂಬಲವನ್ನು ಆಶ್ರಯಿಸಿದರು. ಪರಿಣಾಮವಾಗಿ ಜನತೆಯ ನಿಜವಾದ ಪ್ರತಿನಿಧಿಗಳು ಪ್ರಜಾಸತ್ತಾತ್ಮಕ ರೀತಿಯಲ್ಲಿ ಆರಿಸಿ ಬಂದು ಅಧಿಕಾರ ವಹಿಸಲು ಸಾಧ್ಯವಾಗಲೇ ಇಲ್ಲ. ೧೯೫೮ರ ವರೆವಿಗೂ ಪಾಕಿಸ್ತಾನದಲ್ಲಿ ಹಿಂದಿನ ವಸಾಹತುಶಾಹಿ ನಿರ್ಮಾಣ ಮಾಡಿದ್ದ ಆಡಳಿತ ಚೌಕಟ್ಟು ವ್ಯತ್ಯಾಸವಾಗಲೇ ಇಲ್ಲ.

ಕೊನೆಗೊಮ್ಮೆ ರಾಜ್ಯಾಂಗ ರಚಿಸಿದಾಗ ಪಶ್ಚಿಮ ಪಾಕಿಸ್ತಾನದ ಎಲ್ಲ ರಾಜ್ಯಗಳನ್ನೂ ಒಟ್ಟುಗೂಡಿಸಿ ಒಂದೇ ಆಡಳಿತ ಘಟಕ ಮಾಡಲು ಶಿಫಾರ್ಸು ಮಾಡಲಾಯಿತು. ಒಂದು ಸಾವಿರ ಮೈಲಿಗೂ ಆಚೆ ಇದ್ದ ಪೂರ್ವ ಬಂಗಾಳ ಮತ್ತೊಂದು ಆಡಳಿತ ಘಟಕವೆಂದೆಣಿಸಲಾಯಿತು. ವಾಸ್ತವವಾಗಿ ಪಾಕಿಸ್ತಾನದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ಬಂಗಾಳಿಗಳಾಗಿದ್ದರು. ಆದರೆ ಅವರ ಪ್ರಾಬಲ್ಯ ಪಾಕಿಸ್ತಾನದ ರಾಜಧಾನಿ ಕರಾಚಿಯಲ್ಲಿ ಕುಂಠಿತವಾಗುವಂತೆ ಅಧಿಕಾರದಲ್ಲಿದ್ದ ಮುಸ್ಲಿಮ್ ಲೀಗ್ ಪಕ್ಷ ಅನೇಕ ಅಡೆತಡೆಗಳನ್ನು ತಂದೊಡ್ಡಿತು. ಪಂಜಾಬಿನ ಪಶ್ಚಿಮ ಭಾಗ ಪಾಕಿಸ್ತಾನದ ಎಲ್ಲ ಚಿಕ್ಕ ಪ್ರಾಂತಗಳನ್ನೂ ತನ್ನ ನಿಯಂತ್ರಣದಲ್ಲಿ ತರಲು ಹವಣಿಸಿತು. ಬಂಗಾಳದ ಮುಸ್ಲಿಮರು ಕುಪಿತರಾದರು. ಹಾಗೆಯೇ

ಬೆಲೂಚಿಸ್ತಾನ, ಸಿಂಧ್, ಗಡಿನಾಡು ಪ್ರಾಂತಗಳು ಪ್ರತಿಭಟಿಸುತ್ತಿದ್ದವು. ಗಫಾರ್‌ಖಾನರು ಈ ಆಂತರಿಕ ಘರ್ಷಣೆಗಳನ್ನು ಗಮನಿಸಿ ಭಾಷಾವಾರು ರಾಜ್ಯಗಳನ್ನು ರಚಿಸಿ ಅಧಿಕಾರ ವಿಕೇಂದ್ರಿಕರಣ ಮಾಡಬೇಕೆಂದು ಪ್ರತಿಪಾದಿಸುತ್ತಲೇ ಬಂದರು. ಆದರೆ ಅವರನ್ನು ಇಸ್ಲಾಮ್ ವಿರೋಧಿಗಳೆಂದೂ, ಉರ್ದು ಭಾಷೆಯ ಶತ್ರುವೆಂದೂ, ಭಾರತದ ಪಕ್ಷಪಾತಿಯೆಂದೂ ಅಪಪ್ರಚಾರ ಮಾಡಿ ಪಾಕಿಸ್ತಾನ ಸರ್ಕಾರ ಆಗಾಗ್ಗೆ ದೇಶದ್ರೋಹ ಕಟ್ಟಳೆಗಳನ್ನು ಹೇರಿ ಸೆರೆಮನೆಗೆ ಹಾಕುತ್ತಲೇ ಸಾಗಿತು. ಪಠಾಣರು ರೊಚ್ಚಿಗೆದ್ದು ಪ್ರತಿಭಟಿಸಿದರು. ಸಿಂಧ್ ಮತ್ತು ಬೆಲೂಚಿಸ್ತಾನಗಳು ಬಹಳ ಕಾಲದಿಂದ ರಾಷ್ಟ್ರೀಯ ಮನೋಧರ್ಮದ ನಾಯಕರ ಪ್ರಭಾವಕ್ಕೆ ಒಳಗಾಗಿದ್ದುದರಿಂದ ಭಾರತದ ಸ್ವರಾಜ್ಯ ಕಲ್ಪನೆಯನ್ನು ಪ್ರತಿಪಾದಿಸುತ್ತಿದ್ದವು. ಬೆಲೂಚಿ ಗಾಂಧಿ ಎಂದು ಹೆಸರಾಗಿದ್ದ ಖಾನ್‌ಅಬ್ದುಲ್ ಸಮದ್‌ಖಾನ್ ಮತ್ತು ಮೌಲಾನಾ ಭಷಾನಿ ಮುಂತಾದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಮುಖಂಡರು ಅವರವರ ಜನತೆಯಲ್ಲಿ ಪ್ರಭಾವಶಾಲಿಗಳಾಗಿದ್ದರು. ಪಶ್ಚಿಮ ಪಾಕಿಸ್ತಾನದ ನಾಲ್ಕು ರಾಜ್ಯಗಳು ಒಂದೇ ಶಾಸನಸಭೆಯಲ್ಲಿ ಲೀನವಾಗುವ ಸಲಹೆಯನ್ನು ಅವರೆಲ್ಲ ನಿರಾಕರಿಸಿದರು. ಜನತೆಯ ಅಭಿಪ್ರಾಯಗಳನ್ನು ತಿಳಿಯಲು ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ ಅದರಂತೆ ನಡೆದುಕೊಳ್ಳಬೇಕೆಂದು ಪಾಕಿಸ್ತಾನದ ಸರ್ವಾಧಿಕಾರಿಗಳನ್ನು ಕೋರಿದರು. ಈ ಪ್ರತಿಭಟನೆಗಳು ಜನಪ್ರಿಯ ಚಳುವಳಿಗಳಾಗಿ ರೂಪಗೊಂಡು ಸರ್ಕಾರದ ಮೇಲೆ ಪ್ರಬಲವಾದ ಒತ್ತಡಗಳು ಬೆಳೆಯುತ್ತಲೇ ಬಂದವು.

ಪ್ರಧಾನಿ ಮಹಮ್ಮದಾಲಿ ಎಡಬಿಡದೆ ಒಂದೇ ಪಶ್ಚಿಮ ಪಾಕಿಸ್ತಾನ ಶಾಸನಸಭೆ ಮತ್ತು ಅಧಿಕೃತ ಭಾಷೆಯಾಗಿ ಉರ್ದು ಮಾತ್ರ ಎಂದು ಪ್ರಚಾರ ಮಾಡತೊಡಗಿದರು. ವಾಸ್ತವವಾಗಿ ಆಗಿನ ಪ್ರಜೆಗಳಲ್ಲಿ ಕೇವಲ ಶೇಕಡ ೪ ಮಾತ್ರ ಉರ್ದು ಬಳಸುತ್ತಿದ್ದರು. ಬಹುಭಾಗ ಅನಕ್ಷರಸ್ಥರು. ಬಂಗಾಳಿ ಭಾಷೆಯವರು ಸುಮಾರು ಶೇ. ೫೬ ಇದ್ದರು. ಸಿಂಧಿ, ಫಖ್ತೂನ್, ಬೆಲೂಚಿ ಭಾಷೆಗಳು ಬೇರೆಯಾಗಿಯೇ ಇದ್ದವು. ಇದರಿಂದಾಗಿ ಪ್ರಬಲವಾದ ಭಾಷಾ ಘರ್ಷಣೆಗಳಿಗೆ ಕಾರಣವಾಯಿತು. ಬಂಗಾಳ ಭಾಗ ಸಿಡಿದೊಡೆಯುವಂತಾಯಿತು.

ಪಾಕಿಸ್ತಾನದ ಕೇಂದ್ರ ಮಂತ್ರಿಮಂಡಲಕ್ಕೆ ಡಾ|| ಖಾನ್‌ಸಾಹೇಬರ ಸೇರಿದರು. ಕ್ರಮೇಣ ಅವರನ್ನು 'ಒಂದೇ ರಾಜ್ಯ' ಸಲಹೆಗೆ ಒಪ್ಪುವಂತೆ ಮನವೊಲಿಸಲಾಯಿತು. ಗಫಾರ್‌ಖಾನರಿಗೂ, ಡಾ|| ಖಾನ್‌ಸಾಹೇಬರಿಗೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಿ ರಾಜಕೀಯ ಸಂಘರ್ಷಕ್ಕೆ ಕಾರಣವಾಯಿತು.

ಪ್ರತಿ ಭಾಷಾವಾರು ಪ್ರದೇಶದ ಇತಿಹಾಸ, ಸಂಸ್ಕೃತಿ ಮತ್ತು ಸಾಮಾಜಿಕ ಬಾಂಧವ್ಯಗಳು ಪ್ರತ್ಯೇಕ. ಆದ್ದರಿಂದ ಅಲ್ಲಲ್ಲಿನ ಜನತೆ ತಮ್ಮ ತಮ್ಮ ಪ್ರಾಂತೀಯ ಆಡಳಿತ ಘಟಕಗಳನ್ನು ಹೊಂದಿರಬೇಕೆಂದು ಪ್ರಬಲವಾದ ಚಳುವಳಿ ಪ್ರಾರಂಭವಾಯಿತು. ಗಫಾರ್‌ಖಾನರನ್ನು ತಮ್ಮ ಪ್ರಾಂತಕ್ಕೆ ಹೋಗದಂತೆ ಪ್ರತಿಬಂಧಿಸಲಾಗಿತ್ತು. ಪಾಕಿಸ್ತಾನ ನಾಲ್ಕು ಸ್ವಾಯತ್ತ ರಾಜ್ಯಗಳ ಒಕ್ಕೂಟವಾಗಬೇಕೆಂದು ಗಫಾರ್‌ಖಾನ್ ಪ್ರಬಲವಾಗಿ ಪ್ರತಿಪಾದಿಸಿದರು. ಪಂಜಾಬಿಗಳನ್ನುಳಿದು ಮಿಕ್ಕೆಲ್ಲ ಪ್ರದೇಶಗಳವರೂ ಬೆಂಬಲ ನೀಡಿದರು. ದಬ್ಬಾಳಿಕೆಯಿಂದ ತನ್ನ ಹಠ ಸಾಧಿಸಲು ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಂಡಿತ್ತು. ಆದರೆ ಗಫಾರ್‌ಖಾನರ ಪ್ರಭಾವ ಹೆಚ್ಚುತ್ತಲೇ ಇತ್ತು. ಕೊನೆಗೊಮ್ಮೆ ಏಳು ವರ್ಷಗಳ ಮೇಲೆ ಗಫಾರ್‌ಖಾನರನ್ನು ತಮ್ಮ ಪ್ರಾಂತಕ್ಕೆ ಹೋಗಲು ಬಿಡುಗಡೆ ಮಾಡಲಾಯಿತು. ಗಡಿನಾಡು ಪ್ರಾಂತದ ಜನ ಉತ್ಸಾಹದಿಂದ ದೊಡ್ಡ ಮೆರವಣಿಗೆಯಲ್ಲಿ ತಮ್ಮ ನಾಯಕನನ್ನು ಬರಮಾಡಿಕೊಂಡರು. ಮತ್ತೆ ಪ್ರಾಂತದ ಸಭೆಗಳು ಸೇರಿ ಆಡಳಿತ ಕೇಂದ್ರೀಕರಣವನ್ನು ಪ್ರತಿಭಟಿಸುವ ನಿರ್ಣಯಗಳಾದವು.

ಗಫಾರ್‌ಖಾನರು ಸ್ಪಷ್ಟವಾಗಿ ನುಡಿದರು:–

"ನನಗೆ ಯಾರ ಮೇಲೂ ದ್ವೇಷ ಇಲ್ಲ. ಅಪಪ್ರಚಾರ ಮಾಡಬೇಡಿ! ಸಲ್ಲದ ಆರೋಪಗಳನ್ನು ಹೊರಿಸಿ ನನ್ನ ಅಂತರಾಳದ ಆದರ್ಶಗಳನ್ನು ಅಪಾರ್ಥ ಮಾಡಬೇಡಿ. ಪಾಕಿಸ್ತಾನವೇ ಈಗ ನನ್ನ ಮಾತೃಭೂಮಿ. ಅದರ ಅಭ್ಯುದಯವೇ ನನ್ನ ಪ್ರಥಮ ರಾಜಕೀಯ ಗುರಿ. ಆಡಳಿತ ವ್ಯವಸ್ಥೆ ಹೇಗಿರಬೇಕೆಂದು ಭಿನ್ನಾಭಿಪ್ರಾಯಗಳಿದ್ದವು. ಆದರೆ ಯಾವುದೇ ನಾಯಕನಿಗೆ ನನ್ನ ರಾಷ್ಟ್ರಭಕ್ತಿಯನ್ನು ಪ್ರಶ್ನಿಸಲು ಹಕ್ಕಿಲ್ಲ. ನಿಜವಾದ

ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳ ಮಂಥನವೇ ಬಹುಮುಖ್ಯ ಅಂಶ. ಆದರೆ ದುರದೃಷ್ಟವಶಾತ್ ಪಾಕಿಸ್ತಾನದ ನಾಯಕರು ಭಿನ್ನಾಭಿಪ್ರಾಯವನ್ನು ದೇಶದ್ರೋಹವೆಂದೇ ಪರಿಗಣಿಸುತ್ತಾರೆ. ಪ್ರವಾದಿ ಮಹಮ್ಮದರ ಬೋಧನೆಗಳಿಗೆ ಅದು ಅಪಚಾರವೆನಿಸುತ್ತದೆ."

ಗಡಿನಾಡು ಪ್ರಾಂತದ ಪ್ರವಾಸ ಮುಗಿಸಿ ಗಫಾರ್‌ಖಾನರು ಬೆಲೂಚಿಸ್ತಾನಕ್ಕೆ ಬಂದರು. ಬೆಲೂಚಿ ಗಾಂಧಿ ಎಂದು ಪ್ರಸಿದ್ಧರಾಗಿದ್ದ ಅಬ್ದುಸ್ ಸಮದ್‌ಖಾನರೊಡನೆ ಸೇರಿ ಪ್ರಬಲವಾದ ಚಳುವಳಿ ಪ್ರಾರಂಭಿಸುವುದಾಗಿ ಘೋಷಿಸಿದರು. ಕರಾಚಿಯಲ್ಲಿ ಸಭೆಗಳನ್ನೇರ್ಪಡಿಸಲಾಯಿತು. ಈ ಜನಪ್ರಿಯ ಚಟುವಟಿಕೆಗಳನ್ನು ಸಹಿಸಲಾರದೆ ದೇಶದ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆಂಬ ಅಪಾದನೆ ಹೊರಿಸಿ ಪಾಕಿಸ್ತಾನ ಸರ್ಕಾರ ೧೯೫೮ ರ ಜೂನ್‌ನಲ್ಲಿ ಗಫಾರ್‌ಖಾನರನ್ನು ದಸ್ತಗಿರಿ ಮಾಡಿತು.

ಲಾಹೋರಿನ ಶ್ರೇಷ್ಠ ನ್ಯಾಯಾಲಯದಲ್ಲಿ ಖಾನರ ಮೇಲಿನ ಮೊಕದ್ದಮೆ. ನ್ಯಾಯಾಲಯದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಸೆಪ್ಟೆಂಬರ್ ೮ ರಂದು ನ್ಯಾಯಾಲಯಕ್ಕೆ ಕೊಟ್ಟ ದೀರ್ಘ ಹೇಳಿಕೆ ಇತಿಹಾಸ ಪ್ರಸಿದ್ಧವಾಯಿತು. ನ್ಯಾಯಾಧೀಶರನ್ನು ಕುರಿತು ಹೀಗೆಂದರು:-

"ಇಸ್ಲಾಮ್ ಧರ್ಮದ ಮೇಲೆ ಆಧಾರಿತವಾಗಿರುವ ಪ್ರಜಾಪ್ರಭುತ್ವ ಎಂದು ನಾವು ಹೇಳಿಕೊಳ್ಳುತ್ತಿದ್ದೇವೆ. ನಿರಂಕುಶ ಪ್ರಭುವಾದವನ ಮುಂದೆ ನಿರ್ಭಯವಾಗಿ ಸತ್ಯ ನುಡಿಯುವುದೇ ಶ್ರೇಷ್ಠಮಟ್ಟದ 'ಜೆಹಾದ್' ಎಂದು 'ಹಾದಿಸ್ ಷರೀಫ್' (ಇಸ್ಲಾಮ್ ಧರ್ಮಗ್ರಂಥ) ದಲ್ಲಿ ಹೇಳಿದೆ. ಪ್ರವಾದಿ ಮಹಮ್ಮದರ ವಿನಮ್ರ ಸೇವಕನಾಗಿ ಈ ಧ್ಯೇಯ ವಾಕ್ಯವನ್ನು ನಾನು ಯಾವಾಗಲೂ ಪಾಲಿಸಿಕೊಂಡು ಬಂದಿದ್ದೇನೆ. ಈಗ ಇದನ್ನು ಹೇಳುವ ಕಾರಣ ಇಷ್ಟೇ: ತಾವು ತೀರ್ಪನ್ನು ಕೊಡುವ ಸಮಯದಲ್ಲಿ ಇದನ್ನು ಮರೆಯಬೇಡಿ."

ಮುಂದೆ ವಿವರವಾಗಿ ತಮ್ಮ ಎಲ್ಲ ಚಟುವಟಿಕೆಗಳನ್ನೂ ಬಾಲ್ಯದಿಂದಲೂ ನಡೆದ ರೀತಿ ನೀತಿಗಳನ್ನೂ ನ್ಯಾಯಾಲಯದಲ್ಲಿ ತಿಳಿಸಿದರು. ಪಠಾಣ ಜನಾಂಗದ ಸಂಸ್ಕೃತಿಯ ಮೂಲಭೂತ ವಿಷಯಗಳನ್ನು ಹೇಳಿ

ದರು. ತಾವು ವಿವಿಧ ನ್ಯಾಯಾಲಯಗಳಲ್ಲಿ ಹೇಗೆ ಹೇಗೆ ಅಪರಾಧಿ ಎಂದು ಗಣಿಸಲ್ಪಟ್ಟೆನೆಂದು ವಿವರಿಸಿದರು. ಭಾರತ ಸ್ವಾತಂತ್ರ್ಯ ಸಮರದ ಪರಿಣಾಮವಾಗಿ ಪಾಕಿಸ್ತಾನದ ಸ್ವಾತಂತ್ರ್ಯ ಲಭ್ಯವಾಗಿದೆ. ಆ ಮಹಾ ಸಮರದಲ್ಲಿ ಸತ್ಯ ನಿಷ್ಠೆಯಿಂದ ಅಹಿಂಸಾತ್ಮಕ ಹೋರಾಟ ನಡೆಸಿದ ಬಗೆಯನ್ನು ಬಣ್ಣಿಸಿದರು. ಪಾಕಿಸ್ತಾನದ ಪ್ರಜೆಯಾಗಿ ತಮ್ಮ ಮೇಲೆ ತಂದ ಆರೋಪಗಳನ್ನು ಹೇಳಿದರು. ಪಖ್ತೂನರಿಗಾಗಿರುವ ಅನ್ಯಾಯಗಳನ್ನು ನ್ಯಾಯಾಲಯ ಕೂಲಂಕಷವಾಗಿ ಪರಿಶೀಲಿಸಲು ಬಿನ್ನವಿಸಿದರು.

ನ್ಯಾಯಾಲಯು ಅವರಿಗೆ ೧೪ ಸಾವಿರ ರೂಪಾಯಿಗಳ ದಂಡ ವಿಧಿಸಿ ಒಂದು ದಿನದ ಶಿಕ್ಷೆ ವಿಧಿಸಿತು. ದಂಡ ಕೊಡಲು ನಿರಾಕರಿಸಿದುದರಿಂದ ಗಫಾರ್‌ಖಾನರ ಆಸ್ತಿಪಾಸ್ತಿಗಳನ್ನು ಜಫ್ತಿ ಮಾಡಲಾಯಿತು. ಬೆಲೆಬಾಳುವ ಅವರ ಜಮೀನುಗಳನ್ನೂ ಮನೆಯನ್ನೂ ವಶಪಡಿಸಿಕೊಳ್ಳಲಾಯಿತು.

೧೯೫೭ರಲ್ಲಿ ಗಫಾರ್‌ಖಾನರೂ, ಮೌಲಾನಾ ಭಾಷಾನಿ, ಜಿ.ಎಂ. ಸೈಯದ್ ಮತ್ತು ಮಿಯಾನ್ ಇಫ್ತಿಕಾರುದ್ದೀನ್ ಮುಂತಾದ ರಾಷ್ಟ್ರೀಯ ಮುಸ್ಲಿಮರಾಗಿ ಹೋರಾಡಿದ ಸ್ನೇಹಿತರೂ ಒಟ್ಟುಗೂಡಿ "ನ್ಯಾಷನಲ್ ಅವಾಮಿ ಪಕ್ಷ" ಸ್ಥಾಪಿಸಿ ಪ್ರಜಾತಂತ್ರಕ್ಕಾಗಿ ಹೋರಾಟವನ್ನು ಮುಂದುವರಿಸಿದರು.

೧೯೫೮ರಲ್ಲಿ ಮತ್ತೆ ಅವರ ಬಂಧನವಾಯಿತು. ಎಕ್ಕ ಸಂಗಡಿಗರೂ ಸೆರೆಮನೆ ಸೇರಬೇಕಾಯಿತು. ಜನತೆಯಲ್ಲಿ ಅಸಮಾಧಾನ ಹೆಚ್ಚುತ್ತಲೇ ಹೋಯಿತು.

ಅಧ್ಯಕ್ಷ ಇಸ್ಕಂದರ್ ಮಿರ್ಜಾ ಮತ್ತು ರಕ್ಷಣಾ ಮಂತ್ರಿ ಜನರಲ್ ಅಯೂಬ್‌ಖಾನ್ ಪಾಕಿಸ್ತಾನದ ಎಲ್ಲ ಶಾಸನ ಸಭೆಗಳನ್ನೂ ರದ್ದು ಮಾಡಿದರು. ೧೯೫೮ರ ಅಕ್ಟೋಬರ್‌ನಲ್ಲಿ ಸೈನ್ಯ ಶಾಸನ (ಮಾರ್ಷಲ್ ಲಾ) ಘೋಷಿಸಿದರು. ಅಯೂಬ್‌ಖಾನರನ್ನು ಪ್ರಧಾನಿ ಪಟ್ಟಕ್ಕೇರಿಸಲಾಯಿತು. ಆ ಕೂಡಲೇ ಅತ ಅಧ್ಯಕ್ಷ ಇಸ್ಕಂದರ್ ಮಿರ್ಜಾರನ್ನು ಪದಚ್ಯುತಗೊಳಿಸಿ ಗೃಹಬಂಧನದಲ್ಲಿರಿಸಿಬಿಟ್ಟ.

ಆಯೂಬ್‌ಖಾನರ ಸರ್ವಾಧಿಕಾರ ಪ್ರಭುತ್ವದಲ್ಲಿ ಪಾಕಿಸ್ತಾನದ ಪ್ರಜೆಗಳು ಸೈನ್ಯದ ಆಡಳಿತಕ್ಕೊಳಗಾಗಿ ಎಲ್ಲ ಸ್ವಾತಂತ್ರ್ಯಗಳನ್ನೂ ಕಳೆದುಕೊಂಡರು.

೧೯೫೮ರಲ್ಲಿ ಲಾಹೋರಿನಲ್ಲಿ ಗಫಾರ್‌ಖಾನರ ಅಣ್ಣ ಡಾ|| ಖಾನ್ ಸಾಹೇಬರ ಕೊಲೆಯಾಯಿತು. ಅವರ ರಾಜಕೀಯ ವಿರೋಧಿಗಳು ಈ ಅಮಾನುಷ ಕೊಲೆಗೈದರು. ಗಫಾರ್‌ಖಾನರಿಗೆ ತೀವ್ರವಾದ ಆಘಾತವಾಯಿತು. ಈ ಕೃತ್ಯದಿಂದ ಪಂಜಾಬಿಗಳಿಗೂ ಪಠಾಣರಿಗೂ ಮಧ್ಯೆ ದ್ವೇಷದ ದಳ್ಳುರಿ ಹೆಚ್ಚಾಯಿತು. ಪಠಾಣರು ಸಂಯಮವನ್ನು ಕಾಪಾಡಿಕೊಂಡು ಹಿಂಸಾಚಾರಗಳಿಗೆ ಆಸ್ಪದ ಕೊಡದೆ ಹಿಂದಿನ ಸತ್ಯಾಗ್ರಹ ರೀತಿಯಲ್ಲೇ ತಮ್ಮ ಹಕ್ಕುಗಳಿಗೆ ಹೋರಾಟ ಮಾಡಬೇಕೆಂದು ಗಫಾರ್‌ಖಾನರು ಮನವಿ ಮಾಡಿದರು.

ಅಯೂಬ್‌ಖಾನರು ಪಾಕಿಸ್ತಾನದ ರಾಜಧಾನಿಯನ್ನು ಕರಾಚಿಯಿಂದ ರಾವಲ್‌ಪಿಂಡಿಗೆ ಬದಲಾಯಿಸಿದರು. ೧೯೫೯ರಲ್ಲಿ ಗಫಾರ್‌ಖಾನರನ್ನು ಬಿಡುಗಡೆ ಮಾಡಲಾಯಿತು. ಅವರು ತಮ್ಮ ಊರಾದ ಉತ್‌ಮನ್ ಜಾಯ್‌ಗೆ ಹೋದರು. ಆರೋಗ್ಯ ಕೆಟ್ಟಿತ್ತು. ಆದರೂ ಹೋರಾಟದ ಕಸುವು ಕಡಿಮೆಯಾಗಲಿಲ್ಲ. ಸರ್ವಾಧಿಕಾರವನ್ನು ಎದುರಿಸುತ್ತಲೇ ಇದ್ದರು.

೧೯. ಅಜೇಯ ಯೋಧ

ಸೈನ್ಯದ ಸರ್ವಾಧಿಕಾರ ಪಾಕಿಸ್ತಾನದಲ್ಲಿ ವಿಜೃಂಭಿಸುತ್ತಿತ್ತು. ಅಧ್ಯಕ್ಷ ಅಯೂಬ್‌ಖಾನ್ ಕರಾಳ ಶಾಸನಗಳನ್ನು ಜಾರಿಗೆ ತಂದರು. ಸಾರ್ವಜನಿಕ ಅಧಿಕಾರಸ್ಥಾನಗಳಿಗೆ ಅನರ್ಹತೆಯ ಆಜ್ಞೆ ಮತ್ತು ಚುನಾಯಿತ ಅಧಿಕಾರ ಸಂಸ್ಥೆಗಳಲ್ಲಿ ಅನರ್ಹತೆಗಳ ನಿಯಮ ಜಾರಿಗೆ ಬಂತು. ವಿರೋಧಿ ರಾಜಕಾರಣಿಗಳೆಲ್ಲರನ್ನೂ ಪಾಕಿಸ್ತಾನದ ನಾಯಕತ್ವದಿಂದ ಹೊರದೂಡುವುದೇ ಮುಖ್ಯ ಉದ್ದೇಶವಾಗಿತ್ತು. ಸಾರ್ವಜನಿಕ ಸ್ಥಾನಗಳಿಗೆ ಅನರ್ಹರೆಂದು ವಿವಿಧ ರಾಜಕಾರಣಿಗಳನ್ನು ಹೆಸರಿಸಿ ಅವರು ಯಾವ ಚಟುವಟಿಕೆಗಳಲ್ಲೂ ಭಾಗಿಗಳಾಗದಂತೆ ಬಹಿಷ್ಕರಿಸಲು ಒಂದು ನ್ಯಾಯಮಂಡಲಿ ನೇಮಿಸಿದರು. ಗಫಾರ್‌ಖಾನರು ಪಾಕಿಸ್ತಾನ ರಾಜ್ಯಾಡಳಿತದ ವಿರೋಧ ಪ್ರತಿಭಟನೆಗಳಿಗಾಗಿ ಅಪರಾಧಿ ಎಂದು ತೀರ್ಪುಗಳಿರುವುದರಿಂದ ಅವರನ್ನೇಕೆ ಸಾರ್ವಜನಿಕ ಜೀವನದಿಂದ ಬಹಿಷ್ಕರಿಸಬಾರದು ಎಂದು ಎಚ್ಚರಿಕೆಯ ಪತ್ರ ಬಂತು. ಗಫಾರ್‌ಖಾನರು ಈ ಅಪಾದನೆಗಳನ್ನು ನಿರಾಕರಿಸಲೂಬಾರದು ಸಮರ್ಥಿಸಲೂ ಆಗದು ಎಂದು ಉತ್ತರಿಸಿದರು. ೧೯೬೧ ರ ಕೊನೆಯಲ್ಲಿ ಖಾನರನ್ನು ಯಾವ ಚುನಾಯಿತ ಸ್ಥಾನದಲ್ಲೂ ಸದಸ್ಯನಾಗಿರಲು ಅನರ್ಹರೆಂದು ಘೋಷಿಸಲಾಯಿತು.

೧೯೬೧ ರ ಏಪ್ರಿಲ್‌ನಲ್ಲಿ ರಾಷ್ಟ್ರ ವಿರೋಧಿ ಭಾಷಣಗಳನ್ನು ಮಾಡಿ ಶಾಂತಿಭಂಗ ಮಾಡುತ್ತಿರುವರೆಂದು ಆರೋಪಿಸಿ ಗಫಾರ್‌ಖಾನರನ್ನು ಡೇರಾ ಇಸ್ಮಾಯಿಲ್‌ಖಾನ್‌ನಲ್ಲಿ ದಸ್ತಗಿರಿ ಮಾಡಿದರು. ಬಂಧನದಲ್ಲಿ ತೊಳಲುತ್ತಿದ್ದ ಗಡಿನಾಡಿನ ಗಿರಿಜನರ ಏಳಿಗೆಗಾಗಿ ಗ್ರಾಮಸ್ವರಾಜ್ಯದ ಪ್ರಚಾರ ಮಾಡುತ್ತಾ, ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಜನಶಕ್ತಿ ಸಂಘಟಿಸುವುದು ಪಾಕಿಸ್ತಾನ ಸರ್ಕಾರಕ್ಕೆ ಘೋರ ಅಪರಾಧವೆನಿಸಿತು. ಬಂಧನ

ಹೈದರಾಬಾದು ಸೆರೆಮನೆಯಲ್ಲಿ ಖೈದಿಗಳಾದರು. ಆಯೂಬ್‌ಖಾನರು ದ್ವೇಷ ಸಾಧಿಸುತ್ತಲೇ ಹೋದರು. ಪಾಕಿಸ್ತಾನದ ಗಡಿನಾಡು ಭಾಗವನ್ನು ಭಾರತಕ್ಕೋ ಅಫ್ಘಾನಿಸ್ತಾನಕ್ಕೋ ಸೇರಿಸಲು ಗಫಾರ್‌ಖಾನ್ ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿ ಆರು ತಿಂಗಳಿಗೊಮ್ಮೆ ಅವರ ಅಕ್ರಮ ಸ್ಥಾನಬದ್ಧತೆಯ ಆಜ್ಞೆಯನ್ನು ಮುಂದುವರಿಸುತ್ತಲೇ ಹೋದರು.

೧೯೬೨ ರಲ್ಲಿ ಅಂತರ್‌ರಾಷ್ಟ್ರೀಯ ವ್ಯಕ್ತಿ ಸ್ವಾತಂತ್ರ್ಯ ರಕ್ಷಣಾ ಸಂಘ (ಅಮ್ನೆಸ್ಟಿ ಇಂಟರ್‌ನ್ಯಾಷನಲ್) ಆತ್ಮಸಾಕ್ಷಿಯಂತೆ ನಡೆದು ಜೈಲುವಾಸಿಗಳಾದವರಲ್ಲಿ ಗಫಾರ್‌ಖಾನ್ "ಆ ವರ್ಷದ ಪ್ರಥಮ ಶ್ರೇಣಿಯ ಖೈದಿ" (ಪ್ರಿಸನರ್ ಆಫ್ ದಿ ಇಯರ್) ಎಂದು ಸಾರಿತು. ೧೯೬೩ರಲ್ಲಿ ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ಗಫಾರ್‌ಖಾನರ ಅಕ್ರಮ ಬಂಧನದ ಬಗ್ಗೆ ಬಂದ ನಿಲುವಳಿ ಸೂಚನೆಯನ್ನೂ ತಳ್ಳಿಹಾಕಲಾಯಿತು. ಅಬ್ದುಲ್ ವಲೀಖಾನರು ಅಂಕಿ ಅಂಶಗಳನ್ನಿತ್ತು ಸುಮಾರು ಮೂರು ಸಾವಿರ ಅನುಯಾಯಿಗಳೂ ಸೇರಿ ಗಫಾರ್‌ಖಾನ್ ಸೆರೆಯಲ್ಲಿದ್ದಾರೆಂದು ತಿಳಿಸಿದರು. ವೃದ್ಧಾಪ್ಯ ಮತ್ತು ಅನಾರೋಗ್ಯ ಗಫಾರ್‌ಖಾನರನ್ನು ತೀವ್ರವಾಗಿ ಬಳಲಿಸಿತ್ತು.

ಕೆಲಕಾಲದ ನಂತರ ಸರ್ಕಾರ ಅವರು ತೀವ್ರ ಅನಾರೋಗ್ಯದಿಂದ ನರಳುತ್ತಿದ್ದಾರೆಂದೂ ಒಬ್ಬ ವೈದ್ಯರನ್ನು ಜೊತೆ ಮಾಡಿ ಅವರನ್ನು ಮುಲ್ತಾನ್‌ಗೆ ಕಳುಹಿಸಲಾಗುವುದೆಂದೂ ಪ್ರಕಟಿಸಿತು. ಆ ವೈದ್ಯರ ಸೇವೆಯನ್ನು ನಿರಾಕರಿಸಿ ಗಫಾರ್‌ಖಾನರು ಮೂರು ದಿನಗಳ ಉಪವಾಸ ಕೈಗೊಂಡಿದ್ದರು. ಮಗ ವಲೀಖಾನರು ಗೃಹಮಂತ್ರಿಗಳಲ್ಲಿ ದೂರುಸಲ್ಲಿಸಿ ತಮ್ಮ ತಂದೆಯವರನ್ನು ಅಮಾನುಷ ರೀತಿಯಲ್ಲಿ ಶಿಕ್ಷಿಸಲಾಗುತ್ತಿದೆ ಎಂದು ಪ್ರತಿಭಟಿಸಿದರು. ೧೯೬೪ ರ ಜನವರಿ ೩೦ ರಂದು ಗಫಾರ್‌ಖಾನರನ್ನು ಬಿಡುಗಡೆ ಮಾಡಿ ಅವರ ಗ್ರಾಮದಲ್ಲೇ ಸ್ಥಾನಬದ್ಧರಾಗಿರುವಂತೆ ಆಜ್ಞಾಪಿಸಲಾಯಿತು. ಬ್ರಿಟಿಷರ ಆಡಳಿತವಿದ್ದಾಗ ಒಮ್ಮೆ ಅಫ್ಘಾನಿಸ್ತಾನದೊಡನೆ ಯುದ್ಧದ ಸಮಯಕ್ಕೆ ಗಡಿನಾಡಿನಲ್ಲಿ ಸೈನ್ಯದ ಸರ್ವಾಧಿಕಾರವನ್ನು ಘೋಷಿಸಲಾಗಿತ್ತು. ಆಗ ಗಫಾರ್‌ಖಾನರನ್ನೂ ಖುದಾಯಿ ಖಿದ್‌ಮತ್‌ಗಾರ

ರನ್ನೂ ಕ್ರೂರವಾಗಿ ಹಿಂಸಿಸಲಾಗಿತ್ತು. ಪಾಕಿಸ್ತಾನದಲ್ಲಿ ಯಾವ ಯುದ್ಧ ಭಯವೂ ಇಲ್ಲದಿದ್ದಾಗ 'ಮಾರ್ಷಲ್ ಲಾ' ಘೋಷಿತವಾಗಿ ಆಗಲೂ ಗಫಾರ್ ಖಾನರ ಅನುಯಾಯಿಗಳನ್ನು ಅಕ್ರಮ ಬಂಧನದಲ್ಲಿಡಲಾಯಿತು. ಬ್ರಿಟಿಷರೊಡನೆ ಹೋರಾಡಿ ಸ್ವಾತಂತ್ರ್ಯ ಪಡೆಯಲು ಈ ಶಿಕ್ಷೆಗಳೇ ಸ್ಫೂರ್ತಿ ಕೊಟ್ಟವು. ಹಾಗೆಯೇ ಪಾಕಿಸ್ತಾನದ ಸರ್ವಾಧಿಕಾರ ರಾಜ್ಯ ಹೋಗಿ ಪ್ರಜಾಪ್ರಭುತ್ವ ನೆಲೆಯಾಗಲು ಈ ಶಿಕ್ಷೆಗಳಿಂದಲೇ ಸ್ಫೂರ್ತಿ ಪಡೆದು ನಾವು ಹೋರಾಡಬೇಕು ಎಂದರು ಗಫಾರ್ ಖಾನ್.

ಅನಾರೋಗ್ಯ ಉಲ್ಬಣಿಸುತ್ತಲೇ ಸಾಗಿತು. ಶ್ವಾಸಕೋಶಗಳು ಕೆಟ್ಟವು. ೧೯೬೪ರಲ್ಲಿ ಅವರ ಆಪ್ತಮಿತ್ರರಾಗಿದ್ದ ಜವಹರಲಾಲರು ನಿಧನರಾದುದನ್ನು ಕೇಳಿ ಗಫಾರ್ ಖಾನರಿಗೆ ತೀವ್ರ ದುಃಖವಾಯಿತು. ಶ್ರೀಮತಿ ಇಂದಿರಾ ಗಾಂಧಿಯವರಿಗೆ ಪತ್ರ ಬರೆದರು, "ಅಸಾಧಾರಣ ಸ್ವಾತಂತ್ರ್ಯ ಪ್ರೇಮಿ; ಧೀರಗಂಭೀರ ವ್ಯಕ್ತಿ; ಭಾರತದ ಸುಪುತ್ರರಲ್ಲಿ ಅಗ್ರಗಣ್ಯ; ಗಾಂಧೀಜೀಯ ಧ್ಯೇಯಗಳನ್ನು ಅನುಷ್ಠಾನ ಮಾಡಿ ಜಗತ್ತಿನಲ್ಲಿ ಶಾಂತಿ ಮತ್ತು ಪ್ರೇಮ ನೆಲೆಗೊಳ್ಳಲು ಸತತವಾಗಿ ಪ್ರಯತ್ನಿಸಿದ ಮಹಾನಾಯಕ. ಅವರ ಆದರ್ಶಗಳು ನಮಗೆ ಸದಾ ಸ್ಫೂರ್ತಿದಾಯಕವಾಗಿರಲಿ. ಈ ರಾಷ್ಟ್ರೀಯ ಶೋಕದ ದಿನ ನಾನೂ ನಿಮ್ಮೊಡನೆ ಇರಬಯಸುತ್ತೇನೆ." ನೆಹರೂ ಅವರ ನಿರ್ವ್ಯಾಜ ಪ್ರೇಮದ ಆತ್ಮೀಯ ಗೆಳೆತನವನ್ನು ನೆನೆದರು.

ಕೊನೆಗೊಮ್ಮೆ ೧೯೬೪ ರ ಕೊನೆಗೆ ಚಿಕಿತ್ಸೆಗಾಗಿ ಇಂಗ್ಲೆಂಡಿಗೆ ಹೋಗಲು ಅನುಮತಿ ದೊರೆಯಿತು. ಅಲ್ಲಿ ಎರಡು ತಿಂಗಳು ಇದ್ದರು. ಹಿಂದೆ ಗಡಿನಾಡಿನ ಗೌರ್ನರಾಗಿದ್ದ ಸರ್ ಓಲಾಫ್ ಕಾರೋ ತಮ್ಮ ಕಾಲದ ಈ ರಾಜಕೀಯ ವಿರೋಧಿಯನ್ನು ಪ್ರೀತಿಯಿಂದ ಮನೆಗೆ ಕರೆದೊಯ್ದು ವಿಶ್ರಾಂತಿಗೆ ಅನುವುಮಾಡಿದರು. ಖಾನರು, "ಅಹಿಂಸೆಯ ಪರಿಣಾಮವಾಗಿ ಭಾರತದಲ್ಲಿ ನಾವು ಕಂಡ ಬ್ರಿಟಿಷರ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ದೇವರ ದಯೆ! ನಾನಿಲ್ಲಿಗೆ ಬಂದು ಅನೇಕ ಮಿತ್ರರನ್ನು ಸಂಪಾದಿಸಿದೆ. ತಪ್ಪು ಅಭಿಪ್ರಾಯಗಳು ಕರಗಿ ಹೋದವು" ಎಂದರು. ಶ್ರೀಮತಿ ಇಂದಿರಾ ಗಾಂಧಿಯವರು ಅದೇ ಸಮಯಕ್ಕೆ ಲಂಡನ್ನಿಗೆ ಬಂದಿದ್ದರು. ಗಫಾರ್ ಖಾನರು ಪ್ರೀತಿಯಿಂದ ಸ್ವಾಗತಿಸಿ ಬರಮಾಡಿಕೊಂಡರು.

ಭಾರತದ ಅನೇಕ ಮಿತ್ರರಿಗೆ ಪತ್ರಬರೆಯುತ್ತಿದ್ದರು. ಗಾಂಧೀಜಿಯ ಆಪ್ತ ಕಾರ್ಯದರ್ಶಿಯಾಗಿದ್ದ ಶ್ರೀ ಪ್ಯಾರೆಲಾಲರಿಗೆ ಹೀಗೆ ಬರೆದರು, "ಬಹುಶಃ ನೀವೆಲ್ಲ ನಮ್ಮನ್ನು ಮರೆತಿರಬಹುದು. ಆದರೆ ನಾವು ನಿಮ್ಮನ್ನು ಮರೆತಿಲ್ಲ. ಸಂತೋಷದ ಕಾಲದಲ್ಲಿ ಮಾನವ ಹಳೆಯ ಗೆಳೆಯರನ್ನು ಮರೆಯುವುದು ಸಾಮಾನ್ಯ. ಆದರೆ ಕಷ್ಟದಲ್ಲಿರುವ ನಾವು ನಿಮ್ಮನ್ನು ನೆನೆಯುತ್ತಿದ್ದೇವೆ. ಮಹಾತ್ಮಾಜಿ ಬದುಕಿದ್ದರೆ ಅವರು ನಮ್ಮ ನೆರವಿಗೆ ಖಂಡಿತ ಧಾವಿಸಿ ಬರುತ್ತಿದ್ದರು. ನಮ್ಮ ದುರಾದೃಷ್ಟ! ಅವರು ಕಣ್ಮರೆಯಾದರು. ಇತರರು ನಮ್ಮನ್ನು ಮರೆತೇ ಬಿಟ್ಟರು."

ಇಂಗ್ಲೆಂಡಿನಲ್ಲಿ ಛಳಿಗಾಲವನ್ನೆದುರಿಸಲು ಕಷ್ಟ ಎಂದು ಗಫಾರ್‌ಖಾನರನ್ನು ಅಮೆರಿಕಕ್ಕೆ ಹೋಗಬೇಕೆಂದು ವೈದ್ಯರು ಸಲಹೆ ಮಾಡಿದರು. ಅಮೆರಿಕದ ಸರ್ಕಾರ ಇವರ ಆಗಮನವನ್ನು ಸ್ವಾಗತಿಸಲಿಲ್ಲ. ಕಾರಣ ಪಾಕಿಸ್ತಾನದೊಡನೆ ಹಗೆತನವಾದೀತೆಂದು ತಿಳಿದರು. ಗಫಾರ್‌ಖಾನರೇ ಈ ಭೇಟಿಯನ್ನು ರದ್ದುಗೊಳಿಸಿದರು. ಅಫ್‌ಘಾನಿಸ್ತಾನ ಸರ್ಕಾರ ಹೃತ್ಪೂರ್ವಕವಾಗಿ ಸ್ವಾಗತಿಸಿದ್ದರಿಂದ ಅವರು ಕಾಬೂಲಿಗೆ ಪ್ರಯಾಣ ಮಾಡಿದರು. ಅಲ್ಲಿನ ಪ್ರಧಾನಿಯೇ ವಿಮಾನ ನಿಲ್ದಾಣದಲ್ಲಿದ್ದು ಬರಮಾಡಿಕೊಂಡರು. ಸಾವಿರಾರು ಆಫ್ಘನರು ಜಯಘೋಷದಿಂದ ಸ್ವಾಗತಿಸಿದರು.

೧೯೬೫ ರಲ್ಲಿ ಆಚಾರ್ಯ ವಿನೋಬಾ ಭಾವೆ ತಮ್ಮ ಹಿರಿಯ ಗೆಳೆಯರಾಗಿದ್ದ ಗಫಾರ್‌ಖಾನರಿಗೆ ಒಂದು ಹೃದಯ ಸ್ಪರ್ಶಿಯಾದ ಪತ್ರ ಬರೆದರು:-

ಪ್ರಿಯ ಬಾದ್‌ಷಾಖಾನರೇ,

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ನಿಮಗಾದ ಕೊನೆಯ ಅನ್ಯಾಯ, ಅನಂತರ ನಿಮ್ಮನ್ನು ಗೆಳೆಯರೆಲ್ಲ ಕೈಬಿಟ್ಟುದನ್ನು ನೆನೆದಾಗ ನನ್ನ ಅಳಲು ಮಾತಿಗೆ ಮೀರಿದ ವೇದನೆ ಎನಿಸುತ್ತದೆ. ಆದರೆ ನೀವು ಅದನ್ನೆಲ್ಲ ಅತ್ಯಂತ ಸಹನೆಯಿಂದಲೂ ಮನೋದಾರ್ಢ್ಯದಿಂದಲೂ ಸ್ವೀಕರಿಸಿದ್ದೀರಿ. ನಿಮ್ಮ ಆದರ್ಶನಿಷ್ಠೆ ನಮಗೆಲ್ಲ ಸ್ಫೂರ್ತಿ ನೀಡುವಂತಹದು...

ಈಚಿನ ದಿನಗಳಲ್ಲಿ ನನ್ನಲ್ಲಿ ಒಂದು ನಿಶ್ಚಿತ ಭಾವನೆ ಬೇರೂರುತ್ತಿದೆ. ಅಣ್ವಸ್ತ್ರಗಳ ಈ ನಮ್ಮ ಯುಗದಲ್ಲಿ ರಾಜಕೀಯ ಎಂದು ನಾವು ಕರೆಯುವು ದೆಲ್ಲ ನಿರರ್ಥಕ, ಅಸಂಗತ ಎನಿಸುತ್ತದೆ. ನಮ್ಮ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಆತ್ಮಶಕ್ತಿ ವರ್ಧನೆ ಯೊಂದೇ ಸರಿಯಾದ ಮಾರ್ಗ. ನೀವು ಯಾವುದನ್ನು "ರುಹಾನಿಯತ್" ಎನ್ನುತ್ತಿರೋ ಅದೇ ಆಧ್ಯಾತ್ಮ ವಿಚಾರಕ್ಕೆ ಶರಣಾಗಬೇಕು. ನೀವು ಸ್ವಭಾವದಿಂದಲೇ ಈಶ್ವರ ನಿಷ್ಠರೂ ಆಳವಾದ ಆಧ್ಯಾತ್ಮಿಕ ಶ್ರದ್ಧಾಳೂ ಆಗಿದ್ದೀರಿ. ರಾಜಕೀಯ ನಾಯಕತ್ವ ನಿಮಗೆ ಗೌಣ. ಅಹಿಂಸೆಯಲ್ಲೂ ಕಷ್ಟ ಸಹಿಷ್ಣುತೆಯಲ್ಲೂ ನಿಮ್ಮ ನಂಬಿಕೆ ಅಪಾರ. ಭಗವಂತ ನಿಮ್ಮನ್ನು ಇಂಥ ಕಠಿಣ ಪರೀಕ್ಷೆಗಳಿಗೆ ಗುರಿಮಾಡಿ ಕೊನೆಗೆ ವಿಶ್ವ ಸಮಸ್ಯೆಗಳನ್ನು ಪರಿಹರಿಸಲು ನಿಮ್ಮನ್ನೇ ತನ್ನ ಉಪಕರಣವನ್ನಾಗಿ ಬಳಸುತ್ತಾನೆಂದು ನಂಬಿ ದ್ದೇನೆ. ಭಾಪರೀಸ್ ಸಬಿರೀನ್. (ತಾಳಿದವರು ಬಾಳಿಯಾರು)."

ಇದಕ್ಕೆ ಉತ್ತರಿಸುತ್ತಾ ಬಾದ್‌ಷಾಖಾನರು ವಿನೋಬಾ ಅವರ ಆತ್ಮೀಯ ಪತ್ರಕ್ಕಾಗಿ ಕೃತಜ್ಞತೆಗಳನ್ನರ್ಪಿಸಿದರು. "ನಿಮ್ಮಂಥ ಪರಮ ಯೋಗ್ಯರಿಂದ ನನಗೆ ದೊರೆತಿರುವ ಸಾಂತ್ವನ ಅಮೂಲ್ಯವಾದುದು. ಸತತವಾಗಿ ಸೋಲನ್ನೇ ಕಾಣುತ್ತಿರುವ ನನ್ನ ಧೃತಿ ಚೇತರಿಸಿಕೊಳ್ಳಲು ಸಹಾಯಕ" ಎಂದು ತಿಳಿಸಿದರು. ಕೊನೆಯಲ್ಲಿ ಭಾರತದ ಸರ್ಕಾರ ನಡೆಸು ತ್ತಿರುವ ಮಿತ್ರರು ಆತ್ಮ ನಿರೀಕ್ಷಣೆ ಮಾಡಿಕೊಂಡು ಪಠಾಣ ಜನಾಂಗದ ಹಕ್ಕಿನ ಹೋರಾಟಕ್ಕೆ ಬೆಂಬಲಿಗರಾಗಿ ನಿಲ್ಲಬೇಕೆಂದು ಮನವಿ ಮಾಡಿ ಕೊಂಡರು. ಮಾನವತೆಯ ಉಳಿವಿಗಾಗಿ ಇದು ಅಗತ್ಯ ಎಂದರು.

ಹೆಲ್ಸಿಂಕಿಯಲ್ಲಿ ವಿಶ್ವಶಾಂತಿ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದ ಅಕ್ಬರ್ ಅಲಿಖಾನರು ಕಾಬೂಲಿನಲ್ಲಿ ಗಫಾರ್‌ಖಾನರನ್ನು ಕಂಡು ತಮ್ಮ ವಂದನೆಗಳನ್ನು ಸಮರ್ಪಿಸಿದರು. ಮಹಾತ್ಮ ಗಾಂಧೀಜಿಯವರ ಜೀವನ ಸಂದೇಶವನ್ನು ಸಾರುತ್ತಿರುವ ಖಾನರ ಅವಿರತ ಸತ್ಯಾಗ್ರಹ ಜೀವನವನ್ನು ಸ್ಮರಿಸಿ ಭಾರತದ ಶುಭಾಶಯಗಳನ್ನು ತಿಳಿಸಿದರು.

ವಿನೋಬಾಜಿ ಅವರ ನಿರ್ದೇಶನದಂತೆ ನಾರಾಯಣರು ೧೯೬೫ ರ ಜುಲೈನಲ್ಲಿ ಕಾಬೂಲಿಗೆ ಹೋಗಿ ಬಾದ್‌ಷಾಖಾನರೊಡನೆ ಹತ್ತು ದಿನ ತಂಗಿ

ದ್ದರು. ಆ ಹೃದಯಸ್ಪರ್ಶಿ ಅನುಭವಗಳನ್ನು ತಮ್ಮ ಅನುಪಮ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಎಪ್ಪತ್ತೈದು ವರ್ಷದ ವೃದ್ಧರಾದರೂ ಹೇಗೆ ಅಪರಿಮಿತ ಉತ್ಸಾಹ, ಅದಮ್ಯ ಸಾಹಸ, ಅಸಾಧಾರಣ ತ್ಯಾಗ ಜೀವನ, ಅಸಾದೃಶ ತೇಜಸ್ಸಿನಿಂದ ಗಫಾರ್ ಖಾನರು ಅಫ್‌ಘಾನಿಸ್ತಾನದಲ್ಲಿ ಖುದಾಯಿ ಖಿದ್‌ಮತ್‌ಗಾರ್ ಚಳುವಳಿಯನ್ನು ಜೀವಂತವಾಗಿಟ್ಟಿದ್ದರು ಎಂದು ವಿವರಿಸಿದ್ದಾರೆ. ಪಾಕಿಸ್ತಾನ ಅಫ್‌ಘಾನಿಸ್ತಾನಗಳ ಸ್ನೇಹ ಬಾಂಧವ್ಯಗಳನ್ನು ಕುದುರಿಸಲು ಸತತ ಪ್ರಯತ್ನ ಅವರದು. ಪಾಕಿಸ್ತಾನ ತಮ್ಮನ್ನು ತಿರಸ್ಕರಿಸಿ ದೇಶಭ್ರಷ್ಟರನ್ನಾಗಿ ಮಾಡಿದರೂ ತಮ್ಮ ದೇಶದ ಸತ್ಪ್ರಜೆಯಾಗಿ ಶುಭವನ್ನೇ ಕೋರುತ್ತಾ ಶಾಂತಿಯುತ ಸಂಧಾನಗಳ ಸೂಚನೆಗಳನ್ನಿತ್ತರು. ಆದರೆ ಅವರ ಶಾಂತಿ ಸಂದೇಶ ಕೇಳಲು ಅಂದಿನ ಸೈನ್ಯಾಧಿಕಾರಿ ಸಿದ್ಧವಾಗಿರಲಿಲ್ಲ.

ಪಾಕಿಸ್ತಾನದಲ್ಲಿನ ತಮ್ಮ ಅನುಯಾಯಿಗಳ ಹೋರಾಟಕ್ಕೆ ಸಂದೇಶವೊಂದನ್ನಿತ್ತರು:-

"ನನ್ನ ದೇಶ, ಜನ ಇವರ ಸೇವೆಗಾಗಿಯೇ ನಾನು ಜೀವಿಸುತ್ತೇನೆಂದು ಭಗವಂತನ ಸಾಕ್ಷಿಯಾಗಿ ಸಂಕಲ್ಪಿಸಿದ್ದೇನೆ. ಈ ಮಹಾಯಜ್ಞದಲ್ಲಿ ಹುತಾತ್ಮನಾಗಬೇಕೆಂದು ಅಲ್ಲಾನನ್ನು ಪ್ರಾರ್ಥಿಸುತ್ತೇನೆ. ಈ ಪವಿತ್ರ ಕಾರ್ಯದಲ್ಲಿ ನೀವೂ ಸಹಕರಿಸಿ. ದೃಢಸಂಕಲ್ಪರಾಗಿ ಹೋರಾಡಿ ನಿಮ್ಮ ಗುರಿ ಸಾಧಿಸಿರಿ. ಪ್ರವಾದಿ ಮಹಮ್ಮದರೂ ಕೂಡ ಸಂಗಡಿಗರ ಸಹಕಾರವಿಲ್ಲದೆ ತಾವೊಬ್ಬರೇ ಗೆಲ್ಲಲಾಗಲಿಲ್ಲ. ಅಂದ ಮೇಲೆ ನನ್ನ ಪಾಡೇನು? ಒಂದು ದೇಶದ ಅಥವ ಜನಾಂಗದ ಭವಿಷ್ಯ ಒಬ್ಬ ವ್ಯಕ್ತಿಯ ಕೈಯಲ್ಲಿರುವುದಿಲ್ಲ. ಸರ್ವರ ಸೇವೆ ಮತ್ತು ಬಲಿದಾನಗಳ ಬಲದ ಮೇಲೆ ಮಾತ್ರವೇ ಅದು ರೂಪಿತವಾಗುತ್ತದೆ.

"ಬ್ರಿಟಿಷರ ಮತ್ತು ಪಾಕಿಸ್ತಾನೀ ಸರ್ವಾಧಿಕಾರಿಗಳ ದಬ್ಬಾಳಿಕೆಗಳಿಗೆ ತುತ್ತಾಗಿ ನೊಂದು ಛಿದ್ರ ಛಿದ್ರವಾಗಿರುವ ಗಡಿನಾಡು ಗುಡ್ಡಗಾಡು ಜನಾಂಗಗಳನ್ನು ಒಟ್ಟುಗೂಡಿಸಿ ಒಂದು ಭ್ರಾತೃತ್ವವನ್ನು ನಿರ್ಮಿಸಿ, ಶಾಂತಿಯುತ ವಿಧಾನಗಳಿಂದ ತಮ್ಮ ಏಳಿಗೆ ಸಾಧಿಸಿ ವಿಶ್ವಶಾಂತಿ ಪ್ರಯತ್ನ

ಗಳಿಗೆ ಕಾಣಿಕೆಯನ್ನರ್ಪಿಸುವಂತಾಗಲಿ ಎಂದು ಹಾರೈಸುತ್ತಿರುತ್ತೇನೆ. ಕೇವಲ ಅನಾಗರಿಕ ಕಾಡು ಜನರು, ಕ್ರೂರಿಗಳು, ಅಮಾನುಷ ದಂಗೆ ಕೋರರು ಎಂದೇ ನಮ್ಮ ಬುಡಕಟ್ಟುಗಳನ್ನೆಲ್ಲ ಬಣ್ಣಿಸಿ ನಮ್ಮನ್ನು ಪಶು ಗಳಂತೆ ದಾಸ್ಯ ದಾರಿದ್ರ್ಯಗಳಿಗೆ ಗುರಿ ಮಾಡುತ್ತ ಬಂದ ಬ್ರಿಟಿಷ್ ಸಾಮ್ರಾಜ್ಯ ಪ್ರವರ್ತಕರು ಅನ್ಯಾಯ ಮಾಡಿದ್ದಾರೆ. ಅದೇ ಮನೋ ಧರ್ಮ ಸ್ವಾತಂತ್ರ್ಯ ಬಂದ ಮೇಲೂ ಬದಲಾಗದೇ ಹೋಗಿದೆ.

"ಈ ಬಡಜನರ ವಸತಿಗಳ ನಾಶದಿಂದ ಕೊರಗುತ್ತಿರುವ ನಾಡಿನ ಮಣ್ಣನ್ನು ಚುಂಬಿಸ ಬಯಸುತ್ತೇನೆ. ಅವರ ರಕ್ತ ಸಿಂಚಿತ ಉಡುಗೆ ಗಳನ್ನು ನನ್ನ ಕೈಯಿಂದಲೇ ಶುಭ್ರ ಮಾಡಲಿಚ್ಛಿಸುತ್ತೇನೆ. ಅವರ ಬೀದಿ ಗಳನ್ನು ಗುಡಿಸಿ ಗುಡಿಸಲುಗಳನ್ನು ಸ್ವಚ್ಛವಾಗಿಡಬಯಸುತ್ತೇನೆ. ನನ್ನ ಜನಾಂಗ ತಲೆಯೆತ್ತಿ ನಿಂತು ಸ್ವಾವಲಂಬಿ ಜೀವಿಗಳಾಗಿ ಜಗತ್ತನ್ನೆದುರಿ ಸುವ ಗೌರವಾನ್ವಿತ ಪ್ರಜೆಗಳಾಗಬೇಕು. ಇಂಥ ಸುಸಂಸ್ಕೃತ, ವಿನಯ ಪೂರ್ಣ, ಪ್ರೇಮಮಯ ಜನಾಂಗ ಮತ್ತೊಂದುಂಟೆ ಎಂಬ ಸವಾಲನ್ನು ಜಗತ್ತಿನೆದುರು ಪ್ರಕಟಿಸುವಂತೆ ನಿರಂತರ ಪ್ರಯತ್ನಶೀಲರಾಗಿ ದುಡಿ ಯೋಣ.

"ಸತ್ಯ ನಿಷ್ಠೆ ಒಂದು ನಿರಂತರ ಸಂಗ್ರಾಮ. ನಿಷ್ಠಾವಂತರು ಕೊನೆ ಯುಸಿರಿನವರೆಗೂ ಹೋರಾಡುತ್ತಿರಬೇಕಾದೀತು. ಅವನಿಗೆ ಯಾವ ಅಸ್ತ್ರವೂ ಬೇಕಾಗುವುದಿಲ್ಲ. ಸತ್ಯ ಅಹಿಂಸೆಗಳ ಅಪ್ರತಿಹತ ಮಹಾಶಕ್ತಿ ಗುರಿ ಸಾಧಿಸಿಯೇ ತೀರುತ್ತದೆ."

ಪ್ಯಾರೇಲಾಲರು ಗಫಾರ್‌ಖಾನರ ಈ ಧೀರ ಸಂಕಲ್ಪವನ್ನೂ ಅವರ ತಪಸ್ವೀ ಜೀವನವನ್ನೂ ಕಂಡು ಬೆರಗಾದರು. ಮಹಾತ್ಮರ ನಂತರ ಈ ಸಂದೇಶವಾಹಕರಾಗಿರುವ ನಾಯಕನನ್ನು ವಿನೋಬಾಜಿ ತಮ್ಮ ಹಿರಿಯಣ್ಣ ನೆಂದೇ ಸಂಬೋಧಿಸಿ ಪತ್ರ ಬರೆಯುತ್ತಿದ್ದರು.

೧೯೬೫ರಲ್ಲಿ ಪಾಕಿಸ್ತಾನ ಹಠಾತ್ತನೆ ಭಾರತದ ಮೇಲೆ ಯುದ್ಧ ಘೋಷಿಸಿಬಿಟ್ಟಿತು. ಗಫಾರ್‌ಖಾನರಿಗೆ ಅತ್ಯಂತ ವೇದನೆಯಾಯಿತು. ಒಂದು ಕಡೆ ಅಫ್ಘಾನಿಸ್ತಾನದ ಮೇಲೆ ಮತ್ತೊಂದು ಕಡೆ ಭಾರತದ


ಮೇಲೆ ದ್ವೇಷ ಸಾಧಿಸುತ್ತಲೇ ಸಾಗಿ ಇದೀ ಪಾಕಿಸ್ತಾನ ದೇಶವನ್ನು ಭಯಂಕರವಾದ ಸೈನ್ಯ ವಸಾಹತಾಗಿ ಪರಿವರ್ತಿಸಿದ ಆಳರಸರನ್ನು ಕಂಡು ದುಃಖಿಸಿದರು. ಕೊನೆಗೆ ಅಗಾಧ ಕಷ್ಟನಷ್ಟಗಳನ್ನನುಭವಿಸಿ ರಷ್ಯದ ಮಧ್ಯಸ್ಥಿಕೆಯಲ್ಲಿ ಅಯೂಬ್‌ಖಾನ್ ಭಾರತ ಪ್ರಧಾನಿ ಲಾಲ್‌ಬಹದ್ದೂರ್‌ಶಾಸ್ತ್ರಿ ಅವರೊಡನೆ ಒಪ್ಪಂದಕ್ಕೆ ಬರಬೇಕಾಯಿತು. ತಾಷ್ಕೆಂಟ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕುವಾಗ ಲಾಲ್‌ಬಹದ್ದೂರ್‌ಶಾಸ್ತ್ರಿಯವರು ಅಹಿಂಸಾಯೋಧ ಗಫಾರ್‌ಖಾನರನ್ನು ಸ್ಮರಿಸಿಕೊಂಡರು. ಭಾರತಕ್ಕೆ ಹಿಂತಿರುಗುವಾಗ ಅವರು ಕಾಬೂಲಿನಲ್ಲಿಳಿದು ಗಫಾರ್‌ಖಾನರ ದರ್ಶನ ಪಡೆಯುವ ಕಾರ್ಯಕ್ರಮವೂ ಗೊತ್ತುಮಾಡಲ್ಪಟ್ಟಿತ್ತು. ದೈವಚಿತ್ತ ಬೇರೆಯೇ ಆಗಿಹೋಯಿತು. ಶಾಸ್ತ್ರಿಗಳು ಒಪ್ಪಂದಕ್ಕೆ ಸಹಿ ಹಾಕಿದ ದಿನ ರಾತ್ರಿಯೇ ತಾಷ್ಕೆಂಟ್‌ನಲ್ಲಿ ನಿಧನರಾದರು. ಬಾದ್‌ಷಾಖಾನರಿಗೆ ಅಂದು ಆ ದುರಂತ ತಂದ ತೀವ್ರ ಆಘಾತ ಕೊನೆಯವರೆವಿಗೂ ದಾರುಣ ನೆನಪಾಗಿ ಉಳಿದುಬಿಟ್ಟಿತು. ಪ್ಯಾರೆಲಾಲರಿಗೆ ಪತ್ರ ಬರೆದು ದುಃಖ ತೋಡಿಕೊಂಡರು.

ಜಲಾಲಬಾದ್ ಗಫಾರ್‌ಖಾನರ ಸ್ವಂತ ಊರು. ಅದು ಅಫ್ಘಾನಿಸ್ತಾನ–ಪಾಕಿಸ್ತಾನಗಳ ಎಲ್ಲೆಯಲ್ಲಿದೆ. ಅಲ್ಲಿ ನಿಂತು ತಮ್ಮ ಹೋರಾಟ ಮುಂದುವರಿಸುತ್ತಲೇ ಇದ್ದರು. ತಮ್ಮ ಅನುಯಾಯಿಗಳಿಗೆ ಧರ್ಮಾನುಷ್ಠಾನದ ಸಮನ್ವಯ ಸೂತ್ರಗಳನ್ನವರು ಸತತವಾಗಿ ಬೋಧಿಸುತ್ತಿದ್ದರು. ಅಹಿಂಸಾನಿಷ್ಠ ಬದುಕಿಗೆ ಹೇಗೆ ಸರ್ವಧರ್ಮ ಸಮಭಾವ ಅಗತ್ಯ ಎಂದು ತಿಳಿಸುತ್ತಿದ್ದರು.

"ಧರ್ಮನಿಷ್ಠೆ ಮತ್ತು ದ್ವೇಷ ಪರಸ್ಪರ ವಿರೋಧಿ ಭಾವನೆಗಳು. ಆದರೆ ನಮ್ಮ ದುರ್ದೈವದಿಂದ ಈಗ ಧರ್ಮ ಎನ್ನುವುದು ದ್ವೇಷವನ್ನೇ ಹೆಚ್ಚಿಸುವ ಸಾಧನವಾಗಿ ಬಿಟ್ಟಿದೆ. ಈ ವಿಷಜ್ವಾಲೆ ವಿಶ್ವವನ್ನೆಲ್ಲ ಆವರಿಸುತ್ತಿದೆ. ಇಸ್ಲಾಮ್ ಧರ್ಮದ ಪ್ರವಾದಿ ಮಹಮ್ಮದರು, "ಭಗವಂತನ ಸೃಷ್ಟಿಯಾದ ಸಮಸ್ತ ಜೀವಿಗಳಿಗೂ ಒಳಿತನ್ನು ಮಾಡುವವರೇ ಮಾನವರಲ್ಲಿ ಶ್ರೇಷ್ಠರು" ಎಂದೇ ಹೇಳಿದ್ದಾರೆ. ಏಸು ಸ್ವಾಮಿ, "ನಿನ್ನ ಕೆನ್ನೆಗೆ ಹೊಡೆದವನಿಗೆ ತಾಳ್ಮೆಯಿಂದ ಮತ್ತೊಂದು ಕೆನ್ನೆಯನ್ನು ತೋರಿಸು" ಎಂದರು, ಹಿಂದೂ ಧರ್ಮವಂತೂ ಮನುಷ್ಯ ಜೀವಿಗಳಿಗಷ್ಟೇ ಅಲ್ಲ

ನೆಲದಲ್ಲಿ ಹರಿದಾಡುವ ಕ್ರಿಮಿಕೀಟಗಳಿಗೂ ದಯೆ ತೋರು ಎಂದು ಬೋಧಿಸುತ್ತದೆ. ಆದರೆ ವಾಸ್ತವವಾಗಿ ಹಿಂದೂಗಳೂ, ಮುಸ್ಲಿಮರೂ, ಕ್ರೈಸ್ತರೂ ತಮ್ಮ ತಮ್ಮ ಮತಧರ್ಮಗಳಿಂದ ಮಾನವಕುಲವನ್ನು ಭಾವೈಕ್ಯಗೊಳಿಸುವುದನ್ನು ಬಿಟ್ಟು ಪರಸ್ಪರ ದ್ವೇಷ ಘರ್ಷಣೆಗಳನ್ನೇ ಪ್ರೇರೇಪಿಸಲು ಸಾಧನಗಳಾಗಿ ಬಳಸುತ್ತಿವೆ. ಈಶ್ವರ ಪ್ರಣೀತ ಧರ್ಮ ಇದೇನೇ ಎಂದು ನಾನು ಪ್ರಶ್ನಿಸುತ್ತೇನೆ. ಇದು ಖಂಡಿತವಾಗಿ ಧರ್ಮವಾಗಲಾರದು! ಸ್ವಾರ್ಥಸಾಧನೆಗಾಗಿ ಕೆಲವರು ನಿಜ ಧರ್ಮವನ್ನು ತಪ್ಪುಮಾರ್ಗಕ್ಕೆಳೆದಿದ್ದಾರೆ. ಅವರ ಉದ್ದೇಶ ಮಾನವನ ಉದ್ಧಾರವಲ್ಲ, ಸ್ವಾರ್ಥಸಾಧನೆ.”

ಹಲವು ವರ್ಷಗಳ ಕಾಲ ಕಾಬೂಲಿನಲ್ಲಿ ವಸತಿ ಮಾಡಿದ್ದರೂ ಬಾದ್‌ಷಾಖಾನರು ರಾಜಕೀಯ ತುಮುಲಗಳಿಂದ ದೂರವಾಗಿಯೇ ಇದ್ದರು. ಅವರ ಪೂರ್ವಿಕರ ಸ್ಥಳ ಜಲಾಲಬಾದ್ ಅಫ್ಘಾನಿಸ್ತಾನಕ್ಕೇ ಸೇರಿತ್ತು. ಕ್ರಮೇಣ ಈ ಗಡಿಪ್ರದೇಶದಲ್ಲಿ ಪಾಕಿಸ್ತಾನ ಪ್ರೇರಿತರಾದ ದಂಗೆಕೋರರು ಪ್ರಬಲರಾಗತೊಡಗಿದರು. ಅಂತರ್ಯುದ್ಧ ಅಫ್ಘಾನಿಸ್ತಾನ ಸಮಸ್ಯೆಯನ್ನು ಉಲ್ಬಣಿಸಿತು. ಎಪ್ಪತ್ತರ ದಶಕದಲ್ಲಿ ರಷ್ಯ ಅಮೇರಿಕಗಳ ಪರಸ್ಪರ ರಾಜಕೀಯ ಘರ್ಷಣೆಗಳಿಗೆ ಈ ಪ್ರದೇಶ ತುತ್ತಾಯಿತು. ರಷ್ಯದ ಸೇನೆಗಳು ಅಫ್ಘಾನಿಸ್ತಾನದ ಆಡಳಿತ ಪಕ್ಷದ ಬೆಂಬಲಕ್ಕೆ ಬಂದು ನಿಂತವು. ಪಾಕಿಸ್ತಾನವನ್ನು ನೆಲೆಯಾಗಿ ಮಾಡಿಕೊಂಡು ದಾಳಿ ನಡೆಸುತ್ತಿದ್ದ ಅಫ್ಘನ್ ದಂಗೆಕೋರರಿಗೆ ಅಮೇರಿಕ ಪರೋಕ್ಷವಾಗಿ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಾ, ಪಾಕಿಸ್ತಾನದ ಸಹಕಾರದಿಂದ ಈ ವ್ಯಾಪಕ ಹತ್ಯಾಕಾಂಡಕ್ಕೆ ಬೆಂಬಲವಾಗಿ ನಿಂತಿತು. ಈ ರಕ್ತ ಸಿಂಚಿತ ಸಮರ ಅವ್ಯಾಹತವಾಗಿ ನಡೆಯುತ್ತಲೇ ಸಾಗಿ ಸಹಸ್ರಾರು ಅಫ್ಘಾನರು, ಪಠಾಣರು, ಪಾಕಿಸ್ತಾನಿಗಳು, ತುರ್ಕಿಗಳು ಬಲಿಯಾದುದನ್ನು ಕಂಡು ವೃದ್ಧ ಗಫಾರ್ ಖಾನರು ಮಮ್ಮಲ ಮರುಗಿದರು. ಶಾಂತಿ ಸಂಧಾನಗಳಿಗೆ ಪ್ರಯತ್ನ ಮಾಡುತ್ತಲೇ ಇದ್ದರು. ಪಾಕಿಸ್ತಾನವು ಅಮೇರಿಕದ ಅಗಾಧ ಧನಸಹಾಯದ ಆಮಿಷಗಳಿಗೆ ಮಾರುಹೋಗಿ ಸಂಘರ್ಷಗಳ ಜ್ವಾಲೆಗೆ ಹವಿಸ್ಸುಗಳನ್ನೊದಗಿಸುತ್ತಲೇ ಬಂತು. ಪರಸ್ಪರ ದ್ವೇಷಾಸೂಯೆಗಳು ಹೆಚ್ಚಿದವು. ಗಡಿನಾಡಿನ ಪಠಾಣರನ್ನು ಅನುಮಾನದಿಂದ ಕಂಡು ಚಿತ್ರಹಿಂಸೆಗೊಳಪಡಿಸುತ್ತಿದ್ದರು. ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಅಫ್ಘಾನಿಸ್ತಾನ ಸಮಸ್ಯೆ ಬೃಹದಾಕಾರ



ವಿನೋಬಾ ಅವರ ಪೌನಾರ್ ಆಶ್ರಮದಲ್ಲಿ ಜಯಪ್ರಕಾಶರೊಡನೆ (೧೯೭೦)

ವಾಗಿ ಪೇಮ ನಿಂತಿತು. ವಿಶ್ವಸಂಸ್ಥೆ ಮಧ್ಯೆ ಪ್ರವೇಶಿಸಿ ರಷ್ಯದ ಸೈನ್ಯಗಳು ವಾಪಸಾಗುವಂತೆ ಒಪ್ಪಂದವಾಯಿತು. ಆದರೆ ಪಾಕಿಸ್ತಾನದ ಗಡಿಯೊಳಗಿನಿಂದ ಅಫ್ಘಾನಿಸ್ತಾನದ ಮೇಲೆ ದಂಗೆಕೋರರ ದಾಳಿಗಳು ನಿಲ್ಲಲೇ ಇಲ್ಲ. ಯಾವ ವಾಯುವ್ಯ ಗಡಿನಾಡು ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಅಹಿಂಸೆಯ ಪವಾಡ ಸದೃಶ ಶಾಂತಿ ಪಡೆಯನ್ನು ಗಫಾರ್ ಖಾನರ ತಪಶ್ಚರ್ಯದಿಂದ ನಿರ್ಮಿಸಿತೋ ಅದೇ ಪ್ರದೇಶ ಅಫ್ಘನ್ ಮತ್ತು ಪಾಕಿಸ್ತಾನಗಳ ಆಕ್ರಮಣ ದಾಹಕ್ಕೆ ತುತ್ತಾಗಿ ರಣರಂಗವಾಯಿತು. ಇಸ್ಲಾಮ್ ಧರ್ಮಗಳೇ ಆದ ಈ ಸೋದರ ರಾಷ್ಟ್ರಗಳ ಮಧ್ಯೆ ಭುಗಿಲೆದ್ದ ಕಿಚ್ಚು ಅಂತರಾಷ್ಟ್ರೀಯ ರಾಜಕೀಯ ಚದುರಂಗದಿಂದ ಉಲ್ಬಣಿಸುತ್ತಲೇ ಸಾಗಿತು. ಈ ಎಲ್ಲ ಬೆಳವಣಿಗೆಗಳ ಮಧ್ಯೆ ಅಬ್ದುಲ್ ಗಫಾರ್ ಖಾನರ ಅಂತರ್ಯ ಬಲವಾಗಿ ಕಲಕಿತು. ಆರೋಗ್ಯವೂ ಕ್ಷೀಣಿಸಿತು. ದುರ್ಬಲ ದೇಹವಾದರೂ ಅವರ ಆತ್ಮಶಕ್ತಿ ಪ್ರಾಂಜಲ ತೇಜಸ್ಸಿನಿಂದ ಬೆಳಗಿ ಸಾಂತ್ವನದ ಮಾರ್ಗಗಳನ್ನು ಅರಸುತ್ತಲೇ ಹೋಯಿತು. ಆದರೆ ಹಿಂಸಾತ್ಮಕ ಘರ್ಷಣೆಗಳಲ್ಲಿ ತೊಡಗಿ ಅಡ್ಡದಾರಿ ಹಿಡಿದ ಪಾಕಿಸ್ತಾನ ಅವರ ಮಾತುಗಳನ್ನು ತಿರಸ್ಕರಿಸಿತು. ಅಶಾಂತಿ ಆವರಿಸಿ ಜೀವನವನ್ನು ದುರ್ಭರಗೊಳಿಸಿತು.

೨೦. ವಿಶ್ವಮಾನವ

೧೯೬೯ ರಲ್ಲಿ ಗಾಂಧೀ ಶತಮಾನೋತ್ಸವಕ್ಕಾಗಿ ಖಾನ್‌ಅಬ್ದುಲ್ ಗಫಾರ್‌ಖಾನರನ್ನು ಭಾರತಕ್ಕೆ ವಿಶೇಷ ಆಹ್ವಾನಿತರನ್ನಾಗಿ ಕರೆಸಿಕೊಳ್ಳಲಾಯಿತು. ಅನಾರೋಗ್ಯದಿಂದ ಬಳಲಿದ್ದರೂ ಲೆಕ್ಕಿಸದೆ ದೇಶದಲ್ಲೆಲ್ಲ ಕಡೆ ಸಮಾರಂಭಗಳಲ್ಲಿ ಭಾಗವಹಿಸಿದರು. ಹಳೆಯ ಗೆಳೆಯರನ್ನೆಲ್ಲ ಕಂಡು ತಬ್ಬಿಕೊಂಡು ಪ್ರೀತಿಯಿಂದ ಯೋಗಕ್ಷೇಮ ವಿಚಾರಿಸಿದರು. ಸಾರ್ವಜನಿಕ ಸಭೆಗಳಲ್ಲಿ ಗಾಂಧೀಜಿಯ ನೆನಪನ್ನು ಈ ಮಹಾತಪಸ್ವಿ ಮಾಡಿಕೊಡುತ್ತಿರುವಾಗ ಬಾಪೂ ವಾಣಿಯೇ ಪ್ರತಿಧ್ವನಿಸಿದಂತಾಗುತ್ತಿತ್ತು. ಗಡಿನಾಡಿನ ಗಾಂಧೀ ಎಂದು ಭಾರತ ಗೌರವದಿಂದ ಕಂಡ ಸ್ವಾತಂತ್ರ್ಯಯೋಧ ಈಗ ವಿಶ್ವಮಾನವನೆಂಬ ಪ್ರಖ್ಯಾತಿ ಗಳಿಸಿದ್ದರು. ಆದರ್ಶ ಸತ್ಯಾಗ್ರಹಿಯಾಗಿ ವೀರರ ಅಹಿಂಸೆಯನ್ನು ಮೆರೆಸಿದ ಬಾದ್‌ಷಾಖಾನ್ ಗಾಂಧೀಜಿಯ ಅನುಯಾಯಿಗಳೆಲ್ಲರಿಗಿಂತ ಎತ್ತರದಲ್ಲಿ ಮಿಂಚಿ ನಿಂತವರಾಗಿದ್ದರು. ಪ್ರಾಮಾಣಿಕತೆ, ಸರಳತೆ, ನಿರ್ವ್ಯಾಜ ಪ್ರೇಮ, ನಿಸ್ವಾರ್ಥ ಸೇವೆಗಳಿಗೆ ಅವರ ಹೆಸರು ಅನ್ವರ್ಥವಾಗಿತ್ತು. ಗಾಂಧೀ ಶತಾಬ್ದಿಯಲ್ಲಿ ಮತ್ತೊಮ್ಮೆ ಗಾಂಧೀ ಮಾರ್ಗದೆಡೆಗೆ ಭಾರತದ ಗಮನವನ್ನು ಸೆಳೆಯಲು ಬಾದ್‌ಷಾಖಾನರ ಅಧಿಕಾರವಾಣಿ ಮತ್ತೆಲ್ಲ ಧ್ವನಿಗಳನ್ನೂ ಮೀರಿ ಪ್ರಭಾವ ಬೀರಿತು. ಅವರ ನೊಂದ ಜೀವಕ್ಕೆ ಗಾಂಧೀ ಸ್ಮರಣೆ ಅತ್ಯಂತ ಸಮಾಧಾನಕರ ಸಾಂತ್ವನ ನೀಡಿತು.

ಅದೇ ವರ್ಷ ಗಫಾರ್‌ಖಾನರಿಗೆ ನೆಹರೂ ಸ್ಮಾರಕ ಅಂತರಾಷ್ಟ್ರೀಯ ಸೌಹಾರ್ದ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ದೆಹಲಿಯಲ್ಲಿ ನಡೆದ ಈ ಸಮಾರಂಭ ಚಿರಸ್ಮರಣೀಯ. ಪ್ರಧಾನಿ ಇಂದಿರಾಗಾಂಧಿ ಅತ್ಯಂತ ವಾತ್ಸಲ್ಯದಿಂದ ಈ 'ದೇವ ಮಾನವ' ನನ್ನು ಅಭಿನಂದಿಸಿದರು. ಒಂದು ಲಕ್ಷ ರೂಪಾಯಿಗಳ ಗೌರವ ಕಾಣಿಕೆಯೊಡನೆ ಅರ್ಪಿಸಿದ ಪ್ರಶಸ್ತಿ ಪತ್ರದಲ್ಲಿ ಹೀಗೆ ಬರೆಯಲಾಗಿತ್ತು:-

"ತಮ್ಮ ಸಾನ್ನಿಧ್ಯದಿಂದ ಜಗತ್ತಿನ ಇತಿಹಾಸವನ್ನು ಬೆಳಗಿಸುವ ಕೆಲವೇ ವ್ಯಕ್ತಿಗಳಿರುತ್ತಾರೆ. ಅವರು ಹುಟ್ಟಿಬರುವುದು ಈ ಪೃಥ್ವಿಯ ಐಶ್ವರ್ಯ ವನ್ನನುಭವಿಸುವುದಕ್ಕಲ್ಲ; ತಮ್ಮನ್ನು ತಾವೇ ಅರ್ಪಿಸಿಕೊಂಡು ಅದನ್ನು ವೃದ್ಧಿಸುವುದಕ್ಕೆ. ಮಾನವನ ಭವಿಷ್ಯ ವಿಕಾಸದಲ್ಲಿಟ್ಟ ಗಾಢ ಶ್ರದ್ಧೆಯಿಂದ ಹುಟ್ಟಿದ ಈ ಜೀವನದಾನ ಅವರಿಗೆ ಸ್ವಭಾವ ಸಹಜವಾಗಿ ಬಿಡುತ್ತದೆ. ಅಹಂಕಾರ ರಹಿತವಾಗಿರುತ್ತದೆ. 'ಸತ್ಯಮೇವಜಯತೆ' ಎಂಬ ಧ್ಯೇಯ ವಾಕ್ಯ ಅವರಲ್ಲಿ ಬೇರೂರಿಬಿಟ್ಟಿರುತ್ತದೆ. ಅಂಥ ಒಬ್ಬ ಮಹಾವ್ಯಕ್ತಿ ಖಾನ್ ಅಬ್ದುಲ್ ಗಫಾರ್‌ಖಾನ್.

"ಗಾಂಧೀಜಿಯಂತೆಯೇ ಈತ ಹೃದಯಪೂರ್ವಕವಾಗಿ ಆತ್ಮ ಸಮರ್ಪಣದಿಂದ ಪ್ರೇಮ ಕರುಣೆಗಳ ಮೂಲಕ ಸ್ವಾತಂತ್ರ್ಯ ಸಮರ ಕೈಗೊಂಡರು. ಕೃತಜ್ಞತೆಯ ಕುರುಹಾಗಿ ಭಾರತೀಯರು ಅವರನ್ನು ಗಡಿನಾಡು ಗಾಂಧೀ ಎಂದೇ ಕರೆದರು. ಗಾಂಧೀ ಮತ್ತು ಗಫಾರ್‌ಖಾನ್ ಎರಡು ಪವಿತ್ರ ನದಿಗಳಂತೆ ಸಂಗಮಿಸಿ ಅಹಿಂಸೆಯ ಮಹಾಶಕ್ತಿಯನ್ನು ಈ ಉಪಖಂಡದಲ್ಲೆಲ್ಲ ಪ್ರವಹಿಸಿದರು. ಜಗತ್ತು ತತ್ತರಿಸುವಂತೆ ಈಗ ಕವಿದಿರುವ ಅಣ್ವಸ್ತ್ರಗಳ ಕರಾಳ ಛಾಯೆಯ ಭಯದಿಂದ ಪಾರಾಗಲು ಈ ದಿವ್ಯಾತ್ಮಗಳು ತೋರಿಸಿರುವ ವಿವೇಕಯುತ ಮಾರ್ಗವೊಂದೇ ಆಶಾಕಿರಣ....

"ದೀರ್ಘ ಸೆರೆಮನೆಯ ಶಿಕ್ಷೆಗಳಿಂದ ಝರ್ಝರಿತರಾದರೂ ಗಫಾರ್ ಖಾನ್ ಮಾನವನಲ್ಲಿ ಪೂರ್ಣಶ್ರದ್ಧೆಯಿಟ್ಟು ದುಡಿಯುತ್ತಿದ್ದಾರೆ. ಸಂಯಮ ಪೂರ್ಣ ಸರಳತೆ, ಸ್ವಾರ್ಥ ತ್ಯಾಗ ನಿರ್ಮಲ ವ್ಯಕ್ತಿತ್ವಗಳ ಪ್ರತೀಕವಾಗಿರುವ ಈ ನಾಯಕ ನಮ್ಮೆಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ನೆಹರು ಅವರ ಆದರ್ಶಗಳಾದ ಶಾಂತಿ ಮತ್ತು ಅಂತರ್‌ರಾಷ್ಟ್ರೀಯ ಸೌಹಾರ್ದಗಳನ್ನು ವರ್ಧಿಸಲು ಶ್ರೀ ಬಾದ್‌ಷಾಖಾನರ ವಿಶ್ವ ಭ್ರಾತೃತ್ವ ಭಾವನೆ ಮತ್ತು ಮಾನವೀಯ ಮೌಲ್ಯಗಳು ಅಪಾರ ಕಾಣಿಕೆಗಳಾಗಿ ಪರಿಣಮಿಸಿವೆ."

೧೯೭೧ ರಲ್ಲಿ ಪಾಕಿಸ್ತಾನದ ಪೂರ್ವ ಬಂಗಾಳ ರಾಜ್ಯ ದಂಗೆ ಯದ್ದುದರಿಂದ ಅಧ್ಯಕ್ಷ ಯಾಹ್ಯಾಖಾನ್ ಸೈನ್ಯಾಚರಣೆಯಿಂದ ಬಂಗಾಳಿಗಳನ್ನು ಸದೆಬಡಿದು ಚಿತ್ರಹಿಂಸೆಗಳಿಗೆ ಗುರಿಮಾಡಿದರು. ಸ್ವಾಯತ್ತ ಪ್ರಭುತ್ವಕ್ಕಾಗಿ ಬಂಗಾಳಿಗಳು ಧೀರ ಹೋರಾಟ ನಡೆಸಿದರು, ಗಫಾರ್

ಖಾನರು ಮುಂದೆ ಬಂದು ಸೌಹಾರ್ದದಿಂದ ಸಮಸ್ಯೆ ಪರಿಹರಿಸಲು ಸಲಹೆ ನೀಡಿದರು. ಪೂರ್ವ ಬಂಗಾಳದ ಸೈನ್ಯಾಧಿಕಾರಿ ಗೌರ್ನರಾಗಿದ್ದ ಜನರಲ್ ತಿಕ್ಕಾಖಾನ್ ಕ್ರೂರ ದಬ್ಬಾಳಿಕೆಯಿಂದ ಸಾವಿರಾರು ಪ್ರಜೆಗಳನ್ನು ಕೊಂದು ನಾಯಕರಾಗಿದ್ದ ಮುಜೀಬುರ್ ರಹಮಾನರನ್ನೂ ಅವರ ಬಂಧುಗಳೆಲ್ಲರನ್ನೂ ಸೆರೆಯಲ್ಲಿಟ್ಟರು. ಗಫಾರ್‌ಖಾನರ ವಿವೇಕಯುತ ಬುದ್ಧಿವಾದವನ್ನು ಯಾರೂ ಕೇಳಲೇ ಇಲ್ಲ. ತೊಂಭತ್ತು ಲಕ್ಷ ಬಂಗಾಳಿ ಪ್ರಜೆಗಳು ನಿರಾಶ್ರಿತರಾಗಿ ಭಾರತಕ್ಕೆ ಓಡಿ ಬಂದುಬಿಟ್ಟರು. ಭಾರತ ಸರ್ಕಾರ ಒಂದು ವರ್ಷ ಕಾಲ ಆಶ್ರಯ ನೀಡಿತು. ಜಯಪ್ರಕಾಶ ನಾರಾಯಣರು ವಿಶ್ವರಾಷ್ಟ್ರಗಳಿಗೆ ಮನವಿ ಮಾಡಿ ಸಹಾಯ ಪಡೆದು ನಿರಾಶ್ರಿತರ ಶಿಬಿರಗಳನ್ನು ನಡೆಸಿದರು. ಸಾವಿರಾರು ಸ್ವಯಂ ಸೇವಾ ಸಂಸ್ಥೆಗಳು ಈ ದೇಶಭ್ರಷ್ಟ ದುರ್ದೈವಿಗಳಿಗೆ ಆಶ್ರಯ ನೀಡಿದವು. ಪ್ರಧಾನಿ ಇಂದಿರಾ ಗಾಂಧೀ ಕೊನೆಗೊಮ್ಮೆ ಪಾಕಿಸ್ತಾನದ ಮೇಲೆ ಯುದ್ಧ ಘೋಷಿಸಿ ಮುಜೀಬುರ್ ರಹಮಾನರ ಬಂಗಾಳೀ ಅನುಯಾಯಿಗಳಿಗೆ ಬೆಂಬಲವಾಗಿ ನಿಂತರು. ಪಾಕಿಸ್ತಾನ ಸೋತು ತನ್ನ ಪೂರ್ವ ಭಾಗದ ರಾಜ್ಯವನ್ನು ಬಿಟ್ಟು ಹೋಗಬೇಕಾಯಿತು. ಸ್ವತಂತ್ರ ಬಂಗ್ಲಾದೇಶ ಉದ್ಭವವಾಗಿ ಬಂಗಾಳೀ ನಿರಾಶ್ರಿತರು ತಮ್ಮ ನೆಲೆಗಳಿಗೆ ಹಿಂತಿರುಗಿದರು. ಸತತವಾಗಿ ಎಚ್ಚರಿಸುತ್ತಲೇ ಇದ್ದ ಗಫಾರ್‌ಖಾನರ ಭವಿಷ್ಯವಾಣಿ ನಿಜವಾಯಿತು. ಪಾಕಿಸ್ತಾನ ಒಡೆದು ಹೋಯಿತು.

೧೯೭೨ ರಲ್ಲಿ ಗಫಾರ್ ಖಾನ್ ಪಾಕಿಸ್ತಾನಕ್ಕೆ ಮರು ಪ್ರವೇಶ ಮಾಡಿದರು. ಆಗ ಚುನಾವಣೆಗಳು ನಡೆದು ರಾಷ್ಟ್ರೀಯ ಅವಾಮಿ ಪಕ್ಷ ಅಬ್ದುಲ್ ಗಫಾರ್ ಖಾನರ ಪುತ್ರ ಘನಿಖಾನರ ಮುಖಂಡತ್ವದಲ್ಲಿ ಗಡಿನಾಡಿನ ಅಧಿಕಾರವಹಿಸಿಕೊಂಡಿತ್ತು. ಭುಟ್ಟೋರವರು ಪಾಕಿಸ್ತಾನದ ಅಧ್ಯಕ್ಷರಾದರು. ಬಾದ್ ಷಾಖಾನರು ಈಗಲೂ ಅಧ್ಯಕ್ಷರಿಗೆ ಸಹಕಾರ ಹಸ್ತ ನೀಡಿ ರಾಷ್ಟ್ರದ ಉನ್ನತಿಗೆ ಶ್ರಮಿಸಲು ಉದ್ದೇಶಿಸಿದ್ದರು. ಪಖ್ತೂನಿಸ್ತಾನ ಎಂದು ಗಡಿನಾಡು ಪ್ರಾಂತವನ್ನು ಒಗ್ಗೂಡಿಸಿ ಗಿರಿಜನರ ಪುನರುತ್ಥಾನಕ್ಕಾಗಿ ಮೊದಲ ಪ್ರಯತ್ನ ನಡೆಸಿದರು. ಇದು ಭುಟ್ಟೋ ಅವರಿಗೆ ಪಥ್ಯವಾಗದೇ ಹೋಯಿತು. ಗಫಾರ್ ಖಾನರನ್ನು ಮತ್ತೆ ಸೆರೆಮನೆಗೆ ಹಾಕಲಾಯಿತು. ಅಫ್ಘಾನಿಸ್ತಾನದ ದಳ್ಳಾಳಿ ಎಂದು ಆರೋಪಿಸಿ ಬಹಿಷ್ಕರಿಸಲಾಗಿತ್ತು. ೧೯೭೭ರಲ್ಲಿ ಭುಟ್ಟೋರವರನ್ನೇ ಸೆರೆಯಲ್ಲಿ ಪಾಕಿ

ಸೈನ್ಯ ಬಲದ ಬೆಂಬಲದಿಂದ ಜನರಲ್ ಜಿಯಾಉಲ್ಲಾಖಾನ್ ಅಧಿಕಾರ ಆಕ್ರಮಿಸಿ ಸರ್ವಾಧಿಕಾರಿಯಾದರು. ಮಂತ್ರಿಮಂಡಲಗಳೆಲ್ಲ ರದ್ದಾದವು. ಮುಂದೆ ಅವ್ಯಾಹತವಾಗಿ ಎಂಟು ವರ್ಷಗಳು ಸೈನ್ಯದ ಪರಮಾಧಿಕಾರ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಿರ್ನಾಮ ಮಾಡಿತು. ಭುಟ್ಟೋರವರನ್ನು ಗಲ್ಲಿಗೇರಿಸಿಬಿಟ್ಟರು. ಮಗಳು ಬೆನಜಿರ್ ಭುಟ್ಟೋ ದೇಶ ಭ್ರಷ್ಟಳಾಗಿ ಯುರೋಪಿಗೆ ಹೋದರು. 'ಪೀಪಲ್ಸ್ ಪಾರ್ಟಿ' ಎಂಬ ಅವರ ಪಕ್ಷ ಸತತವಾಗಿ ಪ್ರಜೆಗಳ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಲೇ ಸಾಗಿತು. ಜನರಲ್ ಜಿಯಾ ಮೊದಲಬಾರಿಗೆ ಗಫಾರ್‌ಖಾನರನ್ನು ದೇಶಪ್ರೇಮಿ ಎಂದು ಕರೆದದ್ದುಂಟು. ಆದರೆ ಅವರ ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ಒಪ್ಪಲಿಲ್ಲ. ಸಿಂಧ್ ಮತ್ತು ಬೆಲೂಚಿಸ್ತಾನಗಳಿಗೆ ಪ್ರವೇಶಿಸ ಕೂಡದೆಂದು ನಿರ್ಬಂಧ ಹಾಕಲಾಯಿತು. ಗಫಾರ್‌ಖಾನರು ಖತಿಗೊಂಡು ದೇಶವನ್ನು ಬಿಡುವುದಾಗಿ ಘೋಷಿಸಿದರು. ಮತ್ತೆ ೧೯೭೮ರಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಕಾಬೂಲಿಗೆ ತೆರಳಿದರು.

ಆರೋಗ್ಯ ಸುಧಾರಿಸಿದೊಡನೆ ಪಾಕಿಸ್ತಾನಕ್ಕೂ ಅಫ್ಘಾನಿಸ್ತಾನಕ್ಕೂ ಮಧ್ಯೆ ಬೆಳೆಯುತ್ತಿದ್ದ ದ್ವೇಷದ ಕಿಡಿಗಳನ್ನು ಶಮನ ಮಾಡಲು ಪ್ರಯತ್ನಿಸಿದರು. ಅಫ್‌ಘಾನಿಸ್ತಾನದ ದಂಗೆಕೋರರಿಗೆ ಆಶ್ರಯಕೊಟ್ಟು ಶಸ್ತ್ರಾಸ್ತ್ರಗಳನ್ನು ಒದಗಿಸಿ ಸಂಘರ್ಷವನ್ನು ಉಲ್ಬಣಗೊಳಿಸುವುದು ತಪ್ಪೆಂದು ಪಾಕಿಸ್ತಾನಿಗಳಿಗೆ ತಿಳಿಯ ಹೇಳಿದರು. ಆದರೆ ಆ ವೇಳೆಗೆ ಅಮೆರಿಕ ಅಂತರ್‌ರಾಷ್ಟ್ರೀಯ ಮಿಲಟರಿ ಪಿತೂರಿಗಳಲ್ಲಿ ತೊಡಗಿ ರಷ್ಯದ ತೇಜೋವಧೆಗಾಗಿ ಹಣತೊಟ್ಟು ಪಾಕಿಸ್ತಾನವನ್ನು ತನ್ನ ಕಕ್ಷೆಯೊಳಗೆ ಬಂಧಿಸಿಬಿಟ್ಟಿದ್ದಿತು. ಯುದ್ಧ ಪರಿಸ್ಥಿತಿ ಬೆಳೆಯುತ್ತಲೇ ಇತ್ತು.

೧೯೮೩ರಲ್ಲಿ ಗಫಾರ್‌ಖಾನರು ಎಲ್ಲ ರೀತಿಯ ರಾಜಕೀಯ ಚಟುವಟಿಕೆಗಳನ್ನೂ ದೂರಮಾಡಿ ತಮ್ಮ ಗ್ರಾಮ ಪುನರ್‌ರಚನಾ ಕಾರ್ಯದಲ್ಲಿ ಸಂಪೂರ್ಣವಾಗಿ ಲೀನವಾಗಿ ಬಿಟ್ಟರೂ ಗುಡ್ಡಗಾಡಿನ ಬುಡಕಟ್ಟು ಜನಾಂಗಗಳ ಜೀವನ ಸುಧಾರಣೆಗೆ ಸತತವಾಗಿ ದುಡಿಯಲು ಸಂಕಲ್ಪ ಮಾಡಿದರು. ಗಡಿಯ ಪ್ರದೇಶದಲ್ಲಿದ್ದ ಶಾಂತಿಪ್ರಿಯ ಅಫ್‌ಘನರೂ, ಪಾಕಿಸ್ತಾನದ ಪಠಾಣರೂ, ಅಜ್ಞಾತವಾಸಿಗಳಾಗಿದ್ದ ಅನೇಕ ಗಿರಿಜನರೂ ಅವರ ಬಳಿ

ಮಾರ್ಗದರ್ಶನಕ್ಕಾಗಿ ಬರುತ್ತಿದ್ದರು. ಅಹಿಂಸಾತ್ಮಕ ಕ್ರಾಂತಿ ಯಾವಾಗಲೂ ನಿಶ್ಶಬ್ದವಾಗಿ ರಚನಾತ್ಮಕ ಕಾರ್ಯಕ್ರಮಗಳಿಂದ ಜನಜಾಗೃತಿಯ ಮೂಲಕ ಮಾತ್ರ ಸಫಲವಾಗುವುದೆಂದು ಖಾನರು ಬೋಧಿಸುತ್ತಿದ್ದರು. ಸಣ್ಣ ಕುಟೀರದಲ್ಲಿ ತಪಸ್ವಿಯಂತೆ ಜೀವಿಸುತ್ತಿದ್ದ ಈ ವೃದ್ಧ ಗಾಂಧೀವಾದಿ ಜಗತ್ತಿನ ಅನೇಕ ಶಾಂತಿಪ್ರಿಯ ಜಿಜ್ಞಾಸುಗಳನ್ನು ತಮ್ಮ ಬಳಿಗೆ ಆಕರ್ಷಿಸುತ್ತಿದ್ದರು. ವಿಶ್ವಮಾನವ ಮನೋಧರ್ಮಕ್ಕೆ ಅಹಿಂಸೆಯ ಸಾಧನೆ ಏಕೈಕ ರಾಜಮಾರ್ಗ, ಜಗತ್ತು ಒಂದಲ್ಲ ಒಂದು ದಿನ ಈ ಸತ್ಯಕ್ಕೆ ಶರಣು ಬಂದೇ ತೀರುತ್ತದೆ ಎಂಬ ಗಾಢ ನಂಬಿಕೆ ಅವರಿಗಿತ್ತು.

೧೯೮೫ ರ ಡಿಸೆಂಬರಿನಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಶತಮಾನೋತ್ಸವ. ಐತಿಹಾಸಿಕ ಸಮಾರಂಭಕ್ಕೆ ಖಾನ್ ಅಬ್ದುಲ್ ಗಫಾರ್ ಖಾನರು ಮುಖ್ಯ ಅತಿಥಿಯಾಗಿ ಬಂದು ಬೊಂಬಾಯಿನ ಉತ್ಸವದಲ್ಲಿ ಅಮೋಘ ಭಾಷಣ ಮಾಡಿದರು. ನಲವತ್ತು ವರ್ಷಗಳು ಕಳೆದರೂ ಭಾರತದಲ್ಲಿ ಜಾತೀಯ ಸಂಘರ್ಷಗಳು, ಅಸ್ಪೃಶ್ಯತೆ, ದಾರಿದ್ರ್ಯ. ಗ್ರಾಮಗಳ ಹಿಂದುಳಿಕೆ ಮತ್ತು ಪಾಶ್ಚಾತ್ಯ ಅನುಕರಣೆಯ ಅಸಹ್ಯ ಬೆಳವಣಿಗೆಗಳನ್ನು ಖಂಡಿಸಿದರು. ಮಹಾತ್ಮಾಜಿ ಅವರು ರೂಪಿಸಿಕೊಟ್ಟ ಸ್ವರಾಜ್ಯದ ಚಿತ್ರ ಮುಳುಗಿ ಹೋಗುತ್ತಿದೆ ಎಂದು ಎಚ್ಚರಿಸಿದರು. "ಆತ್ಮ ನಿರೀಕ್ಷಣೆ ಮಾಡಿಕೊಂಡು ನವಭಾರತದ ನವಸಂಸ್ಕೃತಿಯನ್ನು ಜಗತ್ತಿಗೆಲ್ಲ ಆದರ್ಶವಾಗುವಂತೆ ಪರಿವರ್ತಿಸೋಣ. ಪಾಕಿಸ್ತಾನ ಮತ್ತು ಭಾರತಗಳಲ್ಲಿ ನಡೆಯುತ್ತಿರುವ ಭ್ರಾತೃಹತ್ಯೆ, ಮತದ್ವೇಷ, ಮಿತ್ರದ್ರೋಹಗಳನ್ನು ಗಾಂಧೀ ಮಾರ್ಗದಿಂದ ಶಮನ ಮಾಡಲು ಸಂಕಲ್ಪ ಬದ್ಧರಾಗೋಣ" ಎಂದರು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನೂರು ವರ್ಷಗಳ ದೀರ್ಘ ಇತಿಹಾಸದಲ್ಲಿ ಈ ಪುಣ್ಯ ಭೂಮಿ ಜನ್ಮಕೊಟ್ಟ ವೀರಾಧಿವೀರ ಜನನಾಯಕರ ಪಂಕ್ತಿಯಲ್ಲಿ ಗಫಾರ್‌ಖಾನ್ ಅಗ್ರಿಮ್ಯದಲ್ಲಿ ಪುಟವಿಟ್ಟ ಬಂಗಾರ. ಶತಮಾನೋತ್ಸವದಲ್ಲಿ ಅವರ ಸಾನ್ನಿಧ್ಯ ಭಾಗ್ಯ ದೊರೆತುದು ಒಂದು ಅಪೂರ್ವ ಸಂದರ್ಭ. ಜರ್ಜರಿತವಾಗಿದ್ದರೂ ಕಿಂಚಿತ್ತೂ ಕಳೆಗುಂದದೆ ಒಂದು ಗಂಭೀರ ನಿಲುಭಂಗಿಯಲ್ಲಿ ನಿಂತು ಅವರು ದಾಸ್ಯದಲ್ಲಿದ್ದಾಗ ಭಾರತದ ಆತ್ಮಪ್ರಜ್ಞೆಯೇ ಮತ್ತೊಮ್ಮೆ ಮೂರ್ತಿವೆತ್ತು ಪ್ರಜ್ವಲಿಸಿದಂತಾ

ಯಿತು. ಮಹಾತ್ಮ ಗಾಂಧೀಯವರ ಬಲಿದಾನದ ರುದ್ರ ಗಂಭೀರ ಸಂದರ್ಭವನ್ನು ಖಾನರು ನೆನೆ-ನೆನೆದು ದುಃಖಿಸಿದರು. ಈ ದ್ವೇಷಾಸೂಯೆಗಳ ಕಾಳ್ಗಿಚ್ಚಿನಲ್ಲಿ ದೇಶದ ಭವಿಷ್ಯವನ್ನು ಕರಾಳವಾಗಿಸಬೇಡಿ ಎಂದು ಗಂಟೆ ಹೊಡೆದಂತೆ ಎಚ್ಚರಿಸಿದರು. ಮತ್ತೆ ಗಾಂಧೀ ಮಾರ್ಗಕ್ಕೆ ಮರಳದೇ ಜಗತ್ತಿಗೆ ಅನ್ಯ ವಿಮೋಚನಾ ಮಾರ್ಗವೇ ಇಲ್ಲ ಎಂದು ಸಾರಿದರು. ಅಹಿಂಸಾಯುಗ ಬರಲಿದೆ, ಮಾನವನ ಮಾನವೀಯತೆ ಆಗ ಸುಪ್ರತಿಷ್ಠಿತವಾದೀತು; ಧರ್ಮಪ್ರಜ್ಞೆ ನಿಜವಾದ ದಾರಿದೀಪವಾಗಿ ನಮ್ಮೆಲ್ಲರ ಹೃದಯಗಳನ್ನು ತೊಳೆದು ನಿರ್ಮಲಗೊಳಿಸೀತು ಎಂಬ ಮಹದಾಸೆ ಅವರ ಮಾತುಗಳಲ್ಲಿ ತುಂಬಿ ನಿಂತಿತ್ತು. ತೊಂಭತ್ತೈದ ವರ್ಷಗಳು ದಾಟಿದ ಈ ವೃದ್ಧ ತಪಸ್ವಿಯ ವಾಣಿ ಅವಿಸ್ಮರಣೀಯವಾಗಿ ಮೊಳಗಿತು. ಅದೇ ಅವರ ಕೊನೆಯ ಸಾರ್ವಜನಿಕ ಭಾಷಣ. ಮುಂದೆ ತೀವ್ರ ಅನಾರೋಗ್ಯದಿಂದ ಬಳಲಿ ನಿಶ್ಶಕ್ತರಾದರು.

ಮತ್ತೆ ಮತ್ತೆ ಭಾರತ ಜನನಿಯ ಮಡಿಲಿಗೇ ಬಂದು ಇಲ್ಲಿನ ಪ್ರೇಮಮಯ ಪರಿಸರದಲ್ಲಿ ತಮ್ಮ ಚಿಕಿತ್ಸೆಯ ಸಾಂತ್ವನ ಪಡೆಯ ಬಯಸಿದರು. ೧೯೮೭ರಲ್ಲಿ ಬೊಂಬಾಯಿನ ಪ್ರಸಿದ್ಧ ಚಿಕಿತ್ಸಾಲಯದಲ್ಲಿದ್ದು ಅನೇಕ ವಾರಗಳ ವೈದ್ಯಕೀಯ ಶುಶ್ರೂಷೆ ಪಡೆದರು. ಹಲವು ಸಾರಿ ಅವರ ದೇಹಸ್ಥಿತಿ ಉತ್ಕಟತೆಯ ಸಮಯಗಳನ್ನು ಹಾದು ಸ್ವಲ್ಪ ಸ್ಥಿರಸ್ಥಿತಿಗೆ ಬಂದಿತ್ತು.

ತಮ್ಮ ಜನ್ಮ ಸ್ಥಳಕ್ಕೆ ಹಿಂತಿರುಗುವ ಮುನ್ನ ದೆಹಲಿಯಲ್ಲಿ ಅವರನ್ನು ಕರೆಸಿಕೊಂಡು ಈ ರಾಷ್ಟ್ರದ ಅತ್ಯುನ್ನತ ಗೌರವ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿಯನ್ನು ನೀಡಲಾಯಿತು.

ಹಠಾತ್ತನೆ ಮತ್ತೆ ಅವರಿಗೆ ಪ್ರಜ್ಞೆ ತಪ್ಪಿ ದೆಹಲಿಯಲ್ಲಿನ ಕೇಂದ್ರ ವೈದ್ಯಕೀಯ ಸಂಸ್ಥೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಯಿತು. ರಾಷ್ಟ್ರಾಧ್ಯಕ್ಷರೂ ಪ್ರಧಾನಿ ರಾಜೀವ್ ಗಾಂಧೀಯವರೂ ತುಂಬ ಆತಂಕಗೊಂಡು ಅಲ್ಲಿನ ಅತ್ಯುತ್ಕೃಷ್ಟ ವೈದ್ಯರ ಸೇವೆಯನ್ನು ಅವರಿಗೆ ಒದಗಿಸಿದರು. ದಿನದಿನಕ್ಕೆ ಕ್ಷೀಣಿಸುತ್ತಲೇ ಹೋದ ಅವರ ದೇಹಸ್ಥಿತಿಯಿಂದ ತುಂಬ ವ್ಯಾಕುಲಗೊಂಡ ಅವರ ಪುತ್ರ ವಲೀಖಾನರು ತಂದೆಯ ಇಚ್ಛೆಯಂತೆ ಪೆಷಾವರಿಗೇ ಕರೆದೊಯ್ದರು. ತಮ್ಮ ಕೊನೆಯುಸಿರನ್ನು ತಮ್ಮ ಪೂರ್ವಜರ ನಿವಾಸಸ್ಥಾನ

ದಲ್ಲೇ ಕಳೆಯಬೇಕೆಂದು ಗಫಾರ್‌ಖಾನರು ಉತ್ಕಟೇಚ್ಛೆಯನ್ನು ಬರೆದಿಟ್ಟಿದ್ದರು. ೧೯೮೮ರ ಜನವರಿ ೨೦ ಬುಧವಾರ ಮುಂಜಾನೆ ಪೆಷಾವರಿನ ಲೇಡಿ ರೀಡಿಂಗ್ ಆಸ್ಪತ್ರೆಯಲ್ಲಿ ತಮ್ಮ ತೊಂಬತ್ತೆಂಟನೇ ವಯಸ್ಸಿನಲ್ಲಿ ಈ ಮಹಾಪುರುಷ ನಿಧನರಾದರು. ಅವರ ಪಾರ್ಥಿವ ಶರೀರವನ್ನು ಜಲಾಲಾಬಾದಿನ ಅವರ ಮನೆಗೆ ತರಲಾಯಿತು. ಭಾರತ ಪಾಕಿಸ್ತಾನ ಮತ್ತು ಅಫ್‌ಘಾನಿಸ್ತಾನದ ಸರ್ಕಾರಗಳೂ ಪ್ರಜೆಗಳೂ ಅಂತಿಮ ಗೌರವಸಲ್ಲಿಸಿದರು. ಭಾರತ ಸರ್ಕಾರ ಐದು ದಿನಗಳ ರಾಷ್ಟ್ರೀಯ ಶೋಕ ಆಚರಿಸಿತು. ಈ ಮೇರು ಪುರುಷನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಭಾರತದ ಪ್ರಧಾನಿ ರಾಜೀವ್ ಗಾಂಧಿಯವರೇ ಒಂದು ಉನ್ನತ ರಾಯಭಾರದೊಡನೆ ಜಲಾಲಾಬಾದಿಗೆ ಪ್ರಯಾಣ ಮಾಡಿದರು. ರಾಜಕೀಯ ದೃಷ್ಟಿಯಿಂದ ಯಾವ ಅಧಿಕಾರಸ್ಥಾನವನ್ನೂ ಹೊಂದಿಲ್ಲದ ಒಬ್ಬ ಮಹಾಪುರುಷನಿಗೆ ಅಪೂರ್ವ ಗೌರವ ಸಲ್ಲಿಸಲು ಜಗತ್ತಿನ ಅನೇಕ ರಾಷ್ಟ್ರಗಳ ಪ್ರತಿನಿಧಿಗಳು ಹಾಜರಿದ್ದರು. ೧೯೮೮ರ ಜನವರಿ ಇಪ್ಪತ್ತೆರಡನೇ ತಾರೀಕು ಶುಕ್ರವಾರ ಈ ಅದ್ವಿತೀಯ ಅಹಿಂಸಾಯೋಧನ ಪಾರ್ಥಿವ ಶರೀರ ಅವರ ತಾಯ್ನಾಡಿನ ಭೂಗರ್ಭದಲ್ಲಿ ಲೀನವಾಯಿತು. ಅವರ ಯಶೋಕಾಯ ಮಾನವ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಬೆಳಗುತ್ತಲೇ ಇದೆ.

ಪರಿಶಿಷ್ಟ-೧

ಅಹಿಂಸಾಮೂರ್ತಿ ಬಾದಷಾಖಾನ್

ವರ್ತಮಾನ ಕಾಲದ ಇತಿಹಾಸವನ್ನು ಮುಂದೆ ಬರೆಯುವಾಗ ಬಹುಶಃ ಈಗ ಅನೇಕ ಉನ್ನತ ಸ್ಥಾನಗಳನ್ನಲಂಕರಿಸಿರುವವರಲ್ಲಿ ಕೇವಲ ಕೆಲವರ ಹೆಸರು ಮಾತ್ರ ಉಳಿದೀತು. ಅಂಥ ವಿರಳರಲ್ಲಿ ಭವ್ಯ ಮೂರ್ತಿಯಾದ ಬಾದ್‌ಷಾಖಾನರ ಪ್ರಖ್ಯಾತ ವ್ಯಕ್ತಿತ್ವ ಕಂಗೊಳಿಸುತ್ತದೆ. ನೇರ ಮತ್ತು ಸರಳವಾದ, ವಿಶ್ವಸನೀಯವೂ ಸತ್ಯನಿಷ್ಠವೂ ಆಗಿ ದೀರ್ಘ ಕಾಲದ ಕಠಿಣ ಕಷ್ಟಗಳ ಅಗ್ನಿದಿವ್ಯದಲ್ಲಿ ಪುಟಗೊಂಡ ಧವಳಶೀಲ ಅವರದು. ತನ್ನ ಜೀವನೋದ್ದೇಶದಲ್ಲಿ ಶ್ರದ್ಧೆಯಿಟ್ಟು ವ್ರತನಿಷ್ಠೆಯಿಂದ ವಜ್ರಕಾಯರಾದರೂ ಮಾನವ ಪ್ರೇಮದ ಮೃದುವಾದ ನಮ್ರತೆ ತುಂಬಿತುಳುಕುವ ಅಂತರ್ಯ ಬಾದ್‌ಷಾಖಾನರ ವಿಶಿಷ್ಟಗುಣ. ಅವರ ಸುತ್ತ ನೆರೆದು ಗೌರವಾದರಗಳಿಂದ ಮಾರ್ಗದರ್ಶನಕ್ಕಾಗಿ ಕಾದು ನಿಂತ ಅನುಯಾಯಿಗಳ ಮಧ್ಯೆ ಅವರನ್ನು ನೋಡಬೇಕು. ತನ್ನ ಸುಲಲಿತ ಮಾತೃಭಾಷೆ ಪುಷ್ಟು ಭಾಷೆಯಲ್ಲಿ ತನ್ನವರೊಡನೆ ಸಂಭಾಷಿಸುವ ರೀತಿ, ಒಂಬಾಲಕರ ಅವಗುಣಗಳಿಗಾಗಿ ಭರ್ತ್ಸನೆ ಮಾಡುವಾಗ ಅನುನಯದಿಂದಲೂ ಅನುಕಂಪದಿಂದಲೂ ತುಂಬಿ ನುಡಿಯುತ್ತಿದ್ದ ಮಾತುಕತೆ ಸೂರೆಗೊಳ್ಳುವಂತಿರುತ್ತಿತ್ತು. ಮಕ್ಕಳೊಡನೆ ಒಂದಾಗಿ ಬೆರೆತು ತನ್ಮಯತೆಯಿಂದ ಆಡುತ್ತ ಸಂತೋಷದಿಂದ ನಗುವಾಗ ಬಾದ್‌ಷಾಖಾನರ ಒರಟು ಮುಖದ ಕಾಂತಿ ಅವರ ಹೊಳಪು ಕಣ್ಣುಗಳಲ್ಲಿ ಹೊರಸೂಸುತ್ತಿತ್ತು.

ನಮ್ಮ ಗಡಿನಾಡು ಪ್ರಾಂತದಲ್ಲಿ ಆ ಸಮರೋತ್ಸಾಹ ಜನಾಂಗವನ್ನು ಅಹಿಂಸಾ ಸಿದ್ಧಾಂತಕ್ಕೆ ಪರಿವರ್ತಿಸಿದ ಘಟನೆ ಬಿಟ್ಟರೆ ಬೇರಾವುದೂ ನಮ್ಮನ್ನು ಆಶ್ಚರ್ಯಗೊಳಿಸುವುದಿಲ್ಲ. ಆ ಪರಿವರ್ತನೆ ಇನ್ನೂ ಪೂರ್ಣವಾಗಿಲ್ಲವೆಂಬುದು

ನಿಜ. ಪಠಾಣರಿಗೆ ಆ ಸಿದ್ಧಾಂತದ ದರ್ಶನವಾಗಲಿ ತತ್ವಜ್ಞಾನವಾಗಲಿ ಮುಖ್ಯವೆನಿಸಿಲ್ಲ. ಆದರೆ ಅಹಿಂಸಾ ಮಾರ್ಗದ ಅನುಷ್ಠಾನದಲ್ಲಿ ಅತ್ಯಂತ ನಿಷ್ಠೆಯಿಂದ ನಡೆದಿದ್ದಾರೆ. ತನ್ನ ಮಗು ಅಥವ ಸೋದರನಿಗಿಂತ ತನ್ನ ಬಂದೂಕನ್ನು ಪ್ರೀತಿಸುತ್ತಿದ್ದ ಪಠಾಣ, ಪ್ರಾಣಕ್ಕೆ ಬೆಲೆಕೊಡದೆ ಸಾವನ್ನೂ ಧಿಕ್ಕರಿಸುತ್ತಿದ್ದ ಪಠಾಣ, ಕಿಂಚಿತ್ ಅವಮಾನವಾದರೂ ಚಾಕುವಿನಿಂದ ಉತ್ತರಿಸುತ್ತಿದ್ದ ಪಠಾಣ ಹಠಾತ್ತನೆ ಭಾರತದ ಅಹಿಂಸಾತ್ಮಕ ಯೋಧರಲ್ಲಿ ಅತ್ಯಂತ ಧೀರನೂ, ಸಹನಾಶೀಲನೂ ಆಗಿಬಿಟ್ಟ. ಈ ಪರಿವರ್ತನೆ ನಿಃಸ್ಸಂದೇಹವಾಗಿ ಒಬ್ಬನೇ ಮಹಾನ್ ವ್ಯಕ್ತಿ ಖಾನ್ ಅಬ್ದುಲ್ ಗಫಾರ್‌ಖಾನರ ಪ್ರಭಾವದಿಂದಾಗಿದೆ. ಅವರ ಮಾತು ಪಠಾಣರಿಗೆ ಪ್ರಶ್ನಾತೀತ ಪ್ರಮಾಣ. ಅವರಲ್ಲಿ ಅತ್ಯಂತ ಪ್ರೇಮ ಮತ್ತು ವಿಶ್ವಾಸವನ್ನಿಟ್ಟರು. ಸ್ವತಃ ಒಬ್ಬ ನಿಜ ಪಠಾಣರಾದ ಬಾದ್‌ಷಾಖಾನ್ ಅಹಿಂಸಾ ಧರ್ಮವನ್ನು ಅಷ್ಟು ಶ್ರದ್ಧೆಯಿಂದಲೂ, ಸಂಪೂರ್ಣವಾಗಿಯೂ ಅಂಗೀಕರಿಸಿದುದು ಆಶ್ಚರ್ಯವೇ ಸರಿ. ತಮ್ಮ ಜನಾಂಗದವರ ಮೇಲಷ್ಟೇ ಅಲ್ಲದೆ ಇಡೀ ಭಾರತ ಜನತೆಯ ಮೇಲೆ ಬಾದ್‌ಷಾಖಾನರ ಪ್ರಭಾವ ಆಳವಾಗಿ ಬೇರೂರಿದೆ.

ಜವಾಹರಲಾಲ್ ನೆಹರು

(ಮಹಮ್ಮದ್ ಯೂನಸರ "ಫ್ರಾಂಟಿಯರ್ ಸ್ಪೀಕ್ಸ್" ಮುನ್ನುಡಿಯಲ್ಲಿ)

ಲಾಲ್‌ಬಹದ್ದೂರ್ ಶಾಸ್ತ್ರಿ ಅವರಿಗೆ ಸಂದೇಶ

[ಶ್ರೀಮತಿ ಮದಾಲಸಾ ನಾರಾಯಣ್ ಜಮ್ನಲಾಲ ಬಜಾಜರ ಪುತ್ರಿ – ದಿವಂಗತ ಶ್ರೀಮನ್ನಾರಾಯಣ್ ಅವರ ಪತ್ನಿ. ಬಾದ್‌ಷಾಖಾನ್ ವರ್ಧಾದಲ್ಲಿ ಬಜಾಜರ ಅತಿಥಿಯಾಗಿ ಒಂದು ವರ್ಷವಿದ್ದಾಗ ಆಕೆ ಚಿಕ್ಕ ಹುಡುಗಿ. ಗಫಾರ್‌ಖಾನರ ಪ್ರೀತಿಪಾತ್ರಳಾದ ಮಗಳು ಮೆಹರ್‌ತಾಜ್ ವರ್ಧಾದ ಮಹಿಳಾಶ್ರಮ ಸೇರಿದಾಗ ಬಜಾಜರ ಕುಟುಂಬದೊಳಗೆ ಸೇರಿ ಹೋದರು. ಆ ಬಾಂಧವ್ಯ ಕೊನೆಯ ದಿನಗಳ ವರೆಗೂ ಇತ್ತು. ೧೯೬೫ರಲ್ಲಿ ಶ್ರೀ ಕಮಲನಯನ ಬಜಾಜರೂ ಶ್ರೀಮತಿ ಮದಾಲಸಾ ಅವರೂ ಕಾಬೂಲಿಗೆ ಹೋಗಿ ಖಾನ್ ಅಬ್ದುಲ್ ಗಫಾರ್‌ಖಾನ್ ಅವರೊಡನೆ ಹದಿನೈದು ದಿನ ಇದ್ದು ಭಾರತಕ್ಕೆ ಹಿಂತಿರುಗಿದಾಗ ಖಾನರು ಆಗಿನ ಭಾರತದ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೆ ಒಂದು ಸಂದೇಶ ಕಳುಹಿಸಿದರು. ಶ್ರೀಮತಿ ಮದಾಲಸಾ ತಾ॥ ೧೭–೯–೧೯೬೫ ರಲ್ಲಿ ಶಾಸ್ತ್ರೀಜಿಯವರಿಗೆ ಪತ್ರ ಬರೆದು ಆ ಸಂದೇಶವನ್ನು ನಿವೇದಿಸಿದರು. ಬಾದ್‌ಷಾಖಾನರ ಬಗ್ಗೆ ಶ್ರೀಮತಿ ಮದಾಲಸಾ ಹಿಂದಿಯಲ್ಲಿ ಬರೆದ ಜೀವನ ಚರಿತ್ರೆಯಲ್ಲಿ ಈ ಪತ್ರ ಪ್ರಕಟಿಸಿದ್ದಾರೆ. ಅದರ ಸರಳಾನುವಾದ ಇಲ್ಲಿದೆ.]

ಶ್ರದ್ಧೇಯ ಶ್ರೀ ಶಾಸ್ತ್ರೀಜಿ,

"..................... ಕಾಬೂಲಿನಲ್ಲಿ ಬಾದ್‌ಷಾಖಾನರ ಸ್ನೇಹ ಸಾನ್ನಿಧ್ಯದಲ್ಲಿ ಹದಿನೈದು ದಿನಗಳು ಕಳೆದು ಹಿಂತಿರುಗಿ ಬಂದೆ. ದೆಹಲಿಯಲ್ಲಿ ನಿಮ್ಮನ್ನು ಕಾಣಲಾಗಲಿಲ್ಲ. ದಯಮಾಡಿ ಕ್ಷಮಿಸಿ.......

ಅಬ್ಬಾಜಾನ್* ಮನಬಿಚ್ಚಿ ನಮ್ಮೊಡನೆ ಮಾತನಾಡಿದರು. ಭಾರತದಲ್ಲಿ ನೀವೆಲ್ಲ ಕೈಗೊಂಡ ಮಹತ್ವದ ಕಾರ್ಯಗಳನ್ನು ನಾವು ವಿವರಿಸಿದೆವು. ಆತ್ಮೀಯತೆಯಿಂದ ಅಬ್ಬಾಜಾನರು ತಲ್ಲೀನರಾಗಿ ಕೇಳಿದರು. ಬೀಳ್ಕೊಡುವಾಗ

ಅವರು ನಿಮಗಾಗಿ ಕೊಟ್ಟಿರುವ ಸಂದೇಶವನ್ನು ಈ ಮೂಲಕ ತಿಳಿಸು ತ್ತಿದ್ದೇನೆ. ತಡವಾದುದಕ್ಕೆ ಕ್ಷಮಿಸಿ.

"ಜಗತ್ತಿನಲ್ಲಿ ಪಾಪ ಹೆಚ್ಚಾದಾಗ ಮಹಾತ್ಮರು ಅವತರಿಸುತ್ತಾರೆ. ದೇವರ ಮಹಿಮೆಯನ್ನು ಚಿತ್ರಿಸುತ್ತಾರೆ. ಸತ್ಯವೇ ನಿಜವಾದ ಧರ್ಮ. ಸೇವೆಯ ಮೂಲಕ ಸತ್ಯದ ಸಾಕ್ಷಾತ್ಕಾರ. ಅದೇ ಧರ್ಮ. ನಾವೆಲ್ಲರೂ ಭಗವಂತನ ಮಕ್ಕಳೆಂದೇ ಹೇಳುತ್ತೇವೆ. ಈ ಭಾವನೆಯಿಂದಲೇ ರಾಷ್ಟ್ರದ ಉತ್ಥಾನ. ಆದರೆ ಈಗ ಧರ್ಮದ ಹೆಸರಿನಲ್ಲಿ ಒಡೆದು ಹೋಗುತ್ತಿದ್ದೇವೆ. ದ್ವೇಷಾಸೂಯೆಗಳು ಹೆಚ್ಚುತ್ತಿವೆ. ಇದು ಖಂಡಿತ ಧರ್ಮದ ಗುಣ ಅಲ್ಲ. ಈ ಉದ್ರೇಕವನ್ನು ತಡೆಯಬೇಕು. ಶಿಕ್ಷಣ ಪದ್ಧತಿ ಬದಲಾಗಬೇಕು. ಧರ್ಮದ ನಿಜ ಸ್ವರೂಪವನ್ನು ಎಳೆಯರ ಮನಸ್ಸಿನಲ್ಲಿ ಚಿತ್ರಿಸಬೇಕು. ಸಮಸ್ತ ಮಾನವರು ದೇವರ ಸೃಷ್ಟಿ. ಅವರು ಪ್ರಥಮತಃ ಅವನ ಆಳ್ವಿಕೆಯ ಪ್ರಜೆಗಳು. ಅವರಿಗೆ ನ್ಯಾಯ ದೊರೆಯಬೇಕು.

"...ಪುತ್ರಿ ಮದಾಲಸಾ, ಭಾರತಕ್ಕೆ ಮರಳಿದಾಗ ಗಾಂಧೀಜಿ ನಮಗೆ ಕೊಟ್ಟ ವಚನವನ್ನು ಪಾಲಿಸಬೇಕೆಂದು ಪ್ರಧಾನ ಮಂತ್ರಿ ಶಾಸ್ತ್ರೀ ಅವರಿಗೂ ಗುಲ್ಜಾರಿ ಲಾಲ್‌ನಂದಾ* ಅವರಿಗೂ ತಿಳಿಸು. ನಮ್ಮ ಜನಾಂಗವನ್ನು ಪಾಕಿಸ್ತಾನದ ಅನ್ಯಾಯಗಳ ಸೆರೆಯಿಂದ ಬಿಡಿಸಿ ಸ್ವತಂತ್ರವಾಗಿ ಬಾಳಲು ಸಹಾಯಕರಾಗ ಬೇಕೆಂದು ಅವರಿಗೆ ತಿಳಿಸು...

"ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನೇಕ ಅತ್ಯಾಚಾರಗಳ ಹೊರೆಯನ್ನು ನಾವು ಹೊತ್ತಿದ್ದೇವೆ. ಬಡತನದಲ್ಲಿ ಬವಣೆಪಡುತ್ತಿದ್ದೇವೆ. ಇಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಹಾಗೂ ಅಂಬರ್ ಚರಕದ ಪ್ರಚಾರ ಮಾಡಲು ಯಾರನ್ನಾದರೂ ಕಳುಹಿಸಲು ಶ್ರೀ ದೇಬರ್‌ಭಾಯ್* ಅವರಿಗೆ ಹೇಳು. ನಮ್ಮ ಪಠಾಣ ಬಂಧುಗಳು ಸರಳ ಜೀವಿಗಳು. ಹೃದಯ ವಂತಿಕೆಯಿಂದ ಒಟ್ಟಾಗಿ ಬಾಳುವವರು. ಭಾರತದಂತಹ ಶಕ್ತಿಶಾಲೀ ರಾಷ್ಟ್ರದ ಬೆಂಬಲ ತಮಗಿದೆ ಎಂದು ತಿಳಿದರೆ ಮನಃಪೂರ್ವಕ ಸಹಕಾರ ನೀಡುತ್ತಾರೆ. ಈ ಬೆಂಬಲ ಸ್ಪಷ್ಟವಾಗುವವರೆಗೂ ವಿಶ್ವಾಸ ಹುಟ್ಟುವು ದಿಲ್ಲ. ...ನಾವು ಮೂಲತಃ ಆರ್ಯರು. ಸದಾ ಆರ್ಯಾವರ್ತದಲ್ಲಿ ದ್ದವರು. ಮುಂದೆಯೂ ಇರುವವರು. ಅಫ್‌ಘಾನಿಸ್ತಾನದಂತೆಯೇ

ನೀವೂ ನೆರವು ನೀಡಿ ನಮ್ಮನ್ನು ದಾಸ್ಯಗಳಿಂದ ಮುಕ್ತಗೊಳಿಸಿ. ನಮ್ಮನ್ನು ಬಿಡಿಸಿಕೊಳ್ಳಿ."

ಅಬ್ಬಾಜಾನರು ಆಗ್ರಹಪೂರ್ವಕವಾಗಿ ಪದೇ ಪದೇ ಹೃದಯಾಂತರಾಳದಿಂದ ನೀಡಿದ ಈ ಮಾತುಗಳ ಸಂದೇಶವನ್ನು ನಿಮ್ಮಲ್ಲಿ ನಿವೇದಿಸುತ್ತಿದ್ದೇನೆ.

ಖಟಮಂಡು : ನೇಪಾಳ — ವಿನೀತ ಸೋದರಿ,

ತಾ॥ ೧೭-೯-೧೯೬೬ — ಮದಾಲಸಾ

—

* ಬಾದಷಾಖಾನರನ್ನು ಪ್ರೀತಿಯಿಂದ ಅಬ್ಬಾಜಾನ್ ಎಂದಿದ್ದಾರೆ.

* ಆಗಿನ ಪ್ರಧಾನ ಮಂತ್ರಿ

* ಖಾದಿ–ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರು.

ಪರಿಶಿಷ್ಟ–೩

ಸಂಯುಕ್ತ ಹೇಳಿಕೆ

[೧೯೬೯ ರಲ್ಲಿ ದೇಶದ ಅನೇಕ ಕಡೆ ದಾರುಣವಾದ ಮತೀಯ ಘರ್ಷಣೆಗಳು ನಡೆಯುತ್ತಿದ್ದಾಗ ಖಾನ್‌ಅಬ್ದುಲ್ ಗಫಾರ್‌ಖಾನರು ಭಾರತದಲ್ಲಿ ಸಂಚಾರಮಾಡುತ್ತಿದ್ದರು. ನವೆಂಬರ್ ೭, ೧೯೬೯ ರಂದು ಸೇವಾಗ್ರಾಮದ ಗಾಂಧೀ ಕುಟೀರದಿಂದ ಆಚಾರ್ಯ ವಿನೋಬಾ ಮತ್ತು ಜಯಪ್ರಕಾಶ ನಾರಾಯಣರೊಡನೆ ಬಾದ್‌ಷಾಖಾನರು ಸಹಿ ಹಾಕಿದ ಒಂದು ಮನವಿಯನ್ನು ಪ್ರಕಟಿಸಿದರು. ಅನುವಾದಿಸಿರುವ ಅದರ ಪಾಠ ಇಲ್ಲಿದೆ.]

ಇಂದು ದೇಶದಲ್ಲಿ ಉಂಟಾಗಿರುವ ಪರಿಸ್ಥಿತಿ ಎಲ್ಲರನ್ನೂ ಗಂಭೀರ ಚಿಂತನೆಗೆ ಈಡು ಮಾಡಿದೆ. ಬಡತನ, ಸಾಮಾಜಿಕ ಅನ್ಯಾಯಗಳು, ಶೋಷಣೆಗಳನ್ನು ಹೋಗಲಾಡಿಸುವುದೇ ಸ್ವಾತಂತ್ರ್ಯ ಪಡೆಯುವುದರ ಉದ್ದೇಶವಾಗಿದ್ದಿತು. ಆದರೆ ಈ ಮೂಲಭೂತ ಸಮಸ್ಯೆಗಳು ಹಾಗೆಯೇ ಉಳಿದಿವೆ. ಅಷ್ಟೇ ಅಲ್ಲ ಸ್ವಾತಂತ್ರ್ಯ ನಂತರದ ಈ ಅವಧಿಯಲ್ಲಿ ಅನೇಕ ಹೊಸ ಸಮಸ್ಯೆಗಳು ತಲೆ ಎತ್ತಿವೆ. ಜೀವನದ ವಿವಿಧ ಕ್ಷೇತ್ರಗಳಲ್ಲಿ ಹಿಂಸಾಚಾರ ಮತ್ತು ತಿರಸ್ಕಾರ ಭಾವನೆಗಳು ತೀವ್ರವಾಗಿ ಬೆಳೆದಿವೆ. ರಾಷ್ಟ್ರಹಿತವನ್ನು ಚಿಂತಿಸುವ ಬದಲು ಮತಧರ್ಮ, ಭಾಷೆ, ಸಂಪ್ರದಾಯ, ಜಾತಿ ಮುಂತಾದ ಸಂಕುಚಿತ ದೃಷ್ಟಿ ಮನೆಮಾಡುತ್ತಿದೆ. ಪಕ್ಷಹಿತ ಸಾಧನೆಗಾಗಿ ಈ ಆವೇಶಪೂರ್ಣ ಭಾವನೆಗಳನ್ನು ರಾಜಕೀಯ ಪಕ್ಷಗಳು ಬಳಸಿಕೊಳ್ಳುತ್ತಿರುವುದು ನಮ್ಮ ದೌರ್ಭಾಗ್ಯ. ಈಚಿನ ಕೆಲವು ದಿನಗಳಲ್ಲಿ ಮತೀಯ ದ್ವೇಷದಿಂದಾದ ದಂಗೆಗಳು ರಾಷ್ಟ್ರಜೀವನಕ್ಕೆ ವಿಷ ಬೆರೆಸುತ್ತಿದೆ. ಧರ್ಮದ ಹೆಸರಿನಲ್ಲಿ ಸಂಪ್ರದಾಯಿಕತೆ, ವಿಧ್ವಂಸಕ ದಂಗೆಯೇಳುವುದು ಅಮಾನುಷ ಕೃತ್ಯವೇ ಸರಿ. ಯಾವ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಬದಲಾಗಿ ಅದು ನ್ಯಾಯಗಳನ್ನು ಬೋಧಿಸುವ ಕ್ರಿಯೆ. ಮಾನವ ಕಲ್ಯಾಣವೇ ಅದರ ಗುರಿ. ಇಂಥ ವಿಧ್ವಂಸಕತೆಯಿಂದ ದೇಶ ದುರ್ಬಲವಾಗುತ್ತದೆ. ಸಮಾಜ

ಹರಿದು ಹಂಚಾಗುತ್ತದೆ. ನಿರಪರಾಧಿ ಜನರು ವಿನಾಶವಾಗುತ್ತಾರೆ. ದೇಶದೊಳಗಿನ ಮತ್ತು ಹೊರಗಿನ ಹಿಮ್ಮೆದಿಯ ದೃಷ್ಟಿಯಿಂದ ಈ ದಂಗೆಗಳು ಅತ್ಯಂತ ವಿಪತ್ಕಾರಿ ಎಂದರಿಯಬೇಕು.

ಅಧಿಕಾರದ ಆಕ್ರಮಣಕ್ಕಾಗಿ ರಾಜಕೀಯ ಕ್ಷೇತ್ರದಲ್ಲಾಗುತ್ತಿರುವ ಸಂಘರ್ಷಗಳು ದೇಶವನ್ನು ಅಸ್ಥಿರಗೊಳಿಸುತ್ತಿವೆ. ಪ್ರಜಾತಂತ್ರಕ್ಕೆ ಇದರಿಂದ ಅಪಾಯವಿದೆ. ಸಾರ್ವಜನಿಕ ಜೀವನದಲ್ಲಿ ನೈತಿಕತೆ ಮತ್ತು ಶುದ್ಧ ಚಾರಿತ್ರ್ಯ ಇಲ್ಲವಾಗುತ್ತವೆ. ರಾಷ್ಟ್ರದ ನೈತಿಕಬಲವೇ ಕುಂದಿಹೋಗುತ್ತಿದೆ. ಈ ಸಮಸ್ಯೆಗಳನ್ನೆದುರಿಸಿ ದೇಶವನ್ನು ರಕ್ಷಿಸುವಶಕ್ತಿ ಇಂದಿನ ರಾಜನೀತಿಯಲ್ಲಿ ಕಾಣದು.

ಜನಶಕ್ತಿಯ ಸಾಮರ್ಥ್ಯವೇ ಈ ಪರಿಸ್ಥಿತಿಯನ್ನು ಸುಧಾರಿಸಬಲ್ಲದು. ಜನತೆಯಲ್ಲಿ ಸೋದರ ಭಾವ, ಒಗ್ಗಟ್ಟು ಮತ್ತು ಸಂಘಟನೆ ಬೆಳೆದು ಸಾಮರ್ಥ್ಯಗಳಿಸುವಂತಾಗಬೇಕು. ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಮುಂದೆ ಬಂದು, ಸ್ವಸಾಮರ್ಥ್ಯಗಳಿಸಿ ಪರಸ್ಪರ ಮಿಳಿತವಾಗಿ ಸಂಘಟಿತ ಬಲದಿಂದ ಇಂದಿನ ರಾಜಕಾರಣವನ್ನು ನಿಯಂತ್ರಿಸಬೇಕು. ಆಗ ನಿವಾರಣೋಪಾಯಗಳು ಸುಲಭವಾಗುತ್ತವೆ. ಈ ಕಾರ್ಯಕ್ಕೆ ಅಧಿಕಾರ ನಿರಪೇಕ್ಷರಾದ, ನಿಸ್ವಾರ್ಥ ಸೇವಾ ಮನೋಧರ್ಮದ ಕಾರ್ಯಕರ್ತರ ಪಡೆ ನಿರ್ಮಾಣವಾಗಬೇಕಾದುದು ಅವಶ್ಯಕ. ಈಗಲೂ ಇಂಥ ಜನ ಇದ್ದಾರೆ. ಆದರೆ ಅವರು ತಟಸ್ಥರಾಗಿದ್ದಾರೆ. ಇಂದಿನ ಪರಿಸ್ಥಿತಿಯನ್ನೆದುರಿಸಲು ಇಂಥ ಎಲ್ಲ ಸಾರ್ವಜನಿಕರು ಮುಂದೆ ಬರಬೇಕು. ಜನತೆಯ ಸ್ವಸಾಮರ್ಥ್ಯವನ್ನು ವರ್ಧಿಸುವ ಕಾರ್ಯದಲ್ಲಿ ನೇರವಾಗಿ ಸಮರ್ಪಣ ಮನೋಧರ್ಮದಿಂದ ಕಾರ್ಯೋನ್ಮುಖರಾಗುವ ಸಮಯ ಈಗ ಸನ್ನಿಹಿತವಾಗಿದೆ.

ಅಬ್ದುಲ್ ಗಫಾರ್‌ಖಾನ್

ಸೇವಾಗ್ರಾಮ — ವಿನೋಬಾ

೭-೧೧-೧೯೭೯ — ಜಯಪ್ರಕಾಶ್

ಪರಿಶಿಷ್ಟ – ೪

ವಿನೋಬಾ ಆಶ್ರಮದಲ್ಲಿ ಬಾದ್‌ಷಾಖಾನ್

[೧೯೮೦ ರ ಜುಲೈನಲ್ಲಿ ಖಾನ್ ಅಬ್ದುಲ್ ಗಫಾರ್‌ಖಾನರು ವರ್ಧಾ ಬಳಿ ಧಾಮ್ ನದೀ ತೀರದಲ್ಲಿದ್ದ ಆಚಾರ್ಯ ವಿನೋಬಾ ಭಾವೆಯವರ 'ಪರಂಧಾಮ' ಆಶ್ರಮದಲ್ಲಿ ನಾಲ್ಕು ದಿನ ತಂಗಿದ್ದರು. ಆರೋಗ್ಯ ಸುಧಾರಣೆಗಾಗಿ ಭಾರತದ ಆಹ್ವಾನದ ಮೇಲೆ ಈ ದೇಶಕ್ಕೆ ಬಂದಿದ್ದರು. ಈ ಋಷಿ ಸದೃಶ ಮಹಿಮಾನ್ವಿತರ ಭಾವ ಸಂಗಮ ಆಶ್ರಮವಾಸಿಗಳಿಗೆ ಒಂದು ಚಿರಸ್ಮರಣೀಯ ಘಟನೆಯಾಯಿತು. ಆ ಪಾವನ ಪ್ರಸಂಗವನ್ನು ವಿನೋಬಾಜಿಯ ಪ್ರಿಯಶಿಷ್ಯೆ ಕುಮಾರಿ ಕಾಳಿಂದಿ "ಮೈತ್ರಿ" ಮಾಸಪತ್ರಿಕೆಯಲ್ಲಿ ವರ್ಣಿಸಿದ್ದಾರೆ.]

"ಆಶ್ರಮದಲ್ಲಿನ 'ತ್ಯಾಗ ಪಥ'ದ ಅಂಚಿಗೆ ವಿನೋಬಾಜಿ ಬಂದು ಎದುರುಗೊಳ್ಳುತ್ತಾ 'ಸಲಾಮ್ ಆಲೇಕುಮ್' ಎಂದು ಒಂದು ಕೈಯೆತ್ತಿದರು. ಬಾದ್‌ಷಾಖಾನ್ ಎರಡೂ ಕೈಗಳನ್ನು ಜೋಡಿಸಿ 'ನಮಸ್ಕಾರ್' ಎಂದರು. ಇಬ್ಬರೂ ಗಾಢ ಆಲಿಂಗನದಲ್ಲಿ ಲೀನರಾದರು.

'ಜಾನಕೀ ಕುಟೀರ'ದ ಪಡಸಾಲೆಯಲ್ಲಿ ಒಂದು ಚಾಪೆಯ ಮೇಲೆ ಇಬ್ಬರೂ ಕುಳಿತು ಕುಶಲ ಸಂಭಾಷಣೆಯಲ್ಲಿ ತೊಡಗಿದರು. ಸುತ್ತಮುತ್ತಲಿನ ಆತ್ಮೀಯ ಸೇವಾನಿರತ ಬಂಧುಗಳೆಲ್ಲ ಸೇರಿದ್ದರು.

"ಬಹಳ ದಿನಗಳ ನಂತರ ತಮ್ಮೆಲ್ಲರನ್ನೂ, ಬಾಬಾ ಅವರನ್ನೂ ಭೇಟಿಯಾಗುತ್ತಿದ್ದೇನೆ. ನನಗಿದು ಅಪಾರ ಸಂತೋಷತಂದಿದೆ. ಗಾಂಧೀಜಿಯು ನಿಮ್ಮ ತಂದುಕೊಂಡಂಥ ಜನ ನೀವು. ನಾನು ಚಿಕಿತ್ಸೆ ಪಡೆಯಲು ಹಿಂದೂಸ್ಥಾನಕ್ಕೆ ಬಂದಿದ್ದೇನೆ. ಆದರೆ ಹಿಂದೂಸ್ಥಾನದ ಇಂದಿನ ಸ್ಥಿತಿಯನ್ನು ಕಂಡು ನನಗೆ ದುಃಖವಾಗುತ್ತಿದೆ. ಗಾಂಧೀಜಿಯು ಅಹಿಂಸಾಮಾರ್ಗವನ್ನು

ತೊರೆದು ಹಿಂಸಾಮಾರ್ಗಕ್ಕೆ ತಿರುಗಿದುದೇ ಇದಕ್ಕೆ ಕಾರಣ. ಅಹಿಂಸೆ ಅಂದರೆ ಪ್ರೇಮ, ಹಿಂಸೆಯಿಂದ ದ್ವೇಷ. ಇಂದು ಹಿಂದೂಸ್ಥಾನದಲ್ಲಿ ಎಲ್ಲಿ ಹೋದರೂ ಭಯ ಮತ್ತು ದ್ವೇಷಗಳೇ ಕಾಣುತ್ತವೆ. ಮುಂಚೆ ಯಾವ ಸಾಹಸ ಪ್ರವೃತ್ತಿ ಜನರಲ್ಲಿತ್ತೋ ಅದು ಹೋಗಿದೆ. ಧೈರ್ಯ–ಸಾಹಸಗಳು ಹುಟ್ಟುವುದು ಅಹಿಂಸೆಯಿಂದ ಮಾತ್ರ...

"ಹಿಂದೂಸ್ಥಾನದ ಈ ದುಸ್ಥಿತಿಗೆ ಕಾರಣ ನಾಯಕರಲ್ಲಿ ಕಾಣುವ ಹಣದ ಮೋಹ ಮತ್ತು, ಅಧಿಕಾರದ ಲಾಲಸೆ. ಯಾವ ಜನಾಂಗದಲ್ಲಿ ಇವು ಹುಟ್ಟಿಕೊಳ್ಳುತ್ತವೆಯೋ ಅಲ್ಲಿ ಪ್ರಜಾಪ್ರಭುತ್ವ ತಲೆ ಎತ್ತುವುದಿಲ್ಲ. ದ್ವೇಷ ಗೆಳೆಯರನ್ನು ಗೆಳೆಯರಿಂದ, ಸೋದರರನ್ನು ಸೋದರರಿಂದ, ತಂದೆಯನ್ನು ಮಕ್ಕಳಿಂದ ಬೇರ್ಪಡಿಸಿಬಿಡುವ ರೋಗ....ಜನ ನನ್ನ ಬಳಿ ಬಂದು ಬಡತನದ ಭವಣೆಯನ್ನು ತೋಡಿಕೊಳ್ಳುತ್ತಾರೆ. ಇದಕ್ಕೆ ಕಾರಣರಾರು ಎಂದು ಕೇಳುತ್ತೇನೆ. ನೀವೇ ಬಡತನವನ್ನು ಅಪ್ಪಿದ್ದೀರಿ. ಈಗಿರುವುದು ಓಟಿನ ರಾಜ್ಯ. ದೇಶದಲ್ಲಿ ಬಡವರೇ ಬಹುಸಂಖ್ಯಾತರು. ಆದ್ದರಿಂದ ನಿಮ್ಮದೇ ಈ ಸರ್ಕಾರ. ನೀವು ಸರಿಯಾಗಿ ನಡೆಸುತ್ತಿಲ್ಲ. ಪಾಕಿಸ್ತಾನವಾದಾಗ ಖುದಾಯಿ ಖಿದ್‌ಮತ್‌ಗಾರರು ಮುಸ್ಲಿಮ್ ಲೀಗ್ ಸೇರಬೇಕು ಎಂದರು ಶ್ರೀ ಜಿನ್ನಾ. ನಮ್ಮಿಬ್ಬರ ದೃಷ್ಟಿ ತೀರ ಭಿನ್ನ. ಅಧಿಕಾರಕ್ಕಾಗಿಯೇ ಆಡಳಿತ ನಡೆಸುವವರು ಅವರು; ಸೇವೆಗಾಗಿ ಮಾತ್ರವೇ ಅಧಿಕಾರ ಎನ್ನುವವರು ನಾವು. ಆದ್ದರಿಂದ ಸಾಧ್ಯವಿಲ್ಲ ಎಂದು ತಿಳಿಸಿದ್ದೆ.

"ನಾನೊಬ್ಬ ಗ್ರಾಮಜೀವಿ. ಮುಂಚೆ ಪಟ್ಟಣವಾಸಿಯಾಗಿದ್ದೆ. ಹದಿನಾರು ವರ್ಷಗಳ ಕಾಲ ಬುದ್ಧಿಜೀವಿಗಳು, ವಕೀಲರು, ಡಾಕ್ಟರು ಮುಂತಾದವರ ಮಧ್ಯವೇ ಓಡಾಡುತ್ತಿದ್ದೆ. ನನಗೆ ಮಾನವೀಯ ಗುಣದವರೇ ಸಿಗಲಿಲ್ಲ. ನಂತರ ಹಳ್ಳಿಗೆ ಹೋದೆ. ಕಷ್ಟಕ್ಕೆ ಸಿಲುಕಿದ ಜನ ಅಲ್ಲಿದ್ದಾರೆ. ಆದರೆ ಅಲ್ಲಿ ಒಂದು ನಿಜವಾದ ಸಮಾಜ ಇದೆ. ನಾಲ್ಕೇ ತಿಂಗಳುಗಳಲ್ಲಿ ನನಗೆ ಸಾವಿರಾರು ಗೆಳೆಯರು ಸಿಕ್ಕಿದರು. ಒಂದು ಆಂದೋಲನ ನಡೆಯಿತು. ಅದು ಇಂದಿಗೂ ಜೀವಂತವಾಗಿದೆ. ಈಗ ನನ್ನ ಬಳಿ ಬಂದು ಜನ ಕೇಳುತ್ತಾರೆ. ಸಮಾಜ ಸೇವೆ ಮಾಡಬೇಕು ಎನ್ನುತ್ತಾರೆ. ಹಾಗಾದರೆ ಹಳ್ಳಿಗೆ ಹೋಗಿ, ಸಾಮಾಜಿಕ ಕಾರ್ಯವಾಗಿ ಎಂದವರಿಗೆ ಹೇಳು

ತ್ತೇನೆ. ಅಧಿಕಾರಕ್ಕಾಗಿ ಅಲ್ಲದೆ ಸೇವೆಗಾಗಿ ಮಾತ್ರವೇ ಇದ್ದರೆ ನಿಮ್ಮ ವಂಥ ಕೆಲವು ಜನರನ್ನಾದರೂ ಸಿದ್ಧಮಾಡಿದರೆ ಈ ದೇಶದ ಭವಿಷ್ಯ ಭವ್ಯವಾಗುತ್ತದೆ. ಪ್ರೇಮವೃದ್ಧಿಯಾಗುವುದು ಸೇವೆಯಿಂದ. ಅದು ಇಷ್ಟ ಕ್ಕಿದ್ದಂತೆ ಬರಲಾರದು. ಹಳ್ಳಿಗಳಲ್ಲಿ ಹೋಗಿ ಸೇವೆ ಕೈಗೊಂಡು ಜನತೆಗೆ ತಿಳಿಯಹೇಳಿ ಎನ್ನುತ್ತೇನೆ."

"ಸರಿಯಾಗಿ ಹೇಳಿದಿರಿ! ನಾನಂತೂ ಈ ಮಾರ್ಗ ಅಥವ ಈ ವೃತ್ತಿ, ಆ ವೃತ್ತಿ ಎಂದು [illegible] ಎನ್ನುತ್ತಿದ್ದೇನೆ" ಎಂದರು ವಿನೋಬಾಜಿ.

ಮುಂದೆ ನಾಲ್ಕು ದಿನ ಆಶ್ರಮದಲ್ಲಿ ತಂಗಿದ್ದರು ಬಾದ್‌ಶಹಾಖಾನ್. ಎರಡು ದಿನ ಸೇವಾಗ್ರಾಮದ ಬಾಪೂ ಕುಟೀರದಲ್ಲಿ ಕಳೆದರು. ವಿನೋಬಾಜಿ ಅವರೊಡನೆ ಗಾಢವಾದ ಚಿಂತನ-ಮಂಥನಗಳಲ್ಲಿ ತೊಡಗುತ್ತಿದ್ದರು.

ತಮ್ಮ ದೇಶ ಪಾಕಿಸ್ತಾನ ಅನುಭವಿಸುತ್ತಿರುವ ಭಾವನೆಯನ್ನು ಮನ ಬಿಚ್ಚಿ ಚರ್ಚಿಸಿದರು. "ಪಠಾಣರಲ್ಲಿ ಶಾಂತಿ ಸೇನೆ ಸ್ಥಾಪಿಸಿ" ಎಂದು ವಿನೋಬಾಜಿ ಸೂಚಿಸಿದಾಗ ಬಿಚ್ಚಿ ಈ ಮಾತುಗಳನ್ನು ಜೋಡಿಸಿದರು:-

"ನಮ್ಮ ದೇಶದಲ್ಲಿ ಈ ಕಾರ್ಯ ಕಠಿಣವಿದೆ. ಬ್ರಿಟಿಷರ ಅಧಿಕಾರದ ನಂತರ ಹಿಂಸಾಚಾರ ಬಹಳ ಬೆಳೆದಿದೆ. ಜನಾಂಗದ ಮನೋಭಾವ ಬದಲಾಗಿದೆ. ಇಂಗ್ಲಿಷರೊಡನೆ ಹೋರಾಡಲು ಅಹಿಂಸಾಮಾರ್ಗ ಸಮರ್ಪಕ ವಾಗಿತ್ತು. ಆದರೆ ಈಗಿನ ನಮ್ಮ ಸರ್ಕಾರ ಅಹಿಂಸೆಯನ್ನು ಅರ್ಥಮಾಡಿ ಕೊಳ್ಳಲಾರದು ಎಂದಾಗಿ ಹೇಳುತ್ತಿದ್ದಾರೆ. ಹಿಂಸಾಮಾರ್ಗವನ್ನವಲಂಬಿ ಸುವುದೇ ಲೇಸು ಎನ್ನುತ್ತಾರೆ. ನಾನವರಿಗೆ, "ಕೇವಲ ಅಹಿಂಸೆಯಿಂದ ಇಂಗ್ಲಿಷರ ಶಕ್ತಿಶಾಲಿ ಸಾಮ್ರಾಜ್ಯವೇ ಮಣಿದಿರುವಾಗ ಈ ಸರ್ಕಾರ ಯಾವ ಲೆಕ್ಕ" ಎಂದು ತಿಳಿಯ ಹೇಳುತ್ತಿದ್ದೇನೆ.

"ತಿಳಿಯ ಹೇಳುವುದೇ ನಮ್ಮ ಕೆಲಸ. ಪ್ರಯತ್ನ ನಮ್ಮ ಕೈಲಿದೆ. ಫಲ ಕೊಡುವುದು ಅಲ್ಲಾನ ಇಚ್ಛೆ" ಎಂದರು ವಿನೋಬಾಜಿ.

ಶಾಸ್ತ್ರೀಯ ಮತ್ತು ಆಧ್ಯಾತ್ಮಿಕ ವಿದ್ಯಮಾನಗಳನ್ನು ಕುರಿತು ವಿನೋಬಾಜಿ ಮತ್ತು ಬಾದ್‌ಶಹಾಖಾನ್ ಚರ್ಚಿಸುತ್ತಿದ್ದರು. ವಿನೋಬಾಜಿ

ಹೇಳಿದರು. "ಹಿಂದಿನ ಪರಿಸ್ಥಿತಿಗೂ ಇಂದಿನದಕ್ಕೂ ಬಹಳ ವ್ಯತ್ಯಾಸವಿದೆ. ನಾನು ಆಗಾಗ್ಗೆ ಹೇಳುತ್ತಿರುತ್ತೇನೆ. ಸಾಹಿತ್ಯದಲ್ಲಿ ಪ್ರಾಚೀನವಾದುದನ್ನು ಓದಬೇಕು. ವಿಜ್ಞಾನದಲ್ಲಿ ಅಧುನಿಕದಲ್ಲಿ ಅಧುನಿಕ ಜ್ಞಾನಬೇಕು. ನಿನ್ನೆಯ ವಿಜ್ಞಾನ ಇಂದು, ಇಂದಿನದು ನಾಳೆಗೆ ಏನೂ ಪ್ರಯೋಜನಕ್ಕೆ ಬಾರದು."

೧೯೭೬ ರಲ್ಲಿ ಗಫಾರ್‌ಖಾನರು ವರ್ಧಾದ ಗೀತಾಯಿ ಮಂದಿರದ ಮೊದಲ ಕಲ್ಲುಗಳನ್ನು ಜೋಡಿಸಿದವರಲ್ಲಿ ಒಬ್ಬರಾಗಿದ್ದರು ಎಂದು ವಿನೋಬಾ ನೆನಪಿಸಿಕೊಂಡರು. ಹತ್ತಿರದಲ್ಲಿದ್ದ ರಾಮಕೃಷ್ಣ ಬಜಾಜರು ಅದೇ ೧೯೮೦ ರ ಅಕ್ಟೋಬರಿನಲ್ಲಿ ಗೀತಾ ಮಂದಿರದ ಪ್ರತಿಷ್ಠಾಪನೋತ್ಸವ ಇರುವುದರಿಂದ ಅಲ್ಲಿಯವರೆಗೂ ಬಾದ್‌ಷಾಖಾನರು ಇರಬೇಕೆಂದು ಕೇಳಿಕೊಂಡರು. ತಮ್ಮ ದೇಶದ ಸ್ಥಿತಿ ಹದಗೆಡುತ್ತಿರುವುದರಿಂದ ತಾವು ಹೋಗಲೇ ಬೇಕಾಗಿರುವುದೆಂದು ಗಫಾರ್‌ಖಾನರು ಕ್ಷಮೆಯಾಚಿಸಿದರು.

ಮಾರನೆ ದಿನ ಬೆಳಗ್ಗೆ ವಿನೋಬಾಜಿ ತಾವೇ ಬಾದ್‌ಷಾಖಾನರ ಕೋಣೆಗೆ ಬಂದರು. ಪ್ರಣಾಮ ಮಾಡುತ್ತಾ, "ನೀವು ಗಫಾರ್‌ಖಾನ್, ನಾನು ವಿನೋಬಾಖಾನ್" ಎಂದು ಹಸನ್ಮುಖರಾದರು. "ನಿಮಗೀಗ ತೊಂಬತ್ತೆರಡು ವರ್ಷ ಅಲ್ಲವೇ? ಬದುಕುವ ಇಚ್ಛೆ ಇನ್ನೂ ಇದೆಯಲ್ಲವೇ?" ಎಂದು ನಗುತ್ತಲೇ ಕೇಳಿದರು. ವಿನಮ್ರರಾಗಿ ಬಾದ್‌ಷಾಖಾನ್, "ಪರಮಾತ್ಮ ನನ್ನ ಸೇವೆಯನ್ನು ಎಲ್ಲಿಯವರೆಗೆ ಒಪ್ಪಿಕೊಳ್ಳುವನೋ ಅಲ್ಲಿಯವರೆಗೆ ಬದುಕಬೇಕು ಎಂದು ನನ್ನ ಇಚ್ಛೆ. ಭಗವಂತನಿಗೆ ನನ್ನ ಸೇವಾ ಕಾರ್ಯ ಎಂದು ಅಗತ್ಯವಿಲ್ಲವೆನಿಸುತ್ತದೆಯೋ ಅನಂತರ ಒಂದು ದಿನವೂ ಜೀವಿಸಲು ನಾನು ಇಚ್ಛಿಸುವುದಿಲ್ಲ" ಎಂದರು. ವಿನೋಬಾ ಮುಂದುವರಿದು, "ಕಬೀರದಾಸರು ನೂರಿಪ್ಪತ್ತು ವರ್ಷ ಜೀವಿಸಿದರು. ನೀವೂ ಅಷ್ಟು ವರ್ಷ ಜೀವಿಸಬೇಕೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ" ಎಂದಾಗ ತಕ್ಷಣ ಖಾನರು, "ಅದರೊಡನೆ ಭಗವಂತನ ಸೃಷ್ಟಿಯ ಸೇವೆ ಮಾಡುವಂತೆಯೂ ಅಗುವಂತೆ ಪ್ರಾರ್ಥಿಸಿ" ಎಂದರು. "ಎಲ್ಲಿದ್ದಾನೆ ಖುದಾ?" ಎಂದು ಕೇಳಿದಾಗ "ಮನುಷ್ಯನ ಹೃದಯದಲ್ಲಿ!" ಎಂದರು ಬಾದ್‌ಷಾಖಾನ್.

ಪವಿತ್ರ ಖುರಾನ್ ಬಗ್ಗೆ ಇಬ್ಬರೂ ಮಾತನಾಡಿದರು. ಬಾದ್‌ಷಾಖಾನ್ ಹೇಳಿದರು, "ನಾನು ಪವಿತ್ರ ಖುರಾನ್ ನೋಡಿದ್ದೇನೆ. ಅದ

ಧರ್ಮಗಳೂ ಪ್ರೇಮದಿಂದ ಜೀವನ ನಡೆಸುವ ಸಲುವಾಗಿಯೇ
ಕೊಂಡಿವೆ. ತನ್ನ ಸೃಷ್ಟಿಯನ್ನು ನೋಡಿಯೇ ಪರಮಾತ್ಮ ತನ್ನವ
ಇಲ್ಲಿಗೆ ಕಳುಹಿಸಿರುವನು. ಅದನ್ನು ಉತ್ತಮಗೊಳಿಸುವುದಕ್ಕಾಗಿ,
ಗೊಳಿಸುವುದಕ್ಕಾಗಿ. ಚಿಕ್ಕಂದಿನಲ್ಲಿ ನಾನು ಟಾಲ್‌ಸ್ಟಾಯ್ ಅವರ
ಓದಿದ್ದೆ. ಅವರನ್ನುವಂತೆ ಪ್ರತಿಯೊಬ್ಬ ಧರ್ಮದವನೂ ತನ್ನ ಕೊ
ಯಲ್ಲಿ ಬರುವ ನೀರು ಮಾತ್ರವೇ ಶ್ರೇಷ್ಠ ಎನ್ನುತ್ತಾನೆ. ಎಲ್ಲ ಕ
ಗಳಲ್ಲಿ ಹರಿಯುವುದೂ ಒಂದೇ ಚಿಲುಮೆಯ ನೀರು ಎಂದು
ಅರ್ಥಮಾಡಿಕೊಳ್ಳುವುದೇ ಇಲ್ಲ. ಇದು ಒಂದು ನಂಬಿಕೆ. ಖುರ
ಪ್ರಾರಂಭದಲ್ಲೇ ಹೀಗೆ ಹೇಳಿದೆ. "ಯಾವ ಸಂದೇಹಕ್ಕೂ ಎಡೆಗೊ
ಗ್ರಂಥ. ಕಲ್ಯಾಣ ಮಾರ್ಗಾನುಸಾರ ನಡೆಯುವವರಿಗೆ ಮಾರ್ಗದ
ನಂಬಿದವರಿಗೆ ಅದು ದಾರಿ ತೋರುತ್ತದೆ.

(೧) ದೇವರಲ್ಲಿ ನಂಬಿಕೆ.
(೨) ಅವನನ್ನು ಸ್ಮರಿಸುವುದೇ ಪ್ರಾರ್ಥನೆ.
(೩) ಭಗವಂತ ಕೊಟ್ಟಿರುವ ಸಂಪತ್ತು, ಸಾಮಗ್ರಿ ಮತ್ತು ಬುದ್ಧಿಯ
ಜನತೆಗೆ ನೀಡುವುದು.
(೪) ಧರ್ಮ ಗ್ರಂಥ ದೇವರಿಂದಲೇ ಹರಿದು ಬಂದುದು ಮತ್ತು
ಮುಂಚೆ ಬಂದದ್ದೂ ದೇವರಿಂದಲೇ ಬಂದುದು ಎಂಬ ವಿಶ್ವಾಸ
(೫) ನಮ್ಮ ಬದುಕಿನ ಲೆಕ್ಕಪತ್ರದ ವಿಚಾರಣೆ ನಡೆದೇ ತೀರುತ್ತದೆ
ನಂಬಿಕೆ. ಇದು ಧರ್ಮ ಸಂಹಿತೆ.

ಇದು ಬಾದ್‌ಷಾಖಾನರ ದರ್ಶನ ಸಾರ.

ಇಬ್ಬರೂ ಸೇರಿ ಪ್ರಾರ್ಥನೆ ನಡೆಸಿದರು. ವಿನೋಬಾಜಿ ಉತ್ತ
ದಲ್ಲಿ 'ಅಲ್‌ಫಾತಿಹಾ' ಎಂಬ ಖುರಾನಿನ ವಾಕ್ಯಗಳನ್ನು ಪಠಿಸ
ದರು. ವಿಷ್ಣುಸಹಸ್ರನಾಮ ಪ್ರಾರ್ಥನೆಯ ಸಮಯದಲ್ಲಿ ಬಾದ್‌ಷಾ
ಭಕ್ತಿಯಿಂದ ಲೀನರಾಗುತ್ತಿದ್ದರು.

ಮೂರನೆಯ ದಿನ ಬಾದ್‌ಷಾಖಾನ್ ವಿನೋಬಾ ಅವರ ಕೊಠ
ಬಂದರು. ಹಾಕಿದ್ದ ಕುರ್ಚಿಯನ್ನು ಬಿಟ್ಟು ಬಾಬಾ ಅವರೆದುರಿಗೆ
ಮೇಲೇ ಕುಳಿತರು. ವಿನೋಬಾ ತಾವು ವಿಷ್ಣುಸಹಸ್ರನಾಮದ

ಬರೆದ ಗ್ರಂಥವನ್ನು ತಮ್ಮ ಮುಸಲ್ಮಾನ ಸಹೋದರರಿಗೆ ನೀಡಿದರು. ಸಹಸ್ರನಾಮ ಪಠಿಸುವಾಗಲೆಲ್ಲ ಅವುಗಳೊಡನೆ ತಮ್ಮ ಸಂಗಡಿಗರ ಹೆಸರುಗಳನ್ನು ಜೋಡಿಸುವುದು ವಿನೋಬಾ ಅವರ ಹವ್ಯಾಸ. ಈ ಸಂದರ್ಭಕ್ಕೆ ಸರಿಯಾಗಿ ಮೂರು ನಾಮಗಳನ್ನು ಹೀಗೆ ಗುರ್ತಿಸಿದರು: "ಕ್ಷಮಿಣಾಂವರಃ = ಗಫಾರ್. ಅನುಕೂಲಃ = ಮುಜೀಬ್ ಮತ್ತು ಪರಮಾತ್ಮ = ಅಲ್ಲಾಃ" ಬಾದ್‌ಷಾಖಾನ್ ನಮಿಸಿ ತಾವು ಹೊರಡಲು ಅಪ್ಪಣೆಬೇಡಿದರು.

ಸರಳ ಜೀವಿ ಗಫಾರ್‌ಖಾನರು ತಮ್ಮ ಬಿಡಾರದಿಂದ ಒಂದು ಸಣ್ಣ ಗಂಟಿನಲ್ಲಿ ತಮ್ಮ ಸಾಮಾನುಗಳನ್ನು ಕಟ್ಟಿಕೊಂಡು ತಾವೇ ಹೊತ್ತು ಹೊರಟರು. ಬೇಡವೆಂದರೂ ವಿನೋಬಾಜಿ ಬಾಗಿಲವರೆಗೆ ಬಂದು ಬೀಳ್ಕೊಟ್ಟರು. "ನಿಮ್ಮಂಥ ಮಹಾಮಹಿರು ಬಾಗಿಲವರೆಗೆ ಬಂದು ಬೀಳ್ಕೊಡುತ್ತಾರೆ ಎಂದು ನನಗೆ ಜಂಭ ಬರುವುದಿಲ್ಲವೇ?" ಎಂದರು ಬಾದ್‌ಷಾಖಾನ್. ಇಬ್ಬರೂ ನಗೆಸೂಸಿ ಪರಸ್ಪರ ಆಲಂಗಿಸಿದರು. ವಿನೋಬಾಜಿ ಗಂಭೀರ ವದನರಾಗಿ ಆಶ್ರಮದೊಳಕ್ಕೆ ನಡೆದರು. ಬಾದ್‌ಷಾಖಾನ್ ಗಾಡಿಯಲ್ಲಿ ಕುಳಿತು ಸಂತುಷ್ಟ ಭಾವದಿಂದ ಮುಂದೆ ತೆರಳಿದರು. ಆ ಪಾವನ ಪ್ರಸಂಗದ ಸಮಯದಲ್ಲಿ ನೆರೆದಿದ್ದ ಜನಸ್ತೋಮ ಭಾರತದ ಕಣ್ಮಣಿಗಳಿಬ್ಬರ ಪ್ರೇಮ ಸಂಗಮ ವೀಕ್ಷಿಸಿ ಧನ್ಯಭಾವದಿಂದ ಓಂತಿರುಗಿದರು.

— — —

ಗ್ರಂಥ ಋಣ

My Life and Struggle — Autobiography - Kh
Abdul Gaffarkhan

Abdul Gaffar Khan
Faith Is A Battle — D. G. Tendulkar

A Piligrimage For Peace — Pyarelal

Thrown To T[illegible]lves — Pyarelal

Frontier Speaks — Mohammad Yunus

ಇಬ್ಬರು ಈಶಸೇವಕರು — ಮಹದೇವ ದೇಸಾಯಿ
ಅನುವಾದ : ಮಾನಪ್ಪ

'ಮಹಾತ್ಮ' — ಡಿ. ಜಿ. ತೆಂಡೂಲ್ಕರ್
(ಕನ್ನಡ ಅನುವಾದ)

'ಮೈತ್ರಿ' — ಪೌನಾರ್ ಆಶ್ರಮದ ಮಾಸ

ಬಾದ್‌ಷಾಖಾನರ ಜೀವನ
ಮತ್ತು ಸಂದೇಶ (ಹಿಂದಿ) — ಶ್ರೀಮತಿ ಮದಾಲಸಾ ನಾರಾ